ಪ್ರಬುದ್ಧ ಕರ್ಣಾಟಕ

ಸಂಪುಟ ೪೦—ಸಂಚಿಕೆ ೩


೧೫೭

ವಿಳಂಬಿ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೮

ವಿಷಯ ಸೂಚಿಕೆ



ಫೋಟೋ : ಕೆ. ಜಿ. ಶೆಣೈ

ಪ್ರಬುದ್ಧ ಕರ್ಣಾಟಕ

ವಿಳಂಬಿ ಸಂವತ್ಸರ | ೧೫೭ | ಆಶ್ವಯುಜ ಸಂಚಿಕೆ

ಮಬ್ಬಿನಿಂದ ಮಬ್ಬಿಗೆ

ಆರುಘಂಟೆಯ ಮೊಳಗು :
ಮೂಡಣದ ಹೆರಿಗೆಮನೆಯಲ್ಲಿ ಸಡಗರವೊ ಸಡಗರ ;
ಕತ್ತಲಿನ ಬಸಿರು ಬೆಸಲಾದ ಬಂಗಾರ ಮೋರೆಯ ಕುವರ
ಬಂದ,
ಉಲ್ಲಾಸಗಳ ತಂದ.

ಜೋಯಿಸರು ಪಂಚಾಂಗವನು ತಿರುವಿ,
ಸಕಲಗ್ರಹಬಲಸ್ಥಿತಿಯ ನೋಡಿ, ಕುಂಡಲಿ ಬರೆದು
ಮರಳಿದರು ಮನೆಗೆ.

ಅಂಬೆಗಾಲಿಟ್ಟು ಹೊಸಿಲು ದಾಟಿತು ಬಿಸಿಲು—
ಬಾಗಿಲಲಿ ಹಾಲ್ ಕರೆವ ಹಸುಕೊರಳ ಗಂಟೆದನಿ,
ತುಂಬು ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದು ಕರು,
'ಕಾ' ಎನುವ ಕಾಗೆ, ಚಿಲಿಪಿಲಿಗುಬ್ಬಿ, ಬಾಲವಾಡಿಪನಾಯಿ ;
ಸೋಜಿಗದ ಹೊನಲು.

ಏಳು ಗಂಟೆಯು ಮೊಳಗು :
ಏಳರಿಂದ ಎಂಟರತನಕ ಸದಾ
ಮಲ್ಲಿಗೆಯು ಮಳೆಗರೆವ ಕಣ್ಣು ಎರಡೇ ಎರಡು
ಮೇಲ್ ಮುಗಿಲಲ್ಲಿ,
ಕೆಳಗೆ ಹಸುರು ಸೆರಗಿನ ಮೆತ್ತೆ ;
ಈ ನಡುವೆ ಬಾಯಿಟ್ಟು ಸೀಪಿದಾಗೆಲ್ಲ ಹಾಲನು ಸುರಿವ
ಚಂದ್ರ ಕುಂಭಗಳೆರಡು,
ಎಂದು ಯಾವಾಗಲೂ ಗಕ್ಕನೆಯೆ ನಿಂತು ಕೈಕೊಡದ ನಲ್ಲಿ
ತುಟಿಯು ಬಟ್ಟಲಿನಲ್ಲಿ !

ಎಂಟು ಗಂಟೆಗೆ ಅದಿಗೊ ಉಗುರು ಬೆಚ್ಚಗೆ ಬಿಸಿಲು—
ಸುತ್ತ ಮರಗಿಡಗಳಲಿ ಲಾಲಿ ಹಾಡುವ ಹಕ್ಕಿ.
ಮರದ ಬೊಂಬೆಗು ಜೀವ ಬಂದಿದೆ ; ಕಲ್ಲು ಹರಳುಗಳೆಲ್ಲ
ಚಿನ್ನ—ರನ್ನ !
ಆ, ಅಗೊ, ಕರೆಯುತಿದೆ ಪಾಠಶಾಲೆಯ ಗಂಟೆ,
ಸ್ಲೇಟು ಪುಸ್ತಕವನ್ನು ಹೆಗಲಿಗೇರಿಸು, ಹೊರಡು ;
ಅಲ್ಲಿ ಕಾದಿದ್ದಾರೆ 'ಮೇಸ್ಟ್ರು'.
ತಿದ್ದು 'ಅ ಆ ಇ ಈ'; ಮಗ್ಗಿಯೊಪ್ಪಿಸು ; 'ಆಟ ಊಟ ಓಟ'
ಮೆಲ್ಲನೆಯೆ ಜಾರುತಿದೆ ಬೆಳಗು ಬಿತ್ತಿದ ಮಾಟ.

* * * *

ಹನ್ನೊಂದರಿಂದ ಹನ್ನೆರಡು :
ಜಂತೆ ಜಂತೆಯ ತುಂಬ ಜೇನುಗೂಡು !

ಕಂಡ ಕಂಡುದನೆಲ್ಲ ಗುದ್ದುತಿದೆ ಮರಿಗೂಳಿ
ಭಾವನೆಯ ಮಗ್ಗದಲಿ ಜೊನ್ನಗನಸಿನ ಲಾಳಿ
ಕದಡು ನೀರಿನ ಕೊಳದಿ ಮುಖದ ನೆರಳನು ನೋಡಿ
ಕ್ರಾಪು ತಿದ್ದುವ ಚಾಳಿ
ಎದೆ ತುಂಬ ಮೊರೆಯುತಿವೆ ಹತ್ತು ದಿಕ್ಕಿನ ಗಾಳಿ !

ತುಂಬಿದೂರಿನ ನಡುವೆ ಗೋಪುರದ ಗಡಿಯಾರ—
ಕಾದ ಬಿಸಿಲಿನ ಎದೆಗೆ ಒಂದು ಘಂಟೆಯ ಬಡಿತ.

ದೂರದಲಿ ಹಸಿರು ಚಪ್ಪರದೊಳಗೆ ಮದುವೆ ಬ್ಯಾಂಡಿನ ಮೋಡಿ,
ಮೈತುಂಬ ಹೂ ಮುಡಿದು ಹುಚ್ಚಾದ ಮರ ಚೈತ್ರದಲಿ
ಮೆರವಣಿಗೆ ಹೊರಟು ನಿಂತಿವೆ ನೋಡಿ.
ಚಿಕ್ಕೆ ಚಿಕ್ಕೆಗೆ ಒಂದು ಉಯ್ಯಾಲೆಯನು ತೂಗಿ
ದಿಗ್ದಿಗಂತದ ನೀಲಗಾಜು ಗೋಡೆಗೆ ತಾಗಿ
ಜೋಕಾಲಿಯಾಡುವ ಬಯಕೆ—
'ಬಾ ಬಾರ ಬಾರ ಸಖಿ ಜೇನಾಗುವಾ
ರಸದೇವ ಗಂಗೆಯಲಿ ಮೀನಾಗುವಾ'

*   *   *   *

ಒಂದು, ಎರಡು, ಮೂರು—
ಬಾರಿಸಿತು ಗಡಿಯಾರ ತನ್ನ ಪಾಡಿಗೆ ತಾನು.
ಅಯ್ಯೊ, ಯಾವಾಗ ಈ ಮುಳ್ಳು ಒಂದು ಎರಡನು ದಾಟಿ ಮೂರಕ್ಕೆ ಬಂದಿತೊ,
ಹಿಡಿದುಕೋ, ಅಲ್ಲೆ ಆ ಗಡಿಯಾರಗಳ ಮುಳ್ಳ, ಭದ್ರ;
ಬಿಡಬೇಡ ಮುಂದಕ್ಕೆ ಕೊಂಚ ಕಾಲ.
ಗಡಿಯಾರ ನಕ್ಕಿತ್ತು 'ಎಂಥ ಚಪಲ!'

ಆಷಾಢದಾಗಸದ ಗಾಳಿ ಪಟಗಳಮೇಲೆ ವಿರಹಿ ಯಕ್ಷನ ಸುಯ್ಲು;
ಶ್ರಾವಣದ ಮಳೆ ಬಿಸಿಲು; ಗದ್ದೆಯಲಿ ತೆನೆದೂಗುತಿವೆ ಪೈರು;
ನೀಲಿಯಂಗಳದಲ್ಲಿ ಮೋಡಮಕ್ಕಳ ಕೇಕೆ.
ಬಿಳಲು ಬಿಡುತಿದೆ ವೃಕ್ಷ, ಟೊಂಗೆ ಟೊಂಗೆಯ ತುಂಬ
ಹಕ್ಕಿ ತೊಟ್ಟಿಲ ಕಟ್ಟಿ ಜೋಗುಳವ ಹಾಡುತಿವೆ;
ಮೈಗೆ ಹೆಣೆದಿವೆ ಬಳ್ಳಿ ಅಲ್ಲಿಂದ ಇಲ್ಲಿಂದ;
ಆಗಾಗ ಒಮ್ಮೊಮ್ಮೆ ಬಂದು ಕಾಡಿದೆ ಪ್ರಶ್ನೆ:
'ನಾ ಬಂದುದೆಲ್ಲಿಂದ?'

*   *   *   *

ಗಂಟೆ ಹೊಡೆಯಿತು ನಾಲ್ಕು:
ಟೆನ್ನಿಸ್ಸಿನಾಟದಲಿ ಏನೊ ಬಳಲಿಕೆ, ಸುಸ್ತು
ಮಹಡಿ ಮೆಟ್ಟಿಲನು ಹತ್ತುವಾಗಲು ಕೂಡ ಎಂದಿಲ್ಲದಾಯಾಸ
ಜಂತೆಯಲಿ ಗೂಡು ಕಟ್ಟಿದ ಜೇನು ಹಾರಿಹೋಗಿವೆ, ಈಗ
ತೂಗುತ್ತಲಿವೆ ಖಾಲಿಗೂಡು.

ಅಲ್ಲಲ್ಲಿ ಜೇಡಬಲೆಗಳ ಜಾಲ, ಸುಣ್ಣ ಬಣ್ಣವ ಬಳಿದ ಗೋಡೆಯಲ್ಲೂ ಕೂಡ
ಸುಕ್ಕು, ತರಕಲು, ಬಿರುಕು;
ಛಾವಣಿಯ ಹೆಂಚು ಮಳೆ ಬಿಸಿಲು ಗಾಳಿಯಲಿ ಉದುರಿ
ಈಗೀಗ ಜಿನುಗುತಿದೆ ಮಾಗಿ ಮಂಜಿನ ಸೋನೆ.
ಆಗಾಗ ಸುಣ್ಣಬಣ್ಣವ ಹೊಡೆದು ರಿಪೇರಿ ಮಾಡಿದರೆ
ಇನ್ನರ್ಧ ಶತಮಾನ ಗ್ಯಾರಂಟಿ.
ತೂಬನೆತ್ತಿದರೇನಂತೆ ಬಿಡು, ಆ ನೀರಗಂಟಿ.

* * * * *

ನಿಷ್ಕರುಣ ಗಡಿಯಾರ—
ಮುಳ್ಳು ನಾಲ್ಕನು ದಾಟಿ ಐದನೂ ಮುಟ್ಟಿ ಮುಂದೆ ಸಾಗುತ್ತಲಿದೆ.
ಸೂರ್ಯನ ಶಾಖ ಕಡಮೆಯಾಗುತ್ತಲಿದೆ ದಿನದಿನಕೆ;
ಬಾನನೀಲಿಗೆ ಹೊಳಪು ಸಾಲದು; ನೀರಿನಲಿ ರುಚಿಯಿಲ್ಲ;
ಏನು ಕಾಲವೊ ಏನೊ.

ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ.
ಮನೆಯಂಗಳದ ಮಬ್ಬು ಬೆಳಕಿನ ನಡುವೆ ತಡವರಿಸುತಿವೆ ಕಣ್ಣು.
ಮಹಡಿ ಮೆಟ್ಟಿಲ ಮೇಲೆ ಯಾರ್‍ಯಾರದೋ ಹೆಜ್ಜೆ.
ಗೋಡೆ ಗಡಿಯಾರದಲಿ ಘಂಟೆ ಹೊಡೆದಿದೆ ಏಳು—
ಅದೊ ಕೇಳು,
ಯಾರೊ ಬಡಿಯುತ್ತಿದ್ದಾರೆ ಬಾಗಿಲ ಹೊರಗೆ
ಒಂದೇ ಸಮನೆ—
ಏಳು, ಬಾಗಿಲನು ತೆಗೆ, ಹೆದರದಿರು ಕೊನೆಗೆ.

—ಜಿ. ಎಸ್. ಶಿವರುದ್ರಪ್ಪ

ವಿಜಯನಗರ ಕಾಲದ ತುಳುನಾಡು

೧. ರಾಜಕೀಯ ಪರಿಸ್ಥಿತಿ

ದಕ್ಷಿಣ ಹಿಂದೂಸ್ಥಾನದಲ್ಲಿ ಹುಟ್ಟಿ ಬೆಳೆದು ಅಂತೆಯೆ ಬಿದ್ದುಹೋದ ಅನೇಕ ಸಾಮ್ರಾಜ್ಯಗಳೊಳಗೆ ಕಡೆಯದೂ, ಹಿಂದಿನ ಎಲ್ಲಾ ಸಾಮ್ರಾಜ್ಯಗಳಿಗಿಂತಲೂ ಅತಿ ದೊಡ್ಡದೂ ಆಗಿ ಬೆಳಗಿದ ವಿಜಯನಗರವು ಸ್ಥಾಪಿಸಲ್ಪಡುವ ಮೊದಲು, ಅಂದರೆ ಕ್ರಿ. ಶ. ೧೪ ನೆಯ ಶತಮಾನದ ಪೂರ್ವಾರ್ಧದ ಕೊನೆಯ ವರ್ಷಗಳ ತನಕ, ಇಂದಿನ ಕರ್ಣಾಟಕದ ಪಶ್ಚಿಮ ಗಡಿಪ್ರದೇಶವೆನಿಸಿಕೊಂಡಿರುವ ತುಳುನಾಡು ಒಂದು ತರದ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಲಿತ್ತು. ಬಾದಾಮಿಯ ಚಾಳುಕ್ಯರು, ಕದಂಬರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಳುಕ್ಯರು, ಹೊಯ್ಸಳರು, ಅಷ್ಟೇ ಅಲ್ಲದೆ ತಮಿಳು ದೇಶದಿಂದ ಪಾಂಡ್ಯರೂ ಚೋಳರೂ ಕೂಡ ತುಳುನಾಡಿನ ಮೇಲೆ ಆಗಿಂದಾಗ್ಗೆ ದಂಡೆತ್ತಿ ಹೋಗಿದ್ದರು.[1] ತುಳುವರನ್ನು ಸುಲಭದಿಂದಲೆ ಸೋಲಿಸಿದ್ದರು ಎಂಬುದೇನೋ ನಿಜ. ಆದರೆ ಈ ಜಯಶಾಲಿಗಳಲ್ಲಿ ಯಾವೊಬ್ಬ ಚಕ್ರವರ್ತಿಯೂ ತಾನು ಗೆದ್ದ ತುಳುನಾಡನ್ನು ಶಾಶ್ವತವಾಗಿ ತನ್ನ ಅಧೀನದಲ್ಲಿರಿಸಿಕೊಳ್ಳುವ ನಿರ್ಧಾರವನ್ನಾಗಲಿ ಪ್ರಯತ್ನವನ್ನಾಗಲಿ ಮಾಡಿದ್ದನೆಂದು ಹೇಳಲಾಗುವುದಿಲ್ಲ. ಬಿರುಗಾಳಿಯಷ್ಟೆ ಪಕ್ಕನೆ ಬರುತ್ತಿದ್ದ ಈ ದಣ್ಡಯಾತ್ರಿಕರು ಅಷ್ಟೆ ಪಕ್ಕನೆ ನಾಡಿನ ಹಲವು ಭಾಗಗಳನ್ನೂ ಆಳುತ್ತಿದ್ದ ಸಣ್ಣ ಪುಟ್ಟ ಅರಸರುಗಳಿಂದ ಅಧೀನತೆಯ ಭರವಸೆಗಳನ್ನು ಪಡೆದು ಹೊರಬೀಳುತ್ತಿದ್ದರು. ಹೆಚ್ಚಿನ ಮಟ್ಟಿಗೆ ಈ ಭರವಸೆಗಳು ಹೆಸರು ಮಾತ್ರಕ್ಕೇನೇ ಉಳಿದು ಹೋಗುತ್ತಿದ್ದುವು. ತಮ್ಮ ತಮ್ಮ ಅಧಿಕಾರಕ್ಕೊಳಬೀಳದಿದ್ದ ರಾಜ್ಯಗಳ ತಾತ್ಕಾಲಿಕಾಕ್ರಮಣ ಮತ್ತು ಅದರಿಂದುಂಟಾಗುವ ಪ್ರಖ್ಯಾತಿ ಇವಿಷ್ಟೆ ಈ ಅರಸರುಗಳ ಗುರಿಗಳಾಗಿದ್ದುವೆಂದು ಆಯಾ ಕಾಲದ ಚರಿತ್ರೆಯು ವಿಶದವಾಗಿ ತಿಳಿಸುತ್ತದೆ. ಅಂತೆಯೆ ಹೊಯ್ಸಳ ಚಕ್ರವರ್ತಿ ೩ ನೆಯ ಬಳ್ಳಾಳನು ದಂಡೆತ್ತಿ ಬಂದು ತುಳುನಾಡನ್ನು ತನ್ನ ಆಧಿಪತ್ಯಕ್ಕೊಳಪಡಿಸಿಕೊಳ್ಳುವ ವರೆಗೂ[2] ಆ ನಾಡಿನ ಬಹು ಭಾಗವು ಹಳೇ ಕಾಲ

---

[1] *Vide* Dr. Saletore's *Ancient Karṇāṭaka,* Vol. 1, Chapter III.

[2] ಇತರ ವಿಜಗೀಷುಗಳಂತೆ ಅಲ್ಲದೆ ೩ ನೆಯ ಬಳ್ಳಾಳನು ತಾನು ಗೆದ್ದ ತುಳುನಾಡಿನಲ್ಲೇ ಸ್ವಲ್ಪ ಕಾಲ ಉಳಿದುಕೊಂಡು, ಅಲ್ಲಿಯ ವ್ಯವಹಾರಗಳನ್ನೊಂದು ಸುಧಾರಣೆಗೆ ತಂದನು. ಅಷ್ಟೇ ಅಲ್ಲದೆ ತಾನು ಹಿಂತಿರುಗುವಾಗ ತನ್ನ ರಾಣಿಯಾದ ಚಿಕ್ಕಾಯಿ ತಾಯಿಯನ್ನೂ ಮಗನಾದ ಕುಲ

ದಿಂದಲೂ[3] ಅಲ್ಲಿಯ ಶಾಸ್ತ್ರಾರರಾಗಿದ್ದು ಬಂದ ಆಳುಪರ ಆಳಿಕೆಗೊಳಪಟ್ಟಿತ್ತೆಂದು ಸಾಮಾನ್ಯವಾಗಿ ಹೇಳಬಹುದು.

ಆದರೆ ವಿಜಯನಗರ ಸಾಮ್ರಾಜ್ಯವು ಹುಟ್ಟಿದ ಕೆಲವು ವರ್ಷಗಳೊಳಗಾಗಿಯೇ ತುಳುನಾಡು ಆವರೆಗೆ ಅನುಭವಿಸಿ ಬಂದಿದ್ದ ಆಬಂದರೆಯ ಸ್ವಾತಂತ್ರ್ಯವನ್ನು ನಿರಂತರವಾಗಿ ಕಳೆದುಕೊಳ್ಳಬೇಕಾಯಿತು. ಕ್ರಿ. ಶ. ೧೩೪೮ ರ ಒಳಗಾಗಿಯೇ, ಅಂದರೆ ಸಾಮ್ರಾಜ್ಯದ ಪ್ರಪ್ರಥಮ ನಾಯಕನಾದ ೧ ನೆಯ ಹರಿಹರನ ಕಾಲದಲ್ಲೇ, ತುಳುನಾಡನ್ನು ಗೆದ್ದು ವಿಜಯನಗರದ ಒಂದು ನಿರಂತರ ಸರಹದ್ದು ಪ್ರದೇಶವನ್ನಾಗಿ ಮಾಡಲಾಗಿತ್ತೆಂದು ಉಡಿಪಿ ತಾಲೂಕಿನ ಕಾಂತಾವರ ಗ್ರಾಮದಿಂದ ದೊರೆತ ಶಿಲಾಲಿಪಿಯಿಂದ ತಿಳಿಯಬರುತ್ತದೆ.[4] ಹೀಗೆ ಒಮ್ಮೆ ಗೆ ವಿಜಯನಗರದೊಂದಿಗೆ ಸೇರಿಸಲಾದ ತುಳುನಾಡು ಇಡೀ ಸಾಮ್ರಾಜ್ಯವನ್ನೆ ಆಗಿಂದಾಗ್ಗೆ ಅಲ್ಲಾಡಿಸುತ್ತಿದ್ದ, ಪಟ್ಟ ಸಂಬಂಧದ ಕೆಲವು ಗಂಡಾಂತರ ಕಲಹಗಳ ಮತ್ತು ಒಂದೆರಡು ಬಲಹೀನ ಅರಸರುಗಳ ಆಳಿಕೆಯ ವೇಳೆಗಳನ್ನೂ ಬಿಟ್ಟರೆ ವಿಜಯನಗರದ ಅಂತ್ಯ ಪತನದವರೆಗೂ[5] ಅದಕ್ಕೊಳಹೊಂದಿದ, ಒಂದು ಗಡಿ ಪ್ರದೇಶವಾಗಿಯೆ ಉಳಿಯಿತು. ಹೀಗಾಗಿ ಸುಮಾರು ೨೫೦ ವರ್ಷಗಳಿಗೂ ಹೆಚ್ಚಾಗಿ ತುಳುನಾಡಿನ ಉನ್ನತಿ ಅಥವ ಪತನ, ಶಾಂತಿ ಅಥವ ಗಲಿಬಿಲಿ, ಆರ್ಥಿಕ ಬೆಳವಣಿಗೆ ಅಥವ ಇಕ್ಕಟ್ಟು ಬಹುಮಟ್ಟಿಗೆ

ಶೇಖರನನ್ನೂ ತುಳುನಾಡಿನ ಆಡಳಿತಗಾರರನ್ನಾಗಿ ನೇಮಿಸಿದನು. ಹೀಗಾಗಿ ತುಳುನಾಡು ಮೊದಲ ಬಾರಿಯಾಗಿ ಒಂದು ಸಾಮ್ರಾಜ್ಯದೊಂದಿಗೆ ನಿರಂತರವಾಗಿ ಸೇರಿಸಲ್ಪಟ್ಟಿತು. ಆದರೆ ಮುಸಲ್ಮಾನರ ಅನೇಕ ದಾಳಿಗಳಿಂದಾಗಿ ದಿನೇ ದಿನೇ ಬಲಹೀನರಾಗುತ್ತ ಬಂದ ಹೊಯ್ಸಳರು ಮೇಲಕ್ಕೆ ಬರುತ್ತಿದ್ದ ವಿಜಯನಗರದ ಕ್ರಾಂತಿಯ ಮುಂದೆ ಉಳಿದುಕೊಳ್ಳಲಾಗದೆ ಅಳಿದುಹೋದರು. ಅವರ ಕೆಳಗಿದ್ದ ತುಳುನಾಡು ವಿಜಯನಗರ ಸಾಮ್ರಾಜ್ಯದೊಂದಿಗೆ ಸೇರಿಹೋಯಿತು.

[3] ಈ ವಂಶಕ್ಕೆ ಸೇರಿದ ಅರಸರುಗಳು ಕ್ರಿ. ಶ. ೬ ನೆಯ ಶತಮಾನಕ್ಕೂ ಮುಂದಿನಿಂದಲೇ ತುಳುನಾಡನ್ನಾಳುತ್ತಿದ್ದರು ಎಂದು ಈವರೆಗೆ ದೊರೆತಿರುವ ಶಿಲಾಲಿಪಿಗಳ ಆಧಾರದ ಮೇಲೆ ಊಹಿಸಬಹುದು.

[4] *A. R. Ep.* for 1901, No. 57.

[5] ಕ್ರಿ. ಶ. ೧೫೬೫ ರಲ್ಲಿ ರಕ್ಕಸತಂಗಡಿಯಲ್ಲಿ ನಡೆದ ಭಾರಿ ಯುದ್ಧದ ಪರಿಣಾಮವಾಗಿ ವಿಜಯನಗರ ಸಾಮ್ರಾಜ್ಯವು ಪುನಃ ಸುಧಾರಿಸಿಕೊಳ್ಳಲಾಗದ ಮಟ್ಟಿಗೆ ನಾಶ ಹೊಂದಿತ್ತಾದರೂ, ತುಳುನಾಡು ಸಾಮ್ರಾಜ್ಯದ ಕೈಬಿಟ್ಟು ಹೋಗಲಿಲ್ಲ. ವಿಜಯನಗರದ ಕೊನೆಯ ಮುಖ್ಯನಾಯಕನೆನಿಸಿಕೊಂಡಿರುವ ೨ ನೆಯ ವೇಂಕಟನ ಕಾಲದಲ್ಲೂ ಈ ನಾಡು ಸಾಮ್ರಾಜ್ಯದೊಳಗೇನೆ ಉಳಿದಿತ್ತು ಎಂದು ಉಡಿಪಿಯಲ್ಲಿರುವ ಕೃಷ್ಣಮಠದಿಂದ ದೊರೆತ ಕ್ರಿ. ಶ. ೧೬೧೪ ರ ತಾರೀಕಿನ ಶಿಲಾಶಾಸನದ ಮೂಲಕ ತಿಳಿಯುತ್ತೇವೆ.

ಸಾಮ್ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮೂಹಿಕ ಪರಿಸ್ಥಿತಿಗಳನ್ನು ಹೊಂದಿಕೊಂಡಿದ್ದುವು.

ಸಾಮ್ರಾಜ್ಯ ಸ್ಥಾಪನೆಯಾದ ಕೆಲವು ವರ್ಷಗಳೊಳಗಾಗಿಯೆ ತುಳುನಾಡು ವಿಜಯನಗರದ ಒಂದು ಗಡಿಪ್ರದೇಶವಾಗಿ ಬೆಳಗಲಾಯಿತೆಂದೀಗತಾನೆ ಹೇಳಿರುವೆವು. ಮೊಳಕೆ ತೋರಿಸಿಕೊಂಡಮೇಲೆ ಚಿಗುರು ಬೆಳೆದು ಗಿಡವಾಗಿ ಮರವಾಗಿ ಹಣ್ಣು ಹಂಪಲುಗಳು ದೊರಕುವ ಮೊದಲು ಆ ಚಿಗುರು ಉಳಿದು ಬೆಳೆಯುವ ಪರವಾಗಿ ತೋಟವಾಳನು ಕೈಕೊಳ್ಳಬೇಕಾದ ಜಾಗರೂಕತೆಯ ವ್ಯವಹಾರಗಳು ಅನೇಕ. ಅದರಂತೆಯೆ ಆಗತಾನೆ ಸ್ಥಾಪಿಸಲಾಗಿದ್ದ ಸಾಮ್ರಾಜ್ಯದ ಉಳಿತಾಯ ಮತ್ತು ಬೆಳವಣಿಗೆಗಳ ಸಲುವಾಗಿ ಹರಿಹರ ಬುಕ್ಕರು ಸಾಧಿಸಬೇಕಾಗಿದ್ದ ಪರಾಕ್ರಮದ ಕಾರ್ಯಗಳು ಸಾಕಷ್ಟು ಮಿಕ್ಕಿದ್ದುವು. ಅವನ್ನೆಲ್ಲ ಹಿಂದಕ್ಕೆ ದೂಡಿ ಎಲ್ಲೋ ಸಮುದ್ರ ತೀರದಲ್ಲಿದ್ದ ತುಳುನಾಡನ್ನು ಅವಸರದಿಂದ ಗೆದ್ದು ತಮ್ಮ ವಶಮಾಡಿಕೊಂಡುದನ್ನು ನೋಡಿದಲ್ಲಿ, ಆ ಸಹೋದರರಿಗೆ ಮಹತ್ಕಾಂಕ್ಷೆಯುಳ್ಳ ತಮ್ಮ ಸಾಹಸದ ಸಾರ್ಥಕತೆಗೆ ಕುದುರೆಗಳು ಅತ್ಯಗತ್ಯವೆಂಬ ಸತ್ಯವೂ ಆ ಕುದುರೆಗಳನ್ನು ಸುಲಭರೀತಿಯಿಂದ ಪಡೆಯಲು ಮಂಗಳೂರು ಮತ್ತು ಬಾರಕೂರು ಬಂದರಗಳನ್ನೊಳಗೊಂಡಿದ್ದ ತುಳುನಾಡು ಎಷ್ಟರಮಟ್ಟಿಗೆ ಸರ್ವಥಾ ಅತ್ಯಗತ್ಯವೆಂಬ ವಿಷಯವೂ ತಿಳಿದಿತ್ತೆಂದೇ ಹೇಳಬೇಕಾಗುತ್ತದೆ.[6] ಏಕೆಂದರೆ ಹಲವು ಮುಖ್ಯವಾದ ಪರದೇಶಗಳಿಗೆ ಪ್ರವೇಶದ್ವಾರದಂತೆ ಇದ್ದು ಬರುವ ತುಳುನಾಡು ಮತ್ತಾವ ವಿಚಾರದಿಂದಲೂ ಹೇಳತಕ್ಕಷ್ಟು ಉಪಯುಕ್ತತೆಯನ್ನು ಪಡೆದಿರಲಿಲ್ಲ.

ಹೀಗೆ ವಿಜಯನಗರದೊಂದಿಗೆ ಸೇರಿಸಲ್ಪಟ್ಟಿದ್ದ ತುಳುನಾಡು ಎಂತಹ ಸಂದರ್ಭದಲ್ಲೂ ಕೈತಪ್ಪಿ ಹೋಗದಂತೆ ೧ ನೆಯ ಹರಿಹರನೂ ಅವನ ತರುವಾಯ ಪಟ್ಟಕ್ಕೆ ಬಂದ ಅರಸರುಗಳೂ ವಿಚಾರಪೂರ್ವಕವಾಗಿ ನೋಡಿಕೊಳ್ಳುತ್ತಿದ್ದರು. ಇದರ ಪರಿಣಾಮವೆಂದರೆ ಆ ನಾಡಿನ ಮೇಲೆ ೧ ನೆಯ ಹರಿಹರನಿಂದ ಬೀಸಲಾಗಿದ್ದ ಕಂದಾಚಾರದ ಬಲೆಯನ್ನು ತೆಗೆದುಹಾಕಲು ಅವನ ಉತ್ತರಾಧಿಕಾರಿಗಳಲ್ಲಿ ಯಾರೊಬ್ಬರೂ ಸಮ್ಮತಿಸದಿದ್ದುದೆ.[7] ಇದರಿಂದಾಗಿ ಬಾರಕೂರು ಮತ್ತು ಮಂಗಳೂರು ರಾಜ್ಯಗಳು ಸಾಮ್ರಾಜ್ಯದ

---

[6] ಮುಸಲ್ಮಾನರ ಧಾಳಿಗಳನ್ನು ಪೂರ್ಣವಾಗಿ ತಡೆಗಟ್ಟಲು ಅವರಿಂದೆದುರಿಸಲಾರದ ಕುದುರೆ ಬಲವನ್ನು ವಿಜಯನಗರದ ಪಾಲಕರು ಸ್ಥಿತಿಗೆ ತರುವುದು ಅತ್ಯಗತ್ಯವಾಯಿತು. ಆದಕಾರಣ ಕಾಳಗದ ಜಾತ್ಯಶ್ವಗಳನ್ನು ಮತ್ತೆಮತ್ತೆ ಸಂಗ್ರಹಿಸುವುದರಲ್ಲೆ ಸಾಮ್ರಾಜ್ಯದ ಹಿತಕಾರಿಗಳು ಉತ್ಸುಕರಾಗಿದ್ದರು. ಅಂತಹ ಕುದುರೆಗಳು ಅರೇಬಿಯಾ ಮುಂತಾದ ಪರದೇಶಗಳಿಂದ ಮುಖ್ಯವಾಗಿ ಬಾರಕೂರು, ಮಂಗಳೂರು, ಹೋನಾವರ, ಬಟ್ಕಲ್ ಬಂದರುಗಳ ಮೂಲಕ ಸಾಮ್ರಾಜ್ಯದವರ ಕೈಸೇರುತ್ತಿದ್ದುವು.

[7] ಬಲಾತ್ಕಾರದಿಂದ ಸಾಮ್ರಾಜ್ಯದೊಂದಿಗೆ ಸೇರಿಸಲ್ಪಡುವ ಪ್ರದೇಶಗಳು ಸಂದರ್ಭ ಸಿಕ್ಕಿದಾಗ

ಸೈನ್ಯದಲ್ಲಿ ದುಡಿದು ಪ್ರಖ್ಯಾತರಾದ ಮಹಾದಣ್ಡನಾಯಕರುಗಳ ನೇರ ಆಡಳಿತೆ ಇಲ್ಲವೆ ಮೇಲ್ವಿಚಾರಣೆಯ ಕೆಳಗೆನೇ ಉಳಿಯಬೇಕಾಯಿತು.

೨. ತುಳುನಾಡಿನ ವಿಭಾಗಗಳು ಮತ್ತು ಸಾಮ್ರಾಜ್ಯ ಸೇವಕರು

ಸುಸೂತ್ರ ಮತ್ತು ಸಂಯುಕ್ತ ಆಡಳಿತೆಯ ಸೌಕರ್ಯಕ್ಕಾಗಿ ಸಾಮ್ರಾಜ್ಯವನ್ನು ಹಲವು ರಾಜ್ಯಗಳನ್ನಾಗಿ ವಿಭಾಗಿಸಲಾಗಿತ್ತು. ಉದಯಗಿರಿ ರಾಜ್ಯ, ಅರಗ ಅಥವ ಮಲೇಹ ರಾಜ್ಯ, ಮುಳ್ವಾಯಿರಾಜ್ಯ, ಪೆನುಗೊಂಡರಾಜ್ಯ ಇವುಗಳಂತೆಯೆ ತುಳು ನಾಡನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳೆಂದು ಎರಡಾಗಿ ವಿಂಗಡಿಸ ಲಾಗಿತ್ತು. ಬಾರಕೂರು ಮತ್ತು ಮಂಗಳೂರು ಪಟ್ಟಣಗಳೇ ಈ ರಾಜ್ಯಗಳ ರಾಜಧಾನಿ ಗಳಾದವು. ಹೆಚ್ಚಾಗಿ ಈ ಇಮ್ಮಡಿಯ ಹಂಚಿಕೆಯೆ ರೂಢಿಯಲ್ಲಿದ್ದಿತಾದರೂ, ಕೆಲವೊಮ್ಮೆ ತುಳುನಾಡಿನ ಪ್ರಾಂತರಚನೆ ವಿಶೇಷ ಬದಲಾವಣೆಗಳನ್ನು ಹೊಂದದಿರ ಲಿಲ್ಲ. ಕೃಷ್ಣದೇವರಾಯನ ಕಾಲದಲ್ಲೊಮ್ಮೆ ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನು ಕೂಡಿಸಿ ತುಳುರಾಜ್ಯವೆಂಬ ಹೆಸರಿಟ್ಟು, ಆ ರಾಜ್ಯದ ಆಡಳಿತೆಯ ಭಾರವನ್ನು ರತ್ನಪ್ಪ ಒಡೆಯನೆಂಬಾತನಿಗೆ ಒಪ್ಪಿಸಲಾಗಿತ್ತು.[8] ಅಲ್ಲದೆ ಕೆಲವೊಮ್ಮೆ ಬಾರಕೂರು ರಾಜ್ಯವನ್ನು ಮಾತ್ರ ತುಳುರಾಜ್ಯವೆಂದು ಕರೆಯಲಾಗಿತ್ತು.[9] ಮಲ್ಲಿಕಾರ್ಜುನನ ಬಸರೂರು ಶಾಸನದಲ್ಲಿ ಮಂಗಳೂರು ರಾಜ್ಯವನ್ನು ಮಾತ್ರ ತುಳುರಾಜ್ಯವೆಂದು ಕರೆಯಲಾಗಿದೆ.[10] ಕ್ರಿ. ಶ. ೧೫೪೬ ರಲ್ಲಿ, ಸದಾಶಿವರಾಯನು ಸಾಮ್ರಾಜ್ಯವನ್ನಾಳುತ್ತಿದ್ದಾಗ, ತುಳುನಾಡನ್ನು ಬಾರಕೂರು, ಮಂಗಳೂರು ಮತ್ತು ತುಳುರಾಜ್ಯಗಳೆಂದು ಮೂರಾಗಿ ವಿಂಗಡಿಸಿದ್ದರೆಂದು ಕುಂದಾಪುರ ತಾಲೂಕಿನ ಶಂಕರನಾರಾಯಣ ಗ್ರಾಮದಿಂದ ದೊರೆತ ಶಿಲಾಲಿಪಿಯ ಮೂಲಕ ತಿಳಿಯುತ್ತೇವೆ.[11]

ಲಿಲ್ಲ. ಕಳೆದುಕೊಂಡ ಸ್ವಾತಂತ್ರ್ಯವನ್ನು ಪುನಃ ಪಡಕೊಳ್ಳುವ ಪ್ರಯತ್ನ ಮಾಡುವುದು ಇತಿಹಾಸದಲ್ಲಿ ಕಂಡುಬರುವ ಸಹಜವಾದ ಕ್ರಮಗಳಲ್ಲೊಂದು. ಅಂತೆಯೆ ವಿಜಯನಗರದ ಒಡೆಯರುಗಳೂ ಅವರ ಪ್ರತಿನಿಧಿಗಳೂ ಎಷ್ಟೇ ಶ್ರಮ ಸಾಧಿಸುತ್ತಿದ್ದರೂ ತುಳುನಾಡು ಕೆಲವೊಮ್ಮೆ ತನ್ನ ಸ್ವಾತಂತ್ರ್ಯವನ್ನು ತಿರುಗಿ ಪಡೆಯಲು ಒದ್ದಾಡದಿರಲಿಲ್ಲ. ೧ನೆಯ ವಿರೂಪಾಕ್ಷನ ಕಾಲದಲ್ಲೂ ಅಂತೆಯೆ ೨ನೆಯ ವಿರೂಪಾಕ್ಷನ ಕಾಲದಲ್ಲೂ ತುಳುನಾಡು ಅಲ್ಪಕಾಲ ತನ್ನ ಸ್ವಾತಂತ್ರ್ಯವನ್ನು ಪುನಃ ಪ್ರತಿಷ್ಠೆಗೊಳಿಸಿ ಕೊಂಡಿತ್ತು. ಆದರೆ ಇಂತಹ ಸಂದರ್ಭಗಳಲ್ಲಿ ಸಾಮ್ರಾಜ್ಯದ ಹಿತಕಾರಿಗಳು ಬಲಾತ್ಕಾರ ಪ್ರಯೋಗ ದಿಂದ ಆ ನಾಡನ್ನು ಗೆದ್ದು ಮತ್ತೊಂದು ಸಾರಿ ವಶಪಡಿಸಿಕೊಂಡಿದ್ದರು.

[8] *A. R. Ep.* for 1928-29, No. 528.

[9] *Ibid.*, for 1901, No. 158.

[10] *Ibid.*, for 1927-28, No. 406.

[11] *Ibid.*, No. 397.

ಮುಸಲ್ಮಾನರ ಧಾಳಿಗಳಿಂದಲೂ ಬಲಹೀನರ ಆಡಳಿತದಿಂದಲೂ ಸಾಮ್ರಾಜ್ಯವು ಕ್ಷಯ ಹೊಂದಲಾರಂಭಿಸಿದ ಮೇಲಂತೂ ಈ ಪ್ರದೇಶಗಳು ತುಳುರಾಜ್ಯವೆಂಬ ಒಂದೇ ಹೆಸರಿನಲ್ಲಿ ಕೆಳದಿ ಸದಾಶಿವನಾಯಕನ ಆಳಿಕೆಗೊಳಗಾದುವು.

ಹೀಗೆ ತುಳುನಾಡನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳೆಂದು ಎರಡಾಗಿ ಭಾಗಿಸಿ, ಆ ರಾಜ್ಯಗಳನ್ನಾಳುವುದಕ್ಕೋಸ್ಕರ ರಾಜನಿಷ್ಠರು ಮತ್ತು ನಂಬಿಕೆಯಾದ ವ್ಯಕ್ತಿಗಳನ್ನು ನೇಮಿಸಲಾಯಿತು. ಈ ರೀತಿ ನೇಮಿಸಲಾದ ಆಡಳಿತ ದಾರರುಗಳೊಳಗೆ ಹೆಚ್ಚಿನ ಅಧಿಕಾರವುಳ್ಳವರೆಂದರೆ ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನು ಪ್ರತ್ಯೇಕವಾಗಿ ಆಳುತ್ತಿದ್ದ ರಾಜ್ಯಪಾಲರುಗಳೆ. ಇವರುಗಳಲ್ಲಿ ಕೆಲವರು ಚಕ್ರವರ್ತಿಗಳಿಂದಲೇ ನೇಮಿಸಲ್ಪಟ್ಟಿದ್ದರು. ಇತರರು ಚಕ್ರವರ್ತಿಗಳಿಂದ ತುಳು ನಾಡಿನ ಮೇಲ್ವಿಚಾರಣೆಗಾಗಿ ಕಳುಹಿಸಲಾಗಿದ್ದ ಮಹಾ ದಂಡನಾಯಕರುಗಳಿಂದ ನೇಮಿಸಲಾಗಿದ್ದರು. ಇವರುಗಳಲ್ಲಿ ಹೆಚ್ಚಿನವರನ್ನು ಮಹಾಪ್ರಧಾನರುಗಳೆಂದು ಕರೆಯಲಾಗಿತ್ತು. ಕ್ರಿ. ಶ. ೧೪೨೫ ರಲ್ಲಿ ಬಾರಕೂರಿನ ರಾಜ್ಯಪಾಲನಾಗಿದ್ದ ನರಸಿಂಹ ಒಡೆಯನು ಮಾತ್ರ ಮಹಾಮಂತ್ರಿಯೆಂಬ ಬಿರುದನ್ನು ಪಡೆದಿದ್ದನು.[12] ಉಳಿದ ರಾಜ್ಯಪಾಲರುಗಳು ದೊರೆತಿರುವ ಶಿಲಾಲಿಪಿಗಳಲ್ಲಿ ಹೆಸರಿನಿಂದ ಮಾತ್ರ ಹೇಳಲ್ಪಟ್ಟಿರುವರು. ಇವರುಗಳನ್ನು ನೇಮಿಸುವಲ್ಲಿ ಸಾಮ್ರಾಜ್ಯದ ಒಡೆಯರುಗಳೇ ಆಗಲಿ ಅವರುಗಳ ಪ್ರತಿನಿಧಿಗಳಾದ ಮಹಾದಣ್ಡನಾಯಕರುಗಳೇ ಆಗಲಿ ಪ್ರತ್ಯೇಕ ಕ್ರಮ ಏನನ್ನೂ ಕೈಕೊಂಡಿರಲಿಲ್ಲ. ಹೆಚ್ಚಾಗಿ ರಾಜ್ಯಪಾಲರುಗಳ ಉದ್ಯೋಗವು ಒಂದೆರಡು ವರ್ಷಗಳೊಳಗಾಗಿ ಕೈಮಾರಿಹೋಗುತ್ತಿತ್ತು. ಆದರೆ ಒಂದು ಸಾರಿ ರಾಜ್ಯ ಪಾಲನಾಗಿ ಸೇವೆ ಸಲ್ಲಿಸಿದವನನ್ನು ಪುನಃ ಅದೇ ರಾಜ್ಯವನ್ನಾಳಲು ನೇಮಿಸುವುದರ ಬಗ್ಗೆ ಅಡ್ಡಿ ಏನೂ ಇರಲಿಲ್ಲ. ಅಂತೆಯೆ ಕ್ರಿ. ಶ. ೧೪೩೧ ರಲ್ಲಿ[13] ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನಾಳುತ್ತಿದ್ದ ಅಣ್ಣಪ್ಪನು ಪುನಃ ಕ್ರಿ. ಶ. ೧೪೪೦ ರಲ್ಲಿ[14] ಅದೇ ರಾಜ್ಯಗಳನ್ನಾಳುತ್ತಿರುವುದನ್ನು ಕಾಣುತ್ತೇವೆ. ಕ್ರಿ. ಶ. ೧೪೫೧ ರಲ್ಲಿ[15] ಬಾರಕೂರು ರಾಜ್ಯವನ್ನಾಳುತ್ತಿದ್ದ ಭಾನಪ್ಪ ಒಡೆಯನು ಕ್ರಿ. ಶ. ೧೪೫೮ ರಲ್ಲಿ[16] ಇನ್ನೊಂದು ಸಾರಿ ಅದೇ ರಾಜ್ಯದ ಶಾಸ್ತಾರನಾಗಿದ್ದುದನ್ನು ಶಿಲಾಲಿಪಿಗಳ ಮೂಲಕ ತಿಳಿಯುತ್ತೇವೆ. ಅಷ್ಟೇ ಅಲ್ಲದೆ ಒಂದು ರಾಜ್ಯವನ್ನಾಳುತ್ತಿದ್ದ ರಾಜ್ಯ

12 *Ibid.*, for 1091, No. 180.

13 *A. R. Ep.* for 1930-31, No. 344.

14 *Ibid.*, No. 346.

15 *Ibid.*, for 1929-30, No. 551.

16 *Ibid.*, for 1930-31, No. 358.

ಪಾಲನನ್ನೆ ಸಂದರ್ಭಕ್ಕನುಸಾರವಾಗಿ ಮತ್ತೊಂದು ರಾಜ್ಯವನ್ನೂ ಏಕಕಾಲದಲ್ಲಿ ಆಳುವಂತೆ ಅಪ್ಪಣೆ ಹೊರಡಿಸಿದುದೂ ಉಂಟು. ಅಂತೆಯೆ ಕ್ರಿ. ಶ. ೧೪೩೧ ರಲ್ಲಿ ಮಂಗಳೂರು ರಾಜ್ಯವನ್ನು ಮಾತ್ರ[17] ಆಳುತ್ತಿದ್ದ ಅಣ್ಣಪ್ಪನು ಕ್ರಿ. ಶ. ೧೪೪೦ ರಲ್ಲಿ ಮಂಗಳೂರು ಮತ್ತು ಬಾರಕೂರು ರಾಜ್ಯಗಳನ್ನೊಟ್ಟಾಗಿ[18] ಆಳುತ್ತಿದ್ದನು.

ಹೆಚ್ಚಿನಾಂಶ ಈ ರಾಜ್ಯಪಾಲರುಗಳನ್ನೊಂದೆರಡು ವರ್ಷಗಳೊಳಗಾಗಿಯೆ ಬದಲಿಸುತ್ತಿದ್ದರೆಂದು ಈಗತಾನೆ ಹೇಳಿರುವೆವು. ಆದರೆ ಈ ಕಟ್ಟಿಗೊಳಪಡದ ವ್ಯಕ್ತಿಗಳು ಒಬ್ಬಿಬ್ಬರು ಇದ್ದೇ ಇದ್ದರು. ೧ ನೆಯ ಬುಕ್ಕನ ಕಾಲದಲ್ಲಿ ಮಹಾಪ್ರಧಾನ ಮಲೆಯ ದಣ್ಡನಾಯಕನೆಂಬಾತನು ಕೆಲವು ವರ್ಷಗಳೆಡೆವರಿಯದೆ ಬಾರಕೂರು ರಾಜ್ಯವನ್ನಾಳುತ್ತಿದ್ದನು.[19] ಅಲ್ಲದೆ ವಿರೂಪಾಕ್ಷರಾಯನ ಕೆಳಗಿದ್ದ ವಿಠರಸ ಒಡೆಯನು ಕ್ರಿ. ಶ. ೧೪೬೬ ರಿಂದ[20] ಕ್ರಿ. ಶ. ೧೪೭೬ ರವರೆಗೆ[21] ಎಡೆಯಿಲ್ಲದೆ ಬಾರಕೂರಿನ ರಾಜ್ಯಪಾಲನಾಗಿ ಸೇವೆ ಸಲ್ಲಿಸಿರುವನು. ಹೆಚ್ಚಾಗಿ ಈ ಆಡಳಿತದಾರರುಗಳನ್ನು ನಾಡಿನ ಹೊರಗಡೆಯಿಂದಲೆ ಆರಿಸಿಕೊಳ್ಳುವುದಿತ್ತಾದರೂ, ಕ್ರಿ. ಶ. ೧೫೦೯ ರಲ್ಲಿ ಬಾರಕೂರು ರಾಜ್ಯವನ್ನಾಳುತ್ತಿದ್ದ ಕುರುಗೋಡು ಸೋವಣ್ಣನಾಯಕ[22] ಮತ್ತು ಕ್ರಿ. ಶ. ೧೫೧೦ ರಲ್ಲಿ ಅದೇ ರಾಜ್ಯವನ್ನಾಳುತ್ತಿದ್ದ ಆತನ ತಮ್ಮನಾದ ಕುರುಗೋಡು ಮಲ್ಲಪ್ಪನಾಯಕ[23] ಮುಂತಾದವರು ತುಳುನಾಡಿನವರೇ ಆಗಿದ್ದರು. ಈವರೆಗೆ ದೊರೆತಿರುವ ಶಾಸನ ಸಾಮಗ್ರಿಗಳ ಆಧಾರವನ್ನಿಟ್ಟುಕೊಂಡು ರಾಜ್ಯಪಾಲರ ಸ್ಥಾನಕ್ಕೆ ನಿವೃತ್ತರ ಪುತ್ರಪೌತ್ರಾದಿಗಳನ್ನು ನೇಮಿಸುತ್ತಿದ್ದರೊ ಇಲ್ಲವೊ ಹೇಳಲಾಗುವುದಿಲ್ಲ. ಆದರೆ ಕೃಷ್ಣದೇವರಾಯನ ನೀಲಾವರ ಶಿಲಾಶಾಸನದಿಂದಾಗಿ ಬಾರಕೂರಿನ ರಾಜ್ಯಪಾಲನಾಗಿ ನೇಮಕ ಪಡೆದಿದ್ದ ರತ್ನಪ್ಪ ಒಡೆಯನು ತನ್ನ ಮಗನಾದ ವಿಜಯಪ್ಪ ಒಡೆಯನಿಗೆ ತನ್ನ ಭಾರವನ್ನು ವರ್ಗಾಯಿಸಿದನೆಂದು ಮಾತ್ರ ತಿಳಿಯುತ್ತೇವೆ.[24] ಸಾಮ್ರಾಜ್ಯವು ಬಲಹೀನ ಹೊಂದಿ ಕೆಳದಿ ಸದಾಶಿವನು ಶಕ್ತಿವಂತನಾದ ನಂತರ ಮಾತ್ರ ಅವನ ಕೈಯೊಳಗಿದ್ದ ಬಾರಕೂರಿನ ಆಡಳಿತವು ಗುತ್ತಿ, ಅರಗ ಮತ್ತು ಮಂಗಳೂರು ರಾಜ್ಯಗಳ ಆಡಳಿತೆಯೊಂದಿಗೆ ಅವನ ಮಕ್ಕಳಾದ ಸಂಕಣ

---

[17] *Ibid.*, No. 344.
[18] *Ibid.*, No. 346.
[19] *Ibid.*, for 1931-32, p. 65.
[20] *Ibid.*, for 1901, No. 153.
[21] *Ibid.*, for 1930-31, No. 361.
[22] *Ibid.*, for 1931-32, No. 271.
[23] *Ibid.*, for 1927-28, No. 410.
[24] *Ibid.*, for 1927-28, No. 503.

ಮತ್ತು ರಾಮರಾಜನಾಯಕರುಗಳ[25] ಮತ್ತು ಅವರ ಸಂತತಿಯರ ಆಳಿಕೆಗೊಳ ಬಿದ್ದಿತು.

ಕೆಲವೊಮ್ಮೆ ಚಕ್ರವರ್ತಿಗಳು ತುಳುನಾಡಿನ ಸಂಯುಕ್ತ ಮೇಲ್ವಿಚಾರಣೆಗಾಗಿ ಪ್ರತಿನಿಧಿಗಳನ್ನು ನೇಮಿಸುತ್ತಿದ್ದರೆಂದೂ, ಈ ದಣ್ಣನಾಯಕರುಗಳಿಗೆ ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನಾಳಲು ರಾಜ್ಯಪಾಲರುಗಳನ್ನು ನೇಮಿಸುವ ಅಧಿಕಾರ ಇತ್ತೆಂದೂ ಹೇಳಿರುವೆವು. ಈ ಪ್ರತಿನಿಧಿಗಳು ಏಕಪ್ರಕಾರವಾಗಿ ಸಾಮ್ರಾಜ್ಯದ ಸೈನ್ಯಕ್ಕೆ ಸೇರಿದ ದಣ್ಣನಾಯಕರುಗಳಾಗಿದ್ದರು. ಈ ದಣ್ಣನಾಯ ಕರುಗಳಿಗೆ ತುಳುನಾಡಿನ ಆಡಳಿತದ ಮತ್ತು ವ್ಯಾಪಾರದ ಮೇಲ್ವಿಚಾರಣೆ ಅಂತೆಯೆ ನಾಡಿನ ಶಾಂತಿ ಸಂರಕ್ಷಣೆ ಇವಿಷ್ಟೆ ಮುಖ್ಯ ಜವಾಬುದಾರಿಕೆಗಳಾಗಿದ್ದುವು. ಇವರುಗಳ ನೇಮಕದಲ್ಲೂ ಸಾಮ್ರಾಜ್ಯದ ಒಡೆಯರುಗಳು ಪ್ರತ್ಯೇಕ ಕ್ರಮಗಳನ್ನು ಕೈಕೊಳ್ಳುತ್ತಿರಲಿಲ್ಲ.[26]

೩. ತುಳುನಾಡಿನ ತುಂಡರಸರುಗಳು

ಹೀಗೆ ನೇಮಕ ಪಡೆದ ಈ ರಾಜ್ಯಪಾಲರುಗಳಿಗೆ ತುಳುನಾಡಿನ ಒಳಾಡಳಿತ ವಿಚಾರಗಳಲ್ಲಿ ಅಪರಿಮಿತ ಅಧಿಕಾರ ಎಂದಿಗೂ ಇರಲಿಲ್ಲ. ಬಾರಕೂರು ಮತ್ತು ಮಂಗಳೂರು ಬಂದರುಗಳ ಮೂಲಕ ತುಳುನಾಡಿನಲ್ಲಿ ನಡೆದು ಬಂದ ಸಾಮ್ರಾಜ್ಯ ಸಂಬಂಧವಾದ ವ್ಯಾಪಾರದ ನಿರ್ವಾಹ, ತಮ್ಮ ಆಳಿಕೆಗೊಳಪಟ್ಟ ರಾಜ್ಯದೊಳಗಿನ ರಾಜಕೀಯ ಶಾಂತಿಯ ರಕ್ಷಣೆ, ಮತ್ತು ತುಳುನಾಡು ಎಂದಿಗೂ ಸಾಮ್ರಾಜ್ಯದ ಕೈಬಿಟ್ಟು ಹೋಗದಂತೆ ನೋಡಿಕೊಳ್ಳುವುದು ಇವೇ ಈ ರಾಜ್ಯಪಾಲರುಗಳ ಅತಿ ಮುಖ್ಯ ಹೊಣೆಗಳಾಗಿದ್ದುವು. ಈ ಕಾರ್ಯಗಳನ್ನು ನೆರವೇರಿಸುವಲ್ಲೂ ಇವರು ಗಳು ಚಕ್ರವರ್ತಿಗಳಿಗೆ ಅಥವಾ ದಣ್ಣನಾಯಕರಿಗೆ ಅಥವಾ ಇಬ್ಬರಿಗೂ ವಿಧೇಯ ವಾಗಿಯೆ ಉಳಿಯಬೇಕಾಯಿತು. ಮಾತ್ರವಲ್ಲದೆ ತುಳುನಾಡಿನ ಹಲವಾರು ಸಣ್ಣ ಪುಟ್ಟ ರಾಜ್ಯಗಳು ಮುಂಚಿನಂತೆಯೆ ತಮ್ಮ ತಮ್ಮ ನಾಯಕರುಗಳ ಆಳಿಕೆಯೊಳಗೇನೆ ಉಳಿದಿದ್ದುವು. ಸಾಮ್ರಾಜ್ಯದ ಅರಸರು ಯಾರೂ ಆ ನಾಡಿನ ಪ್ರಾಚೀನ ರಾಜಕೀಯ ವಿಭಾಗಗಳನ್ನು ಬಹಳವಾಗಿ ಬದಲಿಸುವ ಹಂಗಿಗೆ ಹೋಗಲಿಲ್ಲ. ಅಂದಿನ

[25] *A. R. Ep.* for 1931-32, No. 267.

[26] ರಾಜ್ಯಪಾಲರುಗಳನ್ನು ನೇಮಿಸುವುದರಲ್ಲಿ ಕಂಡುಬರುವಷ್ಟೆ ಅನಿಶ್ಚಯ ಈ ದಣ್ಣನಾಯ ಕರುಗಳ ನೇಮಕದಲ್ಲೂ ಕಂಡುಬರುತ್ತದೆ. ಅಲ್ಲದೆ ತುಳುನಾಡನ್ನು ಸಾಮ್ರಾಜ್ಯದೊಂದಿಗೆ ಸೇರಿಸ ಲಾದ ಸ್ವಲ್ಪ ವರ್ಷಗಳವರೆಗೂ ದಣ್ಣನಾಯಕರುಗಳನ್ನು ರಾಜ್ಯಪಾಲರುಗಳ ಹುದ್ದೆಗೇನೆ ನೇಮಿಸಲಾಗಿತ್ತು.

ತುಳುನಾಡಿನಲ್ಲಿ ಹಲವಾರು ಚಿಕ್ಕ ರಾಜ್ಯಗಳೂ ಇದ್ದುವು. ಅಂತೆಯೆ ಅವುಗಳನ್ನು ಕಟ್ಟಿ ಆಳಲು ಸಾಕಷ್ಟು ತುಣ್ಡರಸರುಗಳೂ ಇದ್ದರು. ಈ ಸಣ್ಣ ಸಂಸ್ಥಾನಗಳೇ ಆ ನಾಡಿನ ನಿಜವಾದ ಮತ್ತು ಸಾರ್ಥಕವಾದ ವಿಭಾಗಗಳಾಗಿದ್ದುವು. ಅವುಗಳ ನಾಯಕರುಗಳೇ ಅಲ್ಲಿಯ ನಿಜವಾದ ಮತ್ತು ಜನಪ್ರಿಯ ಆಡಳಿತದಾರರುಗಳಾಗಿದ್ದರು. ಇವರುಗಳಿಗೆ ತಮ್ಮ ತಮ್ಮ ಸಂಸ್ಥಾನಗಳನ್ನಾಳುವ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಬಾರಕೂರು ರಾಜ್ಯದೊಳಗಿದ್ದ ಹಾಡುವಳಿರಾಜ್ಯ, ಹಾರುನಾಡ ಸೀಮೆ, ಹಲಸುನಾಡ ಸೀಮೆ, ಮುಂಗಿನಾಡು, ಕೆಲನಾಡು, ಕಾರ್ಕಳ, ಸ್ಥಳನಾಡು ಮತ್ತು ಮಂಗಳೂರು ರಾಜ್ಯದೊಳಗಿದ್ದ ನಂದಳಿಕೆಯ ನಾಡು, ಬಂಗವಾಡಿ, ತಿಳುಗಾಡಿಯ ನಾಡು, ನಗಿರಾ ರಾಜ್ಯ ಮತ್ತು ಕಡಬ ರಾಜ್ಯ ಮುಂತಾದುವು ಈ ರೀತಿ ತುಂಡರಸರುಗಳ ಆಳಿಕೆಗೊಳಪಟ್ಟಿದ್ದ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಕೆಲವು ಮಾತ್ರ. ಆದರೆ ಈ ಸಂಸ್ಥಾನಗಳಲ್ಲಿ ಹಲವನ್ನೊಳಗೊಂಡಿದ್ದ ಮತ್ತು ತುಳುನಾಡಿನಲ್ಲೇ ಅತಿ ದೊಡ್ಡ ಸಂಸ್ಥಾನವೆನಿಸಿಕೊಂಡಿದ್ದ ಕಲಶ ಕಾರ್ಕಳ ರಾಜ್ಯ ಈ ಸಣ್ಣ ರಾಜ್ಯಗಳು ಎಂದಿಗೂ ಅನುಭವಿಸಿ ಇರದಷ್ಟು ಸ್ವಾತಂತ್ರ್ಯವನ್ನು ಪಡೆದಿತ್ತು. ಆ ರಾಜ್ಯವನ್ನಾಳುತ್ತಿದ್ದ ಅರಸರುಗಳು ಜೈನಮತಕ್ಕೆ ಸೇರಿದವರು; ಜಿನದತ್ತನು ತಮ್ಮ ವಂಶದ ಆದಿಪುರುಷನೆಂದು ಹೇಳಿಕೊಳ್ಳುತ್ತಿದ್ದರು.

ಎಷ್ಟೇ ಆದರೂ ಈ ಸಂಸ್ಥಾನಗಳ ನಾಯಕರುಗಳು ಸಾಮ್ರಾಜ್ಯದ ಆಡಳಿತ ಕ್ರಮಗಳ ಲೆಕ್ಕದಲ್ಲಿ ಹೆಚ್ಚಿನ ಮುಖ್ಯತೆಯನ್ನು ಪಡೆದಿರಲಿಲ್ಲ. ಅವರುಗಳ ಸ್ವಾತಂತ್ರ್ಯದ ನೆಲೆಯಾಗುವಿಕೆ ಚಕ್ರವರ್ತಿಗಳ ಹವಣಿಕೆಯನ್ನು ಹೊಂದಿಕೊಂಡಿತ್ತು. ಸಾಮ್ರಾಜ್ಯ ನಿಷ್ಠರಾಗಿ ಇರುವಷ್ಟು ದಿನ ಅವರನ್ನು ಅಧಿಕಾರದಿಂದ ತೆಗೆದುಹಾಕುವ ನಿರ್ಧಾರವನ್ನು ವಿಜಯನಗರದ ಯಾರೊಬ್ಬ ಅರಸರೂ ಮಾಡಲಿಲ್ಲ. ಅಲ್ಲದೆ ಈ ತುಣ್ಡರಸರುಗಳು ತಮ್ಮ ಆಳಿಕೆಗೊಳಪಟ್ಟ ಜನತೆಯನ್ನು ತಮ್ಮದೇ ಆದ ಧರ್ಮವನ್ನು ಹಿಂಬಾಲಿಸುವಂತೆ ಒಲಿಸಿಕೊಳ್ಳುವ ಹಕ್ಕನ್ನು ಪಡೆದಿದ್ದರು. ತಮ್ಮ ಕೆಳಗಿರುವ ಜನತೆಯ ರಾಜಕೀಯ ಸಂಬಂಧವಾದ ಆಡಳಿತ ವಿಚಾರಗಳಲ್ಲಿ ಹೊರಗಿನ ಎಡತಡೆಯೇನೂ ಇಲ್ಲದಂತೆ ಮುಂದುವರಿಯಲು ಬಾರಕೂರು ಮತ್ತು ಮಂಗಳೂರು ರಾಜ್ಯಗಳ ರಾಜ್ಯಪಾಲರುಗಳು ಈ ಸ್ಥಳೀಯ ನಾಯಕರುಗಳಿಗೆ ಸಹಾಯಮಾಡುತ್ತಿದ್ದರು. ಸಂಸ್ಥಾನದ ಆಡಳಿತ ಮತ್ತು ತಮ್ಮ ಮನೆತನದ ನಡಿಸುವಿಕೆಗಳಿಂದುಂಟಾಗುವ ವೆಚ್ಚಗಳ ಉಗಮುಕ್ಕಾಗಿ ಜನತೆಯಿಂದ ಆದಾಯ ಪಡೆಯಲು ಮತ್ತು ತರತರದ ತೆರಿಗೆಗಳನ್ನೆತ್ತಲು ಈ ಅರಸರುಗಳಿಗಧಿಕಾರವಿತ್ತೆಂಬುದು ಹಲವಾರು ಶಿಲಾಶಾಸನಗಳ ಮೂಲಕ ತಿಳಿದುಬರು

ತ್ತದೆ. ಹಿಂದೆಯೇ ಸೂಚಿಸಿರುವಂತೆ ಈ ನಾಯಕರುಗಳಿಗೆ ಚಕ್ರವರ್ತಿಗಳ ಬೆಂಬಲ ಯಾವಾಗಲೂ ಸಿಕ್ಕುತ್ತಿತ್ತು. ಅಂತೆಯೆ ಕ್ರಿ. ಶ. ೧೪೬೯ ರಲ್ಲಿ ಸಾಕಷ್ಟು ಕಾರಣಗಳಿಲ್ಲದೆ ಕೊಡೆಯಾಲ ಅರಮನೆಯನ್ನೂ ನೀರುಮಾರ್ಗ ಗ್ರಾಮವನ್ನೂ 'ಸುಟ್ಟು ಕೆಡ್ಸಿದಲ್ಲಿ' ಬಾರಕೂರಿನ ರಾಜ್ಯಪಾಲನಾಗಿದ್ದ ವಿಠರಸ ಒಡೆಯನು ಚಕ್ರವರ್ತಿಗಳ ಅಪ್ಪಣೆಯಂತೆ ಉಜ್ರೆ ಗ್ರಾಮವನ್ನೂ ಆ ಗ್ರಾಮದಲ್ಲಿ ತೆರಿಗೆಯೆತ್ತುವ ಅಧಿಕಾರವನ್ನೂ ಕಾಮಿರಾಯ ಅರಸ ಮತ್ತು ದೇವಣ್ಣ ಕೊಠರಿ ಎಂಬಿಬ್ಬರಿಗೂ ಈಡಾಗಿ ಬಿಟ್ಟುಕೊಡಬೇಕಾಯಿತೆಂದು ಪುತ್ತೂರು ತಾಲೂಕಿನಲ್ಲಿರುವ ಉಜ್ರೆ ಗ್ರಾಮದಿಂದ ದೊರೆತ ವಿರೂಪಾಕ್ಷ ರಾಯನ ಶಿಲಾಶಾಸನವು ತಿಳಿಸುತ್ತದೆ.[27]

ಈ ಸ್ಥಳೀಯ ನಾಯಕರುಗಳೊಳಗೆ ಆಗಿಂದಾಗ್ಗೆ ಜಗಳಗಳು ಸಂಭವಿಸುವುದೂ ಸಹಜವೇ ಆಗಿತ್ತು. ಹೆಚ್ಚಿನ ಮಟ್ಟಿಗೆ ಹೀಗೆ ಹೊರಬಿದ್ದ ಕಡಿದಾಟಗಳನ್ನು ಸಮಾಧಾನದಿಂದಲೇ ಕೊನೆಗೊಳಿಸಲು ಸಾಮ್ರಾಜ್ಯದ ಅಧಿಕಾರಿಗಳ ಪ್ರೇರಣೆಯನ್ನು ಪ್ರಯೋಜನಕ್ಕೆ ತರಲಾಗಿತ್ತು.[28] ಜೈನ ಮತ್ತು ಮಧ್ವ ಮತಗಳಿಗೆ ಸೇರಿದ ಆಚಾರ್ಯರುಗಳು ಸಹ ಇಂತಹ ಜಗಳಗಳನ್ನು ತೀರಿಸುವ ಬಗ್ಗೆ ಹೆಚ್ಚಿನ ಉಪಕಾರ ಮಾಡುತ್ತಿದ್ದರು.[29] ಹೆಚ್ಚಾಗಿ ಸರಹದ್ದು ಸಂಬಂಧವಾದ ಅಸಮಾಧಾನವೇ ಇಂತಹ ಕಲಹಗಳ ಮೂಲವಾಗಿತ್ತು. ತುಳುನಾಡಿನಲ್ಲಿ ದೊರೆತಿರುವ ವಿಜಯನಗರ ಕಾಲದ ಶಾಸನಗಳಲ್ಲಿ ಹಲವು ಈ ನಾಯಕರುಗಳೊಳಗೆ ಕೈಗೂಡಿಸಲಾಗಿದ್ದ ಒಡಂಬಡಿಕೆಗಳಾಗಿವೆ.

೪. ಸಾಮಾಜಿಕ ಪರಿಸ್ಥಿತಿ—ಜನತೆಯ ಮತ್ತು ವ್ಯಾಪಾರಿಗಳ ಸಂಘಗಳು

ಹೀಗೆ ಎರಡೂವರೆ ಶತಮಾನಗಳಿಗೂ ಹೆಚ್ಚಾಗಿ ತುಳುನಾಡು ದೊಡ್ಡ ಸಾಮ್ರಾಜ್ಯದ ಒಂದು ಸಣ್ಣ ಭಾಗವಾಗಿ ಮಾತ್ರ ಉಳಿದುಕೊಂಡಿತ್ತು. ಸಾಮ್ರಾಜ್ಯದ ಸೇನಾಪತಿಗಳನ್ನು ನಾಡಿನ ಆಡಳಿತಕ್ಕಾಗಿ ಕಳುಹಿಸಲಾಗಿತ್ತು. ಅಲ್ಲದೆ ನಾಡಿನ ಉದ್ದಕ್ಕೂ ಹಲವು ತುಂಡರಸರುಗಳು ಸಣ್ಣಪುಟ್ಟ ರಾಜ್ಯಗಳನ್ನಾಳುತ್ತಿದ್ದರು. ಆದರೂ ತುಳುನಾಡಿನ ಒಳಾಡಳಿತ ಕ್ರಮಗಳಲ್ಲಿ ನಿರಂಕುಶ ಪ್ರಭುತ್ವಕ್ಕೂ ಅಧಿಕಾರ ವರ್ಗದ ಬಿರುಸಾದ ಆಳಿಕೆಗೂ ಹೆಚ್ಚಿನ ಅವಕಾಶ ಸಿಕ್ಕಲಿಲ್ಲ. ನಾಡಿನ ಆಡಳಿತದಾರರುಗಳು ದಿನೇದಿನೇ ಹೆಚ್ಚಿನ ಪ್ರಭಾವವನ್ನು ಪಡೆಯುತ್ತಿದ್ದ ಸಾಮಾನ್ಯ ಜನತೆ ಮತ್ತು ವ್ಯಾಪಾರಿಗಳ ಸಮೂಹ ಇವುಗಳನ್ನು ಅಲಕ್ಷಿಸುವುದು ಅಸಾಧ್ಯವಾಗುತ್ತ ಬಂದುದೇ ಇದಕ್ಕೆ ಕಾರಣ.

---

27 *A. R. Ep.* for 1928-29, No. 482.
28 *A. R. Ep.* for 1930-31, No. 340.
29 *Ibid.*, No. 336.

ಹಿಂದೂಸ್ಥಾನದ ಇತರ ಭಾಗಗಳಲ್ಲಿ ಪ್ರಾಚೀನ ಕಾಲದಿಂದಲೂ ಜನತೆಯ ಮತ್ತು ವ್ಯಾಪಾರಿಗಳ ಒಕ್ಕೂಟಗಳು ಇದ್ದು ಬಂದಂತೆಯೆ ಕರ್ಣಾಟಕದಲ್ಲೂ ಅದಕ್ಕೊಳಪಟ್ಟಿದ್ದ ತುಳುನಾಡಿನಲ್ಲೂ ಇಂತಹ ಒಕ್ಕೂಟಗಳು ಇದ್ದು ಬಂದುವು. ಆದರೆ ವಿಜಯನಗರದ ಕಾಲದಲ್ಲಿ ಆ ನಾಡಿನ ಒಕ್ಕೂಟಗಳು ಸಂಖ್ಯೆಯಲ್ಲಿ ಹೆಚ್ಚಿದುವಷ್ಟೆ ಅಲ್ಲದೆ ಅವುಗಳ ವಿಶೇಷತ್ವ ಮತ್ತು ಗೌರವ, ಅಧಿಕಾರ ಮತ್ತು ಬಾಧ್ಯತೆಗಳೂ ಸಹ ಬಹಳವಾಗಿ ಹೆಚ್ಚಿದುವು. ರಾಜಕೀಯ ಮತ್ತು ಧಾರ್ಮಿಕ ವ್ಯವಹಾರಗಳಲ್ಲಿ ಈ ಒಕ್ಕೂಟಗಳಿಗೆ ಕೊಡಲಾಗಿದ್ದ ಸ್ಥಾನ ಮತ್ತು ಅವುಗಳು ಸಲ್ಲಿಸಿದ ಸೇವೆ ತುಳುನಾಡಿನ ಅಂದಿನ ಆಡಳಿತದಲ್ಲಿ ಶ್ರೇಷ್ಠ ಮುಖ ಮುದ್ರೆಗಳಾಗಿ ಬೆಳಗಿದುವು.

ಈಗತಾನೆ ಸೂಚಿಸಿರುವಂತೆ ಇಂತಹ ಒಕ್ಕೂಟಗಳನ್ನು ಅವುಗಳ ರಚನಾಸ್ವರೂಪದ ಆಧಾರದಿಂದ ಎರಡಾಗಿ ವರ್ಗೀಕರಿಸಬಹುದು. ಮೊದಲನೆಯದಾಗಿ ಪಟ್ಟಣಗಳಲ್ಲಿರುವ ಮತ್ತು ಗ್ರಾಮಗಳಲ್ಲಿರುವ ಜನತೆಯ ಗುಂಪುಗಳಿಂದಾದ ಸಭೆಗಳು. ಎರಡನೆಯದಾಗಿ ನಾಡಿನ ವ್ಯಾಪಾರಿಗಳು ರಚಿಸಿಕೊಂಡಿದ್ದ ನೆರವಿಗಳು.

ಜನಸಾಮಾನ್ಯರನ್ನೊಳಗೊಂಡಿದ್ದ ಒಕ್ಕೂಟಗಳು ಸುಸೂತ್ರ ಆಡಳಿತ, ಧರ್ಮ, ಸಾಮಾಜಿಕ ಸಹಕಾರ ಮುಂತಾದುವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದುವು. ಈ ಒಕ್ಕೂಟಗಳನ್ನು ರಚಿಸುವಲ್ಲಿ ಇಂದಿನ ಜನತೆಗೆ ತಿಳಿದಿರುವಂತಹ ಪ್ರಜಾಪ್ರಭುತ್ವದ ತತ್ವಗಳನ್ನು ಹಿಂಬಾಲಿಸುತ್ತಿರಲಿಲ್ಲವಾದರೂ ಜನಸಾಮಾನ್ಯರ ಅಂಗೀಕಾರ ಮತ್ತು ಸಹಕಾರ ಅವುಗಳಿಗೆ ದೊರೆತಿದ್ದುವೆಂದು ಹೇಳಲಾಗುತ್ತದೆ. ಈ ಒಕ್ಕೂಟಗಳನ್ನು ನಾಡಿನ ಬೇರೆಬೇರೆ ಭಾಗಗಳಲ್ಲಿ ಮಹಾಜನರು, ಜನನಿಗಳು, ಮಹಾಜಗತ್ತು, ಜಗತ್ತು, ಊರವರು, ಹಲರು ಮುಂತಾದ ವಿವಿಧ ಹೆಸರುಗಳಿಂದ ಕರೆಯಲಾಗಿತ್ತು. ಈ ಸಭೆಗಳ ಸದಸ್ಯರುಗಳ ಸಂಖ್ಯೆ ಯಾವಾಗಲೂ ಒಂದೇಸಮ ಇರಲಿಲ್ಲ. ಕ್ರಿ. ಶ. ೧೩೯೯ ರಲ್ಲಿ[30] ಕನ್ಯಾನ ಗ್ರಾಮದಲ್ಲಿ ೯ ಜನನಿಗಳು ಮಾತ್ರ ಇದ್ದಿದ್ದರೂ ಕ್ರಿ. ಶ. ೧೪೫೮ ರಲ್ಲಿ[31] ಅವರುಗಳ ಸಂಖ್ಯೆ ಎರಡರಷ್ಟು ಹೆಚ್ಚಿತ್ತು. ಅಲ್ಲದೆ ಕ್ರಿ. ಶ. ೧೩೯೯ ರಲ್ಲಿ[32] ೫೦ ಸದಸ್ಯರುಗಳನ್ನೊಳಕೊಂಡಿದ್ದ ಕನ್ಯಾನ ಗ್ರಾಮದ ಜಗತ್ತು ಕ್ರಿ. ಶ. ೧೪೫೮ ರಲ್ಲಿ[33] ೫೨ ಸದಸ್ಯರುಗಳನ್ನು ಒಳಗೊಂಡಿತ್ತು. ಕ್ರಿ. ಶ. ೧೪೦೭ ರಲ್ಲಿ[34] ೧ ನೆಯ ದೇವರಾಯನು ಆಳುತ್ತಿದ್ದಾಗ ನಿರುವಾರ ಗ್ರಾಮದ ಜಗತ್ತಿನಲ್ಲಿ ೩೦೦ ಸದಸ್ಯರುಗಳಿದ್ದರು.

30 *Ibid.*, No. 359.

31 *Ibid.*, No. 358.

32 *Ibid.*, No. 359.

33 *Ibid.*, No. 358.

34 *Ibid.*, For 1928-29, No. 498.

ಸ್ಥಳೀಯ ಆಡಳಿತ ಕ್ರಮಗಳಲ್ಲಿ ಇಂತಹ ಒಕ್ಕೂಟಗಳು ಅಗತ್ಯವಾದ ಭಾಗವಹಿಸುತ್ತಿದ್ದುವೆಂದು ಅನೇಕ ಶಿಲಾಲಿಪಿಗಳ ಮೂಲಕ ತಿಳಿಯುತ್ತೇವೆ. ಉಡಿಪಿ ತಾಲ್ಲೂಕಿನ ಮತ್ಪಾಡಿ ಗ್ರಾಮದಿಂದ ದೊರೆತ ೧ ನೆಯ ದೇವರಾಯನ ಶಾಸನದಲ್ಲಿ ಆ ಗ್ರಾಮದಲ್ಲಿದ್ದ ಒಂದು ಗದ್ದೆಗೆ ಅರಸನೂ 'ಉರವ'ರೂ ಸೇರಿ ಒಕ್ಕಲೊಬ್ಬನನ್ನು ನೇಮಿಸಿದರೆಂದು ಹೇಳಲಾಗಿದೆ.[35] ಅದೇ ತಾಲ್ಲೂಕಿನಲ್ಲಿರುವ ವರಂಬಳ್ಳಿ ಗ್ರಾಮದಿಂದ ದೊರೆತಿರುವ ಶಾಸನದಲ್ಲಿ ೧ ನೆಯ ಬುಕ್ಕರಾಯನ ಕೆಳಗೆ ಬಾರಕೂರಿನ ರಾಜ್ಯಪಾಲನಾಗಿದ್ದ ಮಲೆಯ ದಣ್ಣನಾಯಕನು ಆ ಗ್ರಾಮದ 'ಮಹಾಜನ'ಕ್ಕೆ ಭೂಮಿದಾನ ಮಾಡಿದನೆಂದು ಹೇಳಲಾಗಿದೆ.[36] ನೀಲಾವರ ಗ್ರಾಮದ ಮಹಿಷಾಸುರ ಮರ್ದಿನಿ ದೇವಸ್ಥಾನದ ದಿನಚರಿ ಪೂಜೆಗಳಿಗಾಗಿ ಅಲ್ಲಿಯ 'ಜಗತ್ತು ಮುನ್ನೂ'ರಿನವರು ಕಾಣಿಕೆಗಳನ್ನು ಕೊಟ್ಟರೆಂದು ೧ ನೆಯ ದೇವರಾಯನ ಕಾಲದ ಶಾಸನವು ತಿಳಿಸುತ್ತದೆ.[37] ಕನ್ಯಾನ ಗ್ರಾಮದಿಂದ ದೊರೆತ ಶಿಲಾಲಿಪಿಯಲ್ಲಿ ೨ ನೆಯ ಹರಿಹರನು ತನ್ನ ಜನ್ಮ ದಿನದಂದು ಆ ಗ್ರಾಮದ 'ಜನನಿ'ಗಳ ಮತ್ತು 'ಜಗತ್ತಿನ'ವರ ಅನುಮತಿ ಪಡೆದು ರಾಜಾಡಿ-ಕನ್ಯಾನ ಗ್ರಾಮದ ತೆರಿಗೆಯ ಹಣವನ್ನು ವಲ್ಲಭದೇವರಸನೆಂಬಾತನಿಗೆ ಸರ್ವಮಾನ್ಯವಾಗಿ ಕೊಟ್ಟನೆಂದು ಹೇಳಲಾಗಿದೆ.[38] ಕ್ರಿ. ಶ. ೧೩೮೪ ರಲ್ಲಿ ಕನ್ಯಾನ ಗ್ರಾಮದ 'ಜನನಿ'ಗಳು ಅದೇ ಗ್ರಾಮದ 'ಮಹಾಜಗತ್ತಿ'ನವರಿಗೆ ಕೆಲವು ಹಕ್ಕುಗಳನ್ನು ಬಿಟ್ಟುಕೊಟ್ಟರೆಂದು ೨ ನೆಯ ಹರಿಹರನ ಮತ್ತೊಂದು ಶಾಸನವು ತಿಳಿಸುತ್ತದೆ.[39] ಈ ಶಾಸನಗಳ ಆಧಾರದ ಮೇರೆಗೆ ಜನತೆಯ ಈ ಒಕ್ಕೂಟಗಳಿಗೆ ಚಕ್ರವರ್ತಿಗಳ ಮತ್ತು ಸಾಮ್ರಾಜ್ಯಸೇವಕರ ಬೆಂಬಲವಿದ್ದಿತೆಂದು ಮಾತ್ರವಲ್ಲದೆ ಈ ಒಕ್ಕೂಟಗಳ ವರ್ತನೆಗಳಿಂದಾಗಿ ಜನಸಾಮಾನ್ಯರ ಜೀವನವು ಎಲ್ಲ ರೀತಿಗಳಿಂದಲೂ ಪ್ರಯೋಜನ ಪಡೆಯುತ್ತಿದ್ದಿತೆಂದೂ ಸ್ಪಷ್ಟವಾಗಿ ಹೇಳಬಹುದಷ್ಟೆ.

ಬಾರಕೂರು ಮತ್ತು ಮಂಗಳೂರು ಬಂದರುಗಳ ಮೂಲಕ ಜಾತ್ಯಶ್ವಗಳನ್ನು ಹೇರಳವಾಗಿ ಪಡೆಯುವ ಉದ್ದೇಶದಿಂದ ತುಳುನಾಡನ್ನು ಗೆದ್ದು ಸಾಮ್ರಾಜ್ಯದೊಂದಿಗೆ ಸೇರಿಸಲಾಗಿತ್ತಾದರೂ ಇತರ ಸರಕುಗಳ ವ್ಯಾಪಾರವೂ ಸಹಜವಾಗಿಯೆ ಬೆಳೆಯುತ್ತ ಬಂತು. ವ್ಯಾಪಾರ ಹೆಚ್ಚಿದಂತೆಯೆ ವ್ಯಾಪಾರಿಗಳ ಸಂಖ್ಯೆ ಮತ್ತು ಸಂಪತ್ತು ಹೆಚ್ಚುತ್ತ ಬಂದುವು. ಇದರ ಪರಿಣಾಮವೆಂದರೆ ವಿಜಯನಗರ ಕಾಲದ

[35] *Ibid.*, for 1929-30, No. 604.
[36] *Ibid.*, No. 602.
[37] *Ibid.*, for 1928-29, No. 498.
[38] *Ibid.*, for 1930-31, No. 359.
[39] *Ibid.*, No. 357.

ತುಳುನಾಡಿನ ವ್ಯಾಪಾರಿಗಳಿಗೆ ಆಡಳಿತ ವಿಚಾರಗಳಲ್ಲೂ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳಲ್ಲೂ ಕೊಡಲಾದ ಆದರದ ಗಮನ ಮತ್ತು ಉನ್ನತ ಸ್ಥಾನಗಳೇ ಎನ್ನಬಹುದು. ಶೆಟ್ಟಿಗಳು, ಶೆಟ್ಟಿಕಾರರು, ನಖರದವರು, ಹಂಜಮಾನದವರು, ನಖರ ಹಂಜಮಾನದವರು ಮುಂತಾದ ವ್ಯಾಪಾರ ಸಂಘಗಳು ಆ ಕಾಲದ ಶಿಲಾಲಿಪಿಗಳಲ್ಲಿ ಆಗಾಗ್ಗೆ ವಿವರಿಸಲ್ಪಟ್ಟಿವೆ. ಜನಸಾಮಾನ್ಯರ ಸಭೆಗಳಂತೆಯೇ ಈ ನೆರವಿಗಳೂ ವ್ಯಾಪಾರಿಗಳದ್ದಷ್ಟೆ ಅಲ್ಲದೆ ಸಾಮಾನ್ಯ ಜನತೆಯ ದಿನಚರಿ ಜೀವನದ ದೃಷ್ಟಿಯಿಂದಲೂ ಅತಿ ಮುಖ್ಯಪಾತ್ರ ವಹಿಸುತ್ತಿದ್ದುವು. ಅನೇಕ ಶಿಲಾಶಾಸನಗಳಲ್ಲಿ ಈ ಸಂಘಗಳಲ್ಲಿದ್ದ ಮುಖ್ಯಸ್ಥರುಗಳ ಹೆಸರುಗಳು ಮತ್ತು ಈ ಸಂಘಗಳು ಮಾಡಿರತಕ್ಕಂಥ ದಾನಗಳ ವಿವರಗಳು ಕಂಡುಬರುತ್ತವೆ. ಕುಂದಾಪುರ ತಾಲೂಕಿನಲ್ಲಿರುವ ಬಸರೂರಿನಿಂದ ದೊರೆತ ೨ ನೆಯ ದೇವರಾಯನ ಶಾಸನದಲ್ಲಿ ಪಡವಕೇರಿಯು 'ಶೆಟ್ಟಿಕಾರ'ರ ಅಪ್ಪಣೆಯಂತೆ ತಮಗೆ ದೊರಕುವ ಹೊನ್ನುಗಳಲ್ಲಿ ಹತ್ತಕ್ಕೆ ಒಂದು ಹೊನ್ನಿನ ಪ್ರಕಾರ ತಾವು ಮಾಡಿದ ಕೊಲೆಗಳಿಗೆ ಪ್ರಾಯಶ್ಚಿತ್ತವಾಗಿ ನಖರೇಶ್ವರ ಮಹಾದೇವರಿಗೆ ಕಾಣಿಕೆ ಕೊಡಲು ಧರ್ಮಪಟ್ಟಣದ ನಖರದವರು ಒಪ್ಪಿದರೆಂದು ಹೇಳಲಾಗಿದೆ.[40] ಅದೇ ಗ್ರಾಮದಲ್ಲಿ ಸಿಕ್ಕಿರುವ ಮಲ್ಲಿಕಾರ್ಜುನರಾಯನ ಶಾಸನವು ಬಾರಕೂರಿನ 'ಶೆಟ್ಟಿ'ಯರ ಎರಡು ವಿರೋಧ ಪಕ್ಷಗಳು ಸಮಾಧಾನದಿಂದ ಸಭೆ ಕೂಡಿ ತುಳುವೇಶ್ವರ ದೇವರಿಗೆ ಕೊಟ್ಟುಬಂದಿದ್ದ ಕಾಣಿಕೆಗಳನ್ನು ಮುಂದಕ್ಕೂ ದೊರಕಿಸುವುದಾಗಿಯೂ ತಮ್ಮೊಳಗಿನ ಸರಹದ್ದು ಸಂಬಂಧವಾದ ಜಗಳಗಳನ್ನು ಒಡಂಬಡಿಕೆಗಳ ಮೂಲಕವೇ ತೀರಿಸಿಕೊಳ್ಳುವುದಾಗಿಯೂ ನಿಶ್ಚಯಿಸಿದರೆಂದು ತಿಳಿಸುತ್ತದೆ.[41] ಉಡುಪಿ ತಾಲ್ಲೂಕಿನಲ್ಲಿರುವ ಯೇಣಗುಡ್ಡೆ ಗ್ರಾಮದಿಂದ ದೊರೆತ ವಿರೂಪಾಕ್ಷನ ಶಾಸನವು ಬಾರಕೂರಿನ 'ಶೆಟ್ಟಿಕಾರ'ರು ಮತ್ತು 'ನಖರ ಹಂಜಮಾನ'ದವರು ತಮ್ಮ ಭೂಮಿಗಳ ಸರಹದ್ದು ವಿಷಯವಾಗಿ ಬಲ್ಲಾಳರು, ಮೂಡಿಲರು ಮತ್ತು ನಿಡುಂಬೂರಿನ ಜನರೊಂದಿಗೆ ಒಡಂಬಡಿಕೆಯೊಂದನ್ನು ಬರೆಸಿಕೊಂಡರೆಂದು ತಿಳಿಸುತ್ತದೆ.[42] ವ್ಯಾಪಾರಿಗಳ ಒಕ್ಕೂಟಗಳಿಗೆ ಎಷ್ಟರಮಟ್ಟಿಗೆ ನ್ಯಾಯ ತೀರಿಸುವ ಅಧಿಕಾರ ಮತ್ತು ತಮ್ಮೊಳಗಿನ ಜಗಳಾಟಗಳನ್ನು ಸಾಮ್ರಾಜ್ಯದ ಸೇವಕರ ಎಡೆತಡೆಯಿಲ್ಲದೆ ತೀರಿಸಿಕೊಳ್ಳುವ ಹಕ್ಕು ಇದ್ದುವೆಂದು ಈ ಶಿಲಾಶಾಸನಗಳ ಮೂಲಕ ಸ್ಪಷ್ಟವಾಗುವುದಷ್ಟೆ.

---

[40] *A. R. Ep.* for 1927-28, No. 404.

[41] *Ibid.*, No. 405.

[42] *Ibid.*, for 1929-30. No. 579.

೫. ಧಾರ್ಮಿಕ ಪರಿಸ್ಥಿತಿ—ಜೈನ ಮತ್ತು ಮಧ್ವಮತಗಳು

ಹಿಂದೆಯೆ ಹೇಳಿರುವಂತೆ ತುಳುನಾಡಿನ ಜನರು ವಿಜಯನಗರದ ಕೆಳಗೆ ಧರ್ಮ ಸಂಬಂಧವಾಗಿ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರು. ಸಣ್ಣ ಪುಟ್ಟ ಸಂಸ್ಥಾನಗಳ ನಾಯಕರುಗಳೊಳಗೆ ಹಲವರು ಜೈನಮತವನ್ನು ಹಿಂಬಾಲಿಸುತ್ತಿದ್ದರು. ಆ ಮತಕ್ಕೆ ಆದರವೀಯುತ್ತಿದ್ದ ಅರಸು ಮನೆತನಗಳಲ್ಲಿ ಅತಿ ಮುಖ್ಯವಾದುದು ಕಲಶಕಾರ್ಕಳ ರಾಜ್ಯದ ಪ್ರಭಾವಶಾಲಿ ಮನೆತನವೆ. ಅಲ್ಲದೆ ವಿಜಯನಗರದ ಕಾಲದ ವ್ಯಾಪಾರಿಗಳಲ್ಲಿ ಹೆಚ್ಚಿನವರು ಜೈನಮತಕ್ಕೆ ಸೇರಿದವರೇ ಆಗಿದ್ದರು. ಇದರ ಪರಿಣಾಮವಾಗಿ ನಾಡಿನುದ್ದಕ್ಕೂ ಅನೇಕಾನೇಕ ಬಸದಿಗಳು ಹೊಸತಾಗಿ ಕಾಣಿಸಿಕೊಂಡವು. ಅಲ್ಲದೆ ಹಿಂದೆಯೆ ಕಟ್ಟಲಾಗಿದ್ದ ಬಸದಿಗಳಿಗೆ ಹೊಸ ಮುಖಮಂಡಪಗಳನ್ನು ನಿರ್ಮಿಸಲಾಯಿತು. ನಾಡಿನರಸರುಗಳ ಮತ್ತು ವ್ಯಾಪಾರಿಗಳ ಅಭಿಮಾನಕ್ಕೂ ಆದರಕ್ಕೂ ಪಾತ್ರರಾದ ಹಲವಾರು ಜೈನ ಮುನಿಗಳ ಹೆಸರುಗಳು ಶಿಲಾಲಿಪಿಗಳಲ್ಲಿ ಉಕ್ತವಾಗಿವೆ. ಕೆಲವೊಮ್ಮೆ ಸಾಮ್ರಾಜ್ಯದ ಒಡೆಯರುಗಳೂ ಅವರಿಂದ ನೇಮಿತರಾದ ಆಡಳಿತಗಾರರುಗಳೂ ಜೈನಮತದವರನ್ನೂ ಅವರಿಂದ ಕಟ್ಟಿಸಲಾಗಿದ್ದ ಬಸದಿಗಳನ್ನೂ ಬಹುಮಾನಗಳನ್ನರ್ಪಿಸಿ ಆದರಿಸುತ್ತಿದ್ದರು.

ಆದರೆ ಅಂದಿನ ತುಳುನಾಡಿನ ಜನಸಾಮಾನ್ಯರಲ್ಲಿ ಹೆಚ್ಚಿನವರು ಮಧ್ವಮತವನ್ನು ಹಿಂಬಾಲಿಸುವವರಾಗಿದ್ದರು. ಈ ಮತಕ್ಕೆ ಸಾಮ್ರಾಜ್ಯದ ಚಕ್ರವರ್ತಿಗಳು ಮಾತ್ರವಲ್ಲದೆ ಅವರುಗಳ ಪ್ರತಿನಿಧಿಗಳೂ ಕೂಡ ಅತ್ಯಾದರ ನೀಡುತ್ತಿದ್ದರು. ವಿಜಯನಗರದ ಅರಸುಗಳಿಂದ, ಮುಖ್ಯವಾಗಿ ಕೃಷ್ಣದೇವರಾಯನಿಂದ, ಹೊರಡಿಸಲಾದ ಹಲವಾರು ಶಾಸನಗಳಲ್ಲಿ ಮಧ್ವಮತದಾಚಾರ್ಯರುಗಳಿಗೂ, ಮಧ್ವಮಠಗಳಿಗೂ ಆಗಿಂದಾಗ್ಗೆ ಬಿಟ್ಟುಕೊಡಲಾಗಿದ್ದ ಭೂಮಿ ಮತ್ತು ಸಂಪತ್ತುಗಳ ವಿವರಗಳು ಕಂಡುಬರುತ್ತವೆ.

ಹೀಗಾಗಿ ವಿಜಯನಗರದ ಕಾಲದಲ್ಲಿ ತುಳುನಾಡಿನಲ್ಲಿ ಮಧ್ವಮತ ಮತ್ತು ಜೈನಮತ ಇವೆರಡೂ ರಾಜಕೀಯ ಸಹನೆ ಮತ್ತು ಆಧಾರಗಳೊಂದಿಗೆ ಜನತೆಯ ಧರ್ಮಗಳಾಗಿ ಬೆಳಗಿದುವು.

ಕೊಳುವೈಲ್ ರಮೇಶ್

ಅಪ್ಸರೆ !

ಕಾಲಿದಾಸನನೊ ಅಮರಗೈದ ಅಪ್ಸರೆಯೆ ಇಳಿದು ಬಾರ ;
ಕಣ್ಣ ಕಾಮನೆಯ ತಣಿಸುವುದಕೆ ಮಿಂಚಾಗಿ ಸುಳಿಯು ಬಾರ !

ಕವಿಯ ಬಾಳು ಬಡವಾದರೇನ, ಎದೆಯೊಲುಮೆಗಿಹುದೆ ಬೆಲೆಯು ?
ನೀನೊ ಬಯುಸುವುದನೆಲ್ಲನೀವ ಕವಿ-ಸಾಧಿಸಿರುವ ಕಲೆಯು !

ಬ್ರಹ್ಮ ಸೃಷ್ಟಿಗಿರುವಂತೆ ನೋಡ, ಕವಿಗಿಲ್ಲ ತಾಲ-ನಿಯತಿ ;
ಕವಿಯ ಕಲ್ಪನೆಯ ಬಂಧವಾಗಿಹರು ಛಂದ ಪುರುಷ-ಪ್ರಕೃತಿ !

ಬಾರ ! ಅಪ್ಸರೆಯೆ, ಕೂಡಿಸಿಟ್ಟಿಹೆನು ಪಾರಿಜಾತಗಳನು ;
ಸುರೆಯನೀಂಟಿ, ಕಲ್ಪಿಸುತಲಿಹೆನು, ಬಂಗಾರ ಕನಸುಗಳನು !

ನಿನ್ನ ದರ್ಶನವೊ ನನ್ನ ಕಣ್ಣುಗಳಿಗೊಂದು ಭಾವ-ತೀರ್ಥ ;
ನೀನೊ ತುಟಿಗಳಿಂದುಗುವ ಮಾತುಗಳೊ, ನನ್ನ ಪ್ರೇಮ-ಗೀತ !

ಓಹೊ ! ಕಂಗಳಲಿ ಲಾಸ್ಯವಾಡುತಿದೆ, ಸೂರ್ಯ-ಚಂದ್ರ ಕಿರಣ ;
ನಿನ್ನ ಸಂಗದಲಿ ರಂಗನೆರಚುತಿದೆ ಮಧುರ ಜನನ-ಮರಣ !

ಜೀವ-ಜೀವಗಳಲೆಲ್ಲ ಒಂದೆಯಿದೆ ಕಾಲಚರಮ-ಸೀಮೆ ;
ಮೋಹ-ದಾಹಗಳನೆಲ್ಲ ನುಂಗುವುದು ಅದುವೆ ಹೃದಯದೊಲುಮೆ !

ಕಾಲಿದಾಸನನೊ ಅಮರಗೈದ ಅಪ್ಸರೆಯೆ ಇಳಿದು ಬಾರ ;
ಕಣ್ಣ ಕಾಮನೆಯ ತಣಿಸುವುದಕೆ ಮಿಂಚಾಗಿ ಸುಳಿಯು ಬಾರ !

—ಬಿ. ಬಿ. ಹಿಂಗಮಿರೆ

ಸುಖಿಯಾದ ದೊರೆಮಗ

ಪಟ್ಟಣದ ನಡುವೆ, ಉನ್ನತ ಪೀಠದ ಮೇಲೆ, ದೊರೆಮಗನ ಎತ್ತರವಾದ ಒಂದು ವಿಗ್ರಹ ನಿಂತಿತ್ತು. ಚಿನ್ನದ ತೆಳ್ಳನೆಯ ತಗಡುಗಳಿಂದ ಅದರ ಶರೀರವೆಲ್ಲವೂ ಆವೃತವಾಗಿದ್ದಿತು. ಅದರ ಕಣ್ಣಾಲಿಗಳಲ್ಲಿ ಎರಡು ಥಳಥಳಿಸುವ ನೀಲಿಗಳಿದ್ದವು. ಕಯ್ಯಲ್ಲಿದ್ದ ಕತ್ತಿಯ ಹಿಡಿಯ ಮೇಲೆ ಒಂದು ದೊಡ್ಡ ಕೆಂಪು ಉಜ್ವಲಿಸುತ್ತಿತ್ತು. ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿದ್ದಿತು ಈ ವಿಗ್ರಹ.

"ಈ ಪ್ರಪಂಚದಲ್ಲಿ ಸಂಪೂರ್ಣ ಸುಖಿಯಾಗಿರುವವನು ಒಬ್ಬನಾದರೂ ಇದ್ದಾನಲ್ಲ! ಅದೇ ಒಂದು ಸಂತೋಷ." ಎಂದು ಆಶಾಭಂಗ ಹೊಂದಿದವನೊಬ್ಬನು ಈ ಅದ್ಭುತವಾದ ವಿಗ್ರಹವನ್ನು ನೋಡಿ ಗೊಣಗುಟ್ಟಿದನು.

"ನೀನೇಕೆ ಸುಖಿಯಾದ ದೊರೆಮಗನ ಹಾಗೆ ಇರಬಾರದು? ದೊರೆಮಗ ಅದು ಬೇಕು, ಇದು ಬೇಕು ಎಂದು ಎಂದಾದರೂ ಅಳುತ್ತಾನೆಯೇ?" ಎಂದು ಒಬ್ಬ ತಾಯಿ ಚಂದುಮಾಮಬೇಕೆಂದು ಅಳುತ್ತಿದ್ದ ತನ್ನ ಪುಟ್ಟ ಮಗುವನ್ನು ಕುರಿತು ಹೇಳಿದಳು.

ಹೊಳೆಯುವ ಕೆಂಪು ನಿಲುವಂಗಿಯನ್ನು, ಶುಭ್ರವಾದ ಬಿಳಿಯ ಮೇಲು ಹೊದಿಕೆಯನ್ನು ಹಾಕಿಕೊಂಡು ಕೆತೆಡ್ರಲ್ಲಿನಿಂದ ಈಚೆಗೆ ಬಂದ ಅನಾಥಾಲಯದ ಹುಡುಗರು "ಒಳ್ಳೇ ದೇವ ಪುರುಷನ ಹಾಗೆ ಕಾಣುತ್ತದೆ ಈ ವಿಗ್ರಹ" ಎಂದರು.

"ಅದು ಹೇಗೆ ನಿನಗೆ ಗೊತ್ತು? ನೀನು ಎಂದಾದರೂ ದೇವ ಪುರುಷನನ್ನು ನೋಡಿದ್ದೀಯಾ?" ಎಂದು ಗಣಿತಶಾಸ್ತ್ರದ ಉಪಾಧ್ಯಾಯನು ಆ ಹುಡುಗನನ್ನು ಕೇಳಿದನು.

"ಓಹೋ, ಕನಸಿನಲ್ಲಿ ಕಂಡಿದ್ದೇವೆ" ಎಂದರು ಹುಡುಗರು. ಗಣಿತದ ಉಪಾಧ್ಯಾಯರು ಹುಬ್ಬುಗಂಟಿಕ್ಕಿ ಮುಖ ಸಿಂಡರಿಸಿದರು. ಹುಡುಗರು ಕನಸು ಕಾಣುವುದು ಅವರಿಗೆ ಸರಿಬೀಳಲಿಲ್ಲ.

ಒಂದು ರಾತ್ರಿ ಆ ಪಟ್ಟಣದೊಳಗೆ ಒಂದು ಸ್ವಾಲೋ ಹಕ್ಕಿ ಹಾರಿ ಬಂದಿತು. ಅದರ ಸಂಗಾತಿಗಳು ಆರು ವಾರಗಳ ಹಿಂದೆಯೇ ಈಜಿಪ್ಟಿಗೆ ಹೋಗಿದ್ದವು. ಆದರೆ ಈ ಹಕ್ಕಿಯು ಒಂದು ದಿವಸ ಮಿಡತೆಯೊಂದನ್ನು ಹಿಂಬಾಲಿಸಿ ನದಿಯ ಪಕ್ಕದಲ್ಲಿ ಹಾರಿಹೋಗುತ್ತಿತ್ತು. ನದಿಯ ಪಕ್ಕದಲ್ಲಿ ತೆಳುವಾದ ಲಾಳಿಗಳು ಸಾಲಾಗಿ ಬೆಳದಿದ್ದವು. ಅವುಗಳ ಅಂದವನ್ನು ನೋಡಿ ಹಕ್ಕಿಗೆ ಮೋಹ ಉಂಟಾಯಿತು. ಅವುಗಳ

ಜೊತೆಯಲ್ಲಿ ಆಡುತ್ತಾ ಅಲ್ಲಿಯೇ ನಿಂತಿತು. ಹಕ್ಕಿ ಲಾಳಿಗಳ ಸುತ್ತಲೂ ಹಾರಾಡಿತು. ನೀರನ್ನು ರೆಕ್ಕೆಗಳಿಂದ ಮುಟ್ಟಿ ಬೆಳ್ಳಿಯ ಅಲೆ ಕಿರಿಯಲೆಗಳನ್ನುಂಟು ಮಾಡಿತು. ಬೇಸಿಗೆಯನ್ನೆಲ್ಲಾ ಹೀಗೆಯೇ ಕಳೆಯಿತು. ಮಳೆಗಾಲ ಬರುತ್ತಲೇ ಉಳಿದ ಹಕ್ಕಿಗಳೆಲ್ಲಾ ಹಾರಿಹೋದವು. ಇದೊಂದೇ ಉಳಿಯಿತು. ಕೆಲವು ಕಾಲದ ಮೇಲೆ ಒಂಟಿಯಾಗಿರುವುದು ಇದಕ್ಕೆ ಜುಗುಪ್ಸೆಯನ್ನುಂಟುಮಾಡಿತು. ಕೊನೆಗೆ ಅಲ್ಲಿಂದ ಹಾರಿಹೋಯಿತು.

ಹಗಲೆಲ್ಲಾ ಹಾರಿತು. ರಾತ್ರಿಯ ಸಮಯಕ್ಕೆ ಸರಿಯಾಗಿ ಒಂದು ಪಟ್ಟಣಕ್ಕೆ ಬಂದಿತು. "ಎಲ್ಲಿ ತಂಗಲಿ ? ನಾನು ತಂಗಲು ಸರಿಯಾದ ಸಿದ್ಧತೆಯನ್ನು ಈ ಪಟ್ಟಣ ಮಾಡಿದೆ ಎಂದು ನಂಬುತ್ತೇನೆ" ಎಂದಿತು.

ಅಷ್ಟರಲ್ಲಿ ಎತ್ತರವಾದ ಪೀಠದ ಮೇಲಿದ್ದ ವಿಗ್ರಹವನ್ನು ಕಂಡಿತು. 'ಸರಿ, ನಾನು ಇಲ್ಲಿ ತಂಗುತ್ತೇನೆ. ಇದು ಸೊಗಸಾದ ಜಾಗ. ಬೇಕಾದಷ್ಟು ಗಾಳಿಯಿದೆ' ಎಂದು ಹೇಳಿ ಸುಖಿಯಾದ ದೊರೆಮಗನ ಹೆಜ್ಜೆಗಳ ಮಧ್ಯದಲ್ಲಿ ಉಳಿಯಿತು.

ನಿದ್ದೆಹೋಗಲು ಸಿದ್ಧವಾಗಿ ಒಂದು ಸಾರಿ ಸುತ್ತಲೂ ನೋಡಿತು. 'ಓಹೋ, ಒಳ್ಳೆ ಚಿನ್ನದ ಸೆಜ್ಜೆಮನೆಯೇ ನನಗೆ ಸಿಕ್ಕಿದೆ' ಎಂದು ತನ್ನಷ್ಟಕ್ಕೆ ತಾನೇ ಹೇಳಿ ಕೊಂಡು, ತನ್ನ ತಲೆಯನ್ನು ರೆಕ್ಕೆಗಳೊಳಗೆ ಅಡಗಿಸುತ್ತಿರಲು ಒಂದು ದೊಡ್ಡ ನೀರಿನ ಹನಿ ಅದರ ಮೇಲೆ ಬಿದ್ದಿತು.

"ಇದೇನು ಕೌತುಕ ! ಆಕಾಶದಲ್ಲಿ ಒಂದು ತುಣುಕೂ ಮೋಡವಿಲ್ಲ. ಚಿಕ್ಕಿಗಳು ಸ್ಪಷ್ಟವಾಗಿ ಕಾಣುತ್ತಿವೆ. ಆದರೂ ಮಳೆ ಬೀಳುತ್ತಿದೆ. ಯೂರೋಪಿನ ಎತ್ತರ ಭಾಗದ ಹವ ನಿಜವಾಗಿಯೂ ಕೆಟ್ಟ ಹವ," ಎಂದಿತು.

ಆಗ ಇನ್ನೊಂದು ತೊಟ್ಟಿಕ್ಕಿತು.

"ಮಳೆ ತಡೆಯಲಾರದ ವಿಗ್ರಹದಿಂದೇನು ಪ್ರಯೋಜನ ? ಯಾವುದಾದರೂ ಒಂದು ಹೊಗೆ ಕೊಳವಿಯ ಆಶ್ರಯವನ್ನಾದರೂ ಹುಡುಕಬೇಕು" ಎಂದು ಆಲೋಚಿಸಿ ಅಲ್ಲಿಂದ ಹಾರಲು ನಿರ್ಧರಿಸಿತು.

ಆದರೆ ಅದು ರೆಕ್ಕೆ ಬಿಚ್ಚುವಷ್ಟರಲ್ಲಿಯೇ ಇನ್ನೊಂದು ಹುಂಡು ಬಿದ್ದಿತು. ಅದು ಕತ್ತೆತ್ತಿ ನೋಡಿತು. ಅದು ಅಲ್ಲಿ ನೋಡಿದುದೇನು ?

ಸುಖಿಯಾದ ದೊರೆಮಗನ ಕಣ್ಣುಗಳು ನೀರಿನಿಂದ ತುಂಬಿದ್ದವು. ಕಣ್ಣೀರು ಅವನ ಚಿನ್ನದ ಕೆನ್ನೆಗಳ ಮೇಲೆ ಹರಿಯುತ್ತಿತ್ತು. ಬೆಳದಿಂಗಳಲ್ಲಿ ಅವನ ಮುಖ ಸುಂದರ ವಾಗಿ ಕಂಡಿತು. ಈ ದೃಶ್ಯವು ಸ್ವಾಲೋ ಹಕ್ಕಿಯ ಮನ ಕರಗುವಂತೆ ಮಾಡಿತು.

"ನೀನು ಯಾರು ?" ಎಂದು ಸ್ವಾಲೋ ಆ ವಿಗ್ರಹವನ್ನು ಕೇಳಿತು.

'ನಾನು ಸುಖಿಯಾದ ದೊರೆಮಗ.'

'ಹಾಗಾದರೆ, ನೀನೇಕೆ ಅಳುತ್ತೀಯೆ? ನೀನು ನನ್ನ ಮೈಯನ್ನು ಒದ್ದೆಮಾಡಿಬಿಟ್ಟಿದ್ದೀಯೆ ನಿನ್ನ ಕಣ್ಣೀರಿಂದ,' ಎಂದಿತು ಸ್ವಾಲೋ.

"ನಾನು ಜೀವಂತನಾಗಿ ಮಾನವ ಹೃದಯವನ್ನು ಹೊಂದಿದ್ದಾಗ, ಕಣ್ಣೀರೆಂದರೆ ಏನು ಎಂದು ನನಗೆ ಗೊತ್ತಿರಲಿಲ್ಲ. ದುಃಖದ ಪ್ರವೇಶಕ್ಕೆ ಅವಕಾಶವಿಲ್ಲದ 'ಸುಖನಿವಾಸ' ಅರಮನೆಯಲ್ಲಿ ಆಗ ನಾನು ವಾಸಿಸುತ್ತಿದ್ದೆನು. ಹಗಲು ನನ್ನ ಸಂಗಾತಿಗಳೊಡನೆ ಉದ್ಯಾನದಲ್ಲಿ ಆಡುತ್ತಿದ್ದೆನು. ರಾತ್ರಿ ವಿಶಾಲವಾದ ಮಹಲಿನಲ್ಲಿ ನರ್ತನದ ನಾಯಕತನವನ್ನು ವಹಿಸುತ್ತಿದ್ದೆನು. ಉದ್ಯಾನದ ಸುತ್ತಲೂ ಒಂದು ಎತ್ತರವಾದ ಗೋಡೆ ಇತ್ತು. ಅದರಾಚೆಗೆ ಏನಿದೆ ಎಂದು ವಿಚಾರಿಸುವ ಗೋಜಿಗೇ ಹೋಗುತ್ತಿರಲಿಲ್ಲ. ನನ್ನ ಸುತ್ತಲಿದ್ದುದೆಲ್ಲವೂ ಸುಂದರವಾಗಿತ್ತು. ಆಸ್ಥಾನದವರು ನನ್ನನ್ನು ಸುಖಿಯಾದ ದೊರೆಮಗ ಎನ್ನುತ್ತಿದ್ದರು. ಇಂದ್ರಿಯ ಸೌಖ್ಯವೇ ಸಂತೋಷವೆಂದೆಣಿಸಿದರೆ ನಾನು ಸುಖಿಯಾಗಿದ್ದುದು ನಿಜ. ಹಾಗೆಯೇ ನನ್ನ ಜೀವಿತ ಕಾಲವನ್ನು ಕಳೆದೆ. ಹಾಗೆಯೇ ಮೃತಿಹೊಂದಿದೆ. ನಾನು ಸತ್ತಮೇಲೆ ನನ್ನನ್ನು ಇಷ್ಟು ಎತ್ತರದಲ್ಲಿ ನಿಲ್ಲಿಸಿದ್ದಾರೆ. ಈ ಎತ್ತರದಿಂದ ನನ್ನ ಪಟ್ಟಣದ ಎಲ್ಲಾ ದುರವಸ್ಥೆಗಳೂ ನನಗೆ ಕಾಣುತ್ತಿವೆ. ಈಗ ನನ್ನ ಎದೆ ಸೀಸದ್ದು ಆದರೂ ಅಳುವನ್ನು ತಡೆಯಲಾಗುವುದಿಲ್ಲ" ಎಂದಿತು ಆ ವಿಗ್ರಹ.

'ಏನು? ಇದೇನು ಬರೀ ಚಿನ್ನದ ಗಟ್ಟಿಯಿಂದ ಮಾಡಿದ ವಿಗ್ರಹವಲ್ಲವೋ?' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡಿತು. ಇಂಥ ವೈಯ್ಯಕ್ತಿಕ ಟೀಕೆಯನ್ನು ಗಟ್ಟಿಯಾಗಿ ಮಾಡುವಷ್ಟು ಅಸಭ್ಯವಾಗಿರಲಿಲ್ಲ ಆ ಹಕ್ಕಿ. ಮೆತ್ತನೆಯ ಮಧುರವಾದ ಧ್ವನಿಯಿಂದ ಹೀಗೆಂದಿತು ಆ ವಿಗ್ರಹ.

'ಒಂದು ಕಿರುಬೀದಿಯಲ್ಲಿ ಇಲ್ಲಿಗೆ ಬಹು ದೂರದಲ್ಲಿ ಒಂದು ಬಡ ಗುಡಿಸಿಲಿದೆ. ಅದರ ಒಂದು ಕಿಟಕಿ ತೆರೆದಿದೆ. ಅದರ ಮೂಲಕ ಅಲ್ಲಿ ಕುಳಿತಿರುವ ಹೆಂಗಸೊಬ್ಬಳು ನನಗೆ ಕಾಣುತ್ತಿದ್ದಾಳೆ. ಆಕೆಯ ಮುಖವು ಕೊರಗಿ ಕೃಶವಾಗಿಹೋಗಿದೆ. ಅವಳ ಕೈಗಳು ಕೆಂಪಗೆ ಒರಟಾಗಿವೆ. ಕಯ್ಯೆಲ್ಲಾ ಸೂಜಿಯಿಂದ ಚುಚ್ಚಿ ಚುಚ್ಚಿ ಗಾಯವಾಗಿದೆ. ಆಕೆ ಒಬ್ಬ ಕಸೂತಿ ಕೆಲಸದವಳು. ಇಷ್ಟರಲ್ಲಿಯೇ ಆಸ್ಥಾನದಲ್ಲಿ ಒಂದು ನರ್ತನ ಗೋಷ್ಠಿ ಸೇರಲಿದೆ. ಆ ದಿನ ರಾಣಿಯ ಪರಿವಾರದ, ಅತ್ಯಂತ ಚೆಲುವೆಯಾದ ಮಹಿಳೆಯೊಬ್ಬಳು ಧರಿಸಲು ತಯಾರಿಸಿದ ರೇಶಿಮೆಯ ಗೌನಿನ ಮೇಲೆ "ಯಾತನೆ ಹೂವಿನ" ಕಸೂತಿ ಹಾಕುತ್ತಿದ್ದಾಳೆ. ಆ ಕೊಠಡಿಯ ಒಂದು ಮೂಲೆಯಲ್ಲಿ, ಆಕೆಯ ಮಗನು ರೋಗದಿಂದ ನರಳುತ್ತಾ ಮಲಗಿದ್ದಾನೆ. ಆತನಿಗೆ ಜ್ವರ ಬಂದಿದೆ. ಕಿತ್ತಲೆ

ಹಣ್ಣು ಬೇಕು ಎನ್ನುತ್ತಿದ್ದಾನೆ. ಆದರೆ ಅವನಿಗೆ ಕೊಡಲು ಆಕೆಯ ಹತ್ತಿರ ಹೊಳೆಯ ನೀರು ಹೊರತು ಇನ್ನೇನೂ ಇಲ್ಲ. ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ನನ್ನ ಕತ್ತಿಯ ಹಿಡಿಯ ಮೇಲಿನ ಕೆಂಪನ್ನು ಆಕೆಗೆ ತಲುಪಿಸಲಾರೆಯಾ? ನನ್ನ ಕಾಲುಗಳು ಪೀಠದೊಡನೆ ಬಂಧಿತವಾಗಿವೆ. ನಾನು ಚಲಿಸಲಾರೆ' ಎಂದಿತು.

'ನನ್ನ ಬರುವಿಕೆಯನ್ನು ಈಜಿಪ್ಟಿನಲ್ಲಿ ನನ್ನ ಸಂಗಾತಿಗಳು ನಿರೀಕ್ಷಿಸುತ್ತಿದ್ದಾರೆ. ಅಲ್ಲಿ ಅವರು ನೈಲ್ ನದಿಯ ಮೇಲಕ್ಕೂ ಕೆಳಕ್ಕೂ ಹಾರಾಡುತ್ತಾ ಅಲ್ಲಿಯ ದೊಡ್ಡ ಕಮಲದ ಹೂವುಗಳ ಮಧುವನ್ನು ಆಸ್ವಾದಿಸುತ್ತಿರುವರು. ಅಲ್ಲಿಯ ಪ್ರಖ್ಯಾತ ರಾಜರು ಗೋರಿಗಳಲ್ಲಿ ನಿದ್ರಿಸುವರು. ಆ ಸಮಾಧಿಗಳು ಹೇಗಿವೆ ನಿನಗೆ ಗೊತ್ತೊ? ವರ್ಣ ಚಿತ್ರರಂಜಿತ ಸಂಪುಟಗಳಲ್ಲಿ ರಾಜರ ಮೃತಶರೀರಗಳನ್ನಿಟ್ಟಿರುವರು. ದೊರೆಯ ಶರೀರ ವನ್ನು ಪೀತವಸ್ತ್ರದಿಂದ ಆಚ್ಛಾದಿಸಿರುವರು. ಶರೀರವನ್ನೆಲ್ಲಾ ಸುಗಂಧದ್ರವ್ಯಗಳಿಂದ ಲೇಪಿಸಿರುವರು. ಕತ್ತಿನಲ್ಲಿ ನಸುಹಸುರು ಬಣ್ಣದ ಜೇಡ್ ರತ್ನದ ಹಾರವಿರುವುದು. ಆದರೆ ಅವನ ಕೈಗಳು ಮಾತ್ರ ತರಗೆಲೆಯಂತೆ ಸುರುಟಿಹೋಗಿರುವುವು. ನಾನು ಈಜಿಪ್ಟಿಗೆ ಹೋಗಲೇಬೇಕು,' ಎಂದಿತು ಸ್ವಾಲೋ.

'ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ಒಂದು ರಾತ್ರಿ ನನ್ನ ಸಂಗಡವಿದ್ದು ನನ್ನ ಹರಿಕಾರನಾಗಲಾರೆಯಾ? ಆ ಹುಡುಗ ಬಾಯಾರಿಕೆಯಿಂದ ಬಸವಳಿದು ಹೋಗಿದ್ದಾನೆ. ತಾಯಿ ವ್ಯಸನದಿಂದ ಕುಗ್ಗಿಹೋಗಿದ್ದಾಳೆ' ಎಂದನು ರಾಜಪುತ್ರ.

"ಹುಡುಗರ ವಿಷಯದಲ್ಲಿ ನನಗೇನೂ ಅಷ್ಟು ಪ್ರೀತಿಯಿಲ್ಲ. ಕಳೆದ ಬೇಸಿಗೆಯಲ್ಲಿ ನಾನು ಒಂದು ನದಿಯ ದಡದ ಮೇಲೆ ಕುಳಿತಿದ್ದೆ. ಅಲ್ಲಿ ಇಬ್ಬರು ತುಂಟ ಹುಡುಗ ರಿದ್ದರು. ಅವರು ಹಿಟ್ಟಿನ ಯಂತ್ರದವನ ಮಕ್ಕಳು. ಅವರಿಬ್ಬರೂ ಯಾವಾಗಲೂ ನನ್ನ ಮೇಲೆ ಕಲ್ಲೆಸೆಯುತ್ತಿದ್ದರು. ಆದರೆ ಅವರು ಹೊಡದದ್ದೇನೂ ನನಗೆ ತಾಕುತ್ತಿರಲಿಲ್ಲ. ನಾವು, ಸ್ವಾಲೋಗಳು ಚುರುಕಾಗಿ ಹಾರುತ್ತೇವೆ. ಕಲ್ಲಿನ ಏಟಿಗೆ ಸಿಕ್ಕುವವರಲ್ಲ. ಅದ ರಲ್ಲಿಯೂ ನಾನು ಒಳ್ಳೆಯ ಚುರುಕಿನ ಸ್ವಭಾವಕ್ಕೆ ಸೇರಿದ ಮನೆತನದವನು. ಆದರೂ ಅದು ನಮ್ಮ ವಿಷಯದಲ್ಲಿ ಹುಡುಗರು ತೋರಿಸುತ್ತಿದ್ದ ದುಷ್ಟತನದ ಚಿಹ್ನೆ" ಎಂದಿತು ಸ್ವಾಲೋ.

ಆದರೆ ಸುಖಿಯಾದ ರಾಜಪುತ್ರನು ಅತಿ ಖಿನ್ನನಾಗಿ ಕಂಡನು. ಅವನ ವಿಷಣ್ಣತೆಯನ್ನು ನೋಡಿ ಸ್ವಾಲೋವಿನ ಮನ ಕರಗಿತು. "ಬಹಳ ಚಳಿ ಇಲ್ಲಿ. ಆದರೂ ಒಂದು ರಾತ್ರಿ ನಿನ್ನ ಜೊತೆ ಇದ್ದು ನಿನ್ನ ಹರಿಕಾರನಾಗುತ್ತೇನೆ," ಎಂದಿತು ಸ್ವಾಲೋ.

ಆಮೇಲೆ ಆ ರಾಜಪುತ್ರನ ಇಷ್ಟದಂತೆ ಅವನ ಕತ್ತಿಯ ಹಿಡಿಯಲ್ಲಿದ್ದ ದೊಡ್ಡ

ಕೆಂಪನ್ನು ಸ್ವಾಲೋ ಕಿತ್ತು ಕೊಕ್ಕಿನಲ್ಲಿ ಹಿಡಿದುಕೊಂಡು, ಪಟ್ಟಣದ ಮನೆಗಳ ಮಾಡಿನ ಮೇಲೆ ಹಾರಿತು. ಬಿಳಿ ಅಮೃತ ಶಿಲೆಯಿಂದ ಕೆತ್ತಿದ ವಿಗ್ರಹಗಳಿದ್ದ ಕೆಥೆಡ್ರಲ್ಲನ್ನು ದಾಟಿತು. ಮುಂದೆ ಅರಮನೆಯು ಸಿಕ್ಕಿತು. ಅಲ್ಲಿ ನೃತ್ಯದ ಶಬ್ದ ಕೇಳುತ್ತಿತ್ತು. ಸುಂದರಿಯಾದ ಯುವತಿಯೊಬ್ಬಳು ತನ್ನ ಇನಿಯನೊಡನೆ ಉಪ್ಪರಿಗೆಯ ಮೊಗಸಾಲೆಗೆ ಬಂದಳು.

'ಓ! ಎಷ್ಟು ವಿಸ್ಮಯವನ್ನುಂಟುಮಾಡುತ್ತವೆ ನಕ್ಷತ್ರಗಳು! ಪ್ರೇಮದ ಶಕ್ತಿಯು ಎಷ್ಟು ಅದ್ಭುತ!' ಎಂದನು ಇನಿಯನು.

'ಆಸ್ಥಾನದ ನೃತ್ಯ ಗೋಷ್ಠಿ ನಡೆಯುವ ದಿನ ಧರಿಸಲು ತಯಾರಿಸುತ್ತಿರುವ ನನ್ನ ಉಡುಪನ್ನು ಕಾಲಕ್ಕೆ ಸರಿಯಾಗಿ ಸಿದ್ಧಪಡಿಸುತ್ತಾರೋ ಇಲ್ಲವೋ? ಈ ಕಸೂತಿ ಕೆಲಸದವರು ಬಲು ಸೋಮಾರಿಗಳು' ಎಂದಳು ಆ ಯುವತಿ.

ಸ್ವಾಲೋ ನದಿಯ ಮೇಲೆ ಹಾರಿಹೋಯಿತು. ನದಿಯಲ್ಲಿ ಹಡಗುಗಳ ಕೋವೆ ಮರಗಳಲ್ಲಿ ಕಂದೀಲುಗಳು ತೂಗಾಡುತ್ತಿದ್ದವು. ಯಹೂದ್ಯರ ವಾಸಸ್ಥಳದ ಮೇಲೆ ಹಾರಿಹೋಯಿತು. ಅಲ್ಲಿ ವೃದ್ಧ ಯಹೂದಿಗಳು ವ್ಯಾಪಾರದಲ್ಲಿ ಉದ್ಯುಕ್ತರಾಗಿ ಚೌಕಾಶಿ ಮಾಡುತ್ತಿದ್ದರು. ದುಡ್ಡನ್ನು ತಾಮ್ರದ ತಕ್ಕಡಿಗಳಲ್ಲಿ ತೂಗುತ್ತಿದ್ದರು. ಕೊನೆಗೆ ಬಡ ಗುಡಿಸಿಲಿಗೆ ಬಂದಿತು. ಒಳಗೆ ನೋಡಿತು. ಹುಡುಗನು ಜ್ವರದ ತಳಮಳದಿಂದ ಬೆಂಡಾಗಿ ಹಾಸಿಗೆಯಮೇಲೆ ಹೊರಳಾಡುತ್ತಿದ್ದನು. ತಾಯಿ ಆಯಾಸದಿಂದ ಬಳಲಿ ನಿದ್ರೆಹೋಗಿದ್ದಳು. ಸ್ವಾಲೋವು ಒಳಕ್ಕೆ ಕುಪ್ಪಳಿಸಿ ಹೋಯಿತು. ತಾನು ತಂದ ದೊಡ್ಡ ಕೆಂಪನ್ನು ಮೇಜಿನ ಮೇಲೆ ಬೆರಳು ಟೋಪಿಯ ಬಳಿ ಇಟ್ಟಿತು. ಆಮೇಲೆ ರೆಕ್ಕೆಯಿಂದಲೇ ಆ ಹುಡುಗನ ಹಣೆಯ ಮೇಲೆ ಗಾಳಿ ಬೀಸುತ್ತಾ ಮೆಲ್ಲಗೆ ಆ ಹುಡುಗನ ಹಾಸಿಗೆಯ ಸುತ್ತಲೂ ಹಾರಾಡಿತು. 'ಆಹಾ ಎಷ್ಟು ತಣ್ಣಗೆ ಕಾಣುತ್ತದೆ! ಜ್ವರವು ಇಳಿಮುಖವಾಗುತ್ತಿದೆ ಎಂದು ತೋರುತ್ತೆ,' ಎಂದನು ಆ ಹುಡುಗ. ಹಾಗೆಯೇ ನಿದ್ರೆ ಹತ್ತಿತು. ಸುಖವಾಗಿ ನಿದ್ರಿಸಿದನು.

ಆಮೇಲೆ ಸ್ವಾಲೋವು 'ಸುಖಿಯಾದ ದೊರೆಮಗ'ನ ಹತ್ತಿರ ಹೋಗಿ ತಾನು ಮಾಡಿದುದನ್ನೆಲ್ಲಾ ಹೇಳಿತು. 'ಏನೋ ಆಶ್ಚರ್ಯವಾಗಿದೆ. ಹವವು ಇಷ್ಟು ತಣ್ಣಗಿದ್ದರೂ ನನಗೆ ಒಳ್ಳೆ ಬೆಚ್ಚಗಿರುವ ಹಾಗೆ ಕಾಣುತ್ತದೆ' ಎಂದಿತು ಸ್ವಾಲೋ.

'ನೀನು ಒಳ್ಳೆಯ ಕೆಲಸ ಮಾಡಿದ್ದರಿಂದ ಹಾಗೆ ಕಾಣುತ್ತದೆ' ಎಂದನು ರಾಜಪುತ್ರ. ಆ ಪುಟ್ಟ ಸ್ವಾಲೋ ಹಕ್ಕಿ ತಾನು ಮಾಡಿದ ಒಳ್ಳೆಯ ಕೆಲಸ ಏನೆಂದು ಯೋಚಿಸಲು ಯತ್ನಿಸಿತು. ಕೂಡಲೇ ಅದಕ್ಕೆ ನಿದ್ದೆ ಬಂದಿತು. ಯಾವಾಗಲೂ ಅಷ್ಟೆ ಅದಕ್ಕೆ. ಯೋಚಿಸಲು ಪ್ರಾರಂಭಿಸಿತೆಂದರೆ ಅದಕ್ಕೆ ನಿದ್ರೆ.

ಬೆಳಗಾದಮೇಲೆ ನದಿಗೆ ಹಾರಿಹೋಗಿ ಸ್ನಾನಮಾಡಿತು. ಪಕ್ಷಿಶಾಸ್ತ್ರ ಪಂಡಿತನು ಸೇತುವೆ ಮೇಲೆ ಹೋಗುತ್ತಿರುವಾಗ ಅದನ್ನು ಕಂಡನು. “ಎಂಥ ಸೋಜಿಗದ ವಿಷಯ! ಚಳಿಗಾಲದಲ್ಲಿ ಸ್ವಾಲೋ” ಎಂದನು. ಅಲ್ಲಿಯ ವೃತ್ತಪತ್ರಿಕೆಗೆ ಒಂದು ಉದ್ದವಾದ ಲೇಖನವನ್ನು ಅದರ ವಿಷಯವಾಗಿ ಬರೆದನು. ಪ್ರತಿಯೊಬ್ಬರೂ ಆ ಬರವಣಿಗೆಯ ವಿಷಯ ಕುರಿತು ಮಾತನಾಡುವವರೇ. ಅಷ್ಟೊಂದು ಶಬ್ದಗಳಿದ್ದವು ಆ ಬರವಣಿಗೆಯೊಳಗೆ! ಅಷ್ಟು ಅರ್ಥವಿಲ್ಲದ್ದಾಗಿತ್ತು ಆ ಬರವಣಿಗೆ!!

‘ಈ ದಿನ ರಾತ್ರಿ ನಾನು ಈಜಿಪ್ಟಿಗೆ ಹೋಗುತ್ತೇನೆ,” ಎಂದು ಹೇಳಿತು ಸ್ವಾಲೋ ಈ ನಿರೀಕ್ಷೆ ಅದಕ್ಕೆ ಇನ್ನಷ್ಟು ಉತ್ಸಾಹ ತುಂಬಿತು. ಅದು ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ಭೇಟಿಮಾಡಿತು. ಬಹಳ ಹೊತ್ತು ಚರ್ಚಿನ ಗೋಪುರದ ಮೇಲೆ ಕುಳಿತುಕೊಂಡಿತು. ಅದು ಹೋದಲ್ಲೆಲ್ಲಾ ಗುಬ್ಬಚ್ಚಿಗಳು ‘ಎಂಥಾ ಪ್ರಸಿದ್ಧ ಪ್ರವಾಸಿ’ ಎಂದು ಅದರ ಸುತ್ತಲೂ ಚಿಲಿಪಿಲಿಗುಟ್ಟುತ್ತಿದ್ದವು. ಸ್ವಾಲೋ ತನ್ನ ಪ್ರವಾಸದ ಆ ದಿನವನ್ನು ಆನಂದದಿಂದ ಕಳೆಯಿತು.

ಚಂದ್ರನು ಉದಯಿಸುತ್ತಲೇ ಸ್ವಾಲೋ ‘ಸುಖಿಯಾದ ದೊರೆಮಗ’ನಿದ್ದಲ್ಲಿಗೆ ಹಾರಿಹೋಯಿತು. “ಈಜಿಪ್ಟಿನಲ್ಲಿ ನಿನಗಾಗಿ ಮಾಡಬೇಕಾದ ಕೆಲಸವೇನಾದರೂ ಇದೆಯೇ? ನಾನು ಹೊರಟಿದ್ದೇನೆ ಅಲ್ಲಿಗೆ,” ಎಂದಿತು ಸ್ವಾಲೋ.

‘ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ಇನ್ನೊಂದು ದಿನ ನನ್ನ ಜೊತೆಯಲ್ಲಿರಲಾರೆಯಾ?’ ಎಂದನು ದೊರೆಮಗ.

‘ಈಜಿಪ್ಟಿನಲ್ಲಿ ನನ್ನ ಸಂಗಾತಿಗಳು ನನ್ನನ್ನು ನಿರೀಕ್ಷಿಸುತ್ತಿರುವರು. ನಾಳೆಯ ದಿನ ನನ್ನ ಸ್ನೇಹಿತರು ಎರಡನೆಯ ಜಲಪಾತಕ್ಕೆ ಪ್ರವಾಸ ಹೊರಡುವರು. ನೀರು ಜೊಂಡುಗಳ ನಡುವೆ ನೀರ್ಗುದುರೆಗಳು ಅಲ್ಲಿ ಅಡಗಿಕೊಂಡಿರುವುವು. ಒಂದು ದೊಡ್ಡ ಕಗ್ಗಲ್ಲು ಪೀಠದ ಮೇಲೆ ಮೆಮ್ನನ ದೇವತೆಯು ಕುಳಿತಿದೆ. ಮಧ್ಯಾಹ್ನದ ಹೊತ್ತು ಹಳದಿ ಬಣ್ಣದ ಸಿಂಹಗಳು ನೀರಿನ ಅಂಚಿಗೆ ನೀರನ್ನು ಕುಡಿಯಲು ಬರುತ್ತವೆ. ಅವುಗಳ ಕಣ್ಣುಗಳು ಹಸುರು ಬೆರಿಲ್‌ಗಳ ಹಾಗಿರುತ್ತವೆ. ಅವುಗಳ ಗರ್ಜನೆ ಜಲಪಾತದ ಗರ್ಜನೆಗಿಂತಲೂ ಹಿರಿದಾಗಿರುತ್ತದೆ’ ಎಂದಿತು ಸ್ವಾಲೋ.

‘ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ಪಟ್ಟಣದ ಒಂದು ದೂರದ ಮೂಲೆಯಲ್ಲಿ, ಅಟ್ಟದ ಕೋಣೆಯೊಂದರಲ್ಲಿ ಯುವಕನೊಬ್ಬನು ನನಗೆ ಕಾಣುತ್ತಿದ್ದಾನೆ. ಅವನ ಮುಂದೆ ಒಂದು ಇಳಿಜಾರಾದ ಮೇಜಿದೆ. ಆ ಮೇಜಿನ ಮೇಲೆಲ್ಲಾ ಕಾಗದಗಳಿವೆ. ಮೇಜಿನ ಮುಂದೆ ಈ ಯುವಕನು ಬಾಗಿ ಕುಳಿತಿದ್ದಾನೆ. ಅವನ ಪಕ್ಕದಲ್ಲಿ ಒಣಗಿಹೋದ ವಯೊಲೆಟ್ ಹೂಗಳ ಗೊಂಚಲಿಟ್ಟಿರುವ ಜಾಡಿಯೊಂದಿದೆ. ನಾಟಕದ

ಸಂಚಾಲಕನೊಬ್ಬನಿಗೆ ನಾಟಕ ಒಂದನ್ನು ಬರೆದು ಮುಗಿಸುವ ಪ್ರಯತ್ನದಲ್ಲಿದ್ದಾನೆ. ಚಳಿಯ ಕೊರೆತದಿಂದ ಅವನಿಗೆ ಬರೆಯಲು ಸಾಧ್ಯವಾಗುತ್ತಿಲ್ಲ. ಒಲೆಯೊಳಗೆ ಬೆಂಕಿಯಿಲ್ಲ. ಹಸಿವಿನಿಂದ ಕಂಗೆಟ್ಟಿದ್ದಾನೆ' ಎಂದನು ರಾಜಪುತ್ರ.

'ಇನ್ನೊಂದು ರಾತ್ರಿ ನಿನ್ನ ಜೊತೆಯಲ್ಲಿರುತ್ತೇನೆ. ಇನ್ನೊಂದು ಕೆಂಪನ್ನು ತೆಗೆದುಕೊಂಡು ಹೋಗಿ ಅವನಿಗೆ ಕೊಡಲೋ?' ಎಂದಿತು ಸ್ವಾಲೋ.

'ಅಯ್ಯೋ! ನನ್ನ ಹತ್ತಿರ ಕೆಂಪು ಇಲ್ಲ. ಈಗ ನನ್ನಲ್ಲಿರುವುದು ನನ್ನ ಕಣ್ಣುಗಳು. ಅವು ಅಪೂರ್ವವಾದ ನೀಲಿಮಣಿಯಿಂದ ನಿರ್ಮಿತವಾಗಿವೆ. ಸಾವಿರ ವರುಷಗಳ ಹಿಂದೆ ಅವನ್ನು ಇಂಡಿಯಾದಿಂದ ತಂದದ್ದು. ಅವುಗಳ ಪೈಕಿ ಒಂದನ್ನು ಕಿತ್ತು ತೆಗೆದುಕೊಂಡು ಹೋಗಿ ಅವನಿಗೆ ಕೊಡು. ಅದನ್ನು ಅವನು ಯಾರಾದರೂ ರತ್ನಪಡಿವರ್ತಕನಿಗೆ ಮಾರಿ ಬಂದ ಹಣದಿಂದ ಆಹಾರವನ್ನೂ ಸೌದೆಯನ್ನೂ ಕೊಂಡು, ನಾಟಕವನ್ನು ಮುಗಿಸುತ್ತಾನೆ' ಎಂದನು ರಾಜಪುತ್ರ.

'ಪ್ರಿಯ ರಾಜಪುತ್ರ, ನನ್ನಿಂದಾಗದು ನಿನ್ನ ಕಣ್ಣು ಕೀಳಲು,' ಎಂದು ಹೇಳಿ ಸ್ವಾಲೋ ಅಳುವುದಕ್ಕೆ ಆರಂಭಿಸಿತು.

'ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ನಾನು ಹೇಳಿದ ಹಾಗೆ ಮಾಡು' ಎಂದನು ರಾಜಕುಮಾರ.

ಅದರಂತೆ ಸ್ವಾಲೋ ರಾಜಕುಮಾರನ ಒಂದು ಕಣ್ಣು ಕಿತ್ತು ಆ ಬರಹಗಾರನ ಕೋಣೆ ಇದ್ದಲ್ಲಿಗೆ ಹೋಯಿತು. ಕೋಣೆಯ ಮಾಡಿನಲ್ಲಿ ಒಂದು ರಂಧ್ರವಿತ್ತು. ಆ ರಂಧ್ರದ ಮೂಲಕ ಪ್ರವೇಶಿಸಿ ಸ್ವಾಲೋ ಒಳಗೆ ಬಂದಿತು. ಆ ಯುವಕನು ತಲೆಯನ್ನು ಕೈಗಳ ಮೇಲಿಟ್ಟುಕೊಂಡು ಕುಳಿತಿದ್ದನು. ಆದ್ದರಿಂದ ಆ ಹಕ್ಕಿಯ ರೆಕ್ಕೆಯ ಸಪ್ಪುಳ ಅವನಿಗೆ ಕೇಳಿಸಲಿಲ್ಲ. ಅವನು ತಲೆಯೆತ್ತಿ ನೋಡಿದಾಗ ಆ ಒಣಗಿಹೋದ ವಯೊಲೆಟ್ ಹೂಗಳ ನಡುವೆ ಈ ನೀಲಿಯನ್ನು ಕಂಡನು.

'ನನ್ನ ಕೆಲಸದ ಯೋಗ್ಯತೆಯನ್ನು ಯಾರೋ ಗ್ರಹಿಸಿ ಮೆಚ್ಚಿ ಈ ನೀಲಿಯನ್ನು ಕಳುಹಿಸಿದ್ದಾರೆಂದು ಕಾಣುತ್ತದೆ. ಈಗ ನಾನು ನಾಟಕವನ್ನು ಪೂರೈಸಬಹುದು' ಎಂದನು.

ಮಾರನೆಯ ದಿನ ಸ್ವಾಲೋ ಹಡಗಿನ ನಿಲ್ದಾಣಕ್ಕೆ ಹೋಯಿತು. ಒಂದು ದೊಡ್ಡ ಹಡಗಿನ ಕೋವೆ ಮರದ ಮೇಲೆ ಕುಳಿತುಕೊಂಡಿತು. ನಾವಿಕರು ದೊಡ್ಡ ದೊಡ್ಡ ಪೆಟ್ಟಿಗೆಗಳನ್ನು ಹಗ್ಗಗಳ ಸಹಾಯದಿಂದ ಸಾಮಾನು ಕುಳಿಯಿಂದ ಎತ್ತುತ್ತಾ ಇದ್ದರು. ಒಂದೊಂದು ಪೆಟ್ಟಿಗೆ ಎತ್ತಿದಾಗಲೂ 'ಹೀ, ವೇ, ಹೋ' ಎಂದು ಕೂಗುತ್ತಿದ್ದರು. 'ನಾನು ಈಜಿಪ್ಟಿಗೆ ಹೋಗುತ್ತೇನೆ' ಎಂದಿತು ಸ್ವಾಲೋ. ಆದರೆ

ಯಾರೂ ಅದನ್ನು ಗಮನಿಸಲಿಲ್ಲ. ಚಂದ್ರನು ಉದಯಿಸುತ್ತಲೇ 'ಸುಖಿಯಾದ ದೊರೆ ಮಗ 'ನಿದ್ದಲ್ಲಿಗೆ ಹಾರಿಹೋಯಿತು.

'ನಿನ್ನನ್ನು ಬೀಳ್ಕೊಂಡು ಹೋಗಲು ಬಂದಿದ್ದೇನೆ' ಎಂದು ಹೇಳಿತು ಸ್ವಾಲೋ.

'ಸ್ವಾಲೋ, ಸ್ವಾಲೋ, ಪುಟ್ಟಸ್ವಾಲೋ, ಇನ್ನೊಂದು ರಾತ್ರಿ ನನ್ನ ಜೊತೆ ಯಲ್ಲಿರಲಾರೆಯಾ ? ' ಎಂದನು ದೊರೆಮಗ.

'ಇದು ಚಳಿಗಾಲ. ಇಷ್ಟರಲ್ಲಿಯೇ ತಣ್ಣನೆಯ ಹಿಮ ಇಲ್ಲಿ ಸುರಿಯುವುದು. ಈಜಿಪ್ಟಿನಲ್ಲಿ ತಾಳೆ ಮರಗಳ ಮೇಲೆ ಬೆಚ್ಚನೆಯ ಬಿಸಿಲಿರುತ್ತದೆ. ಮೊಸಳೆಗಳು ಕೆಸರಿನಲ್ಲಿ ಬಿದ್ದುಕೊಂಡು ಅವುಗಳನ್ನು ಸೋಮಾರಿತನದ ದೃಷ್ಟಿಯಿಂದ ನೋಡುತ್ತಿರುತ್ತವೆ. ನನ್ನ ಸಂಗಾತಿಗಳು ಬಾಲ್‌ಬೇಕ್ ದೇವಾಲಯದಲ್ಲಿ ಗೂಡುಕಟ್ಟುತ್ತಿದ್ದಾರೆ. ಕೆಂಪನೆಯ, ಬೆಳ್ಳನೆಯ ಪಾರಿವಾಳಗಳು ಅವರು ಗೂಡು ಕಟ್ಟುವುದನ್ನು ನೋಡು ತ್ತಲೂ, ಒಂದನ್ನೊಂದು ಗುಬ್ಬಳಿಸಿ ಕರೆಯುತ್ತಲೂ ಇರುತ್ತವೆ. ಪ್ರಿಯ ರಾಜ ಕುಮಾರ, ನಿನ್ನನ್ನು ಬಿಟ್ಟು ಹೊರಡಲೇಬೇಕು. ಆದರೆ ನಾನು ನಿನ್ನನ್ನು ಎಂದಿಗೂ ಮರೆಯುವುದಿಲ್ಲ. ಮುಂದಿನ ವಸಂತದಲ್ಲಿ ಇಲ್ಲಿಗೆ ಬಂದಾಗ ನೀನು ಕೊಟ್ಟ ಎರಡು ರತ್ನಗಳಿಗೆ ಬದಲಾಗಿ, ಎರಡು ಸುಂದರವಾದ ರತ್ನಗಳನ್ನು ತಂದುಕೊಡುತ್ತೇನೆ. ಕೆಂಪು, ಕೆಂಪು ಗುಲಾಬಿಗಿಂತಲೂ ಕೆಂಪಗಿರುವುದು. ನೀಲಿ ಸಮುದ್ರಕ್ಕಿಂತಲೂ ನೀಲಿ ಯಾಗಿರುವುದು ' ಎಂದಿತು.

'ಕೆಳಗೆ ಚೌಕದಲ್ಲಿ ಒಬ್ಬಳು ಬೆಂಕಿಕಡ್ಡಿ ಮಾರುವ ಹುಡುಗಿ ಇದ್ದಾಳೆ. ಆಕೆಯು ಬೆಂಕಿಕಡ್ಡಿಯನ್ನೆಲ್ಲಾ ಚರಂಡಿಯೊಳಗೆ ಕೆಡವಿಕೊಂಡಿದ್ದಾಳೆ. ಮನೆಗೆ ದುಡ್ಡು ತೆಗೆದು ಕೊಳ್ಳದೆ ಹೋದರೆ, ಆಕೆಯ ತಂದೆ ಆ ಹುಡುಗಿಯನ್ನು ಹೊಡೆಯುತ್ತಾನೆ. ಹುಡುಗಿಯು ಅಳುತ್ತಿದ್ದಾಳೆ. ಆಕೆಯ ಕಾಲಿಗೆ ಷೂಗಳಿಲ್ಲ. ಕಾಲುಚೀಲಗಳಿಲ್ಲ. ಆಕೆಯ ಪುಟ್ಟ ತಲೆಯ ಮೇಲೆ ಮುಚ್ಚಲು ಏನೂ ಇಲ್ಲ. ನನ್ನ ಇನ್ನೊಂದು ಕಣ್ಣನ್ನು ಕಿತ್ತು ಅವಳಿಗೆ ಕೊಡು. ಅವಳ ತಂದೆ ಅವಳನ್ನು ಹೊಡೆಯುವುದಿಲ್ಲ, ' ಎಂದನು ರಾಜಪುತ್ರ.

'ನಿನ್ನ ಜೊತೆಯಲ್ಲಿ ಇನ್ನೊಂದು ರಾತ್ರಿ ಇರುವೆನು. ಆದರೆ ನಿನ್ನ ಕಣ್ಣು ಕೀಳಲಾರೆ. ಹಾಗೆ ಮಾಡಿದರೆ ನೀನು ಪೂರ್ತಿಯಾಗಿ ಕುರುಡಾಗುವೆ' ಎಂದಿತು ಸ್ವಾಲೋ.

'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ನಾನು ಹೇಳಿದಂತೆ ಮಾಡು' ಎಂದನು ರಾಜಪುತ್ರ. ಅದರಂತೆ ಸ್ವಾಲೋ ರಾಜಪುತ್ರನ ಇನ್ನೊಂದು ಕಣ್ಣನ್ನು

ಕಿತ್ತು ಅದನ್ನು ತೆಗೆದುಕೊಂಡು ಹಾರಿತು. ಅದು ಆ ಬೆಂಕಿಕಡ್ಡಿ ಮಾರುವ ಹುಡುಗಿಯ ಮೇಲ್ಗಡೆ ಹಾರಿಬಂದು ಆ ಮಣಿಯನ್ನು ಆಕೆಯ ಕೈಮೇಲೆ ಹಾಕಿತು.

'ಆಹಾ ಎಂತಹ ಸೊಗಸಾದ ಮಣಿ' ಎಂದು ಕೂಗಿ, ನಗುತ್ತಾ ಮನೆಗೆ ಹೊರಟುಹೋದಳು.

ಆಮೇಲೆ ಸ್ವಾಲೋವು ರಾಜಪುತ್ರನಲ್ಲಿಗೆ ಬಂದಿತು. 'ಈಗ ನೀನು ಕುರುಡ ನಾದೆ. ನಾನು ನಿನ್ನ ಜೊತೆಯಲ್ಲಿಯೇ ಯಾವಾಗಲೂ ಇರುತ್ತೇನೆ' ಎಂದಿತು ಸ್ವಾಲೋ.

'ಅದಾಗದು ಪುಟ್ಟ ಸ್ವಾಲೋ, ನೀನು ಈಜಿಪ್ಟಿಗೆ ಹೋಗು' ಎಂದನು ದೀನ ರಾಜಪುತ್ರ.

'ನಾನು ಯಾವಾಗಲೂ ನಿನ್ನ ಜೊತೆಯಲ್ಲಿಯೇ ಇರುವೆನು," ಎಂದು ಹೇಳಿ ಸ್ವಾಲೋ ರಾಜಪುತ್ರನ ಕಾಲಡಿಯಲ್ಲಿ ನಿದ್ರೆಹೋಯಿತು.

ಮಾರನೆಯ ದಿನವೆಲ್ಲಾ ಅದು ರಾಜಪುತ್ರನ ಭುಜದ ಮೇಲೆ ಕುಳಿತುಕೊಂಡು, ವಿಜಾತೀಯವಾದ ಪ್ರದೇಶಗಳಲ್ಲಿ ಅದು ನೋಡಿದುದರ ಕಥೆಗಳನ್ನೆಲ್ಲಾ ಹೇಳಿತು. ನೈಲ್ ನದಿಯ ದಡಗಳಲ್ಲಿ, ಉದ್ದಕ್ಕೆ ಸಾಲುಸಾಲಾಗಿ ನಿಂತುಕೊಂಡು ಕೊಕ್ಕುಗಳಿಂದ ಚಿನ್ನದ ಮೀನುಗಳನ್ನು ಹಿಡಿಯುತ್ತಿದ್ದ ಇಬಿಸ್ ಪಕ್ಷಿಗಳ ವಿಷಯವನ್ನೂ, ಮರುಭೂಮಿಯೇ ವಾಸಸ್ಥಾನವಾಗಿರುವ ಸರ್ವಜ್ಞಮೂರ್ತಿಯೂ, ಅನಾದಿಯೂ ಆದ ಸ್ಫಿಂಕ್ಸ್ ವಿಷಯವನ್ನೂ, ಒಂಟೆಗಳ ಪಕ್ಕದಲ್ಲಿ ನಡೆದುಹೋಗುತ್ತಾ ಕೈಗಳಲ್ಲಿ ಅಂಬರ್ ಮಣಿಗಳನ್ನು ಹಿಡಿದುಕೊಂಡಿರುತ್ತಿದ್ದ ವರ್ತಕರ ವಿಷಯವನ್ನೂ, ಎಬೊನಿ ಯಷ್ಟು ಕಪ್ಪು ಶರೀರವುಳ್ಳ ಚಂದ್ರಪರ್ವತಗಳ ರಾಜನ ವಿಷಯವನ್ನೂ, ಅವನು ಪೂಜಿಸುವ ದೊಡ್ಡದೊಡ್ಡ ಶಿಲಾಸ್ಫಟಿಕಗಳ ವಿಷಯವನ್ನೂ, ಇಪ್ಪತ್ತು ಜನ ಪೂಜಾರಿ ಗಳು ಜೇನುತೊಟ್ಟು ಉಣಿಸುತ್ತಿದ್ದ ತಾಳೆಮರದಲ್ಲಿ ವಾಸವಾಗಿರುವ ಹಸುರು ಹಾವಿನ ವಿಷಯವನ್ನೂ, ದೊಡ್ಡದೂ ಚಪ್ಪಟೆಯೂ ಆದ ಎಲೆಗಳ ಮೇಲೆ ದೊಡ್ಡ ಸರೋವರವನ್ನು ಹಾದುಹೋಗುತ್ತಿದ್ದ ಪಿಗ್ಮಿಗಳ ವಿಷಯವನ್ನೂ, ಅವರು ಚಿಟ್ಟೆ ಗಳೊಂದಿಗೆ ನಡೆಸುತ್ತಿದ್ದ ಯುದ್ಧಗಳನ್ನೂ ವರ್ಣಿಸಿತು.

'ಪ್ರಿಯವಾದ ಪುಟ್ಟ ಸ್ವಾಲೋ, ನೀನು ಅದ್ಭುತ ವಿಷಯಗಳನ್ನು ನನಗೆ ವರ್ಣಿ ಸಿದ್ದೀಯೆ ಮನುಷ್ಯರು—ಗಂಡಸರು, ಹೆಂಗಸರು—ಅನುಭವಿಸುತ್ತಿರುವ ಸಂಕಟವು ಎಲ್ಲದಕ್ಕಿಂತ ಅದ್ಭುತವಾದದ್ದು. ಮಾನವನ ಸಂಕಟದಷ್ಟು ರಹಸ್ಯ ವಿಷಯವು ಮತ್ತೊಂದಿಲ್ಲ. ಪುಟ್ಟ ಸ್ವಾಲೋ ನನ್ನ ಪಟ್ಟಣದ ಮೇಲೆ ಹಾರಿಹೋಗಿ, ನೀನು ಅಲ್ಲಿ ನೋಡುವುದನ್ನೆಲ್ಲಾ ಬಂದು ಹೇಳು' ಎಂದನು ರಾಜಪುತ್ರ.

ಅದರಂತೆಯೇ ಸ್ವಾಲೋವು ಆ ದೊಡ್ಡ ಪಟ್ಟಣದ ಮೇಲೆ ಹಾರಿತು. ಧನಿಕರು ಅವರ ಸುಂದರ ಭವನಗಳಲ್ಲಿ ಸಂತೋಷದಿಂದ ನಲಿಯುತ್ತಿದ್ದರು. ತಿರುಕರು ಹೆಬ್ಬಾಗಿಲ ಬಳಿ ಕುಳಿತಿದ್ದರು. ಕತ್ತಲೆಯ ಓಣಿಗಳಲ್ಲಿ ಹಾರಿತು. ಕತ್ತಲೆಯ ಬೀದಿಗಳನ್ನು ನಿರುತ್ಸಾಹದಿಂದ ನೋಡುತ್ತಾ ಕುಳಿತಿದ್ದ, ಹೊಟ್ಟೆಗಿಲ್ಲದ ಮಕ್ಕಳ ಮುಖಗಳನ್ನು ನೋಡಿತು. ಒಂದು ಸೇತುವೆಯ ಕಮಾನಿನ ಕೆಳಗೆ ಇಬ್ಬರು ಹುಡುಗರು ಒಂದರ ತೋಳ್ತೆಕ್ಕೆಯಲ್ಲೊಂದು ಮಲಗಿಕೊಂಡು ಚಳಿಯನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದವು. 'ಎಷ್ಟು ಹಸಿವಾಗಿದೆ', ಎಂದು ಮಾತನಾಡಿಕೊಳ್ಳುತ್ತಿದ್ದವು. ಕಾವಲುಗಾರನು ಬಂದು 'ನೀವು ಇಲ್ಲಿ ಮಲಗಬಾರದು' ಎಂದು ಗದರಿಸಿದನು. ಅವು ಮಳೆಯಲ್ಲಿ ಎಲ್ಲಿಯೋ ಹೋದವು.

ಆಮೇಲೆ ರಾಜಪುತ್ರನಿದ್ದಲ್ಲಿಗೆ ಹೋಗಿ ತಾನು ಕಂಡಿದ್ದುದನ್ನೆಲ್ಲಾ ಹೇಳಿತು.

'ನನ್ನ ಮೈಯನ್ನೆಲ್ಲ ಒಳ್ಳೆಯ ಚಿನ್ನದ ತಗಡಿನಿಂದ ಮುಚ್ಚಿದ್ದಾರೆ. ಒಂದೊಂದಾಗಿ ನನ್ನ ಮೈಮೇಲಿರುವ ಚಿನ್ನದ ತಗಡುಗಳನ್ನೆಲ್ಲಾ ತೆಗೆದುಕೊಂಡುಹೋಗಿ ಬಡವರಿಗೆ ಕೊಡು. ಚಿನ್ನವು ಸುಖ ಕೊಡಬಲ್ಲದೆಂದು ಜೀವಂತರಾಗಿರುವವರು ತಿಳಿದಿರುತ್ತಾರೆ' ಎಂದನು ರಾಜಪುತ್ರ.

ಒಂದೊಂದಾಗಿ ಅದರ ಮೈಮೇಲಿನ ಚಿನ್ನದ ತಗಡುಗಳನ್ನು ಸ್ವಾಲೋ ಕಿತ್ತು, ತಗಡಾದ ಮೇಲೆ ತಗಡನ್ನು ಬಡವರಿಗೆ ಕೊಟ್ಟಿತು. ರಾಜಪುತ್ರನು, ಮಂಕಾಗಿಯೂ ಕಳೆಯಿಲ್ಲದೆಯೂ ಕಂಡನು. ಹುಡುಗರ ಕೆನ್ನೆಗಳು ತುಂಬಿಕೊಂಡು ಕೆಂಪಾದವು. ಬೀದಿಗಳಲ್ಲಿ ಹುಡುಗರು ನಕ್ಕು ಸೊಕ್ಕಿ ಕುಣಿಯುತ್ತಿದ್ದರು. 'ತಿನ್ನಲು ರೊಟ್ಟಿಯಿದೆ ಈಗ' ಎನ್ನುತ್ತಿದ್ದರು ಹುಡುಗರು.

ಮಂಜು ಸುರಿಯಲು ಆರಂಭಿಸಿತು. ಅದಾದಮೇಲೆ ಹಿಮ ಸುರಿಯಿತು. ರಸ್ತೆಗಳೆಲ್ಲಾ ಬೆಳ್ಳಿಯಿಂದ ಮಾಡಿದಂತೆ ಕಂಗೊಳಿಸುತ್ತಿದ್ದವು. ಥಳಥಳನೆ ಹೊಳೆಯುತ್ತಿದ್ದವು. ಮನೆಯ ಸೂರಿನಿಂದ ಉದ್ದವಾಗಿ ಹಿಮದ ಹಳಕುಗಳು ಬಿಚ್ಚುಗತ್ತಿಯೋಪಾದಿಯಲ್ಲಿ ತೂಗುಬಿದ್ದಿದ್ದವು. ಪ್ರತಿಯೊಬ್ಬರೂ ತುಪ್ಪಟದಿಂದ ಮೈಮುಚ್ಚಿಕೊಳ್ಳುತ್ತಿದ್ದರು. ಚಿಕ್ಕ ಮಕ್ಕಳು ಕೆಂಪು ಟೋಪಿ ಧರಿಸಿ ಹಿಮಗಲ್ಲುಗಳ ಮೇಲೆ ಜಾರುತ್ತಿದ್ದವು.

ಆ ಪುಟ್ಟ ಬಡ ಸ್ವಾಲೋವಿಗೆ ಚಳಿಯ ತೀಕ್ಷ್ಣತೆ ದಿನೇ ದಿನೇ ಹೆಚ್ಚಾಗುತ್ತಾ ಬಂದಿತು. ಆದರೂ ಅದಕ್ಕೆ ರಾಜಪುತ್ರನನ್ನು ಬಿಟ್ಟು ಹೋಗಲು ಮನಸ್ಸಾಗಲಿಲ್ಲ. ಅವನನ್ನು ಅಷ್ಟು ಪ್ರೀತಿಸಿತ್ತು. ಅದು ರೊಟ್ಟಿಯಂಗಡಿಯವನು ಎಲ್ಲಿಯೋ ನೋಡುತ್ತಿದ್ದಾಗ ಅಲ್ಲಿ ಬಿದ್ದ ರೊಟ್ಟಿ ಚೂರುಗಳನ್ನು ಎತ್ತಿ ತಿಂದು, ಜೀವನ ಸಾಗಿಸುತ್ತಿತ್ತು. ರೆಕ್ಕೆಗಳನ್ನು ಬಡಿದು ಬೆಚ್ಚಗೆ ಮಾಡಿಕೊಳ್ಳಲು ಯತ್ನಿಸುತ್ತಿತ್ತು.

ಕೊನೆಗೆ ಇನ್ನೇನು ನಾನು ಸಾಯುವುದೇ ಸರಿ ಎಂದು ಅದಕ್ಕೆ ತಿಳಿಯಿತು. ಒಂದೇ ಒಂದು ಸಾರಿ ಹಾರಿ ರಾಜಪುತ್ರನ ಭುಜದ ಮೇಲೆ ಕುಳಿತುಕೊಳ್ಳುವಷ್ಟು ಶಕ್ತಿ ಮಾತ್ರ ಇತ್ತು ಅದಕ್ಕೆ. ಹಾಗೆ ಹಾರಿ ಭುಜದ ಮೇಲೆ ಕುಳಿತು 'ರಾಜಪುತ್ರ, ನಮಸ್ಕಾರ, ನಿನ್ನ ಕೈಗಳನ್ನು ಚುಂಬಿಸಲು ಅವಕಾಶ ಕೊಡುತ್ತೀಯಾ?' ಎಂದಿತು ಸ್ವಾಲೋ.

'ಏನಾದರೂ ಆಗಲಿ, ಕೊನೆಗೆ ಈಜಿಪ್ಟಿಗೆ ಹೋಗಲು ನಿರ್ಧರಿಸಿದೆಯಲ್ಲಾ. ತುಂಬಾ ಸಂತೋಷ, ನೀನು ಬಹು ದಿವಸ ನನ್ನ ಜೊತೆಯಲ್ಲಿದ್ದುಬಿಟ್ಟೆ. ನನ್ನ ತುಟಿಯನ್ನು ಚುಂಬಿಸಬೇಕು ನೀನು. ನಿನ್ನಲ್ಲಿ ಅಷ್ಟು ಪ್ರೇಮ ನನಗೆ' ಎಂದನು ರಾಜಪುತ್ರ.

'ಈಜಿಪ್ಟಿಗಲ್ಲ ನಾನು ಹೋಗುತ್ತಿರುವುದು. ಶೈಮಿನೀ ಪಟ್ಟಣಕ್ಕೆ. ಅದರ ಒಡೆಯನು ನಿದ್ರೆಯ ಸಹೋದರನಲ್ಲವೇ?' ಎಂದಿತು. ಅದು ಸುಖಿಯಾದ ರಾಜಪುತ್ರನ ತುಟಿಯನ್ನು ಚುಂಬಿಸಿ, ಅವನ ಕಾಲಡಿಯಲ್ಲಿ ಸತ್ತುಬಿದ್ದಿತು.

ಅದೇ ಕ್ಷಣದಲ್ಲಿ ವಿಗ್ರಹದ ಒಳಗಡೆ ಏನೋ ಸೀಳಿದಂತೆ ಒಂದು ವಿಜಾತೀಯವಾದ ಶಬ್ದ ಕೇಳಿಸಿತು. ಸೀಸದಿಂದ ಮಾಡಿದ್ದ ಅದರ ಹೃದಯವು ಎರಡು ಸೀಳಾಗಿ ಸಿಡಿದಿತ್ತು. ಅದೇ ಆ ಶಬ್ದಕ್ಕೆ ಕಾರಣ. ಹಿಮವು ಕಲ್ಲಿನಂತೆ ಗಟ್ಟಿಯಾಗಿತ್ತು ಆ ದಿನ.

ಮಾರನೆಯ ದಿನ ಬೆಳಗ್ಗೆ ಪೌರಸಭಾಧ್ಯಕ್ಷನು ಪೌರಸದಸ್ಯರೊಡನೆ, ಆ ಚೌಕದ ಸಮೀಪದಲ್ಲಿ ಹೋಗುತ್ತಿದ್ದನು. ವಿಗ್ರಹವಿದ್ದಲ್ಲಿಗೆ ಬಂದಾಗ ವಿಗ್ರಹವನ್ನು ನೋಡಿದರು. 'ಇದೇನಿದು ರಾಜಪುತ್ರನ ವಿಗ್ರಹ ಇಷ್ಟು ದುಸ್ಥಿತಿಗೆ ಬಂದಿದೆ!' ಎಂದನು ಅಧ್ಯಕ್ಷ.

'ಹೌದು! ನಿಜವಾಗಿಯೂ ಹೇಗಾಗಿಬಿಟ್ಟಿದೆ?' ಎಂದರು ಇತರರು. ಎಲ್ಲರೂ ಅದರ ಸಮೀಪಕ್ಕೆ ಹೋದರು. 'ಕತ್ತಿಯ ಮೇಲಿನ ಕೆಂಪು ಬಿದ್ದುಹೋಗಿದೆ. ಕಣ್ಣುಗಳೇ ಇಲ್ಲ. ಮೈಮೇಲಿನ ಚಿನ್ನವೆಲ್ಲಾ ಮಾಯವಾಗಿಬಿಟ್ಟಿದೆ. ತಿರುಕನ ಹಾಗೆ ಕಾಣುತ್ತದೆ' ಎಂದರು ಇತರರು.

'ಇಲ್ಲಿ ನೋಡಿ, ಇದರ ಕಾಲಡಿಯಲ್ಲಿ ಒಂದು ಹಕ್ಕಿ ಸತ್ತುಬಿದ್ದಿದೆ. ಹಕ್ಕಿಗಳು ಇಲ್ಲಿ ಸಾಯಬಾರದು ಎಂದು ಪ್ರಕಟಣೆ ಹೊರಡಿಸಬೇಕು' ಎಂದನು. ಪೌರಸಭಾ ಗುಮಾಸ್ತನು ಈ ವಿಷಯ ಗುರುತು ಹಾಕಿಕೊಂಡನು.

ಕೊನೆಗೆ 'ಸುಖಿಯಾದ ದೊರೆಮಗ'ನ ವಿಗ್ರಹವನ್ನು ಅಲ್ಲಿಂದ ಕಿತ್ತರು. 'ಯಾವಾಗ ಸೌಂದರ್ಯವಿಲ್ಲವೋ ಆದರಿಂದ ಉಪಯೋಗವೂ ಇಲ್ಲ' ಎಂದು ವಿಶ್ವವಿದ್ಯಾಲಯದ ಕಲಾಶಾಸ್ತ್ರ ಪ್ರಾಧ್ಯಾಪಕನು ಹೇಳಿದನು.

ಆಮೇಲೆ ಆ ವಿಗ್ರಹವನ್ನು ಒಲೆಯಲ್ಲಿ ಕರಗಿಸಿದರು. ಆ ಲೋಹದಿಂದ ಏನು ಮಾಡಬೇಕೆಂದು ತೀರ್ಮಾನಿಸಲು ಅಧ್ಯಕ್ಷನು ಒಂದು ಸಭೆ ಕರೆದನು. 'ಇದರಿಂದ ಇನ್ನೊಂದು ವಿಗ್ರಹಮಾಡಬೇಕು. ಪೌರಸಭಾಧ್ಯಕ್ಷನ ವಿಗ್ರಹ ಮಾಡಿಸೋಣ' ಎಂದನು.

ಈ ವಿಷಯದಲ್ಲಿ ಬಹಳ ಜಗಳವಾಯಿತು. 'ಅಧ್ಯಕ್ಷನೇನು ಹೆಚ್ಚು! ಸದಸ್ಯನೊಬ್ಬನ ವಿಗ್ರಹ ಮಾಡಿಸುವುದು ಉತ್ತಮ!' ಎಂದರು ಕೆಲವರು. ಯಾರ ವಿಗ್ರಹ ಮಾಡಿಸಬೇಕೆಂಬ ವಿಷಯದಲ್ಲಿ ಇನ್ನೂ ಜಗಳವಾಡುತ್ತಲೇ ಇದ್ದರು.

ಎರಕದ ಕಾರ್ಖಾನೆಯ ಮೇಸ್ತ್ರಿಯು 'ಇದೇನು ಸೋಜಿಗ! ಈ ಸೀಳಿಹೋದ ಸೀಸದ ಹೃದಯ ಒಲೆಯಲ್ಲಿ ಕರಗುವುದೇ ಇಲ್ಲ. ಕಲ್ಲಾಗಿಬಿಟ್ಟಿದೆ. ಅದನ್ನು ಬಿಸಾಡುವುದೇ ಸರಿ' ಎಂದನು. ಆದ್ದರಿಂದ ಅದನ್ನು ಒಂದು ಕಸದ ರಾಶಿಯ ಮೇಲೆ ಎಸೆದರು. ಅಲ್ಲಿಯೇ ಸತ್ತ ಸ್ವಾಲೋ ಶರೀರವೂ ಇತ್ತು.

ಒಂದು ದಿನ ಭಗವಂತನು ದೇವದೂತನನ್ನು ಕರೆದು 'ಈ ಪಟ್ಟಣದಲ್ಲಿ ಅತ್ಯಂತ ಅಮೂಲ್ಯವಾದ ಎರಡು ವಸ್ತುಗಳನ್ನು ತೆಗೆದುಕೊಂಡು ಬನ್ನಿ' ಎಂದನು. ದೇವದೂತರು ಸೀಸದ ಹೃದಯವನ್ನೂ ಸತ್ತ ಹಕ್ಕಿಯನ್ನೂ ತಂದರು.

'ನಿಮ್ಮ ಆಯ್ಕೆ ಅತ್ಯಂತ ಸಮರ್ಪಕವಾಗಿದೆ. ನನ್ನ ನಂದನ ವನದಲ್ಲಿ ಈ ಹಕ್ಕಿ ಸತತವಾಗಿ ಗಾನಮಾಡಲಿ. ನನ್ನ ಶ್ರೇಷ್ಠ ನಗರದಲ್ಲಿ "ಸುಖಿಯಾದ ದೊರೆಮಗ"ನು ಸರ್ವದಾ ನನ್ನನ್ನು ಸ್ತುತಿಸುತ್ತಿರಲಿ' ಎಂದನು ಭಗವಂತನು.

ಮೂಲ : ಆಸ್ಕರ್ ವೈಲ್ಡ್ ಅನುವಾದ : ಕೆ. ಸುಬ್ಬಾಭಟ್ಟ

ಮಾನವನ ವಿಶ್ವಸಂಚಾರ-ಸಾಧ್ಯಾಸಾಧ್ಯತೆಗಳು

ಇಂದಿನ ವಿಜ್ಞಾನಯುಗ ಶಕ್ತಿಯ ಉತ್ಪಾದನೆಗೆ ಹೊಸ ಹೊಸ ಸಾಧನಗಳನ್ನು ಕಲ್ಪಿಸಿಕೊಟ್ಟಿದೆ. ಈ ಶಕ್ತಿಯ ಪ್ರಯೋಗದಿಂದ ಅಖಂಡ ಸಂಚಾರ, ಅತಿವೇಗ ಸಾಧಿಸಲ್ಪಟ್ಟಿವೆ. ಶಬ್ದದ ವೇಗವನ್ನೂ (Supersonic speed) ಮೀರಿ ಹಾರಾಡಬಲ್ಲ ವಿಮಾನಗಳು ನಿರ್ಮಿಸಲ್ಪಟ್ಟಿವೆ. ಈ ಶಕ್ತಿಯ ನವೋತ್ಪಾದನೆಗೆ ವಿಜ್ಞಾನಿ, ಹತ್ತಾರು ಮಾರ್ಗಗಳನ್ನು ಕಂಡುಕೊಂಡಿದ್ದಾನೆ. ರಾಸಾಯನಿಕ ಮಿಶ್ರಣದಿಂದ ಸಿಡಿತ ಉಂಟುಮಾಡಿ, ಅದರಿಂದ ಪ್ರಸರಿಸುವ ಶಕ್ತಿಯನ್ನೇ ಪ್ರಯೋಗಿಸಿ ವಾಹನಗಳನ್ನು ಚಲಿಸುವುದು ಒಂದು ವಿಧ. [ಉದಾಹರಣೆಗೆ: ಖನಿಜದ ಎಣ್ಣೆಯ ಸಿಡಿತದಿಂದ ಉಂಟಾಗುವ ಶಕ್ತಿಯನ್ನೇ ಬಳಸುವ ಮೋಟಾರು ವಾಹನ (Automobile); ನೀರನ್ನು ಹಬೆಯಾಗಿ ಪರಿವರ್ತಿಸಿ, ಹಾಗೆ ಸೃಷ್ಟಿಯಾದ ಶಕ್ತಿಯಿಂದ ಚಲಿಸುವ ರೈಲು] ಅಣು ವಿಕಿರಣ ಶಕ್ತಿಯಿಂದ ಅನಂತ ಪರಿಸರಣವನ್ನೇ ಉಂಟುಮಾಡಿ, ವಾಹನಗಳನ್ನು ಚಲಿಸುವುದು ಇನ್ನೊಂದು ವಿಧ; ಇದು ಇತ್ತೀಚಿನದು. ಇದರ ಶಕ್ತಿ ಮಹತ್ತಾದುದು. ಒಂದೊಂದು ವೇಳೆ ಮಾನವನಿಂದಲೇ ನಿರ್ಮಿತವಾದ ಈ ಶಕ್ತಿ, ಅವನ ಕೈ ಮೀರಿ, ಅವನ ಪ್ರಾಣಕ್ಕೇ ಸಂಚಕಾರ ತಂದರೂ ತರಬಹುದು!

ಅಣು ಶಕ್ತಿ ಮಾನವನಿಗೆ ಕೈಗತವಾದ ಮೇಲೆ, ಅವನ ಭೂಸಂಚಾರ ಹೆಚ್ಚಿತು; ಭೂಮಿಯ ಒಂದೊಂದು ಭಾಗವನ್ನೂ (ಇದುವರೆಗೆ ಅಗೋಚರವಾಗಿದ್ದ ಧ್ರುವ ವಲಯಗಳೂ ಸೇರಿ); ಅವನು ಕಂಡುಕೊಂಡಿದ್ದಾನೆ; ವರುಷಗಟ್ಟಲೆಯಾದರೂ ಮುಗಿಯದಿದ್ದ ಮಹಾ ದೂರಗಳನ್ನು ಕೇವಲ ಹತ್ತಾರು ಗಂಟೆಗಳಲ್ಲೇ ಸಂಚರಿಸುತ್ತಾನೆ. ಈಗ ಅವನ ಗಮನವೆಲ್ಲ ಗಗನದೆಡೆಗೆ ಹರಿದಿದೆ; ಗ್ರಹನಕ್ಷತ್ರಗಳ ನಡುವೆ ಇರುವ ಮಹಾಂತರಗಳನ್ನು ತಾನು ದಾಟಬಹುದೇ? ಎಂದು ಯೋಚಿಸುತ್ತಿದ್ದಾನೆ. ವಿಶ್ವಸಂಚಾರ ಮಾಡಬಯಸುತ್ತಿದ್ದಾನೆ.

ಅವನ ಈ ಆಕಾಂಕ್ಷೆ ಕಾರ್ಯರೂಪಕ್ಕೂ ಬರುತ್ತಿದೆ.


ವಿಶ್ವಯಾತ್ರಿಕನಾಗಲು ಹಾತೊರೆಯುತ್ತಿರುವ ಮಾನವನಿಗೆ ಅನೇಕ ತೊಂದರೆಗಳು ಕಾದಿವೆ. ಈಗೀಗ ಅವನು ಜೀವಸಹಿತ ಭೂಮಿಯನ್ನೇ ಬಿಟ್ಟುಹೋಗಲು ಪ್ರಯತ್ನಿಸುತ್ತಿದ್ದಾನೆ. ಭೂಮಿಯಮೇಲೆ ಅವನಿಗೆ ಆಗುತ್ತಿರುವ ಅನುಭವಗಳು, ವಿಶ್ವದ 'ಶೂನ್ಯ'ದಲ್ಲಿ ಆಗುವಂತಿಲ್ಲ. ಗಳಿಗೆ ಗಳಿಗೆಗೂ ಭೂಮಿಯ ಆಕರ್ಷಣ ಶಕ್ತಿ

(Gravitation) ಅವನ ಮೇಲೆ ಪರಿಣಾಮ ಮಾಡುತ್ತಿದೆ! ಅವನ ನಡಿಗೆ, ಜೀವನ, ಊಟ, ಉಪಚಾರ ಎಲ್ಲದರ ಮೇಲೂ ಇದರ ಪ್ರಭಾವ ಇದ್ದೇ ಇದೆ. ಊಟ ಮಾಡುವಾಗ ಒಂದೊಂದು ತುತ್ತೂ ಹೊಟ್ಟೆಗೆ ಇಳಿಯುತ್ತದೆ. ಅದು ಹಾಗೆ ಗಂಟಲಲ್ಲಿ ಇಳಿಯಲು ಭೂಮಿಯ ಆಕರ್ಷಣೆ ಕಾರಣವಾಗುತ್ತದೆ. ಭೂಮಿಯನ್ನು ಬಿಟ್ಟು ಅಂತರಿಕ್ಷಕ್ಕೆ ಅಡರಿದ ಮಾನವನಿಗೆ ಭೂಮಿಯ ಆಕರ್ಷಣೆಯ ಅನುಭವ ಆಗುವುದಿಲ್ಲ.—ಅಂತಹವೇಳೆ ಅವನಿಗೆ ವಿಚಿತ್ರ ವೇದನೆಗಳಾಗಬಹುದು; ವಿಚಿತ್ರ ಅನುಭವಗಳಾಗಬಹುದು. ಬುದ್ಧಿಭ್ರಮಣೆಯಾದರೂ ಆದೀತು!

ಇಷ್ಟಾದರೂ ಮಾನವನ 'ಸಾಹಸ' ಕುಂದಿಲ್ಲ; ಜೀವಹೋದರೂ ಚಿಂತೆ ಇಲ್ಲ, ಇದನ್ನು ಸಾಧಿಸಿಯೇ ಬಿಡಬೇಕು ಎಂಬ ಹಟ ಅವನದು. ವಿನಾಕಾರಣ ಜೀವ ಏಕೆ ಹೋಗಬೇಕು! ಆದಷ್ಟು ಯುಕ್ತಿಯಿಂದ ಇದನ್ನು ಸಾಧಿಸೋಣ ಎಂಬ ಆಸೆಯೂ ಇದೆ.

ವಿಶ್ವಸಂಚಾರ ಸಾಮಾನ್ಯ ಕಾರ್ಯವೇನಲ್ಲ. ಭೂಮಿಯಿಂದ ತಪ್ಪಿಸಿಕೊಳ್ಳುವುದೇ ಒಂದು ಮಹತ್ಕಾರ್ಯ. ವಸ್ತುಗಳನ್ನು ಭೂಮಿ ಅತಿ ವೇಗದಿಂದ ಎಳೆದುಕೊಳ್ಳುತ್ತದೆ. ಯಾವ ವಸ್ತುವೇ ಆಗಲಿ ಸೆಕೆಂಡಿಗೆ ೭.೧ ಮೈಲಿಗಳಂತೆ ಭೂಮಿಯತ್ತ ಧಾವಿಸುತ್ತದೆ. ಈ ವೇಗದಲ್ಲಿ ಅದು ಭೂಮಿಯತ್ತ ಬರುವಾಗ ಭಸ್ಮವಾದೀತು! ಗಂಟೆಗೆ ಸುಮಾರು ೨೬,೦೦೦ ಮೈಲಿಗಳಂತೆ ಭೂಮಿ ಆಕರ್ಷಿಸುತ್ತದೆ!! ಎಂದಮೇಲೆ ಭೂಮಿ ಬಿಟ್ಟು ಹೋಗಬೇಕಾದರೆ, ಹಾಗೆ ಹೋಗುವ ವಸ್ತು ('ರಾಕೆಟ್' ಎನ್ನಬಹುದು) ಗಂಟೆಗೆ ೨೬,೦೦೦ ಮೈಲಿಗಳಂತೆ ಅಂತರಿಕ್ಷದೆಡೆಗೆ ಹಾರಬೇಕು. ಈ ವೇಗವನ್ನು ವಿಜ್ಞಾನಿಗಳು ಇಂದಿಗೂ ಸಾಧಿಸಿಲ್ಲ. ಇದನ್ನು ಸಾಧಿಸುವ ಪ್ರಯತ್ನ ಮಾತ್ರ ಅವಿರಳವಾಗಿಯೇ ನಡೆಯುತ್ತಿದೆ.


೧೯೫೭-೫೮ ರಲ್ಲಿ ನಡೆದ ಅಂತರರಾಷ್ಟ್ರೀಯ 'ಭೂ—ಭೌತ' ವರ್ಷದ ಆಚರಣೆಯಲ್ಲಿ ವಾಯುಮಂಡಲದ ಪರಿಶೋಧನೆಯೂ ಸೇರಿದೆ. ವಿಶ್ವಸಂಚಾರದ ಬಗ್ಗೆ ಆಸಕ್ತಿ ತಳೆಗಿರುವ ನಾವು, ಮೊದಲು ಭೂಮಿಯ ಹೊರ ವಲಯದ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕಾಗಿದೆ. ವಾಯುಮಂಡಲದ ಈ ಪರಿಶೋಧನೆಯಲ್ಲಿ ಪ್ರಪಂಚದ ೬೭ ರಾಷ್ಟ್ರಗಳು ಭಾಗವಹಿಸಿವೆ; ವಾಯುಮಂಡಲದ ಕೂಲಂಕಷ ಪರಿಶೀಲನೆಗಾಗಿ ಕೃತಕ ಉಪಗ್ರಹ ಒಂದನ್ನು, 'ರಾಕೆಟ್ಟಿ'ನಲ್ಲಿಟ್ಟು ಅಂತರಿಕ್ಷಕ್ಕೆ ಚಿಮ್ಮಿಸಲಾಯಿತು. ಭೂಮಿ ಬಿಟ್ಟು, ಅಂತರಿಕ್ಷದಲ್ಲಿ ೩೬೦ ಮೈಲಿಗಳ ಎತ್ತರದಲ್ಲಿ ಸ್ವತಂತ್ರ ವಸ್ತು ಒಂದು ಹಾರಾಡಿದುದು ಇದೇ ಮೊದಲು. ಈ ಪವಾಡವನ್ನು ನಡಸಿದ ಮಾನವನ ಶಕ್ತಿ ಪ್ರಶಂಸನೀಯವಾದುದು.



ಊರ್ಧ್ವಮುಖಿಯಾಗಿ ತೆರಳುತ್ತಿರುವ ರಾಕೆಟ್ಟಿನಲ್ಲಿರುವವನಿಗೆ, ಒತ್ತಡದ ಅನುಭವವಾಗಿ, ತೂಕ ಹೆಚ್ಚಿದಂತೆ ಭಾಸವಾಗುತ್ತದೆ.



ಶೂನ್ಯ ಪ್ರದೇಶವನ್ನು ಸೇರಿದ ರಾಕೆಟ್ಟಿನಲ್ಲಿ ವಿಚಿತ್ರ ಅನುಭವಗಳಾಗುತ್ತವೆ. ವಿಚಿತ್ರ ವೇದನೆಗಳಾದರೂ ಆಗಬಹುದು. ರಾಕೆಟ್ಟಿನಲ್ಲಿರುವವರು ವಿಚಿತ್ರ ಗತಿಯಲ್ಲಿ, ತೂಕ ಕಳೆದುಕೊಂಡು ತೇಲುತ್ತಿದ್ದಾರೆ.



ಕೃತಕ ಉಪಗ್ರಹವನ್ನು ವಾಯುಮಂಡಲದ ಹೊರ ವಲಯಕ್ಕೆ (Ionosphere) ಹೊತ್ತುಹೋಗಲು ಸಿದ್ಧವಾಗುತ್ತಿರುವ—ಜೂಪಿಟರ್-ಸಿ, ರಾಕೆಟ್.

ಇದನ್ನು, ಅಕ್ಕಪಕ್ಕದಲ್ಲಿರುವ ಕೆಲಸಗಾರರಿಗೆ ಹೋಲಿಸಿ ನೋಡಿ.

ವಿಶ್ವಸಂಚಾರಕ್ಕಾಗಿ ಮಾನವ ಮಹಾ ಯಂತ್ರಗಳನ್ನು ನಿರ್ಮಿಸಬಹುದು. ಅವನಿಗೆ ಇಂದು ಕೈಗತವಾಗಿರುವ ವಿದ್ಯೆ ಅದನ್ನು ಸಾಧಿಸಿಕೊಟ್ಟೀತು. ಆದರೆ ಅವುಗಳ ನಿರ್ಮಾಣ ಹತ್ತಾರು ವರುಷಗಳನ್ನು ತೆಗೆದುಕೊಳ್ಳುತ್ತದೆ.

ಒಂದೇ ರಾಕೆಟ್, ಕೃತಕ ಉಪಗ್ರಹವನ್ನು ಹೊತ್ತು ವಾಯುಮಂಡಲಕ್ಕೆ ಏರಲಾರದು ; ಆದುದರಿಂದ, ಒಂದರೊಳಗೊಂದರಂತೆ ಮೂರು ನಾಲ್ಕು ರಾಕೆಟ್ಟುಗಳನ್ನು ಜೋಡಿಸಿ ಕೊನೆಯದರಲ್ಲಿ ಉಪಗ್ರಹವನ್ನಿಟ್ಟು ಅಂತರಿಕ್ಷಕ್ಕೆ ಚಿಮ್ಮಿದರು. ೧೯೫೭ರ ಅಕ್ಟೋಬರ್ ೪ನೆಯ ತಾರೀಕು ರಷ್ಯಾ ದೇಶ ಮೊದಲನೆಯ (ಸ್ಪುಟ್ನಿಕ್ ೧) ಉಪಗ್ರಹವನ್ನು ೫೬೦ ಮೈಲಿಗಳ ಎತ್ತರಕ್ಕೆ ಚಿಮ್ಮಿತು !

ಈ ಎತ್ತರಕ್ಕೆ ಮಾನವನೊಬ್ಬನನ್ನು ಚಿಮ್ಮಿದ್ದರೆ, ಬಹುಶಃ ಭೂಮಿಯ ವರ್ತುಳಾಕಾರವನ್ನು ಕಾಣಬಹುದಾಗಿತ್ತೇನೋ ! ಆದರೆ, ಆ ಎತ್ತರದಲ್ಲಿ ಅವನಿಗೆ ಇನ್ನೇನು ಅನುಭವವಾದೀತು ಎಂಬುದನ್ನು ಯಾರೂ ಹೇಳಲಾರರು. ಅದೇ ವರುಷ ಎರಡನೆಯ ಉಪಗ್ರಹ ಒಂದನ್ನು ೧೦೬೨ ಮೈಲಿಗಳ ಎತ್ತರಕ್ಕೆ ಚಿಮ್ಮಿದರು. ೧೯೫೮ ರ ಜನವರಿ ೩೧ ರಂದು, ಅಮೆರಿಕ ದೇಶ ೧೫೮೭ ಮೈಲಿಗಳ ಎತ್ತರಕ್ಕೆ ಮೂರನೆಯ ಉಪಗ್ರಹವನ್ನು ಚಿಮ್ಮಿತು. ಈ ಉಪಗ್ರಹವನ್ನು ಚಿಮ್ಮಲು ಜೂಪಿಟರ್—ಸಿ ಎಂಬ ವಿಶೇಷ ರಾಕೆಟ್ ಒಂದನ್ನು, ಅಮೆರಿಕ ದೇಶ, ಉಪಯೋಗಿಸಿತು. ಮೇಲು ವಾಯುಮಂಡಲದಲ್ಲಿ, ಗಂಟೆಗೆ ೧೮,೦೦೦ ಮೈಲಿಗಳಂತೆ ಸುತ್ತುತ್ತ, ಈ ಉಪಗ್ರಹಗಳು, ಅಲ್ಲಿಯ ಸ್ಥಿತಿಗತಿಗಳ ಅಂಕಿಅಂಶಗಳನ್ನು ಸಂಗ್ರಹಿಸುತ್ತಿವೆ.

ಭೂಮಿಬಿಟ್ಟ ೬ ನಿಮಿಷ ೫೭ ಸೆಕೆಂಡುಗಳಲ್ಲಿ, ಕೃತಕ ಉಪಗ್ರಹ, ವಾಯುಮಂಡಲವನ್ನಡರಿ, ಭೂಮಿಯ ಅತಿ ಆಕರ್ಷಣೆಗೆ ದೂರವಾಗಿ, ಪ್ರದಕ್ಷಿಣೆ ಮಾಡತೊಡಗಿತು. ಇದರ ಪ್ರದಕ್ಷಿಣ ವೇಗ ಗಂಟೆಗೆ ೧೮,೦೦೦ ಮೈಲಿಗಳು. ಈ ಉಪಗ್ರಹವನ್ನು ಹೊತ್ತ ರಾಕೆಟ್ ೬೯ ಅಡಿ ಉದ್ದವಿತ್ತು ; ಅದರ ತೂಕ ೬೫,೦೦೦ ಪೌಂಡು. ಇದರ ಚಲನೆಗಾಗಿ 'ಹೈಡ್ರಜೈನ್' ರಾಸಾಯನಿಕದಿಂದ ತಯಾರಾದ ಹೈಡೈನ್ ದ್ರಾವಕವನ್ನು ಉಪಯೋಗಿಸಲಾಯಿತು. ವಾಯುಮಂಡಲದಲ್ಲಿ ಸಂಚರಿಸುವ ಉಪಗ್ರಹ, ಅದರೊಡನೆ ಸ್ವಲ್ಪ ಕಾಲವಿದ್ದು ಭಸ್ಮವಾದ ನಾಲ್ಕನೆಯ ಘಟ್ಟದ ರಾಕೆಟ್ ಎರಡೂ ಸೇರಿ ೩೦.೮, ಪೌಂಡುಗಳಿದ್ದುವು. ಉಪಗ್ರಹದ ತೂಕ ೧೮.೧೩ ಪೌಂಡು.

ಕೇವಲ ೧೮ ಪೌಂಡುಗಳ ವಸ್ತುವನ್ನು ಭೂಮಿಯಿಂದಾಚೆ ದೂಡಲು, ಇಷ್ಟೊಂದು ಪ್ರಯಾಸವಾದ ಮೇಲೆ ಸರಾಸರಿ ೧೪೦ ಪೌಂಡುಗಳ ತೂಕವುಳ್ಳ ಮನುಷ್ಯನನ್ನೂ ಅವನಿಗೆ ಅಲ್ಲಿರಲು ಬೇಕಾಗುವ ಆಹಾರವನ್ನೂ ದೂಡಲು ವಿಶ್ವ

ಪ್ರಯತ್ನ ಮಾಡಬೇಕಾಗುತ್ತದೆ.—ಆ ವಿಚಿತ್ರ ಪ್ರದೇಶಕ್ಕೆ ತೆರಳಿದ ಮಾನವನಿಗೆ ಆಹಾರ ತೆಗೆದುಕೊಳ್ಳುವುದೇ ಒಂದು ಪ್ರಯಾಸವಾಗಬಹುದು.

ಅಂತರಿಕ್ಷವನ್ನು ಸೇರಿದ ಕೃತಕ ಉಪಗ್ರಹಗಳಿಂದ 'ಹೊರ ವಾಯು ಮಂಡಲದ' ಎಷ್ಟೋ ವಿಷಯಗಳು, ಅವು ಕಳುಹಿಸಿದ ಆಕಾಶವಾಣಿಯಿಂದ ತಿಳಿಯ ಬಂದಿದೆ. 'ಅಯೊನೊಸ್ಫಿಯರ್' ಮಂಡಲದಲ್ಲಿರುವ ಕಾಸ್ಮಿಕ್ ಕಿರಣಗಳು, ಇಲ್ಲಿಗಿಂತಲೂ ಪ್ರಭಾವಯುತವಾದರೂ, ಮಾನವರಿಗೆ ಅವು ಅಪಾಯಕಾರಿಯಲ್ಲ ಎಂಬುದು ತಿಳಿಯಬರುತ್ತದೆ. ಕೆಲವು ಪ್ರಯೋಗಗಳಿಂದ 'ಕ್ಷಿಪಣಿ'ಯ (ಅಥವಾ ಮುಂದೆ ವಿಶ್ವಸಂಚಾರಕ್ಕೆ ತೊಡಗುವ ರಾಕೆಟ್ ಆದರೂ ಆಗಬಹುದು) ಒಳಶಾಖ ವನ್ನು ೫೦° ರಿಂದ ೮೦° ರಲ್ಲೇ ಇಡಬಹುದು, ಎಂದು ನಿರ್ದಿಷ್ಟಗೊಳಿಸಿದ್ದಾರೆ. ಇದರಿಂದ, ವಿಶ್ವಸಂಚಾರದ ಎರಡು ಮುಖ್ಯ ಘಟ್ಟಗಳಲ್ಲಿ ಒದಗಬಹುದಾದ ಅಪಾಯ ದೂರವಾದಂತಾಯಿತು.

ಆಗಾಗ ಕೋಟಿಗಟ್ಟಲೆ ಭೂಮಿಗೆ ಸಮೀಪವಾಗುವ ಅಲುಕಗಳ (Meteoric swarms) ಬಗ್ಗೆ ಹೆಚ್ಚು ವಿಷಯ ಸಂಗ್ರಹಿಸುವ ಪ್ರಯತ್ನ, ಈ ಪ್ರಯೋಗಗಳ ಮತ್ತೊಂದು ಉದ್ದೇಶ. ಮುಂದೆ, ವಿಶ್ವಸಂಚಾರ ನಡಸುವ ವಿಜ್ಞಾನಿ ಮಾನವ ಭೂಮಿ ಬಿಡುವಾಗ ಈ ವಸ್ತು-ರಾಶಿಯನ್ನು ಎದುರಿಸಬೇಕಾಗಬಹುದು. ಭೂಮಿಯ ಸೆಳೆತಕ್ಕೆ ಸಿಕ್ಕು ಇದರೆಡೆಗೆ ಧಾವಿಸುವ ಅಲುಕಗಳು, ಆಕಾಶ-ವಿಮಾನ (Space-ship) ದೊಡನೆ ಘರ್ಷಣೆ ಮಾಡಬಹುದು. ಹಾಗಾದಲ್ಲಿ ವಿಶ್ವಗಾಮಿ ಮಾನವನ ಆಕಾಂಕ್ಷೆಯೆಲ್ಲ ಭಸ್ಮವಾದಂತೆಯೇ ಸರಿ.

ಆದುದರಿಂದ ಅಲುಕಗಳ ರಚನೆ, ವೇಗ, ಅವು ಭೂಮಿಯನ್ನು ಸಮೀಪಿಸುವ ಸಮಯ, ರೀತಿ, ಇವುಗಳ ಬಗ್ಗೆ ಹೆಚ್ಚು ವಿಷಯ ತಿಳಿದುಕೊಳ್ಳಬೇಕಾಗಿದೆ; ಇದರ ಬಗ್ಗೆ ಕೃತಕ ಉಪಗ್ರಹ ಹೆಚ್ಚು ಸುದ್ದಿ ಕೊಡಬಲ್ಲದು.

ಅಣುವಿಗೂ ಸೂಕ್ಷ್ಮವಾದ ಧೂಳು (Cosmic dust) ವಾಯುಮಂಡಲದ ಹೊರವಲಯದಲ್ಲಿ ಪ್ರಸರಿಸಿಕೊಂಡಿದೆ. ಇದು ವಿಶ್ವಗಾಮಿ ಮಾನವನಿಗೆ ವಿಷಪ್ರಾಯ ವಾಗಿದೆ. ಇದು ಬರುವ ವೇಗಕ್ಕೆ ವಿಶ್ವ-ವಿಮಾನ, ಅದರ ಚಾಲಕ, ಎಲ್ಲ ಭಸ್ಮೀಭೂತವಾಗುವ ಸಂಭವವಿದೆ. ಇದರ ಬಗ್ಗೆಯೂ ಹೆಚ್ಚು ವಿಷಯ ತಿಳಿಯಲು ಯಂತ್ರ ಸಾಧನೆಗಳನ್ನು ಹೊತ್ತ ಕೃತಕ ಉಪಗ್ರಹ ನೆರವಾಗುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ, ಸೆಕೆಂಡಿಗೆ ೭.೧ ಮೈಲಿಗಳಂತೆ ವಿಶ್ವ-ವಿಮಾನ ಅಂತರಿಕ್ಷವನ್ನಡರುವಾಗ, ಅದರಲ್ಲಿರುವ ಚಾಲಕನಿಗೆ ಭ್ರಮೆ ಉಂಟುಮಾಡುವ ಅನುಭವಗಳಾಗುತ್ತವೆ. ಭೂಮಿಯ ಸೆಳೆತದಿಂದ ಅವನ ಆಹಾರ, ಆಕಾರ, ಅಸ್ಥಿಪಂಜರ,

ಇವುಗಳನ್ನನುಸರಿಸಿ, ಅವನಿಗೆ ತೂಕವಿರುತ್ತದೆ. ಒಳ್ಳೆಯ ಮೈಕಟ್ಟುಳ್ಳ ಸಾಧಾರಣ ಮನುಷ್ಯ ೧೭೫ ಪೌಂಡು ತೂಗುತ್ತಾನೆ. ವಿಶ್ವ-ವಿಮಾನದ ವೇಗವೂ ಸೇರಿ ಇವನ ತೂಕ ೧೫೦೦ ಪೌಂಡುಗಳಿಗೆ ಏರುತ್ತದೆ!

ಅವನ ದೇಹವೇ ಅವನಿಗೆ ಶಿಲಾಪ್ರಾಯವಾಗುತ್ತದೆ. ಈ ಅತಿ ತೂಕ ತಾಳಲಾರದೆಯೊ ಒತ್ತಡದಿಂದ ಉಸಿರಾಟ ನಿಂತೊ ಅವನು ಸಾಯಬಹುದು.

ಈ ಮಹಾ ಸಮಸ್ಯೆಗಳನ್ನು ಪರಿಹರಿಸಿ, ಮಾನವ ವಿಶ್ವಗಾಮಿಯಾಗಬೇಕಾದರೆ ಇನ್ನೊಂದು ಶತಮಾನವಾದರೂ ಬೇಕಾಗಬಹುದು. ಅವನ ಯತ್ನ ಮಾತ್ರ ಆಶಾಪೂರಿತವಾಗಿಯೇ ಇರಲಿ.

ಐ. ಶ್ರೀ. ಪ್ರಸಾದ್

ಶ್ರೀರಾಮನ ಈ ವರ್ತನೆ ಸಮರ್ಥನೀಯವೆ?

"ವಾಲಿ ಸುಗ್ರೀವರ ಯುದ್ಧ ಯುದ್ಧಕ್ಕಾಗಿ ಪ್ರಖ್ಯಾತವಾಗಿಲ್ಲ. ರಾಮನ ಪಾತ್ರದ ಮೇಲೆ ಆಗಿರುವ ಪರಿಣಾಮಕ್ಕಾಗಿಯೆ ಅದು ಪ್ರಖ್ಯಾತವಾಗಿದೆ. ಆದರ್ಶ ಪುರುಷನಾದ ಶ್ರೀ ರಾಮನ ಆ ವರ್ತನೆ, ನೀತಿಯ ಮತ್ತು ಧರ್ಮದ ಅನೇಕ ಸಮಸ್ಯೆಗಳಿಗೆ ಎಡೆಗೊಡುತ್ತದೆ. . . . ಯಾರೆ ಆಗಲಿ, ಎಷ್ಟೆ ಪ್ರಯತ್ನಿಸಲಿ, ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ ವಾಲ್ಮೀಕಿ ರಾಮಾಯಣದ ಶ್ರೀರಾಮನ ಈ ಸಂದರ್ಭದ ವರ್ತನೆಯನ್ನು ಆದರ್ಶಪ್ರಾಯವೆಂದು ಸಮರ್ಥಿಸಲು ಸಾಧ್ಯವಾಗುವುದಿಲ್ಲ. . . .

ಆದರೆ ಪ್ರತಿಮಾವಿಧಾನದ ದರ್ಶನಧ್ವನಿಯನ್ನು ಆಶ್ರಯಿಸುವ ಪೂರ್ಣದೃಷ್ಟಿಗೆ ಅರ್ಥಸಾಧ್ಯವಾಗುವ ರೀತಿಯೂ ಒಂದಿದೆ ಎಂಬುದನ್ನು ನಾವು ಒಪ್ಪುತ್ತೇವೆ."

—ಶ್ರೀ ಕುವೆಂಪು

(ವಿಭೂತಿ ಪೂಜೆ. ಪು. ೧೩೦-೧೩೧)

೧

ಶ್ರೀರಾಮ ಯಾವಾಗ ಹುಟ್ಟಿದನೋ? ಯಾವಾಗ ಬದುಕಿದನೋ? ತನ್ನ ಬದುಕಿನಲ್ಲಿ ಏನೇನು ಮಾಡಿದನೋ? ಇವೆಲ್ಲ ಮತ್ತು ಇನ್ನಿಂಥ ಎನಿತೋ ಪ್ರಶ್ನೆಗಳಿಗೆ ಚಾರಿತ್ರಿಕ ದೃಷ್ಟಿಯಿಂದ ಸರಿಯಾದ ಉತ್ತರಗಳನ್ನು ಒದಗಿಸುವುದು ಸುಲಭದ ಮಾತಲ್ಲ. ಆದರೆ ರಾಮನಾಮದ ಮಹಿಮೆ ಮಾತ್ರ ಸೂರ್ಯನ ಕಿರಣದಂತೆ, ಪರಿಶುದ್ಧವಾದ ಗಾಳಿಯಂತೆ, ತಿಳಿನೀರಿನಂತೆ ಭಾರತೀಯರ ಜೀವನದಲ್ಲಿ ಬೆರೆತು ಬೇರೂರಿ ಹೋಗಿರುವುದು ಮಾತ್ರ ಸತ್ಯ. ಶ್ರೀರಾಮನ ಪಾದಸ್ಪರ್ಶದಿಂದ ಕಲ್ಲಾಗಿದ್ದ ಅಹಲ್ಯೆ ಹೆಣ್ಣಾಗಿ ಎದ್ದುನಿಂತಳೆಂಬುದು ಚಾರಿತ್ರಿಕವಾಗಿ ಸಟೆಯೋ ದಿಟವೋ! ಆದರೆ ಅಹಲ್ಯೆಯ ಉದ್ಧಾರದ ಕತೆಯಲ್ಲಿ ಶ್ರದ್ಧೆಯಿಟ್ಟು ಬದುಕಿ ಉದ್ಧಾರವಾದ ರಾಮತೀರ್ಥರಂಥವರು ಎನಿತೋ ಜನ ಆಗಿಹೋಗಿರುವುದು ಚಾರಿತ್ರಿಕ ಸತ್ಯ. ಮುಪ್ಪಿನ ಮುದುಕಿ, ಮುಗ್ಧ ಭಕ್ತೆ ಶಬರಜ್ಜಿ ರಾಮಲಕ್ಷ್ಮಣರ ದರ್ಶನದಿಂದ ಸ್ವರ್ಗಾರೋಹಣ ಮಾಡಿದುದು ವಾಸ್ತವವಾಗಿ ನಡೆಯಿತೋ ಇಲ್ಲವೋ! ಆದರೆ, ಶಬರಜ್ಜಿಯ ಮುಕ್ತಿಯ ಕಥೆಯಲ್ಲಿ ಭಕ್ತಿಯಿಟ್ಟು ಮುಕ್ತಿ ಪಡೆದ ಕಬೀರರಂಥ ಮುಕ್ತಾತ್ಮರು ಆಗಿಹೋದುದು ಮಾತ್ರ ಚಾರಿತ್ರಿಕ ಸತ್ಯ! 'ರಾಮ' 'ರಾಮ' ಎಂಬ ನಾಮಾಂಕಿತವನ್ನು ಕಲ್ಲಮೇಲೆ ಬರೆದು ಸಮುದ್ರಕ್ಕೆಸೆದರೆ ಕಲ್ಲು ಮುಳುಗದೆ ತೇಲಿ ಸೇತುವೆಯಾಯಿತಂತೆ! ಹೀಗೆ ರಾಮನಾಮದ ಮಹಿಮೆ ಮಾತಿಗೆ ನಿಲುಕದು; ಬುದ್ಧಿಗೆ ಸಿಲುಕದು.

ಇಂಥ ಅದ್ಭುತ ಮಹಿಮೆಯ ಆ ರಾಮ ಎಂಥ ಪರಿಶುದ್ಧ ಜೀವನವನ್ನು ಜೀವಿಸಿರಬೇಡ? ಎಂಥ ಗುಣಾತಿಶಯಗಳಿಂದ ಮೆರೆದಿರಬೇಡ? ತನ್ನ ಸಚ್ಛೀಲದಿಂದ, ಸಜ್ಜನಿಕೆಯಿಂದ, **ಆದರ್ಶ** ಗುಣಗಳಿಂದ, ಪರಿಶುದ್ಧಾತ್ಮದಿಂದ ರಾಮ, ರಾಮನಾಗಿದ್ದಾನೆ! ರಾಮ ಆದರ್ಶಪುತ್ರ: ಅವನಂತೆ ಪಿತೃವಾಕ್ಯ ಪರಿಪಾಲನೆ ಮಾಡಿದ ಮತ್ತೊಬ್ಬ ಪುತ್ರನಿಲ್ಲ. ರಾಮ ಆದರ್ಶಪತಿ: ಅವನಂತೆ ಕೈ ಹಿಡಿದ ಮಡದಿಯನ್ನು ನಂಬಿ ಏಕಪತ್ನೀವ್ರತವನ್ನು ಆಚರಿಸಿ, ಪ್ರೀತಿಸಿದ ಪತಿ ಮತ್ತೊಬ್ಬನಿಲ್ಲ. ರಾಮ ಆದರ್ಶ ಸೋದರ: ಅವನಂತೆ ತನ್ನ ಅಣ್ಣತಮ್ಮಂದಿರನ್ನು ಪ್ರೀತಿಸಿದ ಸಹೋದರ ಮತ್ತೊಬ್ಬನಿಲ್ಲ. ರಾಮ ಆದರ್ಶಮಿತ್ರ: ಅವನಂತೆ ಗೆಳೆತನಕ್ಕಾಗಿ, ಗೆಳೆಯನ ಹಿತಕ್ಕಾಗಿ ತನ್ನ ನಿಷ್ಕಳಂಕ ಕೀರ್ತಿಯನ್ನೂ ಬಲಿಗೊಟ್ಟ ಮತ್ತೊಬ್ಬ ಮಿತ್ರನಿಲ್ಲ. ಆದರ್ಶ ಮಾನವ ಹೇಗಿರಬೇಕೆಂಬುದನ್ನು ಲೋಕಕ್ಕೆ ತೋರಿಸಿಕೊಡಲೆಂದೇ ಆದಿಕವಿ ವಾಲ್ಮೀಕಿ ಶ್ರೀರಾಮಚಂದ್ರನನ್ನು ಮೂಡಿಸಿರಬೇಕು. ದಶರಥ ರಾಯನ ಅಭಿಪ್ರಾಯದಲ್ಲಿ,[1] ಅವನ ಆಸ್ಥಾನದಲ್ಲಿದ್ದ ಗುರು ವಸಿಷ್ಠನೇ ಮೊದಲಾದ ವಿಪ್ರವರೇಣ್ಯರೂ, ಅವನೀಶರೂ, ಪುರಜನರೂ ಮುಂತಾದವರ ಅಭಿಪ್ರಾಯದಲ್ಲಿ "ಶ್ರೀರಾಮನು ಅಮಾನುಷವಾದ (ದಿವ್ಯವಾದ) ಗುಣಗಳಿಂದ ದೇವೇಂದ್ರನಿಗೆ ಸಮಾನನಾದವನು; ಅಮೋಘವಾದ ಶೌರ್ಯದಿಂದಲೂ, ಅತಿಶಯವಾದ ವಿನಯಾದಿ ಗುಣಗಳಿಂದಲೂ, ಇಕ್ಷ್ವಾಕುವಂಶದ ಅರಸರೆಲ್ಲರಿಗೂ ಅಧಿಕನಾದವನು; ಪ್ರಪಂಚದಲ್ಲಿ ಆತನೇ ಸತ್ಪುರುಷನು; ಸತ್ಯ ಮತ್ತು ಧರ್ಮಗಳಿಗೆ ಪರಾಯಣನಾದವನೂ ಆತನೇ; ಆತನಿಂದಲೇ ಧರ್ಮವೂ ಸಹ ಸಂಪತ್ತಿನಿಂದೊಡಗೂಡಿ ನಿಷ್ಪನ್ನವಾಗಿದೆ; ಆತನು ಪ್ರಜೆಗಳಿಗೆ ಸುಖವನ್ನುಂಟುಮಾಡುವುದರಲ್ಲಿ ಚಂದ್ರನಿಗೆ ಸದೃಶನಾಗಿಯೂ, ಸೈರಣೆಯಲ್ಲಿ ಭೂದೇವಿಗೆ ಸಮಾನನಾಗಿಯೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ಪರಾಕ್ರಮದಲ್ಲಿ ಮಹೇಂದ್ರನಿಗೂ ಸಮಾನನೂ ಆಗಿದ್ದನು. ಇದಲ್ಲದೆ ಶ್ರೀರಾಮಚಂದ್ರನು ಸಾಮಾನ್ಯ, **ವಿಶೇಷ ಧರ್ಮಗಳನ್ನು** ಚನ್ನಾಗಿ ಬಲ್ಲವನು. ಅದ್ಭುತವಾದ ಪ್ರಜ್ಞೆವುಳ್ಳವನು . . . **ಧರ್ಮಾಧರ್ಮಗಳನ್ನು** ಚೆನ್ನಾಗಿ ಅರಿತು ವಿಪ್ರವರೇಣ್ಯರಿಂದ ಶಿಕ್ಷಣ ಪಡೆದು **ಧರ್ಮಾರ್ಥಗಳನ್ನು** ಚೆನ್ನಾಗಿ ತಿಳಿದವನು.[2] . . ."

---

[1] ಶ್ರೀಮದ್ವಾಲ್ಮೀಕಿ ರಾಮಾಯಣ, ಅಯೋಧ್ಯಾಕಾಂಡ, ಪೂರ್ವಾರ್ಧ: ಕೈ.ವಾ. ಪಟ್ಟಾಭಿ ರಾಮಾಶಾಸ್ತ್ರಿಗಳ ಅನುವಾದ: ಶ್ರೀ ಮೋ. ಸುಬ್ರಮಣ್ಯಶಾಸ್ತ್ರಿಗಳ ಟಿಪ್ಪಣಿ. ಪು. ೧೫.

ಶ್ರೀರಾಮನ ಗುಣಾತಿಶಯಗಳನ್ನು ವಾಲ್ಮೀಕಿ ರಾಮಾಯಣದ ಅ.ಕಾಂ. ಪ್ರಥಮ ಸರ್ಗ. ೬ ರಿಂದ ೪೪ ನೆಯ ಶ್ಲೋಕಗಳಲ್ಲಿ ಬಣ್ಣಿಸಿದೆ.

[2] ಅದನ್ನೇ ನೋಡಿ. ಪುಟ ೨೭ ರಿಂದ ೩೨. ಅಯೋಧ್ಯಾಕಾಂಡ, ದ್ವಿತೀಯ ಸರ್ಗ ಶ್ಲೋ. ೨೭ ರಿಂದ ೪೪ ರ ವರೆಗೆ.

ಹೀಗೆ ಶ್ರೀರಾಮಚಂದ್ರನ ಗುಣಾತಿಶಯಗಳನ್ನು ಬಣ್ಣಿಸಿದವರು ದಶರಥ ರಾಯನ ಆಸ್ಥಾನದಲ್ಲೋ, ಅರಮನೆಯಲ್ಲೋ ಇದ್ದು ಹಂಗಿಗೂ ಹೆದರಿಕೆಗೂ ಒಳಗಾಗಿದ್ದವರೆಂದೂ, ದೊರೆಯ ಪ್ರೀತ್ಯರ್ಥವಾಗಿ ರಾಜಕುಮಾರನನ್ನು ಹೊಗಳು ವುದು ಸಂಪ್ರದಾಯವೆಂದೂ ನಾವು ಅನುಮಾನಿಸಬಹುದು. ಆದರೆ, ಕಿಷ್ಕಿಂಧೆಯ ಪ್ರಭು ವಾಲಿಯೂ ಕೂಡ ಶ್ರೀರಾಮನ ವಿಷಯವಾಗಿ ಹೀಗೆ ಹೇಳುತ್ತಾನೆ: "ದಶರಥ ರಾಜಕುಮಾರನಾದ ಆತನು ಸಕಲ ಧರ್ಮಗಳನ್ನೂ ತಿಳಿದವನು. ಇಷ್ಟೇ ಅಲ್ಲದೆ ಮಾಡಬೇಕಾದ ಕೆಲಸವಾವುದೋ, ಮಾಡಬಾರದ ಕೆಲಸವಾವುದೋ ಅದನ್ನು ಚೆನ್ನಾಗಿ ತಿಳಿದವನು. ಅಂತಹ ಮಹಾನುಭಾವನು ಪಾಪವನ್ನು ಮಾಡುತ್ತಾನೆಯೇ? ಎಂದಿಗೂ ಮಾಡಲಾರ!"[3] ಯಾರು, ಶ್ರೀರಾಮನ ಬಾಣದಿಂದ ಮುಂದೆ ಕೆಲವೇ ಘಳಿಗೆಯಲ್ಲಿ ಮೃತ್ಯುವಶನಾದನೋ ಅಂಥ ವಾಲಿಯೇ ಶ್ರೀರಾಮನ ಗುಣವನ್ನು ಮುಕ್ತ ಕಂಠದಿಂದ ಹಾಡಿದ್ದಾನೆ. ಎಂದಮೇಲೆ ಶ್ರೀರಾಮಚಂದ್ರ ಎಲ್ಲ ವಿಧದಲ್ಲೂ, ವಿಚಾರದಲ್ಲೂ ಆದರ್ಶನೆಂದು ಭಾವಿಸುವುದರಲ್ಲಿ ತಪ್ಪೇನಿದೆ?

ಆದರೆ, ಇಂಥ ಸಕಲಗುಣ ಸಂಪನ್ನ, ಸದ್ಗುಣಗಳ ಗಣಿ, ಧರ್ಮಾಧರ್ಮಗಳನ್ನು ಬಲ್ಲಂಥ ಪ್ರಾಜ್ಞ, ಆದರ್ಶಗುಣಗಳ ತವನಿಧಿ ವಾಲಿಸಂಹಾರದ ಸಂದರ್ಭದಲ್ಲಿ ನಡೆದುಕೊಂಡಂಥ ರೀತಿಯನ್ನು ನೋಡಿದರೆ 'ಧರ್ಮ'ದಲ್ಲಿದ್ದ ನಮ್ಮ ಶ್ರದ್ಧೆಯೇ ಕುಸಿದುಹೋಗುವಂತೆ ತೋರುತ್ತದೆ.

ವಾಲಿ ಸುಗ್ರೀವರ ಕಾಳಗ ಎಲ್ಲರಿಗೂ ತಿಳಿದ ಕಥೆಯೇ. "ಸೀತಾಪಹರಣದ ಮಹಾದುಃಖದಿಂದ ಉನ್ಮತ್ತಪ್ರಾಯನಾಗಿದ್ದ ಶ್ರೀ ರಾಮಚಂದ್ರನು . . . ಋಷ್ಯ ಮೂಕದ ಬಳಿಯ ಪಂಪಾಸರೋವರದೆಡೆಗೆ ಬಂದಿದ್ದನು. ತನ್ನಂತೆಯೆ ಭಾರ್ಯಾ ಪಹರಣ ಕಾರಣದಿಂದಲೆ ಸಮದುಃಖಿಯಾಗಿದ್ದ ಸುಗ್ರೀವನ ಸಖ್ಯ ಆಂಜನೇಯನ ಮೂಲಕ ದೊರೆತೊಡನೆಯೆ ಅವನಿಗೊದಗಿದ ದುಃಖದ ಕತೆಯನ್ನು ಏಕಪಕ್ಷೀಯ ವಾಗಿ ಕೇಳಿ

'ವಾಲಿನಂ ತಂ ವಧಿಷ್ಯಾಮಿ ತವ ಭಾರ್ಯಾಪಹಾರಿಣಮ್'

ಎಂದು ಆಶ್ವಾಸನೆ ಕೊಟ್ಟಬಿಡುತ್ತಾನೆ . . . . ಸುಗ್ರೀವ ರಾಮರ ಸಖ್ಯವು ಅಗ್ನಿ ಸಾಕ್ಷಿಕವಾಗಿ ಪ್ರತಿಜ್ಞಾ ಮುದ್ರಿತವಾದ ತರುವಾಯ ಮಂದಿನ ಕೆಲಸಕ್ಕಾಗಿ ಎಲ್ಲರೂ ಕಿಷ್ಕಿಂಧೆಗೆ ಹೊರಡುತ್ತಾರೆ. ದಟ್ಟಡವಿಯಲ್ಲಿ ಮರಗಳ ಮರೆಯಲ್ಲಿ ಅಡಗಿ

---

[3] ಶ್ರೀಮದ್ವಾಲ್ಮೀಕಿ ರಾಮಾಯಣ, ಕಿಷ್ಕಿಂಧಾಕಾಂಡ, ಟೀ.: ಮೇಲಿನವರೇ ಪು. ೧೮೪ ಕಿಷ್ಕಿಂಧಾಕಾಂಡ, ಷೋಡಶ ಸರ್ಗ ಶ್ಲೋ. ೧ ರಿಂದ ೫ ರ ವರೆಗೆ.

ಕೊಳ್ಳುತ್ತಾರೆ." ಸುಗ್ರೀವ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ವಾಲಿ ತಮ್ಮನ ಕೇಕೆಯನ್ನು ಕೇಳಿ ಯುದ್ಧಕ್ಕೆ ಬರುತ್ತಾನೆ. ಕಾಳಗ ಭಯಂಕರವಾಗಿ ನಡೆಯುತ್ತದೆ. ಸುಗ್ರೀವ ಅಣ್ಣನ ಕೈಯಿಂದ ಜರ್ಝರಿತನಾಗಿ ಹೋಗುತ್ತಾನೆ. ರಾಮ ಮೋಸಮಾಡಿದನೆಂದು ಓಡಿಹೋಗಿ ಮತಂಗ ಮಹಾವನದಲ್ಲಿ ರಕ್ಷೆಪಡೆಯು ತ್ತಾನೆ. ವಾಲಿ ಕಿಷ್ಕಿಂಧೆಗೆ ಹಿಂದಿರುಗುತ್ತಾನೆ. ಆಮೇಲೆ ರಾಮನು ಮತಂಗವನಕ್ಕೆ ಹೋಗಿ ಸುಗ್ರೀವನನ್ನು ಕಂಡು ಕದ್ದಡಗಿದ ತಾನು ಬಾಣಪ್ರಯೋಗ ಮಾಡದೆ ಇದ್ದುದಕ್ಕೆ ಕಾರಣವನ್ನು ಹೇಳಿ "ಮತ್ತೆ ಯುದ್ಧಮಾಡು; ಶಂಕಿಸಬೇಡ ಎಂದು ಭರವಸೆಕೊಡುತ್ತಾನೆ. . . . . ಮತ್ತೆ ಎಲ್ಲರೂ ಕಿಷ್ಕಿಂಧೆಯ ಬಳಿಗೆ ಬರುತ್ತಾರೆ. ಮುನ್ನಿನಂತೆಯೆ ರಾಮಾದಿಗಳು ಅಡಗಿ ನಿಲ್ಲುತ್ತಾರೆ. . . ಅಣ್ಣ ತಮ್ಮಂದಿರಿಗೆ ಎರಡ ನೆಯ ಸಾರಿ ಕೊನೆಯದಾಗಿ ದ್ವಂದ್ವಯುದ್ಧ ಪ್ರಾರಂಭವಾಗುತ್ತದೆ. . . . ವಾಲಿಯ ಪೆಟ್ಟಿಗೆ ಸುಗ್ರೀವನು ನೆತ್ತರುಕಾರಿ ಝರಿ ಹರಿಯುವ ಕೆಮ್ಮಣ್ಣ ಬೆಟ್ಟದಂತೆ ತೋರು ತ್ತಾನೆ . . . . ಸುಗ್ರೀವನು ರಾಮನು ಅಡಗಿನಿಂತಿದ್ದ ಅರಣ್ಯದ ದಿಕ್ಕಿಗೆ ಪದೇ ಪದೇ ನೋಡತೊಡಗುತ್ತಾನೆ . . . . ಅಗೋ ಆ ಮರದ ಸಂಧಿಯಲ್ಲಿ ಹೆದೆಯೇರಿ ಸರಳುಹೂಡಿದ ಬಿಲ್ಲನ್ನು ಸೆಳೆದು ಹಿಡಿದ ಭಯಂಕರ ಬಾಹುಮುಷ್ಟಿ . . . ರಾಘ ವನ ಮಹಾಬಾಣ ವಾಲಿಯ ವಕ್ಷದಲ್ಲಿ ನಟ್ಟಿತು! ವಾಲಿ ಉರುಳಿದನು."[4]

ಮಹಾ ದಿಗ್ವಿಜಯವನ್ನು ಸಾಧಿಸಿದ ವೀರಾಗ್ರಣಿಯಂತೆ ರಾಮಲಕ್ಷ್ಮಣರು ವಾಲಿಯು ಬಿದ್ದಿದ್ದ ಸ್ಥಳಕ್ಕೆ ತಾವು ಅವಿತುಕೊಂಡಿದ್ದ ಸ್ಥಳದಿಂದ ಬಂದರು. 'ತನ್ನಂ ತಹ ವೀರಾಧಿವೀರನನ್ನು ಹೊಡೆದ ಮಹಾ ಪುರುಷನಾರೆಂದು ಬಹುಮಾನ ಪುರಸ್ಸರ ವಾಗಿ ವಾಲಿ ಸುತ್ತಮುತ್ತಲೂ ನೋಡಿದನು . . . . ಆಗ ಶ್ರೀರಾಮನನ್ನು ನೋಡಿ ವಿನಯದಿಂದ, **ಧರ್ಮ**ಯುಕ್ತವಾದುದೂ, ಬಹಳ ಕಠಿಣವಾದುದೂ ಆದ ಮಾತು ಗಳನ್ನು ಆಡಿದನು. ". . . ಬೇರೊಬ್ಬನೊಡನೆ ಯುದ್ಧ ಮಾಡುತ್ತಿದ್ದ ನನ್ನನ್ನು ಕೊಂದು ಯಾವ ದೊಡ್ಡಸ್ತಿಕೆಯನ್ನು ಪಡೆದೆ? . . . . ನೀನು ಸತ್ಕುಲಪ್ರಸೂತ ನಾದುದರಿಂದ ನಿರಪರಾಧಿಗಳನ್ನು ದಂಡಿಸಲಾರೆಯೆಂದು ತಿಳಿದು, ನನ್ನ ಭಾರ್ಯೆ ಯಾದ ತಾರೆಯು ಎಷ್ಟು ಹೇಳಿದರೂ ಕೇಳದೆ ಸುಗ್ರೀವನೊಡನೆ ಯುದ್ಧಮಾಡಲು ಬಂದೆನು. . . . ಈಗ ನಿನ್ನನ್ನು ನೋಡಿದರೆ ನನ್ನ ಮನಸ್ಸಿಗೆ ವಿಪರೀತವಾಗಿ ತೋರು ತ್ತಿದೆ. ಸಮಸ್ತ ಸದ್ಗುಣಗಳನ್ನು ಹೊಂದಿದವನು ರಾಮನೆಂದು ಇದುವರೆಗೂ ಕೇಳಿದ್ದೆನೇ ಹೊರತು, ಇಂತಹ ನಿರ್ವಾಣಿಯೆಂದು ತಿಳಿದಿರಲಿಲ್ಲ. ಈಗಲೀಗ ನಿನ್ನ

---

[4] ಈ ಭಾಗವನ್ನು ಶ್ರೀ ಕುವೆಂಪು ಅವರ "ಪ್ರಖ್ಯಾತ ಪೌರಾಣಿಕ ಯುದ್ಧಗಳು" ಎಂಬ ಪ್ರಬಂಧ (ವಿಭೂತಿಪೂಜೆ, ೧೨೭ ರಿಂದ ೧೩೦ ರ ವರೆಗೆ)ದಿಂದ ಸಂಗ್ರಹಿಸಲಾಗಿದೆ.

ಸ್ವಭಾವವು ವ್ಯಕ್ತವಾಯಿತು. ನೀನು ಈ ರೀತಿ ಅಧರ್ಮಾಚರಣೆಯಿಂದ ಮತಿಗೆಟ್ಟವನೆಂದೂ, ಲೋಕವನ್ನು ವಂಚಿಸಲು ಡಾಂಭಿಕಕ್ಕಾಗಿ ಧರ್ಮಚಿಹ್ನೆಯನ್ನು ಮಾತ್ರ ತಾಳಿರುವೆಯೆಂದೂ ನಾನು ತಿಳಿದಿರಲಿಲ್ಲ. ಅಲ್ಲದೆ ಹುಲ್ಲು ಹೊದಿಸಿರುವ ಹಾಳು ಭಾವಿಯಂತೆ, ಒಳಗೊಳಗೇ ಪಾಪಕೃತ್ಯಗಳುಳ್ಳವನಾಗಿ, ಮೇಲೆ ಮಾತ್ರ ಧರ್ಮಧ್ವಜವನ್ನೆತ್ತಿ ಹಿಡಿದಿರುವ ಮಹಾ ಪುರುಷನಂತೆ ತೋರುತ್ತಿರುವೆಯೆಂದು ನಾನರಿತಿರಲಿಲ್ಲ. ನೀನು ನೋಡುವುದಕ್ಕೆ ಮಾತ್ರ ಸತ್ಪುರುಷರ ವೇಷವನ್ನು ಧರಿಸಿ, ಪಾಪಕೃತ್ಯಗಳನ್ನು ಧರ್ಮದ ನೆಪದಿಂದ ಮಾಡುತ್ತ, "ಬೂದಿ ಮುಚ್ಚಿದ ಬೆಂಕಿಯಂತೆ" ಸಂಚರಿಸಿ "ಧರ್ಮದಿಂದಲೇ ನಡೆಯುತ್ತೇನೆಂ"ದು ಹೇಳಿ ಕಪಟ ವ್ಯಾಪಾರ ನಿರತನಾಗಿಯೂ, ಕುಟಿಲ ಬುದ್ಧಿಯುಳ್ಳವನಾಗಿಯೂ ಇರುವೆಯೆಂದು ನಾನು ತಿಳಿಯದೆ ಹೋದೆನು. ನಾನು ನಿನ್ನ ದೇಶದಲ್ಲಿಯಾಗಲೀ, ನಿನ್ನ ಪಟ್ಟಣದಲ್ಲಿಯಾಗಲೀ ಯಾವ ವಿಧವಾದ ಅಪಕಾರವನ್ನು ಮಾಡಿರುವುದಿಲ್ಲ, ನಿನ್ನನ್ನು ಯಾವ ವಿಧದಲ್ಲಿಯೂ ಎಲ್ಲಿಯೂ ಅಸಮಾಧಾನಗೊಳಿಸಿದವನಲ್ಲ. ಹೀಗಿರಲು ನೀನು ಯಾವ ಕಾರಣದಿಂದ ಯಾವ ಪಾಪವನ್ನೂ ಮಾಡದ ನನ್ನನ್ನು ಕೊಂದೆಯೋ ತಿಳಿಯದಾಗಿದೆ, . . . ಯಾವ ನಿಮಿತ್ತವಾಗಿ ಪರಾಙ್ಮುಖ ವಧೆಯೆಂಬ ಈ ಪಾಪಕಾರ್ಯವನ್ನು ಮಾಡಿದೆ? . . . ಸಾಮ, ದಾನ, ತಾಳ್ಮೆ, ಧರ್ಮ, ಸತ್ಯ, ಧೈರ್ಯ, ಪರಾಕ್ರಮ, ಅಪರಾಧಿಗಳನ್ನು ಉಚಿತವಾಗಿ ದಂಡಿಸುವುದು, ಎಂಬಿವು ರಾಜಗುಣಗಳು. ಇಂತಹ ನೀನು ನಿಷ್ಕಾರಣವಾಗಿ ನನ್ನನ್ನು ಕೊಲ್ಲಲು ಕಾರಣವೇನೋ ತಿಳಿಯದು. ಭೂಮಿ, ಭಂಗಾರ, ಬೆಳ್ಳಿ ಎಂಬಿವೇ ಯುದ್ಧವನ್ನು ಮಾಡಲು ಕಾರಣಗಳು. ಅಂತಹವು ನಮ್ಮಲ್ಲಿ ಯಾವುದೂ ಇರುವುದಿಲ್ಲ. ಎಂದಮೇಲೆ ನನ್ನನ್ನೇಕೆ ವಧಿಸಿದೆ? ನಿನಗೆ ಧರ್ಮಮಾರ್ಗದಲ್ಲಿ ನಡೆಯಬೇಕೆಂಬ ಶ್ರದ್ಧೆಯಿಲ್ಲ; ನ್ಯಾಯವಾಗಿ ದ್ರವ್ಯವನ್ನಾರ್ಜಿಸುವುದರಲ್ಲಿ ಬುದ್ಧಿಯೂ ಇಲ್ಲ. . .ಧರ್ಮದಿಂದ ಸಂಚರಿಸುವವರೂ ನಿನ್ನಂತಹ ಮಹಾನುಭಾವರೂ ನಮ್ಮ ಚರ್ಮವನ್ನು ಮುಟ್ಟುವುದಿಲ್ಲ. ನಮ್ಮ ಅಸ್ಥಿಗಳನ್ನು ಆನೆಯ ದಂತದಂತೆ ಯಾವ ಕೆಲಸಕ್ಕೂ ಉಪಯೋಗಿಸುವುದಿಲ್ಲ. ನಮ್ಮ ಮಾಂಸವನ್ನು ತಿನ್ನುವುದಿಲ್ಲ. . . ಹೀಗಿರಲು ನೀನು ನನ್ನನ್ನೇಕೆ ವಧಿಸಿದೆ? ಅಲ್ಲದೆ ನಾನು ಗೆಲ್ಲಲಸಾಧ್ಯನೆಂದರಿತು ನೀನು ನನ್ನ ಕಣ್ಣಿಗೆ ಬೀಳದೆ ಮರೆಯಲ್ಲೇ ಅವಿತುಕೊಂಡಿದ್ದು, ಮದ್ಯವನ್ನು ಕುಡಿದು ಮೈಮರೆತು ಮಲಗಿದ ಪುರುಷನನ್ನು ಕೆಟ್ಟ ಹಾವು ಕಚ್ಚಿ ಕೊಂದಂತೆ, ನನ್ನನ್ನು ಕೊಂದೆ! . . . ಈ ರೀತಿ ಮರೆಯಲ್ಲಿ ನಿಂತು ನಿರಪರಾಧಿಯಾದ ನನ್ನನ್ನು ಕೊಂದುದು ನಿನಗೆ ಯುಕ್ತವೆಂದು ತೋರುವುದೆ? ತಕ್ಕ ಸಮಾಧಾನವನ್ನು ಚೆನ್ನಾಗಿ ಯೋಚಿಸಿ ಹೇಳು."[5]

[5] ಶ್ರೀಮದ್ವಾಲ್ಮೀಕಿ ರಾಮಾಯಣ, ಕಿಷ್ಕಿಂಧಾಕಾಂಡ, ಹದಿನೇಳನೆಯ ಸರ್ಗ.

ಮರಣೋನ್ಮುಖನಾಗಿ ಬಿದ್ದಿದ್ದ ಮಹಾಪರಾಕ್ರಮಿ ವಾಲಿ, ರಾಮನ ವಿರುದ್ಧ ವಾಗಿ ಮಾಡಿದ ಈ ಆರೋಪಗಳು ಅಕ್ಷರಶಃ 'ಸತ್ಯ'ವಾದುವೆಂದು ನಿಷ್ಪಕ್ಷಪಾತಿ ಯಾದ ಯಾವ ಸಾಮಾನ್ಯನಿಗಾದರೂ ಮನವರಿಕೆಯಾಗಲೇ ಬೇಕು. ರಾಮನಿಗೂ ವಾಲಿಗೂ ಯಾವ ಬಗೆಯ ವೈರವೂ ವೈಷಮ್ಯವೂ ಇರಲಿಲ್ಲ. ಆಗಿನ ಕಾಲದಲ್ಲಿ ಪ್ರಚಲಿತವಾಗಿದ್ದ ನೀತಿ, ಧರ್ಮಸೂತ್ರ, ಸಾಮಾಜಿಕ ನಿಯಮಗಳ ಪ್ರಕಾರ ವಾಲಿ ಯಾದರೂ ಅನೀತಿಯನ್ನೂ, ಅಧರ್ಮವನ್ನೂ, ನಿಯಮೋಲ್ಲಂಘನೆಯನ್ನೂ ಮಾಡಿ ದವನೆಂದು ತೋರಿಬರುವುದಿಲ್ಲ. ಅವನು ದಂಡನೆಗೆ ಎಷ್ಟು ಮಾತ್ರವೂ ಅರ್ಹನಲ್ಲ. ಮೇಲಾಗಿ, ಇವೆಲ್ಲವುಗಳಿಗಿಂತ ಅತ್ಯಂತ ಗಂಭೀರವಾದ, ಶ್ರೀರಾಮಚಂದ್ರನ ಧೀರೋದಾತ್ತ ಗುಣಕ್ಕೇ ಕಳಂಕವನ್ನುಂಟುಮಾಡುವಂಥ ಮರೆಯಲ್ಲಿ ಅವಿತುಕೊಂಡು ಬಾಣಪ್ರಯೋಗ ಮಾಡಿದ ಅಕ್ಷಮ್ಯ ಅಪರಾಧ. ಈ ಆರೋಪಗಳು ಎಷ್ಟು ಗಂಭೀರವೋ ಅಷ್ಟೇ 'ಸತ್ಯ'ವಾಗಿಯೂ ತೋರುತ್ತವೆ. ಶ್ರೀರಾಮನಿಗೆ ಧರ್ಮಭೀತಿ, ಲೋಕಾಭಿಪ್ರಾಯದ ಅಂಜಿಕೆ, ಆತ್ಮಪೌರುಷ, ಕೊನೆಗೆ ತನ್ನ ಮನಸ್ಸಿಗೇ ಅಂಜಿ ನಡೆಯುವ ಗುಣ ಯಾವುದಾದರೂ ಇದ್ದಿದ್ದರೆ, ವಾಲಿಯ ಮುಂದೆ ನಿಂತು ಮುಖ ವನ್ನೂ ತೋರಿಸುತ್ತಿರಲಿಲ್ಲ; ಉತ್ತರ ಕೊಡುವ ಗೋಜಿಗೂ ಹೋಗುತ್ತಿರಲಿಲ್ಲ.

ಆದರೂ ವಾಲ್ಮೀಕಿ ರಾಮಾಯಣದ ಶ್ರೀರಾಮಚಂದ್ರ, ಈಗಿನ ಕಾಲದ ನ್ಯಾಯ, ನೀತಿ, ಶಾಸ್ತ್ರಗಳ ದೃಷ್ಟಿಯಿಂದ ನೋಡಿದರೆ, ಆಶ್ಚರ್ಯದಿಂದ ಬೆರಳು ಕಚ್ಚುವಂಥ ರೀತಿಯಲ್ಲಿ ಉತ್ತರ ಕೊಡುತ್ತಾನೆ. ಪಾಪರಹಿತನೂ, ಪರರೊಡನೆ ಯುದ್ಧ ಮಾಡುತ್ತಿದ್ದವನೂ ರಾಮನೊಡನೆ ಯಾವ ವೈರವೂ ಇಲ್ಲದವನಾದ ತನ್ನನ್ನು ವಧಿಸಿದುದು ಅಧರ್ಮವೆಂದು ಆರೋಪಿಸಿದ ವಾಲಿಯ ಆರೋಪಕ್ಕೆ ವಾಲ್ಮೀಕಿ ಕವಿಯ ಶ್ರೀರಾಮ ಕೊಡುವ ಉತ್ತರ ಇದು: "ನೀನು, ಬಹುಕಾಲದಿಂದಲೂ ನಡೆದು ಬಂದಿರುವ ಧರ್ಮವನ್ನು ತೊರೆದು, ಅಧರ್ಮದಲ್ಲಿ ಆಸಕ್ತಿ ಉಳ್ಳವನಾಗಿ ನಿನ್ನ ತಮ್ಮನಾದ ಸುಗ್ರೀವನು ಬದುಕಿರುವಾಗಲೇ, ಆತನ ಭಾರ್ಯೆಯಾದ ರುಮೆಯಲ್ಲಿ ರಮಿಸುತ್ತಿರುವೆ...ಸುಗ್ರೀವನ ಭಾರ್ಯೆಯನ್ನು ಅಪಹರಿಸಿರುವೆಯಾದುದರಿಂದ ನಾನು ನಿನ್ನನ್ನು ವಧಿಸಿದ್ದೇನೆ. ಇಂತಹ ಅಪರಾಧಕ್ಕೆ ಇದು ತಕ್ಕ ಶಿಕ್ಷೆಯಾಗಿರು ವುದು."[6] ಈ ಉತ್ತರವನ್ನು ಕೊಡುವಾಗ, ವಾಲಿಯು ರುಮೆಯೊಡನೆ ರಮಿಸಿದ್ದನೆಂಬ ಮಾತು ಸತ್ಯವೆಂಬ ನಿಲುಮೆಯಿಂದ ಮುಂದುವರಿಯುತ್ತಾನೆ. ರುಮೆಯಲ್ಲಿ ವಾಲಿ ರಮಿಸಿದ್ದನೇ ಇಲ್ಲವೇ ಎಂಬುದನ್ನು ದೃಢಪಡಿಸಿಕೊಳ್ಳಲು, ಸುಗ್ರೀವನ ಏಕಪಕ್ಷೀಯ

[6] ಶ್ರೀಮದ್ವಾಲ್ಮೀಕಿ ರಾಮಾಯಣ, ಕಿಷ್ಕಿಂಧಾಕಾಂಡ, ಹದಿನೆಂಟನೆಯ ಸರ್ಗ. ಶ್ಲೋಕಗಳು ೧೬ ರಿಂದ ೨೧ ರ ವರೆಗೆ.

ಹೇಳಿಕೆಯ ವಿನಹ ಮತ್ತಾವ ವಿಚಾರಣೆಯನ್ನೂ ಮಾಡುವುದಿಲ್ಲ. ಒಂದುವೇಳೆ ವಾಲಿಯು ಸ್ವೇಚ್ಛಾಚಾರಿಯಾಗಿರದೆ ಇದ್ದರೆ? ಈ ಪ್ರಶ್ನೆ ಶ್ರೀರಾಮನ ಮನಸ್ಸಿಗೆ ಬರಲೇಯಿಲ್ಲವೆಂದು ತೋರುತ್ತದೆ. ಪ್ರಾಜ್ಞರಾದವರು, ಪ್ರತ್ಯಕ್ಷ ಕಂಡರೂ ಪರಾಂಬರಿಸಿ ನೋಡಬೇಕೆಂಬ ಸಾಮಾನ್ಯ ನೀತಿಯನ್ನೂ ಅನುಸರಿಸದಿರುವುದು ಶ್ರೀರಾಮನ ವಿವೇಚನಾ ಬುದ್ಧಿಯ ಬಗ್ಗೆ ಸಂಶಯವನ್ನು ಹುಟ್ಟಿಸುತ್ತದೆ.

ಒಂದುವೇಳೆ, ವಾಲಿ, ರುಮೆಯನ್ನು ಇಟ್ಟುಕೊಂಡಿದ್ದನೆಂದೇ ವಾದಕ್ಕಾಗಿ ಒಪ್ಪಿಕೊಂಡರೂ, ಅವನನ್ನು ದಂಡಿಸಲು ರಾಮನಿಗೇನು ಅಧಿಕಾರ? ವಾಲಿಯ ರಾಜ್ಯದಲ್ಲಿ ಕಿಷ್ಕಿಂಧೆಯ ಕಾನೂನು ಜಾರಿಯಲ್ಲಿರಬೇಕೇ ಹೊರತು, ಕೋಸಲದ ಕಾನೂನಿಂದ ಅವನನ್ನು ದಂಡಿಸುವುದು ರಾಮನಿಗೆ ಉಚಿತವೇ? ಈ ಪ್ರಶ್ನೆಗಳಿಗೆ ಶ್ರೀರಾಮ ಕೊಡುವ ಉತ್ತರ ಇದು: "ಈ ಭೂಮಿಯೆಲ್ಲವೂ ಇಕ್ಷ್ವಾಕುವಂಶಕ್ಕೆ ಸೇರಿದ ರಾಜರದಾಗಿರುತ್ತದೆ. ಈ ಭೂಮಂಡಲದ ಮೃಗ, ಪಕ್ಷಿ, ಮನುಷ್ಯರನ್ನು ನಿಗ್ರಹಿಸಲು ಅನುಗ್ರಹಿಸಲು ಅವರೇ ಅಧಿಕಾರಿಗಳು. . . . ರಾಜೋತ್ತಮನಾದ ಆ ಭರತನು ಈ ಭೂಮಂಡಲವೆಲ್ಲವನ್ನೂ ಪರಿಪಾಲಿಸುತ್ತಿರಲು ಯಾವನು ತಾನೇ ಧರ್ಮವನ್ನು ಅತಿಕ್ರಮಿಸಿ ನಡೆದಾನು. ಆ ಮಹನೀಯನ ಆಜ್ಞೆಯನ್ನು ಪಡೆದು ಧರ್ಮದಿಂದ ಸಂಚರಿಸುತ್ತ ಧರ್ಮಾಭಿವೃದ್ಧಿಯನ್ನು ಕೋರಿ ಭೂಮಿಯಲ್ಲೆಲ್ಲ ಸಂಚರಿಸುತ್ತಿದ್ದೇವೆ. . . . ನಿನ್ನ ಹಾಗೆ ಮರ್ಯಾದೆ ಮೀರಿ ನಡೆಯುವವರನ್ನು ಶಿಕ್ಷಿಸುವ ಕಾರ್ಯದಲ್ಲಿ ಬದ್ಧಕಂಕಣರಾಗಿದ್ದೇವೆ. . . . ಅತ್ತಲಾಗಿ ಭರತನ ಆಜ್ಞೆ, ಇತ್ತಲಾಗಿ ಧರ್ಮ. ಆದುದರಿಂದ ದೋಷಿಯಾದ ನಿನ್ನನ್ನು ವಧಿಸಿದ್ದೇನೆ"[7] ಎಂದು ಹೇಳುತ್ತಾನೆ.

ಇಕ್ಷ್ವಾಕು ವಂಶದ ಅರಸರು ಈ ಭೂಮಿಯನ್ನೆಲ್ಲ ಯಾವಾಗ ತಮ್ಮ ಚಕ್ರಾಧಿಪತ್ಯದಲ್ಲಿ ತಂದುಕೊಂಡಿದ್ದರೋ ಆ ರಾಮನಿಗೇ ಗೊತ್ತು. ಕೋಸಲದೇಶಕ್ಕೆ ಮಾತ್ರ ದಶರಥ ಅರಸನಾಗಿದ್ದ ಎಂದು ಕಾವ್ಯದ ಆದಿಯಲ್ಲೇ ಸ್ಪಷ್ಟವಾಗಿದೆ. ಯಾವುದೋ ಒಂದು ಭಾವನಾ ಚಕ್ರಾಧಿಪತ್ಯ (Notional Supremacy) ಶ್ರೀ ರಾಮನ ವಂಶಜರಿಗಿದ್ದ ಮಾತ್ರಕ್ಕೆ ವಾನರ ರಾಜ್ಯದಲ್ಲೂ ಅವರ ಅಧಿಕಾರವೇ? "ಶ್ರೀರಾಮಚಂದ್ರನು ಕೊಟ್ಟ ಉತ್ತರಗಳಲ್ಲಿ ಬಹುಪಾಲು 'ಹಿಟ್ಲರ್ ಮುಸೋಲಿನಿ' ಗಳು ಕೊಡಬಹುದಾದ ಉತ್ತರಗಳಂತೆ ಸರ್ವಾಧಿಕಾರ ಮನೋಭಾವ ತುಂಬಿದೆ."

---

[7] ಶ್ರೀ ಮ. ವಾ. ರಾಮಾಯಣ, ಕಿಷ್ಕಿಂಧಾಕಾಂಡ, ಹದಿನೆಂಟನೆಯ ಸರ್ಗ ಶ್ಲೋ. ೧೫ ರಿಂದ ೩೬ ರ ವರೆಗೆ.

ಒಂದುವೇಳೆ ಈ ಸರ್ವಾಧಿಕಾರ ಮನೋಭಾವವನ್ನು ನಾವು ಎಂತೋ ಸಹಿಸಬಹುದು. ಆದರೆ ಇಂಥ ಧರ್ಮ ಸಂರಕ್ಷಣೆಯ ಹೊರೆ, ಹೊಣೆಯನ್ನು ಸ್ವಯಂ ಹೊತ್ತುಕೊಂಡ ಈ ಧರ್ಮ ಸಂಸ್ಥಾಪನಾಚಾರ್ಯ ಮರೆಯಲ್ಲಿ ಅವಿತುಕೊಂಡು, ಕಳ್ಳತನದಿಂದ ಬಾಣ ಪ್ರಯೋಗ ಮಾಡಿ ಕೊಲ್ಲುವುದಕ್ಕೆ ಏನು ಕಾರಣವಿತ್ತು? ವಾಲಿಯ ಸಮ್ಮುಖದಲ್ಲಿ ಬಂದು ಬಹಿರಂಗವಾಗಿಯೇ ದಂಡಿಸಬಹುದಿತ್ತು. ವಾಲಿಯ ಆರೋಪ ಮಾತ್ರ ನಿಸ್ಸಂದೇಹವಾಗಿಯೂ ಉತ್ತರಿಸಲಾರದಂಥ ಆರೋಪ. ಈ ಆರೋಪಕ್ಕೆ ಶ್ರೀರಾಮನು ಕೊಡುವ ಉತ್ತರವಂತೂ ಅತ್ಯಾಶ್ಚರ್ಯಕರವಾಗಿದೆ. "ಮಾನವರು ಕಾಡಿನಲ್ಲಿ ಬಲೆಗಳಿಂದಲೂ, ಹಗ್ಗಗಳಿಂದಲೂ, ಇನ್ನು ಇತರ ಸಾಧನ ಗಳಿಂದಲೂ ಮೃಗಗಳನ್ನು ಬೇಟೆಯಾಡಿ ಕೊಲ್ಲುವರು. ಕೆಲವನ್ನು ಎದುರಾಗಿಯೇ ನಿಂತು ಕೊಲ್ಲುತ್ತಾರೆ; ಕೆಲವನ್ನು ಮರೆಯಲ್ಲಿಯೇ ಅವಿತುಕೊಂಡಿದ್ದು ಕೊಲ್ಲುವರು. ಹಿಮ್ಮೊಗವಾಗಿಯೇ ಇದ್ದರೂ, ಯಾವ ದಯಾ ದಾಕ್ಷಿಣ್ಯವೂ ಇಲ್ಲದೆ ಕೊಂದು ಬಿಡುತ್ತಾರೆ . . . ಆದುದರಿಂದ ನಾನು ಮರೆಯಲ್ಲಿದ್ದುಕೊಂಡೇ ಮೃಗವಾದ ನಿನ್ನನ್ನು ಕೊಂದಿರುವೆನು" ಎಂದು ಉತ್ತರ ಕೊಡುತ್ತಾನೆ ಶ್ರೀರಾಮಚಂದ್ರ!! ಶ್ರೀರಾಮನ ಈ ಮಾತುಗಳು, ಅವನು ಮರೆಯಲ್ಲಿ ಅವಿತುಕೊಂಡಿದ್ದು ಕೊಂದ ಅಪರಾಧಕ್ಕಿಂತಲೂ ಮಹಾಪರಾಧವಾಗಿ ಕಂಡುಬರುತ್ತವೆ! ಯಾವ ಕಾರಣದಿಂದಲೋ, ಕೈಲಾಗದೆಯೋ ಪತ್ನೀವಿಯೋಗದ ದುಃಖದಿಂದ ಬುದ್ಧಿ ಮಂಕಾಗಿಯೋ, ಸೋಲುಗೆಲುವುಗಳ ಅನಿಶ್ಚಿತ ಜೂಜಾಟಕ್ಕಿಂತ ಗೆಲುವಿನ ನೇರಮಾರ್ಗವೆಂಬ ಕಾರಣದಿಂದಲೋ— ಮರೆಯಲ್ಲಿ ನಿಂತು ವಾಲಿಯನ್ನು ಕೊಂದ. ಆದರೆ ಆ ಕೃತ್ಯವನ್ನು ಸಮರ್ಥಿಸಿಕೊಳ್ಳಲು ವಾಲಿಯು ಮೃಗವೆಂದೂ, ತಾನು ಮನುಷ್ಯನೆಂದೂ, ಮೃಗವನ್ನು ಮನುಷ್ಯ ಬೇಟೆಯಾಗಿ ಕೊಂದನೆಂದೂ ಹೇಳಿಕೊಳ್ಳುವುದು ಎಂಥ ಕಡು ಮೂರ್ಖರಿಗೂ ಒಪ್ಪಿಗೆಯಾಗದ ಮಾತು. ಸ್ವತಃ ಶ್ರೀರಾಮನೇ ಈ ಮಾತನ್ನು ನಂಬಿಲ್ಲ. ಏಕೆಂದರೆ, ಶ್ರೀರಾಮ ಅಲ್ಲಿಗೆ ಬಂದುದು ವಾಲಿಯ ಬೇಟೆಗಾಗಿ ಅಲ್ಲ. ಸುಗ್ರೀವನೊಡನೆ ಕಾದಾಡುತ್ತಿದ್ದ, ದ್ವಂದ್ವ ಯುದ್ಧ ಪಟು ವಾಲಿಯನ್ನು ವಾನರನೆಂದು ನಂಬಿ ಉದ್ದೇಶ ಪೂರ್ವಕವಾಗಿ ಕೊಲ್ಲುತ್ತಾನೆ! ವಾಲಿ ಮೃಗವೆಂಬುದೂ ಸುಳ್ಳು. ತಾನು ಬೇಟೆ ಯಾಡಲು ಬಂದಿದ್ದನೆಂಬುದೂ ಸುಳ್ಳು.

ವಾಲಿ ಮಾಡಿದ ಆರೋಪ, ರಾಮಚಂದ್ರ ಕೊಟ್ಟ 'ಸಮಾಧಾನ'ಗಳನ್ನು ನೋಡಿದರೆ "ಯಾರೆ ಆಗಲಿ ಎಷ್ಟೇ ಪ್ರಯತ್ನಿಸಲಿ, ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ ವಾಲ್ಮೀಕಿ ರಾಮಾಯಣದ ಶ್ರೀರಾಮನ ಈ ಸಂದರ್ಭದ ವರ್ತನೆಯನ್ನು ಆದರ್ಶಪ್ರಾಯವೆಂದು ಸಮರ್ಥಿಸಲು ಸಾಧ್ಯವಾಗುವುದಿಲ್ಲ."

ಶ್ರೀರಾಮನ ಈ ವರ್ತನೆಯನ್ನು ಸಮರ್ಥಿಸಲು ಕೆಲವರು, ರಾಮ ವಾಲಿಯನ್ನು **ಒಂದೇ** ಬಾಣದಿಂದ ಕೊಲ್ಲುವುದಾಗಿ ಸುಗ್ರೀವನಿಗೆ ವಚನ ಕೊಟ್ಟಿದ್ದ. ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ಮರೆಯಲ್ಲಿದ್ದುಕೊಂಡು **ಒಂದೇ** ಬಾಣದಿಂದ ಕೊಲ್ಲಬೇಕಾಯಿತು ಎಂದು ವಾದಿಸುತ್ತಾರೆ.[8] ಹಾಗೂ ಅದೇ ದಿನವೇ ತಕ್ಷಣವೇ ಕೊಲ್ಲುವುದಾಗಿ ಸುಗ್ರೀವನಿಗೆ ಭರವಸೆ ಕೊಟ್ಟಿರುತ್ತಾನೆ.[9] ಹೀಗೆ ರಾಮ **ಒಂದೇ** ಬಾಣದಿಂದ **ಅಂದೇ** ವಾಲಿಯನ್ನು ಕೊಂದು ಮುಗಿಸುವೆನೆಂದು ಪ್ರತಿಜ್ಞೆಗೊಂಡಿದ್ದನಾದ್ದರಿಂದ ಮರೆಯಲ್ಲಿ ಅವಿತು ನಿಂತು ಬಾಣ ಪ್ರಯೋಗ ಮಾಡಿದನೆಂದು ಶ್ರೀರಾಮನ ಈ ವರ್ತನೆಯನ್ನು ಸಮರ್ಥನೆ ಮಾಡಲು ಪ್ರಯತ್ನಿಸಿದ್ದಾರೆ. ಮೊದಲನೆಯದಾಗಿ, ವಾಲಿಯನ್ನು **ಒಂದೇ** ಬಾಣದಿಂದ **ಅಂದೇ** ಕೊಂದು ಮುಗಿಸಬೇಕೆಂದು ರಾಮನನ್ನು ಯಾರೂ ಪ್ರಾರ್ಥಿಸಿರಲಿಲ್ಲ. ತನಗೆ ತಾನೇ ತನ್ನ ಪೌರುಷ, ಪ್ರತಾಪ, ಪರಾಕ್ರಮ ಪ್ರದರ್ಶನಕ್ಕಾಗಿ ಅಂಥ ಮಾತನಾಡಿದ್ದರೆ ಅದಕ್ಕೆ ಹೊಣೆ ಯಾರು ? ಎರಡನೆಯದಾಗಿ, ತನ್ನ ಬಾಯಿಂದ ಬಿದ್ದ ಮಾತನ್ನು ಉಳಿಸಿಕೊಳ್ಳಬೇಕೆಂದು, (ಅದೂ ಕ್ಷತ್ರಿಯ ಧರ್ಮವೆಂದು ಒಪ್ಪಿಕೊಂಡರೂ ಕೂಡ) ಇನ್ನೊಂದು ಧರ್ಮೋಲ್ಲಂಘನೆ ಮಾಡುವುದು ಸರಿಯೆ ? ವಾಲಿಯ ಶಕ್ತಿ ಸಾಮರ್ಥ್ಯಗಳನ್ನು ಮುಂಗಾಣದೆ ದುಡುಕಿ ಪ್ರತಿಜ್ಞೆ ಮಾಡಿದ್ದರೆ ಅದು ಪ್ರತಿಜ್ಞೆ ಮಾಡಿದವರ ತಪ್ಪೇ ಹೊರತು, ಧರ್ಮೋಲ್ಲಂಘನೆ ಸರಿಯಲ್ಲ. ಶ್ರೀರಾಮನ ಈ ವರ್ತನೆಯನ್ನು ಸಮರ್ಥಿಸಲು ಹೂಡುವ ಈ ವಾದ, ಬುದ್ಧಿವಂತಿಕೆಯದಾಗಿ ತೋರಿದರೂ ಮನ ಮೆಚ್ಚುವಂತಹದಾಗಿಲ್ಲ. ಅಂತೂ, ಹೇಗೆ ಹೇಗೆ ನೋಡಿದರೂ ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ ಶ್ರೀರಾಮನ ವರ್ತನೆ ಸಮ್ಮತವಾಗಿಲ್ಲ ; ಸಮರ್ಥನೀಯವಾಗಿಲ್ಲ.

ವಾಲ್ಮೀಕಿ ರಾಮಾಯಣದ ವಾಲಿವಧಾ ಪ್ರಸಂಗವನ್ನು ಇದುವರೆಗೆ ಸಮೀಕ್ಷಿಸಿದ್ದೇವೆ. ಈಗ ವಾಲ್ಮೀಕಿಯ ಕಥೆಯಿಂದಲೇ ಸ್ಫೂರ್ತಿಯನ್ನು ಪಡೆದು, ವಾಲ್ಮೀಕಿಯ ಆಶೀರ್ವಾದದಿಂದಲೇ ಕನ್ನಡದಲ್ಲಿ ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರು ಹುಟ್ಟು ಪಡೆದಂತೆ ಮೂಡಿದ ಶ್ರೀ ಕುವೆಂಪು ಶ್ರೀ ರಾಮಾಯಣ ದರ್ಶನ ಮಹಾಕಾವ್ಯದಲ್ಲಿ ಚಿತ್ರಿತವಾಗಿರುವ ವಾಲಿವಧಾ ಪ್ರಸಂಗವನ್ನು ಸಮೀಕ್ಷಿಸೋಣ.

---

[8] ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರ "Lectures on the Ramayana" ಎಂಬ ಗ್ರಂಥದ ಹನ್ನೊಂದನೆಯ ಭಾಷಣವನ್ನು ಓದಿ.

[9] ಶ್ರೀ ಮ. ವಾ. ರಾಮಾಯಣ ಕಿಷ್ಕಿಂಧಾಕಾಂಡ, ೪ ನೆ ಸರ್ಗ ಶ್ಲೋ. ೧೦, ೩೨, ೩೩.

ಶ್ರೀರಾಮನ ಸಹಾಯ ದೊರೆತ ಮೇಲೆ ಸುಗ್ರೀವ ಕಿಷ್ಕಿಂಧೆಯ ಒಂದು ಬಂಡೆಯನ್ನು ಅಡರಿ ನಿಂತು ಮಲೆತ ಗೂಳಿ ಗುಟುರೆ ಹಾಕುವಂತೆ ಗರ್ಜಿಸಿದ. ಅವನ ಗರ್ಜನೆಯಿಂದ ಮಲೆ ಮಾರ್ ಗುಡುಗಿತೆಂಬಂತೆ ಸದ್ದಾಯಿತು. ಗುಡ್ಡದ ಬಂಡೆಗಳು ಎಡಬಲಕೆ ನಡುಗಿದಂತೆ ಭಾಸವಾಯಿತು. ಆ ಗರ್ಜನೆಯನ್ನು ಕೇಳಿದ ವಾಲಿ ಪ್ರತಿಗರ್ಜನೆಮಾಡಿದ. ಆ ಪ್ರತಿಗರ್ಜನೆಯನ್ನು ಕೇಳಿ ರಾಮನ ಎದೆ ಧಿಗಿಲ್ ಎಂದಿತು. ಲಕ್ಷ್ಮಣ ಹನುಮಂತನ ಮುಖ ನೋಡಿದ. ಆ ಗರ್ಜನೆ ಪ್ರತಿಗರ್ಜನೆಗಳು ಕೇಳುತ್ತಿರುವಂತೆಯೇ ವಾಲಿ 'ಸಿಂಹದೋಲಾರ್ಭಟಿಸಿ, ಪುಲಿಯವೋಲ್ ಚಿಮ್ಮಿದನ್ ಪಳುಗಬ್ಬದಿಂ.' ಹಾಗೆ ನುಗ್ಗಿ ಬರುತ್ತಿದ್ದ ವಾಲಿಯನ್ನು ಕಂಡು ತೆಕ್ಕನೆ ಪಕ್ಕಕ್ಕೆ ಸಿಡಿದು, ಸುಗ್ರೀವ ವಾಲಿಯ ನಡುನೆತ್ತಿಯನ್ನು ಗುದ್ದಿದ. ಕಗ್ಗಲ್ಲೇ ನುಗ್ಗು ನುಗ್ಗಾಗುವಂಥ ಆಘಾತಕ್ಕೆ ವಾಲಿ ತತ್ತರಿಸಿ, ತತ್ತರಿಸಿ ಮತ್ತೆ ಚೇತರಿಸಿಕೊಂಡು, ಹತ್ತಿರಿದ್ದ ಒಂದು ಅರೆಯನ್ನೆತ್ತಿ ಸಿಡಿರೋಷದಿಂದ ಗುಂಡಿಡುವಂತೆ ಬೀಸಿದ. ಆ ಗುಂಡು ಗುರಿತಪ್ಪಿ ಹತ್ತಿರಿದ್ದ ಒಂದು ಮರಕ್ಕೆ ಬಿತ್ತು. ಮರ ಬೇರುಸಹಿತವಾಗಿ ಲರಿಲ್ ಲರಿಲ್ ಎಂದು ಒರಗಿತು. ಆ ಮರವನ್ನೇ ಗದೆಯಾಗಿ ಮಾಡಿಕೊಂಡು ಸುಗ್ರೀವ ಅಪ್ಪಳಿಸಲು ಬರುತ್ತಾನೆ. ಆಗ ವಾಲಿ :

"ಕೇಳೆಲವೊ ಸುಗ್ರೀವ, ನೀಂ ತಮ್ಮನೆಂಬೊಲವರಕೆ,
ನಿನ್ನಾ ಪತಿವ್ರತಾ ಸತಿಯೈದೆತನಕಾಗಿ
ದೇವಿ ತಾರೆಯ ವಚನಕಾಗಿ, ಪುಸಿಗಾಳೆಗಂ
ಗೊಟ್ಟೊಡತಿಮಲೆತು ಕೊಬ್ಬಿದೆಯಲಾ! ಹಗೆತನಂ
ಬಾಡಿದೆನ್ನೆರ್ದೆಗೆ ನೇಹಂ ಮೂಡುತಿರ್ದಂದೆ,
ಕೂಡಿಕೊಂಡಾವನೋ ಬಣಗು ಬಡಗರಸನಂ
ಕೆಣಕಿದಪೆ ಮತ್ತೆಯೆನ್ನಂ . . . ." [10]

ಎನ್ನುತ್ತ ಸುಗ್ರೀವನ ಕೈಯಲ್ಲಿದ್ದ ವೃಕ್ಷಗದೆಯನ್ನು ಕಸಿದುಬಿಸುಡುತ್ತಾನೆ. ಸುಗ್ರೀವನ ಮೇಲೆ ಬಿದ್ದು ದಿಡ್ಡು ದಿಡ್ಡೆಂಬ ಕೈಗುದ್ದುಗಳಿಂದ ಚೆನ್ನಾಗಿ ಮರ್ದಿಸುತ್ತಾನೆ. ಸುಗ್ರೀವ, ವಾಲಿಮುಷ್ಟಿಯ ವಜ್ರಾಘಾತಕ್ಕೆ ತಾಳಲಾರದೆ ಮತಂಗಾರಣ್ಯಾ ರಕ್ಷೆಗೆ ಓಡಿಹೋಗುತ್ತಾನೆ. ರಾಮ, ವಾಲಿಸುಗ್ರೀವರ ರೂಪ ಸಾದೃಶ್ಯದಿಂದ ವಾಲಿ ಯಾರು ಸುಗ್ರೀವನಾರು ಎಂಬುದನ್ನು ಅರಿಯಲಾರದೆ, ತವಕಪಡುತ್ತಾನೆ.

---

10 ಶ್ರೀ ರಾ. ದ. ಮಹಾಸಂಪುಟ ೧. ಪುಟ ೩೦೬. ಸಾಲು ೧೪೦—೧೪೬. (ದ್ವಿತೀಯ ಮುದ್ರಣ)

ಮೂಲ ವಾಲ್ಮೀಕಿ ಕಥೆಗೂ ಶ್ರೀ ರಾಮಾಯಣ ದರ್ಶನಂ ಈ ಕಥಾಭಾಗಕ್ಕೂ ಹೆಚ್ಚು ವ್ಯತ್ಯಾಸವೇನೂ ಇಲ್ಲ. ಆದರೆ ಚಿಕ್ಕದಾದರೂ ಮುಖ್ಯವಾದ ಒಂದು ವ್ಯತ್ಯಾಸವನ್ನು ಗಮನಿಸಬೇಕು. ವಾಲ್ಮೀಕಿ ರಾಮಾಯಣದ ವಾಲಿ ಸುಗ್ರೀವನನ್ನು ಮೊದಲಬಾರಿ ಬಡಿದಟ್ಟುವಾಗ ಯಾವ ಮಾತುಗಳನ್ನೂ ಹೇಳುವುದಿಲ್ಲ. ಶ್ರೀ ರಾಮಾಯಣ ದರ್ಶನದ ವಾಲಿ, ಮೇಲೆ ಹೇಳಿದ ಮಾತುಗಳನ್ನು ಹೇಳುತ್ತಾನೆ. ಈ ಮಾತುಗಳಲ್ಲಿ ವಾಲಿಯ ಹಗೆತನ ಆಗಲೇ ಬಾಡುವುದರಲ್ಲಿತ್ತು; ರುಮೆಯ ಮುತ್ತೈದೆತನ ಉಳಿಯಬೇಕೆಂದೇ ವಾಲಿಯ ಬಯಕೆಯಾಗಿತ್ತು ಎಂಬುದು ಸ್ಪಷ್ಟವಾಗಿದೆ.

ಮತ್ತೆ ಸುಗ್ರೀವ ಎರಡನೆಯ ಬಾರಿ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಕಿಷ್ಕಿಂಧೆಯೇ ನಡುಗುವಂತಹ ಆರ್ಭಟವೊಂದು ಕೇಳಿಸುತ್ತದೆ. ಆಗ ವಾಲಿ ತನ್ನ ಮಡದಿ ತಾರೆಯೊಡನೆ, ಸುಗ್ರೀವನನ್ನು ಬಡಿದಟ್ಟಿಬಂದ ಸುದ್ದಿಯನ್ನು ಹೇಳುತ್ತಿರುತ್ತಾನೆ. ತಮ್ಮನನ್ನು ಹುಟ್ಟಿದೂರಿನಿಂದ ಬಡಿದಟ್ಟಿ ಓಡಿಸಿ ಬಂದುದರಿಂದ ಅವನಿಗೂ ಸಂತಾಪವಾಗಿತ್ತು. ರುಮಾದೇವಿಯನ್ನು ಸೆರೆಮನೆಯೊಳಿಟ್ಟು ಬೇಯಿಸಿದೆನೆಂದೂ ಸಂಕಟವಾಗಿತ್ತು.

"ಮನಂ,
ಓರೊರ್ಮೆ, ಗೆಯ್ದನ್ನೆಯದ ಕಜ್ಜಮಂ ತಿರ್ದ್ದಿ,
ತಮ್ಮನಂ ತಾಯ್ನೆಲಕೆ ತರಲೆಳೆಸಿತಾದೊಡಂ,
ತಡೆಯಾಯ್ತು ಪುಸಿಬೀರದೊಂದು ಪುಸಿಲಜ್ಜೆ. . . ."[11]

ಎನ್ನುವಾಗ ವಾಲಿ ತಮ್ಮನನ್ನು ತೌರೂರಿಗೆ ಕರೆದು ತರಬೇಕೆಂದೇ ಒಮ್ಮೊಮ್ಮೆ ನಿರ್ಧರಿಸಿದ್ದುದು ಸ್ಪಷ್ಟವಾಗುತ್ತದೆ. ಈ ಮಾತು ಮುಗಿಯುವುದರ ಒಳಗಾಗಿಯೇ ಸುಗ್ರೀವನ ಆರ್ಭಟ ಕೇಳಿರುತ್ತದೆ. ಅವನ ಧ್ವನಿ ಕೇಳಿದೊಡನೆಯೇ ವಾಲಿಗೆ ಕೋಪ ಮಿತಿಮೀರಿ ಭುಗಿಲ್ ಎಂದು ಏಳುತ್ತದೆ. ಛಲದಿಂದ ಮತ್ತೆ ಯುದ್ಧಕ್ಕೆ ಹೊರಡಲನುವಾಗುತ್ತಾನೆ. ಆಗ ತಾರೆ:

"ಮಾಣ್, ಮನದನ್ನ, ಮಾಣ್; ಮಾರದಿರ್ ಚಲಕೆ
ಜೀವನಶ್ರೀಯಮಂ. ನೀನೀಗಳೆನ್ನೊಡನೆ
ನುಡಿಯುತಿರ್ದುದನೆ ಪಿಡಿ: ವೀರರೌದಾರ್ಯಮಂ!
ಪತಿವ್ರತಾ ರಮಣಿಯಂ ಆ ರುಮಾದೇವಿಯಂ
ನೆನೆ. ಪಡೆದ ತಾಯನಂತೆಯೆ ತಂದೆಯಂ ನೆನೆ;
ಅಂತೆವೋಲ್ ನಿಮ್ಮಿರ್ವರೆಳೆತನದ ಲೀಲೆಯಂ. . . ."[12]

ತಾರೆಯ ಈ ನುಡಿಯಿಂದ ಮಂತ್ರಮುಗ್ಧನಾದನೆಂಬಂತೆ ವಾಲಿಗೊದಗಿತು ಶಾಂತಿ.

---

11 ಶ್ರೀ ರಾ. ದ. ಮಹಾಸಂಪುಟ ೧. ಪುಟ ೩೦೯. ಸಾಲು ೨೧೪-೨೧೬.

12 ಅದೇ ಪು. ೩೦೯-೩೧೦. ಸಾಲು ೨೩೩ ರಿಂದ ೨೩೮.

"ಚಿಣ್ಣನಂ, ಕಂದ ಸುಗ್ರೀವನಂ, ತನ್ನೊಲಿದ
ಮುದ್ದು ಸುಗ್ರೀವನಂ ಬೆನ್ನಿನೊಳ್ ಪೊತ್ತು, ತಾಯ್
ಕಂದ ಬಾರೆನ್ನುತಿರೆ, 'ಉಪ್ಪು ಬೇಕೇ ಉಪ್ಪು ?'
ಎನುತೆ ತಾಂ ಪರಿದಾಡುತನಿಬರಂ ನಗಿಸಿದಾ
ಚಿಕ್ಕಂದಿನೊಂದು ಚಿತ್ರಂ ಸ್ಮೃತಿಗೆ ಮೈದೋರೆ,
ರೋಷಚ್ಯುತಂ ವಾಲಿ ಶಾಂತನಾದನ್. ಮೈತ್ರಿ
ಸಂಚರಿಸಿದುದು ಮನದಿ, ವೈರಮುಂ ಕೆಲಕ್ಕೊತ್ತಿ.
"ನೆರಪುವೆನ್, ತಾರೆ, ಸುಗ್ರೀವನಂ ತಂದಿಂದು
ರುಮೆಗೊಸೆಗೆಯುಂ. ಸಿಂಗರಿಸು ನಡೆ ತಂಗಿಯುಂ
ಚಿಕ್ಕಂದು ನಾವಾಡಿದುಪ್ಪಾಟಮುಂ ಮತ್ತಿಂದು
ತೋರಿದಪೆನೆನ್ನ ತಮ್ಮಂಗೆ. ನೀನನ್ಯಮಂ
ಚಿಂತಿಸದಿರಾಂ ಪೋಗಿ, ಕಾಳೆಗದ ನೆವದಿಂದೆ
ಪೊತ್ತು ತಹೆ ರವಿಸೂನುವಂ !"[13]

ಮೂಲ ವಾಲ್ಮೀಕಿ ರಾಮಾಯಣದಲ್ಲೂ ತಾರೆ, ವಾಲಿಯನ್ನು ಯುದ್ಧಕ್ಕೆ ಹೋಗಬೇಡೆಂದು ಬೇಡಿಕೊಳ್ಳುತ್ತಾಳೆ. "ನದೀ ವೇಗದಂತೆ ಬಹು ಶೀಘ್ರವಾಗಿ ಬಂದಿರುವ ಈ ಕೋಪವನ್ನು ಪ್ರಾತಃಕಾಲದಲ್ಲಿ ನಿದ್ರೆಯನ್ನು ತೊರೆದೊಡನೆಯೇ ಅನುಭವಿಸಿದ ಹೂಮಾಲಿಕೆಯನ್ನು ಬಿಸುಡುವಂತೆ ತೊರೆ . . . . ನಿನ್ನ ತಮ್ಮನಾದ ಸುಗ್ರೀವನಲ್ಲಿ ನಿನಗಿರುವ ಶತ್ರುತ್ವವನ್ನು ದೂರಮಾಡು . . . ಸುಗ್ರೀವನನ್ನು ಕರೆಯಿಸು. ಅವನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿಬಿಡು . . . . ರಾಮನ ಬಳಿಗೈದಿ ಆತನೊಡನೆ ಸ್ನೇಹ ಮಾಡಿಕೊಳ್ಳುವುದು ಯುಕ್ತವಾದುದು" ಎಂದು ವಾದಿಸುತ್ತಾಳೆ. ಹೀಗೆ ಬೇಡಿಕೊಳ್ಳುವಾಗ ತಾರೆಗೆ ಶ್ರೀ ರಾಮನ ಬಾಣಾಘಾತದಿಂದ ವಾಲಿಗೆ ಏನಾದರೂ ಕೇಡು ಒದಗೀತು ಎಂಬುದು ಮುಖ್ಯವಾದ ಕಾರಣವಾಗಿರುವಂತೆ ತೋರುತ್ತದೆ. ಅದಕ್ಕೆ ವಾಲಿ: "ಸುಗ್ರೀವನ ಗರ್ವವನ್ನು ಮಾತ್ರ ಅಡಗಿಸುತ್ತೇನೆಯೇ ಹೊರತು ಅವನನ್ನು ಎಷ್ಟು ಮಾತ್ರಕ್ಕೂ ಕೊಲ್ಲುವುದಿಲ್ಲ" ಎಂದು ಉತ್ತರ ಕೊಡುತ್ತಾನೆ. ಶ್ರೀ ರಾಮಾಯಣ ದರ್ಶನದ ವಾಲಿ, ಸಂಪೂರ್ಣ ಹೃದಯ ಪರಿವರ್ತನೆಗೊಂಡು ತಾರೆ ಹೇಳಿದಂತೆ ಸುಗ್ರೀವನನ್ನು ತೌರೂರಿಗೆ ಹೊತ್ತು ತರುತ್ತೇನೆಂದು ಮಾತು ಕೊಟ್ಟು ಹೊರಡುತ್ತಾನೆ. ವೈರವನ್ನು ಸಂಪೂರ್ಣವಾಗಿ ತೊರೆದಿದ್ದ ವಾಲಿ ಮುನ್ನುಗ್ಗಿದ ಕೂಡಲೇ

---

[13] ಶ್ರೀ ರಾ. ದ. ಮಹಾಸಂಪುಟ ೧. ಪುಟ ೩೧೦. ಸಾಲು ೧೪೫ ರಿಂದ ೨೫೭.

“ ಅಗ್ರಜನ ಹೃದಯ ಪರಿವರ್ತನೆಯನರಿಯದಾ
ಸುಗ್ರೀವನಿಕ್ಕಿದರೆಬಂಡೆಗಳನಂಗೈಯ
ದಾಂಡಿನಿಂ ಪೊಡೆಸೆಂಡನಾಡುತೆ ಕೆಲಕ್ಕಣೆದು
ಮಿಂಚುಜವದಿಂ ಬಳಿಗೆಪರಿದು, ಕಪಿಮುಷ್ಟಿಯಿಂ
ತುಡುಕಿ, ಶಾರ್ದೂಲಮುಂ ಭೇರುಂಡನೆತ್ತುವೋಲ್
ತಮ್ಮನಂ ಪೊತ್ತು, ತಾಯೂರ್ಗೆ ಧಾವಿಸಿದನೈ
ದೇವಾಸುರರ ಮೀರ್ದ ದೈತ್ಯಬಲಶಾಲಿ, ಆ
ವಾಲಿ ! ”[14]

ಘೋರ ಯುದ್ಧವಾಗಬಹುದೆಂದು ನಿರೀಕ್ಷಿಸಿ ನಿಂತಿದ್ದ ರಾಮನಿಗೆ, ಸುಗ್ರೀವನನ್ನು ಹೊತ್ತುಕೊಂಡು ಹೋಗುವ ವಾಲಿಯನ್ನು ನೋಡಿ ಒಂದರೆಕ್ಷಣ ದಿಗ್ಭ್ರಮೆಯಾಗಿರಬೇಕು. ‘ ಹಾ ! ಕೈಮೀರಿತು ’ ಎಂದು ಕಠೋರ ಮೃತ್ಯು ಶರವನ್ನು ವಾನರನ ಬೆನ್ನಿಗೆ ಬಿಟ್ಟ. ವಾಲಿ, ಕಲ್ಪದ್ರುಮವನ್ನು ಕೂಡಿದ ಐರಾವತ ಬಿದ್ದಂತೆ ನೆಲಕ್ಕುರುಳಿದ. ಮರಸು ಬೇಟೆಗೆ ಕುಳಿತ ಬೇಟೆಗಾರ ಹುಲಿ ಬಲೆಗೆ ಬಿದ್ದ ಸದ್ದು ಕೇಳಿ ಮರದ ಮಂಚಣಿಗೆಯಿಂದ ಇಳಿದು ಓಡಿಬರುವಂತೆ ರಾಮಾದಿಗಳು ವಾಲಿ ಬಿದ್ದಲ್ಲಿಗೆ ಓಡಿಬಂದರು ! ಬಿದ್ದಿದ್ದ ವಾಲಿ :

‘ ಬಳಸಿರ್ದರೆಲ್ಲರಂ
ಗುರುತಿಸುವೊಲ್ ನೋಡಿ : “ ಏಂ ಗೈದೆ, ಸುಗ್ರೀವ !
ಮುದ್ದಾಡಲೆಂದು ಬಂದಳ್ಕರೆಯ ತೋಳ್ಗಳಂ
ಛಿದ್ರಿಸಿದೆಯಲ್ತೆ ! . . . ಆಃ, ತೋರೆನಗೆ ಆ ವೀರನಂ,
ಬೆನ್ಗೆ ಬಾಣವನೆಚ್ಚ ಆ ನಿನ್ನ ಕಲಿ ರಾಮನಂ . . . .
ನೀನಾರೆಲವೊ ವೀರವೇಷಿ ? ಬಿಲ್ವಿಡಿದಿರ್ಪೆ ;
ನೀನೆ ರಾಮನೆ ವಲಂ ! ವೀರ ಪಾರ್ಥಿವನಾಗಿಯುಂ
ಕೀಳ್ಮೆಗೇಕಯ್ ಕಯ್ಯನಿಟ್ಟೆ ? ಪೆತ್ತೂರೆಡೆಗೆ
ತಮ್ಮನಂ ಪೊತ್ತುಕೊಂಡುಯ್ವಣ್ಣನಂ ಬೆನ್ಗೆ
ಹಂದೆತನದಿಂದೆಚ್ಚು ಕೊಂದಯ್ ! . . . .
. . . . ಧಿಕ್ ನಿನ್ನ ಕಲಿತನಂ ! ಧಿಕ್ ನಿನ್ನ
ವೀರಪಾರ್ಥಿವ ಕೀರ್ತಿ ! ಹೇಡಿಯಂದದೊಳಡಗಿ
ದೂರದಿಂದುಗ್ರಬಾಣವನೆಚ್ಚು ಬರ್ದುಕಿದಯ್
. . . . ಚಿಃ ಸುಡಲಿ
ನಿನ್ನ ಈ ಪೊಲೆಮಾಳ್ಕೆಯಾ ಕೊಲೆಯ ಬಾಳ್ಕೆಯುಂ ! ” ’[15]

---

[14] ಶ್ರೀ ರಾ. ದ. ಮಹಾಸಂಪುಟ ೧. ಪುಟ ೩೧೧. ಸಾಲು ೨೬೭ ರಿಂದ ೨೭೪.

[15] ಅದೇ ಪುಟ ೩೧೩. ಸಾಲು ೩೧೨ ರಿಂದ ೩೨೮.

ಎಂದು ಶ್ರೀ ರಾಮನನ್ನು ಮಚ್ಚರಿಸಿ ಜರೆಯುತ್ತಾನೆ. ವಾಲಿಯು ಆರೋಪಿಸುವ ಈ ಆರೋಪಗಳು ಅವನ ಪರಾಕ್ರಮಕ್ಕೆ ತಕ್ಕಂತೆ ಗಂಭೀರವೂ ಲೋಕಸಾಮಾನ್ಯ ನೀತಿಯ ದೃಷ್ಟಿಯಿಂದ ಸತ್ಯವೂ ಆಗಿವೆ. ಶ್ರೀ ರಾಮಯಣ ದರ್ಶನಂ ಮಹಾ ಕಾವ್ಯದ ಶ್ರೀ ರಾಮನ ಹಿರಿಮೆ ಇರುವುದು ಅವನು ಕೊಡುವ ಉತ್ತರದಲ್ಲಿದೆ. ರಾಮ :

“ ನಿಂದಿಸುತ್ತಿರಲಾತನಿನಿತು ಗದ್ಗದದೊಡನೆ :
‘ವಿಧಿಯ ವಿನ್ಯಾಸಮಂ ನಿಂದಿಸಿದೊಡೇಂ ಫಳಂ,
ಸುಗ್ರೀವನಗ್ರಜಾ ? ’ ”

ಎನ್ನುತ್ತಾನೆ. ಅದಕ್ಕೆ ವಾಲಿ ಕೊಂಕುನಗೆಯಿಂದ :

‘ ನಿನ್ನ ಮಡದಿಯನಸುರನುಯ್ದುದುಂ ವಿಧಿಲೀಲೆ !
ನೀನೇಕೆ ಪರಿತಪಿಸುತಿಹೆ ಮತ್ತೆ ? ’

ಎಂದು ಪ್ರತ್ಯುತ್ತರ ಕೊಡುತ್ತಾನೆ. ವಾಲಿಯ ಈ ಪ್ರತ್ಯುತ್ತರ ನಿಜವಾಗಿ ತರ್ಕಬದ್ಧ ವಾಗಿದೆ (Logical) ; ಬುದ್ಧಿಗೊಪ್ಪುವಂತಿದೆ. ಶ್ರೀರಾಮ “ ಹೌದು ನಿನ್ನ ಮಾತೂ ನಿಜ. ನನ್ನ ಮಡದಿಯನ್ನು ಅಪಹರಿಸಿದುದೂ ವಿಧಿಲೀಲೆಯೇ. ನಾನಿಂತು ಪರಿತಪಿಸು ವುದೂ ವಿಧಿಲೀಲೆಯೆ. ” ಎಂದಿದ್ದರೆ ಮುಂದಿನ ಮಾತೆ ಇರುತ್ತಿರಲಿಲ್ಲ. ಆದರೂ ಶ್ರೀರಾಮ, ಅಹಂಕಾರದಿಂದಲೋ, ಮತಿಯ ತರ್ಕವೆಂಬ ಮರ್ಕಟನ ಚೇಷ್ಟೆ ಯಿಂದಲೋ, ತಾನು ಗೈದ ಅಮರ್ತ್ಯ ಕರ್ಮಕ್ಕೆ ಮರ್ತ್ಯ ಬುದ್ಧಿಯ ತರ್ಕವನ್ನು ಹೊಂದಿಸಬೇಕೆಂಬ ಬಯಕೆಯಿಂದಲೋ :

“ ನಿನ್ನ ವಿಧಿ
ನಿನಗೆ. ರಾಕ್ಷಸನವಿಧಿ ರಾಕ್ಷಸಗೆ. ನಿನ್ನಂತೆ, ಕೇಳ್,
ಹದಿಬದೆಗಳುಪಿದಸುರನುಂ ಕಡೆಯನೆಯ್ದುವಂ.”

ಎನ್ನುತ್ತಾನೆ. ಅದಕ್ಕೆ ವಾಲಿ : “ ಪುಸಿ, ಪುಸಿ, ಪುಸಿ ! ” ಎನುತ್ತ ಕಿವಿ ಮುಚ್ಚಿ “ ಮಗಳೆನಗೆ ರುಮೆ ! ತಾರೆ ತಾಂ ಸಾಕ್ಷಿ ! ಹಂದೆತನಕಾ ಪುಸಿಪಳಿಯು ಬೆಸುಗೆ ಯೊಂದೇಕೊ ? ” ಎಂದು, ಹಾದರತನದ ಆರೋಪವನ್ನು ನಿರಾಕರಿಸುತ್ತಾನೆ. ವಾಲಿ ಸತ್ಯವಾಗಿ ಶುದ್ಧವಾಗಿದ್ದನೆಂದು ಜಾಂಬವನು ಸಮರ್ಥಿಸುತ್ತಾನೆ. ಎಂದಮೇಲೆ ರಾಮನ ತರ್ಕಬಾಣವು ಅಲ್ಲಿಯೇ ಕತ್ತರಿಸಿಹೋಯಿತು. ಆಗಲಾದರೂ ರಾಮ ಸುಮ್ಮನಾಗಬಹುದಾಗಿತ್ತು. ಆದರೂ :

“ ಒಡವುಟ್ಟಿದಾತನಂ
ನಿರ್ದೋಷಿಯಂ, ತನ್ನ ತಾಯಿ ನಾಡಿಂದಟ್ಟಿ,

ಕೆಳೆಯರ್ವೆರಸಿ ಕಳೆದೆಯಲ್ತೆ ? ಆ ಕೇಡಿಗರ್ಯ್
ಈ ಶಿಕ್ಷೆ !"

ಎಂದು ರಾಮ ಮತ್ತೊಂದು ತರ್ಕಬಾಣವನ್ನು ಹೂಡುತ್ತಾನೆ. ಅದಕ್ಕೆ ವಾಲಿ

"ತಳುವಿ ಬಂದಯ್ ದುಷ್ಟ ಶಿಕ್ಷಣೆಗೆ !
ನಾನೀಗಳಾ ಕೋಪಿಯಲ್ತಾ ಪಾಪಿಯಲ್ತು : ಮೇಣ್
ಪ್ರೀತಿ ಪಶ್ಚಾತ್ತಾಪದಿಂ ಭ್ರಾತೃಮೈತ್ರಿಯಿಂ
ಶುದ್ಧನೆಂ, ನಿರ್ವೈರನೆಂ. . . . ."

ಇನ್ನು ಶ್ರೀರಾಮನ ತರ್ಕಗಳೆಲ್ಲವೂ ವಾಲಿಯ ಉತ್ತರದಿಂದ ಕತ್ತರಿಸಿಬಿದ್ದುವು. ಮರದ ಮರೆಯಲ್ಲಿ ನಿಂತು ಅವಿತುಕೊಂಡು ಬೆನ್ನಿಗೆ ಬಾಣವನ್ನು ಬಿಟ್ಟು ಕೊಂದ ಕೃತ್ಯವನ್ನು ಮನುಜನೀತಿಯ ಮಾನದಂಡದಿಂದ ಸಮರ್ಥಿಸಲು ಸಾಧ್ಯವಾಗದೆ ಹೋಯಿತು. ಆಗ ಶ್ರೀರಾಮಚಂದ್ರ,

"ಮನ್ನಿಸೆನ್ನಂ, ಮಹಾ
ವೀರ ! ತಪ್ಪಿದೆನಯ್ಯೊ, ಬ್ರಹ್ಮವರದಾ ಬಲೆಗೆ
ಸಿಲ್ಕಿ. ನಿನಗಾ ವರವೆ ಶಾಪಮಾದುದೊ ! ಕೀರ್ತಿ
ಮಸುಳಿಸುವವೋಲೆನ್ನನಡಗಿಸಿತೊ ! ಮರೆವೊಕ್ಕೆನಾ
ಮರಕೆ ! ಮಾಡಿದ ತಪ್ಪನೊಪ್ಪಿಕೊಳ್ವುದೆ ಲೌಕಿಕದ
ಬೀರಕ್ಕೆ ಸಲ್ಲಕ್ಷಣಂ : ಅಯ್ಯೊ ಸೀತೆಯನಗಲ್ದು
ಪಗಲಿರುಳ್ ಪೊಗೆಯುತಿರ್ಪೀ ಬಗೆಯ ಕನ್ನಡಿಗೆ
ಮಬ್ಬುಕರೆ ಮಂಕಡಸಿತಯ್. ಶೀಘ್ರಸೂತ್ರಕ್ಕೆ
ಬೇಳ್ದೆನಯ್ ಐಹಿಕದ ಕೀರ್ತಿಯನಂತೆ ಧರ್ಮಮಂ
ಮೇಣ್, ಕಪಿಕುಲ ಲಲಾಮ, ನಿನ್ನುಮಂ !"

ಎಂದು, ತಡವಾಗಿಯಾದರೂ ಹೃತ್ಪೂರ್ವಕವಾಗಿ, ಯಾವ ಹಿಂದುಮುಂದೂ ಇಲ್ಲದೆ ಕ್ಷಮೆ (Heart-felt unconditional apology) ಕೇಳುತ್ತಾನೆ !! "ಅವನ ಅಪರಾಧ ಸಮಸ್ತವೂ ಕಣ್ಣೀರಿನ ಮೂಲಕ ಹೊರಗೆ ಹರಿದು ಅವನು ದಿವ್ಯಾತ್ಮನಾಗುತ್ತಾನೆ. ತನ್ನ ತಪ್ಪನ್ನು ತಾನರಿತುಕೊಳ್ಳುವುದು ಮಾನವನ ಹಿರಿಯ ಗುಣ ; ಅರಿತ ತಪ್ಪನ್ನು ಇತರರ ಮುಂದೆ, ಅದರಲ್ಲೂ ತನ್ನ ಶತ್ರುವಿನ ಮುಂದೆ ಒಪ್ಪಿಕೊಳ್ಳುವುದೂ ಆದರ್ಶ ಮಾನವನ ಆದರ್ಶ ಲಕ್ಷಣ. ಹಾಗೆ ಒಪ್ಪಿಕೊಂಡು, ಆ ಅಪರಾಧ ಪಶ್ಚಾತ್ತಾಪ ವಹ್ನಿಯಲ್ಲಿ ದಗ್ಧವಾದಾಗಲೇ ದೇವತ್ವ ಮಾನವತ್ವದ ಸ್ಥಾನವನ್ನಾಕ್ರಮಿಸುತ್ತದೆ." [16]

---

[16] ಶ್ರೀ ದೇ. ಜ. ಗೌ. ಅವರ ದಾರ್ಶನಿಕ ಪ್ರಬಂಧ "ವಾಲಿ". ಪ್ರಬುದ್ಧ ಕರ್ಣಾಟಕ : ಜಯ ಸಂವತ್ಸರ ಆಶ್ವಯುಜ ಸಂಚಿಕೆ, ಪು. ೨೭ ನೋಡಿ.

ಇಲ್ಲಿ—ಶ್ರೀರಾಮಾಯಣ ದರ್ಶನದಲ್ಲಿ—ಶ್ರೀರಾಮಚಂದ್ರ ಮರೆಯಲ್ಲಿ ನಿಂತು ನಿರಪರಾಧಿಯೂ, ಪಾಪರಹಿತನೂ, ನಿರ್ವೈರನೂ ಆದ ವಾಲಿಯನ್ನು ಸಂಹರಿಸಿದುದು ತಪ್ಪೆಂದು ತಾನೇ ಒಪ್ಪಿಕೊಂಡಮೇಲೆ, ಇನ್ನು ಯಾವ ಬಗೆಯ ಆಕ್ಷೇಪಣೆಯನ್ನೂ ಮಾಡುವಂತಿಲ್ಲ. "ಕ್ರೂರರತ್ಯಧಮರುದ್ರೇಕಿಗಳು ದುರ್ಜನಾಕಾರರುಂ ಧೂರ್ತರೊಳಗಾಗಿ ಶರಣೆನಲು ನಿಜವೈರಮಂ ಬಿಡುವರೆಂದಾಗ."[17] ಸಹೃದಯರು ಶ್ರೀರಾಮನ ತಪ್ಪನ್ನು ಮನ್ನಿಸುವುದರಲ್ಲಿ ಯಾವ ಅನುಮಾನವೂ ಇಲ್ಲ; ಅಧರ್ಮವೂ ಇಲ್ಲ. ಶ್ರೀರಾಮಾಯಣ ದರ್ಶನದ ಶ್ರೀರಾಮ, ವಾಲ್ಮೀಕಿ ರಾಮಾಯಣದ ರಾಮನಂತೆ 'ಹಿಟ್ಲರ್ ಮುಸೋಲಿನಿ'ಯ ಪೂರ್ವಜನಂತೆ ಕಾಣುವುದಿಲ್ಲ. ಮಾಡಿದ್ದು ತಪ್ಪೆಂದು ಒಪ್ಪಿಕೊಂಡು ಲೌಕಿಕದ ವೀರತನಕ್ಕೆ ಮರ್ಯಾದೆ ತಂದಿದ್ದಾನೆ.

೨

ವಾಲ್ಮೀಕಿ ರಾಮಾಯಣದ ವಾಲಿವಧಾ ಪ್ರಸಂಗದಲ್ಲಿ ಶ್ರೀರಾಮನ ವರ್ತನೆ ಸಂಪೂರ್ಣ ಅಸಮರ್ಥನೀಯವೂ, ಕಲಂಕಪೂರಿತವೂ ಅಕ್ಷಮ್ಯವೂ ಆಗಿದ್ದುದು, ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ ಕೆಲವು ಮಟ್ಟಿಗೆ ಕ್ಷಮ್ಯವೂ, ಕಲಂಕದ ಪ್ರಮಾಣವು ತಗ್ಗುವಂತೆಯೂ ಕವಿ ಸನ್ನಿವೇಶಗಳನ್ನು ಸೃಷ್ಟಿಸಿದ್ದಾರೆ. ಮಾಡಿದ್ದು ತಪ್ಪು ಎಂದು ಒಪ್ಪಿಕೊಂಡಮೇಲೆ ಅದನ್ನು ಸಮರ್ಥಿಸುವ ಮಾತೇ ಉಳಿಯಲಿಲ್ಲ. ಆದಕಾರಣ, "ಆದರ್ಶ ಪುರುಷನಾದ ಶ್ರೀರಾಮನ ವರ್ತನೆ... ಯಾರೆ ಆಗಲಿ ಎಷ್ಟೆ ಆಗಲಿ ಆದರ್ಶಪ್ರಾಯವೆಂದು ಸಮರ್ಥಿಸಲು ಸಾಧ್ಯವಿಲ್ಲ" ಎಂಬ ಮಾತು ನಿರ್ವಿವಾದವಾಗಿ ಉಳಿಯುತ್ತದೆ. ಅವತಾರ ಪುರುಷನಾದ ಶ್ರೀರಾಮಚಂದ್ರನು ಈ ರೀತಿಯಾಗಿ ಸಾಮಾನ್ಯ ಮಾನವನಿಗೂ ಭೂಷಣವಲ್ಲದ ರೀತಿಯಲ್ಲಿ ಏಕೆ ವರ್ತಿಸಿದ? ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ ವ್ಯತಿರಿಕ್ತವೂ ಅನ್ಯಾಯವೂ ಅಧರ್ಮವು ಅನೀತಿಯೂ ಆಗಿ ತೋರಿಬರುವ ಘಟನೆಯಲ್ಲಿ ಏನಾದರೂ ಅರ್ಥ ಇರಬಹುದೆ? ಈ ಅಸಲು ಪ್ರಶ್ನೆಗೆ ಉತ್ತರವನ್ನು ಬಯಸುವವರು ಪ್ರತಿಮಾ ವಿಧಾನದ ದರ್ಶನಧ್ವನಿಯ ಪೂರ್ಣ ದೃಷ್ಟಿಯನ್ನು ಮರೆ ಹೊಗಬೇಕಾಗುತ್ತದೆ.

ತ್ರೇತಾಯುಗದ ಅವತಾರಪುರುಷ ಶ್ರೀರಾಮನು ಮರೆಯಲ್ಲಿ ನಿಂತು ವಾಲಿಯನ್ನು ಸಂಹರಿಸಿದುದರ ನ್ಯಾಯ, ಧರ್ಮ, ಅರ್ಥವನ್ನು ಪ್ರಶ್ನಿಸುವಂತೆ, ದ್ವಾಪರ

---

[17] ರಾಘವಾಂಕನ "ಹರಿಶ್ಚಂದ್ರ ಕಾವ್ಯಸಂಗ್ರಹ" (೧೯೩೮. ಮೂರನೆ ಮುದ್ರಣ) ಪುಟ ೪೮.

ಯುಗದ ಅವತಾರ ಶ್ರೇಷ್ಠನಾದ ಕೃಷ್ಣನ ಕೆಲವು ಕೃತ್ಯಗಳನ್ನೂ ಪ್ರಶ್ನಿಸಿದ್ದಾರೆ. ಕರ್ಣನ ವಧೆಯೂ ಈ ವಾಲಿವಧೆಯಷ್ಟೇ ಕ್ರೂರ, ನೀತಿಬಾಹಿರ ಅಸಮರ್ಥನೀಯ (ಲೋಕಸಾಮಾನ್ಯ ನೀತಿಯ ಮತ್ತು ಧರ್ಮದ ದೃಷ್ಟಿಗೆ) ವಾಗಿ ತೋರುತ್ತದೆ. ಈ ಅವತಾರಿಗಳೆಂಬ ಮಹಾ ಪುರುಷರು, ಪುರುಷೋತ್ತಮರು ಹೀಗೇಕೆ ಸಾಮಾನ್ಯರಿಗೂ ಮಾನ್ಯವಾಗದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ? ಇದು ಸಾಮಾನ್ಯ ಮಾತಿಗೆ, ತರ್ಕಕ್ಕೆ ಸಿಗಲಾರದ ಉತ್ತರ. ಉತ್ತರಿಸಲು ಪ್ರಯತ್ನಿಸಿದರೂ ಆ ಸತ್ಯವನ್ನು ಕಾಣುವುದೂ ಕಷ್ಟ!! "ಅನಿರ್ವಚನೀಯವಾದ ಭಗವಂತನ ಎಲ್ಲ ವ್ಯಾಪಾರಗಳಿಗೂ ಲೋಕಸಾಮಾನ್ಯ ರೀತಿಯಲ್ಲಿ ನಿರ್ವಚನ ಹೇಳಲು ಸಾಧ್ಯವಿಲ್ಲ ಎಂಬುದಕ್ಕೆ ಇದಿನ್ನೊಂದು ನಿದರ್ಶನ"[18] ಎಂದೇ ಕೊನೆಯ ನಿರ್ಧಾರಕ್ಕೆ ಬರಬೇಕಾಗುತ್ತದೆ. ಇದೊಂದೇ ಅದಕ್ಕಿರುವ ಅರ್ಥ ಸಮರ್ಥಿಸಬೇಕೆಂದರೆ ದೊರೆಯುವ ನೆರವು.

ವಾಲ್ಮೀಕಿ ರಾಮಾಯಣದಲ್ಲಿ ಈ ದರ್ಶನಧ್ವನಿ ಸ್ಫುರಿಸುವಂಥ ಯಾವ ಮಾತುಗಳೂ, ಪ್ರಸಂಗಗಳೂ, ಸಂದರ್ಭಗಳೂ, ಸನ್ನಿವೇಶಗಳೂ ಬಂದಿಲ್ಲ. ಆದರೆ ಶ್ರೀರಾಮಾಯಣದರ್ಶನದಲ್ಲಿ ಮಾತ್ರ ಈ ಸಂದರ್ಭದ ವರ್ತನೆಗೆ ಅರ್ಥವನ್ನು ಸಮರ್ಥನೆಯನ್ನು ಕೊಡುವ ಕೆಲವು ಮಾತುಗಳು ಲಕ್ಷ್ಯವಿಟ್ಟು ಓದುವ, ಆಲಿಸುವ ಸಹೃದಯರ ಗಮನದಿಂದ ತಪ್ಪಿಸಿಕೊಳ್ಳಲಾರವು. ರಘುಕುಲದ ಶುಭ್ರ ಕೀರ್ತಿಯ ದಾಶರಥಿ ಕಠೋರ ಶರಮೃತ್ಯುವನ್ನು ವಾನರನ ಬೆನ್ಗೆ ಬಿಡುವ ಮುಂಚೆ ಕವಿ ಹೀಗೆ ನುಡಿಯುತ್ತಾರೆ.

"ನಿರ್ಲಕ್ಷಿಸುತೆ ದೈವಮಂ, ಪ್ರತಿಭಟಿಸಿ
ದೈವೀಪರಂಗಳಂ ಶಕ್ತಿಯಂ, ನೆಮ್ಮುತ್ತೆ
ತನ್ನಹಂಕಾರಮಂ ಸ್ವಬಲಮಂ ಸ್ವಾರ್ಥಮಂ,
ಛಲದಿಂ ವಿರೋಧಿಸಲ್ ವೈರಭಾವವಸಾಂತ
ಆಸುರೀ ಸಾಧನೆಯ ದೈವೀವಿಮುಖಮಪ್ಪ
ಲೌಕಿಕ ಪರಾಕ್ರಮದ ಶಿಕ್ಷಾ ರಕ್ಷೆಗಿನ್ನಿಹುದೆ,
ಪೇಳ್ ಕೃಪಾಬಾಣಕ್ಕೆ ಬೆನ್ನಲ್ಲದನ್ಯಲಕ್ಷ್ಯಂ
ತುದಿಗೆ?[19]

ದೈವೀಪ್ರವೃತ್ತಿ, ಆಸುರೀಪ್ರವೃತ್ತಿ ಅಣ್ಣತಮ್ಮಂದಿರಿದ್ದಂತೆ. ವಾಲಿ ಸುಗ್ರೀವರಂತೆ! ವಾಲಿ, ಆಸುರೀಪ್ರವೃತ್ತಿಯ ಪ್ರತೀಕ. ಸುಗ್ರೀವ ದೈವೀಪ್ರವೃತ್ತಿಯ ಪ್ರತೀಕ . . .

---

[18] ಶ್ರೀ ಕುವೆಂಪು "ವಿಭೂತಿಪೂಜೆ" ಪುಟ ೧೩೧.

[19] ಶ್ರೀ ರಾ. ದ. ಪುಟ ೩೧೧. ಸಾಲುಗಳು ೨೭೪ ರಿಂದ ೨೮೦.

ಅವೆರಡೂ ಗುಣಗಳು ಪ್ರತಿಯೊಬ್ಬ ಮಾನವನಲ್ಲಿಯೂ ಮನೆಮಾಡಿದೆ. ಆದರೆ ದೈವೀ ಪ್ರವೃತ್ತಿಗೆ ದೈವ ಬೆಂಬಲಬೇಕು. ಆದ್ದರಿಂದಲೇ ಸುಗ್ರೀವನಿಗೆ ಶ್ರೀರಾಮಚಂದ್ರ ಬೆಂಬಲಕ್ಕೆ ಬರಬೇಕಾಯಿತು. ಆಸುರೀಪ್ರವೃತ್ತಿ ತಾನಾಗಿಯೇ ಎಂದೆಂದಿಗೂ ದೇವರಿಗೆ ಮುಖಮಾಡಿ ನಿಲ್ಲುವುದಿಲ್ಲ. ದೈವೀ ವಿಮುಖವಾಗಿರುವುದೇ ಅದರ ಸ್ವಭಾವ. ಒಂದು ವೇಳೆ ದೈವೀಪ್ರವೃತ್ತಿಯ ಕಡೆಗೆ ತಿರುಗಿದರೆ ಅದು ಆಸುರೀ ಪ್ರವೃತ್ತಿಯಾಗಿ ಉಳಿಯುತ್ತಿರಲಿಲ್ಲ. ಶ್ರೀರಾಮಚಂದ್ರನು ಆದ್ದರಿಂದಲೇ ಅನಿವಾರ್ಯ ವಾಗಿ ವಾಲಿಯನ್ನು ಅರ್ಥಾತ್ ತಮಃಪ್ರವೃತ್ತಿಯನ್ನು ಬೆನ್ನಿಗೇ ಹೊಡೆದು ಕೊಲ್ಲುತ್ತಾನೆ. ಇದು ಒಂದು ಅರ್ಥ.

ಈ ಸಂದರ್ಭವನ್ನು ಇನ್ನೊಂದು ರೀತಿಯಲ್ಲೂ ಅರ್ಥಮಾಡಬಹುದು. ಆ ಅರ್ಥಕ್ಕೂ ಶ್ರೀ ರಾಮಾಯಣದರ್ಶನದಲ್ಲಿ ಸೂಚ್ಯವಾಗಿ ಧ್ವನಿಪೂರ್ಣವಾಗಿ ಆಧಾರವು ದೊರೆಯುತ್ತದೆ. ಶ್ರೀರಾಮನ ಬಾಣದಿಂದ ಗಾಯಗೊಂಡು ಬಿದ್ದಿದ್ದ ವಾಲಿ, ರಾಮನನ್ನು ತನ್ನ ಇಚ್ಛಾನುಸಾರವಾಗಿ ನಿಂದಿಸುತ್ತಾನೆ. ಅದಕ್ಕೆ ಶ್ರೀ ರಾಮನ ಪ್ರಪ್ರಥಮ ಪ್ರತಿಕ್ರಿಯೆ.

"ವಿಧಿಯ ವಿನ್ಯಾಸಮಂ ನಿಂದಿಸಿದೊಡೇಂ ಫಳಂ"

ಎಂಬುದು. ಇದೇ ಸತ್ಯ ಎಂಬುದನ್ನು ಸಮರ್ಥಿಸುವಂತೆ ಮಾರುತಿಯೂ ಕೂಡ:

'ವಕ್ರವಿಧಿಗಾದನಾಹುತಿ ಶಕ್ರಸಂಭವಂ!'[20]

ಎನ್ನುತ್ತಾನೆ. ಇದೇ ಸತ್ಯವನ್ನು ಕೊನೆಗೆ ವಾಲಿಯೇ ಒಪ್ಪಿಕೊಳ್ಳುತ್ತಾನೆ. ತನ್ನ ತಪ್ಪನ್ನು ಒಪ್ಪಿಕೊಂಡಮೇಲೆ, ಬಳಿಯಲ್ಲಿ ಕುಳಿತು ಕಣ್ಣೀರು ಕರೆದು ರೋದಿಸುವ ರಾಮನನ್ನು ನೋಡಿ ವಾಲಿ:

"... ತಪ್ಪು ನಿನತೊರ್ವನದೆ ಅಲ್ತು ...
ನೀನೆಂದವೊಲೆ ವಿಧಿಯ ವಿನ್ಯಾಸಮೇಂ ಬೇರೆ
ಪಾಂಗಿಹುದೊ? ...
... ನೀವನಿಬರುಂ ಬಳಲಿ ಸಾಧಿಸುವ
ಕಜ್ಜಮಂ, ಲೀಲೆಯಿಂ ಸಾಧಿಸುತ್ತಿರ್ದೆನಾಂ ...
ಆದರೇಂ ಬಿದಿಯು ಬಗೆ ಬೇರೆ! ...[21]

ವಾಲಿಯು ರಾಮನ ಬಾಣದಿಂದ ಬೆನ್ನಿಗೆ ಹೊಡೆಸಿಕೊಂಡು ಸಾಯಬೇಕೆಂಬುದು

[20] ಅದೇ ಪುಟ ೩೧೪. ಸಾಲು ೩೫೬.

[21] ಅದೇ ಪುಟ ೩೧೫. ಸಾಲು ೩೪೦ ರಿಂದ.

ವಿಧಿಯು ಇಚ್ಛೆಯಿರುವಾಗ ಅದನ್ನು ರಾಮಲಕ್ಷ್ಮಣರಾಗಲಿ, ವಾಲಿಸುಗ್ರೀವ ರಾಗಲಿ, ತಪ್ಪಿಸುವುದಕ್ಕೆ ಹೇಗೆ ಸಾಧ್ಯ? ವಾಲಿ ಏನಾಗಬೇಕು, ಎಂತಾಗಬೇಕು ಎಂಬ ನಾಟಕವನ್ನು ವಾಲಿರಾಮರಿಗಿಂತ ಅಧಿಕವಾದ ಶಕ್ತಿ ಆಗಲೇ ಬರೆದಿಟ್ಟು ಸಿದ್ಧಗೊಳಿಸಿದೆ. ಆ ನಾಟಕವನ್ನು ರಂಗದ ಮೇಲೆ ಅಭಿನಯಿಸಿದ ಪಾತ್ರ ಗಳು ಈ ರಾಮಲಕ್ಷ್ಮಣ, ವಾಲಿಸುಗ್ರೀವ, ಸೀತೆ, ಕೈಕೆ ಮುಂತಾದವ ರೆಲ್ಲರೂ ಕೂಡ. ವಿಧಿಯು ವಜ್ರೇಚ್ಛೆ ಏನಾಗಬೇಕೆಂದು ಪೂರ್ವಸಿದ್ಧತೆ ಮಾಡಿ ಕೊಂಡಿದೆಯೋ ಅದೇ, ಅದೇ ಕ್ರಮದಲ್ಲೇ, ಸಮಯದಲ್ಲೇ ನೆರವೇರುವುದು; ನೆರವೇರಲೇಬೇಕು. ಈ ವಿಧಿ ಎಂಬುದಾದರೂ ಜಗತ್ತಿನ ಉಪಪ್ರಜ್ಞೆಯ ಉದ್ದೇಶ. ಆ ಉದ್ದೇಶವು ವಿಧಿಯೆಂಬುದರಲ್ಲಿ ವ್ಯಕ್ತವಾಗುತ್ತದೆ.[22] ಅದನ್ನೇ ಭಗವದ್ಗೀತೆಯಲ್ಲಿ ಭಗವಾನ್ ಶ್ರೀ ಕೃಷ್ಣಪರಮಾತ್ಮನು:

ಮಯ್ಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್.
(XI : ೩೩)

"ಇವರೆಲ್ಲರೂ ಮೊದಲೇ ನನ್ನಿಂದ ಹತರಾಗಿದ್ದಾರೆ. ಎಲೈ ಸವ್ಯಸಾಚಿಯೇ ನೀನು ನಿಮಿತ್ತ ಮಾತ್ರನಾಗಿರು" ಎಂದು ಹೇಳುವಾಗಲೂ ಈ ವಿಧಿವಿನ್ಯಾಸ, ವಿಧಿಲೀಲೆ ಯನ್ನೇ ಸಮರ್ಥಿಸುತ್ತಾನೆ. ಆ ವಿಧಿಲೀಲೆ ಇದ್ದಂತೆ ಆಗಲಿ ಎಂದು ಸಂಪೂರ್ಣ ವಾಗಿ ಅವನಲ್ಲಿಯೇ ಶರಣಾಗತನಾಗಿ, **ನಾನು** ಮಾಡುತ್ತೇನೆ ಎಂದು ಮಾಡದೆ **ಅವನು** ಮಾಡಿಸುತ್ತಾನೆ ಎಂದು ಶರಣಾಗತನಾದರೆ ಪಾಪ ಪುಣ್ಯ, ಧರ್ಮಾಧರ್ಮ, ನೀತಿ ಅನೀತಿ ಎಂಬ ಯಾವ ಲೋಕಸಾಮಾನ್ಯ ಮಾನದಂಡದಿಂದಲೂ, ಯಾವ ಘಟನೆಯನ್ನೂ ವರ್ತನೆಯನ್ನೂ ಪರೀಕ್ಷಿಸಿ ನೋಡುವ ಪ್ರಸಂಗವೇ ಬರುವುದಿಲ್ಲ. ಸರ್ವ ಧರ್ಮಗಳನ್ನೂ ಪರಿತ್ಯಜಿಸಿ ಅವನೊಬ್ಬನೇ ಶರಣೆಂದು ನೆರೆನಂಬಿದಾತನಿಗೆ ಬಹಿರಂಗದಲ್ಲಿ ಖಾಡಾ ಖಾಡ ಯುದ್ಧದಲ್ಲಿ ಕೊಲ್ಲುವುದು ಎಷ್ಟು ಧರ್ಮವೋ, ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡುವುದೂ ಅಷ್ಟೇ ಧರ್ಮ!! ರಾಮ, ಇಲ್ಲಿ ಎಲ್ಲರಂತೆ, ಅವನೂ ಆ ಅದೃಶ್ಯ ಕರ್ತೃವಿನ ಕೈಯಲ್ಲಿರುವ ಉಪಕರಣ. ನಾವು ಕಾರನ್ನು ಹಿಮ್ಮುಖವಾಗಿ ನಡೆಸಿದರೆ, ಅದು ಕಾರಿನ ತಪ್ಪೋ ನಡೆಸುವವನ ತಪ್ಪೋ.

[22] Fate (is) a will that manifests itself in the irresistible subconscious intention of the world.

—SRI AUROBINDO.

ಕಾರು ಹೇಗೆ ನಡೆಸಿದರೆ ಹಾಗೆ ನಡೆಯುವುದು ಅದರ ಧರ್ಮ ಅಷ್ಟೇ. ಹಾಗೆಯೇ ಆ ಡ್ರೈವರಿನ ಕೈಯಲ್ಲಿರುವ ಕಾರುಗಳು ಈ ರಾಮ ಸೀತೆ, ವಾಲಿ ಸುಗ್ರೀವ, ರಾವಣ ಕುಂಭಕರ್ಣರೆಲ್ಲರೂ ಕೂಡ. ಆ ಡ್ರೈವರ್ ಹೀಗೇಕೆ ಕಾರನ್ನು ಹಿಂದುಮುಂದಾಗಿ ನಡೆಸುತ್ತಾನೆ? ಲೋಕಸಾಮಾನ್ಯ ನೀತಿಗೆ ವಿರುದ್ಧವಾಗಿ ಏಕೆ ನಡೆಸುತ್ತಿದ್ದಾನೆ? ಅದು ಅವನಿಗೇ ಗೊತ್ತು. ಮುಮ್ಮುಖವಾಗಿ ಯಾವಾಗ ನಡೆಸಬೇಕು? ಹಿಮ್ಮುಖವಾಗಿ ಯಾವಾಗ ಹೋಗಬೇಕು ಎಂಬುದು ನಡೆಸುವಾತನಿಗೆ ಗೊತ್ತು. ಅದನ್ನು ಹೇಗೆ ನಡೆಸಬೇಕೆಂಬ ವಿಚಾರದಲ್ಲಿ ಅವನು ನಮ್ಮ ಬುದ್ಧಿವಾದವನ್ನು ಮಾರ್ಗದರ್ಶನವನ್ನೇನೂ ಕೇಳಬೇಕಾಗಿಲ್ಲ. ಆ ಶಕ್ತಿ—ಜಗವನಾಳುವ ಋತಶಕ್ತಿ—ನಮ್ಮಷ್ಟೇ ಸಮರ್ಥವಾಗಿದೆ. ಅದರ ಯೋಗಕ್ಷೇಮವನ್ನು ಅದು ನೋಡಿಕೊಳ್ಳುತ್ತದೆ. ಅದಕ್ಕೆ ನಮ್ಮ ಒಪ್ಪಿಗೆಯ ಮುದ್ರೆ ಬೀಳಬೇಕಾದುದೇನೂ ಅಗತ್ಯವಿಲ್ಲ.[23] ಸಂದರ್ಭಕ್ಕೆ ತಕ್ಕಂತೆ ನಡೆಸುವ ಕುಶಲತೆ ಅವನದು. ಎಲ್ಲ ಸಂದರ್ಭಗಳಲ್ಲೂ ಅದು ನಮಗೆ ಅರ್ಥವಾಗುವುದಿಲ್ಲ. ಕಣ್ಣಿಗೂ ಕಾಣುವುದಿಲ್ಲ. ಅದಕ್ಕೆ 'ಅದೃಷ್ಟ' ಎನ್ನುತ್ತೇವೆ.

ಒಂದುವೇಳೆ ವಾಲಿ ಹೇಳುವಂತೆ, ಶ್ರೀರಾಮಚಂದ್ರ ಸುಗ್ರೀವನೊಬ್ಬನ ಸಖ್ಯವನ್ನು ಮಾಡದೆ, ವಾಲಿಯ ಗೆಳೆತನವನ್ನೇ ಮಾಡಿದ್ದರೆ, ಲೀಲಾಜಾಲವಾಗಿ ಯಾವ ಯುದ್ಧ, ತೊಂದರೆ, ತಾಪತ್ರಯ, ಸಂಕಟ, ದುಃಖವಿಲ್ಲದೆ ಸೀತಾದೇವಿಯನ್ನು ರಾವಣನಿಂದ ಮರಳಿ ಪಡೆಯಬಹುದಾಗಿತ್ತು. ಆಯಾಸವಿಲ್ಲದೆ ಕೆಲಸವಾಗುತ್ತಿತ್ತು. ಆದರೆ, ಶ್ರೀರಾಮಚಂದ್ರ ಎದೆಯೊಡ್ಡಿ ಎದುರು ಬೆಟ್ಟವನ್ನು ಹತ್ತುವಂತಹ ಕೆಲಸವನ್ನೇಕೆ ಹಚ್ಚಿಕೊಂಡ? ಒಂದುವೇಳೆ ವಾಲಿಯ ಮಾತಿನಂತೆ ನಡೆದುಕೊಂಡಿದ್ದರೆ, ರಾವಣನ ರಾವಣತ್ವ ತವಿದು ರಾಮತ್ವ ಉಂಟಾಗುತ್ತಿದ್ದ ಬಗೆ ಹೇಗೆ? ದೈತ್ಯೇಂದ್ರನ ಅಹಂಕಾರವು ಪುಡಿಪುಡಿಯಾಗಿ ಶ್ರೀರಾಮನ ಆತ್ಮವನ್ನು ಹೊಗುವುದಾದರೂ ಹೇಗೆ ಸಾಧ್ಯವಾಗುತಿತ್ತು? ರಾಮಾಯಣ ನಡೆಯುತ್ತಲೇ ಇರಲಿಲ್ಲ! ಆದರೆ ರಾಮಾಯಣ ನಾಟಕವನ್ನು ಬರೆದಿಟ್ಟುಬಿಟ್ಟಿರುವುದರಿಂದ ಆ ಯುಗದಲ್ಲಿ ಆ ಪಾತ್ರಗಳು ಅದನ್ನು ಸಂಪೂರ್ಣ ಆಡಿ ಮುಗಿಸಲೇಬೇಕಾಗಿತ್ತು!!

ಅಲ್ಲದೆ, ಶ್ರೀರಾಮನ ಅವತಾರದ ಉದ್ದೇಶವಾದರೂ ನೆರವೇರಬೇಕಾದರೆ ಈ ಘಟನೆ, ಹೀಗೆಯೇ ನೆರವೇರಬೇಕೆಂದು ಪೂರ್ವಭಾವಿಯಾಗಿ ನಿರ್ಣಯಿಸಲ್ಪಟ್ಟಿರಬೇಕು. ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸರ್ವತೋಮುಖವಾದ ಸಾಮೂಹಿಕ ವಿಕಾಸಕ್ಕಾಗಿ ರಾಮಾಯಣದ ಘಟನಾಪರಂಪರೆಗಳು ಈಗ ನಡೆದ ಕ್ರಮದಲ್ಲೇ ರೀತಿಯಲ್ಲೇ

[23] ಮುಂದಿನ ಪುಟದ ಅಡಿ ಟಿಪ್ಪಣಿ ನೋಡಿ.

ನೆರವೇರಬೇಕೆಂದು ತೋರುತ್ತದೆ. ಆ ಘಟನಾಪರಂಪರೆಯ ಕ್ರಮದಲ್ಲಿ, ರೀತಿಯಲ್ಲಿ ಏನಾದರೂ ಬದಲಾವಣೆಯನ್ನು ಅಪೇಕ್ಷಿಸುವವರು, ಉಂಟುಮಾಡಲು ಪ್ರಯತ್ನಿಸುವವರು, ಅಕಾಲದಲ್ಲಿ ಪ್ರಸೂತಿಯಾಗಬೇಕೆಂದು ಅಪೇಕ್ಷಿಸಿದಂತೆ, ಪ್ರಯತ್ನಿಸಿದಂತೆ.

ಈ ದರ್ಶನಧ್ವನಿ ದೃಷ್ಟಿಯಿಂದ ಮಾತ್ರ ಶ್ರೀರಾಮನ ಈ ವರ್ತನೆ ಸಮರ್ಥನೀಯವೆಂದು ಹೇಳಬಹುದು.

ಕೋ. ಚೆನ್ನಬಸಪ್ಪ

---

[23] The power that governs the world is at least as wise as you and it is not absolutely necessary that you should be consulted or indulged in its management; God is seeing to it.

—SRI AUROBINDO.

ಅಭಿಸಾರಿಕೆ

೧

ಆಶಾ ಜ್ಯೋತಿಯ ಬೆಳಗುತ ಕಾಯುವೆ
ನಿನ್ನ ಮಿಲನಕಾಗಿ
ಎವೆಗಳನಿಕ್ಕದೆ ಮಾರ್ಗವ ನೋಡುವೆ
ನಿನ್ನ ಬರವಿಗಾಗಿ.

೨

ತೋಟದಿ ಗಿಡಗಳ ಸದ್ದನು ಗಮನಿಸಿ
ನೀನೆ ಬಂದೆಯೆಂಬೆ
ಚಲಿಸುವ ಧ್ವನದಲಿ ವಿಚಲಿತಳಾಗುತೆ
ಭ್ರಾಂತಿಗೊಂಡು ಕಾಂಬೆ.

೩

ಸಾಗರ ಕೂಡಲು ಧುಮುಕುತ ಹರಿಯುವ
ನದಿಯ ತೆರದೆ ಬಂದೆ
ಯುಗಗಳ ಭಾರವ ಹೊರುತಿಹ ಕಾಲವ
ಕಳೆವುದೆಂತುಯೆಂದೆ.

೪

ಕತ್ತಲೆ ಕವಿದಿತು ಅಂತರಂಗದಲಿ
ಚಂದಿರ ಬರಲಿಲ್ಲಾ
ಚುಕ್ಕೆಯ ತೆರದಲಿ ಮಿಣುಕಿತು ಆಸೆಯು
ಸಮಯ ಸರಿಯೆ ಇಲ್ಲಾ.

—ಜಿ. ವಿ. ಕುಲಕರ್ಣಿ

ಕನ್ನಡ ಕಾವ್ಯಪ್ರಕಾಶ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(೧೧) ಅಪ್ರಸ್ತುತ ಪ್ರಶಂಸೆ

ಅಪ್ರಸ್ತುತಪ್ರಶಂಸಾ ಯಾ ಸಾ ಸೈವ ಪ್ರಸ್ತುತಾಶ್ರಯಾ ॥ ೧೨ cd ॥

ಪ್ರಕೃತ ವಿಷಯಕ್ಕೆ ಅನ್ವಯಿಸುವಂತಿರುವ ಅಪ್ರಕೃತ ವಸ್ತುವಿನ ವರ್ಣನೆಯೇ ಅಪ್ರಸ್ತುತ ಪ್ರಶಂಸೆ.[1]

ಪ್ರಾಕರಣಿಕವಲ್ಲದ ವಿಷಯ ವಾಚ್ಯವಾಗಿದ್ದರೂ ಅದರ ಮೂಲಕ ಪ್ರಾಕರಣಿಕವಾದ ವಿಷಯವೇ ಸೂಚ್ಯವಾಗಿರುವುದು ಅಪ್ರಸ್ತುತ ಪ್ರಶಂಸೆ.

ಅದರ ಐದು ಬಗೆಗಳು:

ಕಾರ್ಯೇ ನಿಮಿತ್ತೇ ಸಾಮಾನ್ಯೇ ವಿಶೇಷೇ ಪ್ರಸ್ತುತೇ ಸತಿ ।
ತದನ್ಯಸ್ಯ ವಚಸ್ತುಲ್ಯೇ ತುಲ್ಯಸ್ಯೇತಿ ಚ ಪಂಚಧಾ ॥ ೧೩ ॥

೧. ಕಾರ್ಯ ಪ್ರಸ್ತುತವಾದಾಗ ಅಪ್ರಸ್ತುತಕಾರಣದ ವರ್ಣನೆ, ೨. ಕಾರಣವು ಪ್ರಸ್ತುತವಾದಾಗ ಅಪ್ರಸ್ತುತ ಕಾರ್ಯದ ವರ್ಣನೆ, ೩. ಪ್ರಸ್ತುತವು ಸಾಮಾನ್ಯ (=*general*) ವಾಗಿರುವಾಗ, ಅಪ್ರಸ್ತುತವಾದ ವಿಶೇಷ (=*particular*) ದ ವರ್ಣನೆ, ೪. ವಿಶೇಷವು ಪ್ರಸ್ತುತವಾದಾಗ ಅಪ್ರಸ್ತುತ ಸಾಮಾನ್ಯದ ವರ್ಣನೆ, ೫. ಎರಡೂ ಸದೃಶ ವಸ್ತುಗಳಿರುವಾಗ ಪ್ರಸ್ತುತದ ಬದಲು ಅಪ್ರಸ್ತುತವನ್ನೇ ವರ್ಣಿಸುವುದು—ಹೀಗೆ ಅದು ಐದು ಬಗೆಯಾಗಿರುತ್ತದೆ.[2]

---

[1] ಇಲ್ಲಿ 'ಪ್ರಶಂಸೆ' ಎಂದರೆ ವರ್ಣನೆಯೆಂದರ್ಥವೇ ಹೊರತು ಸ್ತುತಿಯೆಂದಲ್ಲ.

[2] ಪ್ರಸ್ತುತಕ್ಕೆ ಸಂಬಂಧವಿಲ್ಲದ ಉಕ್ತಿಯು ಅಸಂಬದ್ಧಪ್ರಲಾಪವೆನಿಸುವುದು. ಆದ್ದರಿಂದ ಅಲಂಕಾರವೆನಿಸಬೇಕಾದರೆ ಅಪ್ರಸ್ತುತಕ್ಕೆ ಪ್ರಸ್ತುತದೊಡನೆ ಸೂಚ್ಯವಾದ ಸಂಬಂಧವಿರಬೇಕು. ಈ ಸಂಬಂಧಗಳು ಐದು ಬಗೆಯಾಗಿರಬಹುದೆಂದು ಇಲ್ಲಿ ತೋರಿಸಿದೆ.

ಪ್ರಸ್ತುತದಿಂದ ಅಪ್ರಸ್ತುತ ಗಮ್ಯವಾಗುವಾಗಲೆಲ್ಲ 'ಸಮಾಸೋಕ್ತಿಯಾದರೆ' ಅಪ್ರಸ್ತುತದಿಂದ ಪ್ರಸ್ತುತವು ಗಮ್ಯವಾಗುವುದೇ 'ಅಪ್ರಸ್ತುತ ಪ್ರಶಂಸೆ', ಇಲ್ಲಿ ಒಂದು ಅರ್ಥ ವಾಚ್ಯ, ಮತ್ತೊಂದು ವ್ಯಂಗ್ಯ. 'ಶ್ಲೇಷೆ'ಯಲ್ಲೆಂದರೆ ಎರಡರ್ಥಗಳೂ ವಾಚ್ಯವೇ. ಪ್ರಸ್ತುತ—ಅಪ್ರಸ್ತುತಗಳಿಗೆ ಅಧ್ಯಾರೋಪವಿದ್ದರೂ ಇದನ್ನು 'ರೂಪಕ'ವೆನ್ನದಿರುವುದಕ್ಕೆ ಶಬ್ದಾರೋಪವಿಲ್ಲದೆ ಕೇವಲ ಅರ್ಥಾರೋಪವಿರುವುದು ಕಾರಣ.

ಕಾರಿಕೆಯಲ್ಲಿ 'ತದನ್ಯಸ್ಯ' ಎಂದರೆ 'ಅಪ್ರಸ್ತುತವಾದ ಕಾರಣ ಮುಂತಾದವುಗಳ' ಎಂದು ತಾತ್ಪರ್ಯ. ಅನುಕ್ರಮವಾಗಿ ಇವುಗಳಿಗೆ ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

(i) ಅಪ್ರಸ್ತುತಕಾರಣದ ವರ್ಣನೆ

ಯಾತಾಃ ಕಿಂ ನ ಮಿಲಂತಿ ಸುಂದರಿ ಪುನಶ್ಚಿಂತಾ ತ್ವಯಾ ಮತ್ಕೃತೇ
ನೋ ಕಾರ್ಯಾ ನಿತರಾಂ ಕೃಶಾಸಿ ಕಥಯತ್ಯೇವಂ ಸಬಾಷ್ಪೇ ಮಯಿ।
ಲಜ್ಜಾಮಂಥರತಾರಕೇಣ ನಿಪತತ್ ಪೀತಾಶ್ರುಣಾ ಚಕ್ಷುಷಾ
ದೃಷ್ಟ್ವಾ ಮಾಂ ಹಸಿತೇನ ಭಾವಿಮರಣೋತ್ಸಾಹಸ್ತಯಾ ಸೂಚಿತಃ[3]

ಪೋದರ್ ಸೇರರೆ ಮತ್ತೆ ಚೆನ್ನೆಯದರಿಂ ನೀಂ ಚಿಂತೆಯುಂ ತಾಳದಿರ್
ನೀಡುಂ ನೀಂ ಸೊರಗಿರ್ಪೆಯೆಂದು ನುಡಿಯಲ್ ನಾನಂದು ಕಣ್ಣೀರ್ಗಳಿಂ।
ಲಜ್ಜಾನಿಶ್ಚಲನೇತ್ರದಿಂ ತಡೆಯುತುಂ ಬೀಳ್ವಶ್ರುವಂ, ಹಾಸಮುಂ
ಬೀರಿರ್ದಾಕೆಯ ದೃಷ್ಟಿಯಿಂದೆ[4] ಮರಣೋತ್ಸಾಹಂ ವಲಂ ಸೂಚಿತಂ॥

'ಪ್ರಯಾಣ ಹೊರಟಿದ್ದ ನೀನು ಪ್ರಯಾಣವನ್ನು ನಿಲ್ಲಿಸಿರುವೆಯೇನು?' ಎಂದು ಕಾರ್ಯವನ್ನು ಕುರಿತ ಪ್ರಶ್ನೆಗೆ ಇಲ್ಲಿ (ಅಪ್ರಸ್ತುತವಾದ) ಕಾರಣದ ನಿರೂಪಣೆಯಿದೆ.

(ii) ಅಪ್ರಸ್ತುತ ಕಾರ್ಯದ ವರ್ಣನೆ

ರಾಜನ್ ರಾಜಸುತಾ ನ ಪಾಠಯತಿ ಮಾಂ ದೇವ್ಯೋऽಪಿ ತೂಷ್ಣೀಂ ಸ್ಥಿತಾಃ
ಕುಬ್ಜೇ ಭೋಜಯ ಮಾಂ ಕುಮಾರಸಚಿವೈರ್ನಾದ್ಯಾಪಿ ಕಿಂ ಭುಜ್ಯತೇ।
ಇತ್ಥಂ ನಾಥ ಶುಕಸ್ತವಾರಿಭವನೇ ಮುಕ್ತೋऽಧ್ವಗೈಃ ಪಂಜರಾತ್
ಚಿತ್ರಸ್ಥಾನವಲೋಕ್ಯ ಶೂನ್ಯವಲಭಾವೇಕೈಕಮಾಭಾಷತೇ॥

'ರಾಜಾ, ರಾಜಕುಮಾರಿಯೆನ್ನ ನುಡಿಸಳ್, ಮೌನಸ್ಥೆಯರ್ ರಾಣಿಯರ್
ತಾ ಯೆನ್ನೂಟದ ಕುಬ್ಜೆ, ಮಕ್ಕಳನಿಬರ್ ಮೇಣೂಟಮಂಗೆಯ್ಯರೇಂ'।

---

[3] ಅಮರುಶತಕ, ೧೦.

[4] ನೀನು ಅಗಲಿ ಹೋದುದಾದರೆ ನಾನು ಸಾಯುವುದು ಸಿದ್ಧವೆಂಬುದನ್ನು ನಾಯಿಕೆಯ ನಗೆ ಸೂಚಿಸುತ್ತದೆ.

ಇಂತಾ ಪಾಂಥವಿಮುಕ್ತಪಂಜರಶುಕಂ ತ್ವದ್ವೈರಿ ಸೌಧಸ್ಥಿತಂ
ಪೇಳುತ್ತಿರ್ಪುದು ನೋಡಿ ಶೂನ್ಯವಲಭೀಚಿತ್ರಸ್ಥರಂ ಸರ್ವರಂ ||

'ನೀನು ದಿಗ್ವಿಜಯಕ್ಕಾಗಿ ಹೊರಟಿರುವೆಯೆಂಬುದನ್ನು ಕೇಳಿದೊಡನೆಯೇ ನಿನ್ನ ಶತ್ರುಗಳು ತಮ್ಮ ಅರಮನೆಗಳನ್ನೂ ಬಿಟ್ಟು ಓಡಿರುವರು' ಎಂಬ ಕಾರಣವು ಇಲ್ಲಿ ಪ್ರಸ್ತುತ; ಅಪ್ರಸ್ತುತವಾದ ಅದರ ಕಾರ್ಯವನ್ನು ಮಾತ್ರ ಇಲ್ಲಿ ವರ್ಣಿಸಲಾಗಿದೆ.[5]

(iii) ಅಪ್ರಸ್ತುತ ವಿಶೇಷದ ವರ್ಣನೆ

ಏತತ್ತಸ್ಯ ಮುಖಾತ್ ಕಿಯತ್ ಕಮಲಿನೀಪತ್ರೇ ಕಣಂ ವಾರಿಣೋ
ಯನ್ಮುಕ್ತಾಮಣಿರಿತ್ಯಮಂಸ್ತ ಸ ಜಡಃ ಶೃಣ್ವನ್ಯದಸ್ಮಾದಪಿ।
ಅಂಗುಲ್ಯಗ್ರ ಲಘುಕ್ರಿಯಾಪ್ರವಿಲಯಿನ್ಯಾದೀಯಮಾನೇ ಶನೈಃ
ಕುತ್ರೋಡ್ಡೀಯ ಗತೋ ಮಮೇತ್ಯನುದಿನಂ ನಿದ್ರಾತಿನಾಂತಃಶುಚಾ।[6]

ಕಮಲದೆಲೆಯಲಿ ಪೊಳೆವ ನೀರ ಹನಿಯನು ಗಾಂಪ
ಮುತ್ತುಮಣಿಯೆಂದರಿವೊಡೇನಚ್ಚರಿ?
ಇದಕಿಂತ ಸೋಜಿಗವು—ಮತ್ತೊಬ್ಬ ಪಿಡಿಯಲದ
ಕೈನೀಡಿ ಮುಟ್ಟೆ ಹನಿ ಕಾಣದಿರಲು;
ನನ್ನ ಮುತ್ತದು ಹಾರಿ ಹೋಯಿತೆಲ್ಲಿಗೆನುತ್ತೆ,
ಶೋಕಿಸುತೆ ನಿದ್ರಿಸನು ಇನಿತು ದಿನವೂ.

'ಮೂರ್ಖರು ಬರಿದೇ ಎಲ್ಲವನ್ನೂ ತಮ್ಮದೆಂದುಕೊಳ್ಳುವರು' ಎಂಬುದಿಲ್ಲಿ ಪ್ರಸ್ತುತವಾದ ಸಾಮಾನ್ಯ ವಿಷಯ; ಅದಕ್ಕೆ ಬದಲಾಗಿ ವಿಶೇಷ ಲಕ್ಷ್ಯಗಳನ್ನು ಮಾತ್ರ ವರ್ಣಿಸಿದೆ.[7]

---

[5] ಇಲ್ಲಿಯೇ, ಶುಕವೃತ್ತಾಂತದ ವರ್ಣನೆಯೂ (ಎಂದರೆ ಕಾರ್ಯದ ವರ್ಣನೆ) ಪ್ರಸ್ತುತ ಎಂದು ಭಾವಿಸಿದರೆ, ಕಾರಣವನ್ನು ಭಂಗ್ಯಂತರದಿಂದ ಹೇಳಿದಂತಾಗುವುದರಿಂದ ಅಲಂಕಾರವು 'ಪರ್ಯಾಯೋಕ್ತ'ವೆನಿಸುತ್ತದೆ.

[6] ಭಲ್ಲಟಶತಕ, ೯೪.

[7] ಇದಕ್ಕೆ ಸಾಹಿತ್ಯ ದರ್ಪಣದಲ್ಲಿ ಕಾಳಿದಾಸನ ರಘುವಂಶದ ಈ ಉದಾಹರಣೆಯನ್ನು ತೋರಿಸಲಾಗಿದೆ—

ಸ್ರಗಿಯಂ ಯದಿ ಜೀವಿತಾಪಹಾ ಹೃದಯೇ ಕಿಂ ನಿಹಿತಾ ನ ಹಂತಿ ಮಾಮ್ |
ವಿಷಮಪ್ಯಮೃತಂ ಕ್ವಚಿದ್ ಭವೇದಮೃತಂ ವಾ ವಿಷಮೀಶ್ವರೇಚ್ಛಯಾ || (VIII. 46)

(iv) ಅಪ್ರಸ್ತುತ ಸಾಮಾನ್ಯದ ವರ್ಣನೆ

ಸುಹೃದ್ವಧೂಬಾಷ್ಪಜಲಪ್ರಮಾರ್ಜನಂ
ಕರೋತಿ ವೈರಪ್ರತಿಯಾತನೇನ ಯಃ |
ಸ ಏವ ಪೂಜ್ಯಃ ಸ ಪುಮಾನ್ ಸ ನೀತಿಮಾನ್
ಸುಜೀವಿತಂ ತಸ್ಯ ಸ ಭಾಜನಂ ಶ್ರಿಯಃ ||[8]

ವೈರಕೆ ಪ್ರತಿಗೈಯುತೆ ಸಖ—
ನಾರೀಜನ ಬಾಷ್ಪವಾರಿಯುಂ ಕಳೆವವನೇ |
ಶೂರಂ ಪೂಜ್ಯಂ ಧನ್ಯಂ
ಧೀರಂ ನಯಶಾಲಿಯಂತೆ ಲಕ್ಷ್ಮೀಪಾತ್ರಂ ||

ಇಲ್ಲಿ 'ಕೃಷ್ಣನನ್ನು ಕೊಂದು ನರಕಾಸುರನ ಹೆಂಡಿರ ದುಃಖವನ್ನು ಶಮನಗೊಳಿಸಿದರೆ ನೀನೇ ಶ್ಲಾಘ್ಯ' ಎಂಬ ವಿಶೇಷವು ಪ್ರಸ್ತುತ; ಅಪ್ರಸ್ತುತವಾದ ಸಾಮಾನ್ಯವು ಮಾತ್ರ ವರ್ಣಿತವಾಗಿದೆ.

(v) ಅಪ್ರಸ್ತುತವಾದ ಸದೃಶವಸ್ತುವಿನ ವರ್ಣನೆ

ಅಪ್ರಸ್ತುತವಾದ ಸದೃಶವಸ್ತುವಿನ ವರ್ಣನೆಯಲ್ಲಿ ಮೂರು ಒಳಭೇದಗಳನ್ನು ಹೇಳಬಹುದು—ಸದೃಶವಸ್ತುವು ಮತ್ತೊಂದನ್ನು ಸೂಚಿಸಲು (*a*) ಶ್ಲೇಷ, ಇಲ್ಲವೆ (*b*) ಸಮಾಸೋಕ್ತಿ ಇಲ್ಲವೆ (*c*) ಕೇವಲ ಸಾದೃಶ್ಯ—ಇವುಗಳು ನಿಮಿತ್ತವಾಗಬಹುದು.

(*a*) ಶ್ಲೇಷಮೂಲ

ಪುಂಸ್ತ್ವಾದಪಿ ಪ್ರವಿಚಲೇದ್ಯದಿ ಯದ್ಯಧೋಽಪಿ
ಯಾಯಾದ್ಯದಿ ಪ್ರಣಯನೇ ನ ಮಹಾನಪಿ ಸ್ಯಾತ್ |
ಅಭ್ಯುದ್ಧರೇತ್ತದಪಿ ವಿಶ್ವಮಿತೀದೃಶೀಯಂ
ಕೇನಾಪಿ ದಿಕ್ ಪ್ರಕಟಿತಾ ಪುರುಷೋತ್ತಮೇನ ||[9]

---

[8] ಕೃಷ್ಣನು ನರಕಾಸುರನನ್ನು ಕೊಂದಾಗ ನರಕಾಸುರನ ಮಂತ್ರಿಯೊಬ್ಬನು ಅವನ ಮಿತ್ರನಾದ ಶಾಲ್ವನಿಗೆ ಹೇಳುವ ಮಾತೆಂದು ಟೀಕಾಕಾರರು ಬರೆಯುತ್ತಾರೆ.

[9] ಭಲ್ಲಟಶತಕ, ೭೯. ಪುಂಸ್ತ್ವ = ಪರಾಕ್ರಮ ಮತ್ತು ಗಂಡುತನ. ಅಧೋಗಮನ = ಪಾತಾಳಗಮನ ಮತ್ತು ನೀಚವೃತ್ತಿ. ನ ಮಹಾನ್ = ವಾಮನ ಮತ್ತು ಸಣ್ಣತನ. ಪುರುಷೋತ್ತಮ = ವಿಷ್ಣು ಮತ್ತು ಉತ್ತಮ ಮನುಷ್ಯ. ವಿಶ್ವ = ಜಗತ್ತು ಮತ್ತು ಪ್ರಜೆಗಳು.

ತೊರೆದುಂ ಪುಂಸ್ತ್ವವ, ಕಿಳ್ದಿಸೆ—
ವರಿದುಂ, ಬೇಳ್ಪಂದು ಸಣ್ಣತನಮುಂ ಪಡೆದುಂ |
ಪೊರೆಯಲ್‌ವೇಳ್ಪುದು ಜಗಮಂ
ನರನೆಂಬುದು ಸೂಚ್ಯಮಾಯ್ತು ಪುರುಷೋತ್ತಮನಿಂ ||

(*b*) ಸಮಾಸೋಕ್ತಿ ಮೂಲ

ಯೇನಾಸ್ಯಭ್ಯುದಿತೇನ ಚಂದ್ರ ಗಮಿತಃ ಶಾಂತಿಂ ರವೌ ತತ್ರ ತೇ
ಯುಜ್ಯೇತ ಪ್ರತಿಕರ್ತುಮೇವ ನ ಪುನಸ್ತಸ್ಯೈವ ಪಾದಗ್ರಹಃ |
ಕ್ಷೀಣೇನೈತದನುಷ್ಠಿತಂ ಯದಿ ತತಃ ಕಿಂ ಲಜ್ಜಸೇ ನೋ ಮನಾ-
ಗಸ್ತ್ಯೇವಂ ಜಡಧಾಮತಾ ತು ಭವತೋ ಯದ್ ವ್ಯೋಮ್ನಿ
ವಿಸ್ಫೂರ್ಜಸೇ ||[10]

ಆವನ ತೇಜದಿಂದೆ ಮಸುಳಿರ್ಪುದೊ ನಿನ್ನಯ ಕಾಂತಿಯಾತನಂ
ಸೂರ್ಯನನಿಕ್ಕಲಕ್ಕುಮುಚಿತಂ, ತರಮಪ್ಪುದೆ ಪಾದಸೇವನಂ |
ಕ್ಷೀಣತೆಯಿಂದಿದಂ ನೆಗಳ್ದಿಯಪ್ಪೊಡೆ ಲಜ್ಜಿತನಾಗದಿರ್ಪುದೇಂ
ಬಾನೊಳೆ ಗರ್ವದಿಂದೆ ಮೆರೆವಯ್ ಗಡ ನೀಂ ಜಡಧಾಮನೈಸಲೇ ||

(*c*) ಸಾದೃಶ್ಯಮಾತ್ರಮೂಲ

ಆದಾಯ ವಾರಿ ಪರಿತಃ ಸರಿತಾಂ ಮುಖೇಭ್ಯಃ
ಕಿಂತಾವದಾರ್ಜಿತಮನೇನ ದುರರ್ಣವೇನ |
ಕ್ಷಾರೀಕೃತಂ ಚ ವಡವಾದಹನೇ ಹುತಂ ಚ
ಪಾತಾಲಕುಕ್ಷಿಕುಹರೇ ವಿನಿವೇಶಿತಂ ಚ ||[11]

ಪರಿವ ಪೊನಲ್ಗಳ ನೀರಂ
ಬರಸೆಳೆದೀ ದುಷ್ಟ ಸಿಂಧು ಪಡೆದತ್ತೇನಂ |
ಉಪ್ಪಾಗಿಸಿ, ಬಡಬಾಗ್ನಿಗೆ
ಆಹುತಿಯಂ ನೀಡಿ ತುಂಬಿ ಪಾತಾಳಮನೇ ||

---

10 ಇಲ್ಲಿ—'ಚಂದ್ರ' 'ರವಿ' ಎಂಬ ವಿಶೇಷ್ಯಗಳಲ್ಲಿ ಮಾತ್ರ ಶ್ಲೇಷೆಯಿಲ್ಲ ; ವಿಶೇಷಣಗಳಲ್ಲೆಲ್ಲ ಶ್ಲೇಷೆಯಿದೆ. ಆದುದರಿಂದ ಸಮಾಸೋಕ್ತಿಯ ಅಂಶ ಬಂದಂತಾಯಿತು.

11 ಪದ್ಯ ಭಟ್ಟೇಂದುರಾಜನದೆಂದು ಕ್ಷೇಮೇಂದ್ರನ 'ಔಚಿತ್ಯ ವಿಚಾರಚರ್ಚೆ'ಯಲ್ಲಿ ಹೇಳಿದೆ.

ಒಮ್ಮೊಮ್ಮೆ ವಾಚ್ಯಾರ್ಥದಲ್ಲಿ ವ್ಯಂಗ್ಯಾರ್ಥದ ಅಧ್ಯಾರೋಪವಿಲ್ಲದಿದ್ದರೂ ಈ ಅಲಂಕಾರ ಬರುವುದುಂಟು. ಉದಾಹರಣೆ—

ಅಬ್ಧೇರಂಭಃಸ್ಥಗಿತಭುವನಾಭೋಗ ಪಾತಾಲಕುಕ್ಷೇಃ
ಪೋತೋಪಾಯಾ ಇಹ ಹಿ ಬಹವೋ ಲಂಘನೇಽಪಿ ಕ್ಷಮನ್ತೇ ।
ಆಹೋ ರಿಕ್ತಃ ಕಥಮಪಿ ಭವೇದೇಷ ದೈವಾತ್ ತದಾನೀಂ
ಕೋ ನಾಮ ಸ್ಯಾದವಟಕುಹರಾಲೋಕನೇಽಪ್ಯಸ್ಯ ಕಲ್ಪಃ ॥

ಭೂತಳವನೇ ಮುಸುಕಿ ಜಲದಿಂದೆ ಪಾತಾಳ
ಕುಕ್ಷಿಯನೆ ತುಂಬುವೊಡೆ ಸಾಲ್ವ ಕಡಲ ;
ನೌಕೆಗಳ ಬಲದಿಂದಲೆಂತಾದೊಡಂ ಜಗದೆ
ದಾಂಟಲ್ಕೆ ಶಕ್ತರಹರೆನಿತೊ ಜನರು
ದೈವಯೋಗದಿನೆಂತೊ ಬರಿದಪ್ಪೊಡಾ ಕಡಲೆ
ಆ ಅತಳ ಆಳವನು ನೋಳ್ಪರೊಳರೆ ?[12]

ಒಮ್ಮೊಮ್ಮೆ ಅಧ್ಯಾರೋಪದ ಮೂಲಕವಾಗಿಯೇ ಅಲಂಕಾರವು ಬರುತ್ತದೆ. ಉದಾಹರಣೆಗೆ—

ಕಸ್ತ್ವಂ ಭೋಃ, ಕಥಯಾಮಿ ದೈವಹತಕಂ ಮಾಂ ವಿದ್ಧಿ ಶಾಖೋಟಕಂ
ವೈರಾಗ್ಯಾದಿವ ವಕ್ಷಿ ಸಾಧು ವಿದಿತಂ ಕಸ್ಮಾದಿದಂ ಕಥ್ಯತೇ ।
ವಾಮೇನಾತ್ರ ವಟಸ್ತಮಧ್ವಗಜನಃ ಸರ್ವಾತ್ಮನಾ ಸೇವತೇ
ನ ಚ್ಛಾಯಾಪಿ ಪರೋಪಕಾರಕರಣೇ ಮಾರ್ಗಸ್ಥಿತಸ್ಯಾಪಿ ಮೇ ॥[13]

'ನೀನಾರು ಹೇಳುವೆಯ ?' 'ಕೇಳಯ್ಯ ತಿಳಿಸುವೆನು'—
'ವಿಧಿಹತಕ ನಾನೊಬ್ಬ ಶಾಖೋಟಕ !'
'ವೈರಾಗ್ಯ ಬಂದಂತೆ ಮಾತನಾಡುವೆ ನೀನು !'
'ಸರಿಯಾಗಿ ನೀನರಿತೆ,' 'ಏಕೆ ಹೀಗೆ ?'
'ನೋಡಿಲ್ಲಿ ಕಾಣುವದು ಎಡದಲ್ಲೆ ವಟತರುವು,
ಅದನೆ ಸೇವಿಸುತಿಹರು ಪಾಂಥರೆಲ್ಲ ;

---

[12] ಇಲ್ಲಿ ಸಾಗರ ವೃತ್ತಾಂತ ಅಪ್ರಸ್ತುತ. ವೈಭವದಲ್ಲಿರುವ ರಾಜನನ್ನು ಹೇಗಾದರೂ ಸೇವಿಸಬಹುದು ; ಆದರೆ ದುರ್ಗತಿಯಲ್ಲಿರುವಾಗ ಸಾಧ್ಯವೇ ಇಲ್ಲವೆಂಬುದು ಪ್ರಸ್ತುತ.

[13] ನೋಡಿ, ಕನ್ನಡ ಧ್ವನ್ಯಾಲೋಕ, ಪುಟ—೧೫೫.

ದಾರಿಯಲೆ ನಾನಿರುವೆನಾದರೂ ನೆರಳಿನ್ನ
ಪರರಿಗುಪಕಾರವನು ಮಾಡಲಿಲ್ಲ.'

ಒಮ್ಮೊಮ್ಮೆ ಕೆಲವಂಶಗಳಲ್ಲಿ ಮಾತ್ರ ಅಧ್ಯಾರೋಪ ಕಾಣಬಹುದು—

ಸೋಽಪೂರ್ವೋ ರಸನಾವಿಪರ್ಯಯವಿಧಿಸ್ತತ್ ಕರ್ಣಯೋಶ್ಚಾಪಲಂ
ದೃಷ್ಟಿಃ ಸಾ ಮದವಿಸ್ಮೃತಸ್ವಪರದಿಕ್ ಕಿಂ ಭೂಯಸೋಕ್ತೇನ ವಾ।
ಸರ್ವಂ ವಿಸ್ಮೃತವಾನಸಿ ಭ್ರಮರ ಹೇ ಯದ್ ವಾರಣೋಽದ್ಯಾಪ್ಯಸೌ
ಅಂತಃಶೂನ್ಯಕರೋ ನಿಷೇವ್ಯತ ಇತಿ ಭ್ರಾತಃ ಕ ಏಷ ಗ್ರಹಃ ॥[14]

ಅದಪೂರ್ವಂ ರಸನಾವಿಪರ್ಯಯಮದಾ ಕರ್ಣಂಗಳಾ ಚಾಪಲಂ
ಅದೆ ನೋಟಂ ಮದವಿಸ್ಮೃತಾಖಿಲದಿಶಂ ಮತ್ತಂ ಗಡಾ ಪೇಳ್ವುದೇಂ।
ಇದನೆಲ್ಲಂ ಮರೆದಿರ್ಪೆ ನೀಂ ಭ್ರಮರನೇ ಮದ್ದಾನೆಯನ್ನಿನ್ನೆಗಂ
ಪದೆಪಿಂ ಸೇವಿಪೆಯಲ್ತೆ ಶೂನ್ಯಕರನಂ, ತಮ್ಮಾ, ಇದೇಕೀ ಹಟಂ ॥

ಇಲ್ಲಿ ರಸನಾವಿಪರ್ಯಾಸ, ಶೂನ್ಯಕರತ್ವ, ಈ ಅಂಶಗಳು ಭ್ರಮರವು ಆನೆಯನ್ನು ಸೇವಿಸದಿರುವುದಕ್ಕೆ ನಿಮಿತ್ತಗಳಲ್ಲ; ಕರ್ಣಚಾಪಲವೆಂಬ ಅಂಶ ಮಾತ್ರ ನಿಮಿತ್ತ. ಮದಾಧಿಕ್ಯದ ಅಂಶವನ್ನು ನೋಡಿದರೆ, ತದ್ವಿರುದ್ಧವಾದ ಸೇವನಕ್ಕೇ ಪೋಷಕ.[15]

(೧೨) ಅತಿಶಯೋಕ್ತಿ

ನಿಗೀರ್ಯಾಧ್ಯವಸಾನಂ ತು ಪ್ರಕೃತಸ್ಯ ಪರೇಣ ಯತ್।
ಪ್ರಸ್ತುತಸ್ಯ ಯದನ್ಯತ್ವಂ ಯದ್ಯರ್ಥೋಕ್ತೌ ಚ ಕಲ್ಪನಮ್ ॥ ೧೪ ॥

ಕಾರ್ಯಕಾರಣಯೋರ್ಯಶ್ಚ ಪೌರ್ವಾಪರ್ಯವಿಪರ್ಯಯಃ।
ವಿಜ್ಞೇಯಾತಿಶಯೋಕ್ತಿಃ ಸಾ . . . ॥ ೧೫ *abc* ॥

---

14 ಭಲ್ಲಟಶತಕ, ೧೮.

ರಸನಾವಿಪರ್ಯಯ = ಹಿಂದು ಮುಂದಾದ ನಾಲಗೆ ಮತ್ತು ಆಡಿದ ಮಾತನ್ನು ಬದಲಾಯಿಸುವುದು. ಕರ್ಣಚಾಪಲ = ಕಿವಿಯನ್ನು ಬಡಿಯುತ್ತಿರುವುದು ಮತ್ತು ಚಾಡಿಮಾತನ್ನು ಕೇಳುವುದು. ಮದ = ಮದೋದಕ ಮತ್ತು ಗರ್ವ. ಕರ = ಸೊಂಡಿಲು ಮತ್ತು ಕೈ. ವಾರಣ = ಪ್ರಭು ಮತ್ತು ಆನೆ.

15 ಈ ಕಾರಣಗಳಿಂದ ಇಲ್ಲಿ ಪ್ರಸ್ತುತವಾದ ಬೇರೊಂದು ಅರ್ಥವಿರಬೇಕೆಂಬ ಸ್ಪಷ್ಟ ಸೂಚನೆ ಬರುತ್ತದೆ. ಶ್ಲೇಷೆಯನ್ನು ಬಿಡಿಸಿಕೊಂಡು ಕವಿಯ ವಿವಕ್ಷಿತಾರ್ಥಕ್ಕೆ ಬರುತ್ತೇವೆ. ಆಗ ಮೂರೂ ವಿಶೇಷಣಗಳು 'ಅಸೇವನ'ಕ್ಕೇ ನಿಮಿತ್ತಗಳೆನಿಸುತ್ತವೆ.

೧. ಉಪಮಾನದಿಂದ ಬೇರೆಯಾಗಿ ಕಾಣದಂತೆ ಉಪಮೇಯದ 'ಅಧ್ಯವಸಾನ,'[16] ೨. ಒಂದನ್ನು ಹೊಸದಾದ ಬೇರೆ ವಸ್ತುವೋ ಎನ್ನುವಂತೆ ವರ್ಣಿಸುವುದು, ೩. ಒಂದು ವೇಳೆ ಹೀಗಾದರೆ ಹೀಗೆ ಎಂದು ಕಲ್ಪಿಸುವುದು, ೪. ಕಾರ್ಯಕಾರಣಗಳ ಪೂರ್ವ—ಅಪರ ಸಂಬಂಧದಲ್ಲಿ ವ್ಯತ್ಯಾಸಮಾಡುವುದು—ಇವಿದ್ದರೆ ಅದೇ ಅತಿಶಯೋಕ್ತಿ.[17]

ಒಂದನೆಯ ಪ್ರಕಾರ

ಉಪಮಾನವೊಂದೇ ಪ್ರಯುಕ್ತವಾಗಿದ್ದು, ಅದರ ಬಲದಿಂದಲೇ ಅಂತರ್ಗತವಾದ ಉಪಮೇಯವು ಬೋಧ್ಯವಾಗುತ್ತಿರುವುದು ಅತಿಶಯೋಕ್ತಿಯ ಒಂದನೆಯ ಪ್ರಕಾರ. ಉದಾಹರಣೆ—

ಕಮಲಮನಂಭಸಿ ಕಮಲೇ
ಚ ಕುವಲಯೇ ತಾನಿ ಕನಕಲತಿಕಾಯಾಮ್ |
ಸಾ ಚ ಸುಕುಮಾರಸುಭಗೇ-
ತ್ಯುತ್ಪಾತಪರಂಪರಾ ಕೇಯಮ್ ||

ಕಮಲಮವಾರಿಯೊಳಾ ವರ
ಕಮಲದೊಳಂ ಕುಮುದಮೆರಡು, ಕಾಂಚನಲತೆಯೊಳ್ |

---

16 'ಆರೋಪ', 'ಅಧ್ಯವಸಾನ' ಇವುಗಳ ವ್ಯತ್ಯಾಸವನ್ನು ಹಿಂದೆ **ಎರಡನೆಯ ಉಲ್ಲಾಸದಲ್ಲಿ** ಸ್ಪಷ್ಟಪಡಿಸಲಾಗಿದೆ.

17 ಹೋಲಿಸಿ—ಭಾಮಹ, II. ೮೧, ದಂಡಿ, II. ೨೧೪ ಮತ್ತು ಉದ್ಭಟ, II. 11-13. ಮಮ್ಮಟನು ಉದ್ಭಟನನ್ನೇ ಅನುಸರಿಸಿದಂತಿದೆ; ಅತಿಶಯೋಕ್ತಿಯ ಪ್ರಭೇದಗಳಿವು :—

ಅತಿಶಯೋಕ್ತಿ

(೧) ಭೇದವಿದ್ದಾಗ ಅಭೇದಕಲ್ಪನೆ
(೨) ಅಭೇದದಲ್ಲಿ ಭೇದಾರೋಪ
(೩) ಪಕ್ಷಾರ್ಥ ಮೂಲ
(೪) ಕಾರ್ಯಕಾರಣಕ್ಕಿಂತ ಪೂರ್ವ
(೫) ಕಾರ್ಯ ಕಾರಣಕ್ಕೆ ಸಮಕಾಲ

ಇಲ್ಲಿ ಮುಂದಿನವರು ಅತಿಶಯೋಕ್ತಿಯ ಸುಪ್ರಸಿದ್ಧ ಪ್ರಕಾರವೆನ್ನುವ 'ಅಸಂಬಂಧೇ ಸಂಬಂಧ'ವು ಸ್ಪಷ್ಟವಾಗಿಲ್ಲ. ಉದ್ಯೋತಕಾರನು ಇದನ್ನು ಮೂರನೆಯ ಪ್ರಕಾರದ ಪ್ರಭೇದವೆಂದು ವಿವರಿಸುತ್ತಾನೆ. ಇದರ ಉದಾಹರಣೆ—

'ಸೌಧಾಗ್ರಾಣಿ ಪುರಸ್ಯಾಸ್ಯ ಸ್ಪೃಶಂತಿ ವಿಧುಮಂಡಲಮ್' |

ಸಮನಿಸೆ ಮೂರುಂ, ಲತೆಯುಂ
ಸುಕುಮಾರಂ ಸುಭಗಮೆಂಬುದೇನಚ್ಚರಿಯೋ ‖[18]

ಎರಡನೆಯ ಪ್ರಕಾರ

ಒಂದನ್ನು ಹೊಸದಾದ ಮತ್ತೊಂದೆನ್ನುವ ಅತಿಶಯೋಕ್ತಿಗೆ ಉದಾಹರಣೆ—

ಅಣ್ಣಂ ಲಡಹತ್ತಣಅಂ
ಅಣ್ಣ ವಿಅ ಕಾ ವಿ ವತ್ತಣ ಚ್ಛಾಅ ।
ಸಾಮಾ ಸಾಮಣ್ಣಪ ಅ
ವಇಣೋ ರೇಹ ಚ್ಚಿಅ ಣ ಹೋಇ ‖

ಪೊಸದೆನೆ ಕೋಮಳಭಾವಂ
ಪೊಸದೆನೆ ಮೈಸಿರಿಯುಮಿವಳ, ಚೆನ್ನೆಯನಿನ್ನೇಂ
ಬೆಸೆದಾತಂ ಧಾತ್ರಂ ಮೇಣ್
ಪೊಸನಪ್ಪಂ ಸುಪ್ರಸಿದ್ಧ ಪದ್ಮಜನಲ್ಲಂ ‖

ಮೂರನೆಯ ಪ್ರಕಾರ

ಹಾಗಾದರೆ, ಹೀಗಾದರೆ, ಎಂದು ಮುಂತಾಗಿ ಪಕ್ಷಾರ್ಥವನ್ನು ಹೇಳಿ, ಅದನ್ನಾಶ್ರಯಿಸಿ ಕವಿ ಅಸಂಭವಾರ್ಥದ ಕಲ್ಪನೆಗೆ ಹೊರಡುವುದು ಮೂರನೆಯ ಜಾತಿ. ಉದಾಹರಣೆ—

ರಾಕಾಯಾಮಕಲಂಕಂ ಚೇದಮೃತಾಂಶೋರ್ಭವೇದ್ವಪುಃ ।
ತಸ್ಯಾ ಮುಖಂ ತದಾ ಸಾಮ್ಯಪರಾಭವಮವಾಪ್ನುಯಾತ್ ‖

---

[18] ಸ್ತ್ರೀರೂಪದ ವರ್ಣನೆ. ಕಮಲ = ಮುಖ, ಕುಮುದ = ನೇತ್ರ, ಕಾಂಚನಲತೆ = ಶರೀರ. ಒಂದರ ಪ್ರತಿನಿಧಿಯಾಗಿ ಮತ್ತೊಂದನ್ನೇ ಹೇಳಿರುವುದರಿಂದ ಅತಿಶಯೋಕ್ತಿ.
ಸುಪ್ರಸಿದ್ಧ ಗೀತಾಶ್ಲೋಕವಾದ (II. ೬೯)—

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ‖

ಎಂಬಲ್ಲಿಯೂ ಅತಿಶಯೋಕ್ತಿಯೇ ಅಲಂಕಾರ.

ದೊರೆಕೊಳ್ವೊಡೆ ಹುಣ್ಣಿಮೆಯೊಳ್
ವರಬಿಂಬಂ ನಿಷ್ಕಳಂಕಮಮೃತಕರಂಗಂ |
ತರುಣಿಯ ಮೊಗಮಾಗಳ್ ಗಡ
ದೊರೆಕೊಳ್ವದು ಸದೃಶವಸ್ತುಕೃತಮಂ ವ್ಯಥೆಯಂ ||

ನಾಲ್ಕನೆಯ ಪ್ರಕಾರ

ಕಾರಣದ ಶೀಘ್ರಕಾರಿತ್ವವನ್ನು ಒತ್ತಿಹೇಳುವ ಸಲುವಾಗಿ ಕಾರ್ಯವೇ ಕಾರಣಕ್ಕಿಂತ ಮೊದಲು ಜನಿಸಿತೆಂದು ವರ್ಣಿಸುವುದು ನಾಲ್ಕನೆಯ ಬಗೆ. ಉದಾಹರಣೆ—

ಹೃದಯಮಧಿಷ್ಠಿತ ಮಾದೌ
ಮಾಲತ್ಯಾಃ ಕುಸುಮಚಾಪಬಾಣೇನ |
ಚರಮಂ ರಮಣೀ ವಲ್ಲಭ
ಲೋಚನ ವಿಷಯಂ ತ್ವಯಾ ಭಜತಾ ||[19]

ಮೊದಲೊಳೆ ಮಾಲತಿಯೆರ್ದೆಯಂ
ಮದನಂ ಕುಸುಮೇಷು ಗೆಲ್ದನಲ್ಲಿಂ ಬಳಿಕಂ |
ಸುದತಿಯ ಲೋಚನ ಗೋಚರ
ಪದಮಂ ದೊರೆವೆತ್ತ ನಿನ್ನ ಬಗೆಯಂ ಸುಭಗಾ ||

(೧೩) ಪ್ರತಿವಸ್ತೂಪಮೆ

. . . ಪ್ರತಿವಸ್ತೂಪಮಾ ತು ಸಾ || ೧೫ *d* ||
ಸಾಮಾನ್ಯಸ್ಯ ದ್ವಿರೇಕಸ್ಯ ಯತ್ರ ವಾಕ್ಯದ್ವಯೇ ಸ್ಥಿತಿಃ || ೧೬ *ab* ||

ಒಂದೇ ಸಾಧಾರಣಧರ್ಮವು ಎರಡು ವಾಕ್ಯಗಳಲ್ಲಿ ಎರಡು ಬಾರಿ ಉಕ್ತವಾಗುತ್ತಿರುವ ಉಪಮೆಯೇ ಪ್ರತಿವಸ್ತೂಪಮೆ.

ಎರಡು ವಾಕ್ಯಗಳೆಂದರೆ ಉಪಮೇಯವಾಕ್ಯ ಮತ್ತು ಉಪಮಾನವಾಕ್ಯ. ಹೇಳಿದ ಪದವನ್ನೇ ಮತ್ತೆ ಹೇಳುವುದು ಪುನರುಕ್ತಿ ದೋಷವೆಂದು[20] ಹಿಂದೆಯೇ

---

19 ಕುಟ್ಟನೀಮತಕಾವ್ಯ, ೯೬ ನೆಯ ಪದ್ಯ. ಮಾಲತಿಯೆಂಬುದು ನಾಯಿಕೆಯ ಹೆಸರು.

20 'ಕಥಿತಪದ'ವೆಂಬ ದೋಷದ ಲಕ್ಷಣಕ್ಕೆ ಏಳನೆಯ ಉಲ್ಲಾಸವನ್ನು ನೋಡಿ.

ನಿರ್ಣಯಿಸಿರುವುದರಿಂದ, ಒಂದೇ ಸಾಧಾರಣಧರ್ಮವು ಭಿನ್ನಶಬ್ದಗಳಿಂದ ಉಕ್ತವಾಗುತ್ತಿದ್ದಾಗ ವಸ್ತುವೇ (=ವಾಕ್ಯಾರ್ಥವೇ) ಉಪಮಾನವೆನಿಸುತ್ತದೆಯಾಗಿ[21] ಅದು 'ಪ್ರತಿವಸ್ತೂಪಮೆ'ಯೆಂಬ ಅಲಂಕಾರವಾಗುತ್ತದೆ. ಉದಾಹರಣೆ—

ದೇವೀಭಾವಂ ಗಮಿತಾ
ಪರಿವಾರಪದಂ ಕಥಂ ಭಜತ್ಯೇಷಾ।
ನ ಖಲು ಪರಿಭೋಗಯೋಗ್ಯಂ
ದೈವತರೂಪಾಂಕಿತಂ ರತ್ನಮ್ ॥[22]

ದೇವಿಯು ಎನಿಸಿರ್ದೀಕೆಯೆ
ಸೇವಿಕಿಯಿಂತಪ್ಪುದಾಯ್ತೆ ರಾಜಾಲಯದೊಳ್ ।
ದೈವತ ರೂಪಾಂಕಿತಮಾ
ದಾ ವಜ್ರಂ ಭೋಗಯೋಗ್ಯಮಕ್ಕುಮೆ ಧರೆಯೊಳ್ ॥

ಹಾಗೆಯೇ—

ಯದಿ ದಹತ್ಯನಲೋऽತ್ರ ಕಿಮದ್ಭುತಂ
ಯದಿ ಚ ಗೌರವಮದ್ರಿಷು ಕಿಂ ತತಃ।
ಲವಣಮಂಬು ಸದೈವ ಮಹೋದಧೇಃ
ಪ್ರಕೃತಿರೇವ ಸತಾಮವಿಷಾದಿತಾ ॥

ಉರಿವೊಡೆ ಬೆಂಕಿಯು ಸೋಜಿಗಮೇನೋ ?
ಬೆಟ್ಟವು ಭಾರವೆನಲ್ಕರಿದೇಂ ?
ಕಡಲಿನ ನೀರಾವಾಗಲು ಲವಣಂ ;
ನೈಜವು ಸಂತರಿಗವಿಷಾದಂ.

---

21 ಇದನ್ನೇ ಅಪ್ಪಯ್ಯದೀಕ್ಷಿತರು ವಸ್ತು—ಪ್ರತಿ ವಸ್ತುಭಾವವೆನ್ನುತ್ತಾರೆ. ಎರಡು ಬೇರೆ ಸಾಧಾರಣಧರ್ಮಗಳಿದ್ದಾಗ ಅವನ್ನು ಎರಡು ಶಬ್ದಗಳಿಂದ ಹೇಳಿದರೆ ಅದು ಬಿಂಬ—ಪ್ರತಿಬಿಂಬ ಭಾವ; ದೃಷ್ಟಾಂತಾಲಂಕಾರಕ್ಕೆ ಪೋಷಕ.

22 ಇಲ್ಲಿ 'ಅನುಚಿತ' ಎಂಬುದೇ ಸಾಧಾರಣಧರ್ಮ. ಅದನ್ನೇ ಎರಡು ವಾಕ್ಯಗಳಲ್ಲೂ ಶಬ್ದಾಂತರಗಳಿಂದ ಹೇಳಿದೆ.

ಇತ್ಯಾದಿ ಮಾಲಾ-ಪ್ರತಿವಸ್ತೂಪಮೆಯನ್ನೂ ಕಾಣಬಹುದು.[23] ಹೀಗೆಯೇ ಉಳಿದ ಲಕ್ಷ್ಯಗಳನ್ನು ಊಹಿಸಿಕೊಳ್ಳುವುದು.

(೧೪) ದೃಷ್ಟಾಂತ

ದೃಷ್ಟಾಂತಃ ಪುನರೇತೇಷಾಂ ಸರ್ವೇಷಾಂ ಪ್ರತಿಬಿಂಬನಮ್ ॥ ೧೬ *cd* ॥

ಈ ಎಲ್ಲ ಅಂಶಗಳೂ ಪ್ರತಿಬಿಂಬಿತವಾಗುವಂತಿರುವುದೇ ದೃಷ್ಟಾಂತ. ಈ ಎಲ್ಲ ಅಂಶಗಳ ಎಂದರೆ (ವಾಕ್ಯದ್ವಯದಲ್ಲಿರುವ) ಸಾಧಾರಣಧರ್ಮ, ಇತ್ಯಾದಿಗಳ (= ಉಪಮಾನ, ಉಪಮೇಯಗಳ) ಎಂದಭಿಪ್ರಾಯ. ಇವುಗಳ ಅಂತ=(ಸಾದೃಶ್ಯ) ನಿಶ್ಚಯವು ದೃಷ್ಟ=ಸ್ಪಷ್ಟೀಕೃತವೆಂಬ ಅವಯವಾರ್ಥವನ್ನಾಶ್ರಯಿಸಿ ಅಲಂಕಾರವು 'ದೃಷ್ಟಾಂತ'ವೆನಿಸುವುದು :—[24]

ತ್ವಯಿ ದೃಷ್ಟ ಏವ ತಸ್ಯಾ
ನಿರ್ವಾತಿ ಮನೋ ಮನೋಭವಜ್ವಲಿತಮ್ ।
ಆಲೋಕೇ ಹಿ ಹಿಮಾಂಶೋ
ರ್ವಿಕಸತಿ ಕುಸುಮಂ ಕುಮುದ್ವತ್ಯಾಃ ॥

ನಿರುಕಿಸಿದೊಡನೆಯೆ ನಿನ್ನಂ
ಹರುಷಿಪುದಾ ಮದನತಪ್ತೆಯುಪ್ಪಳ ಬಗೆಯುಂ।
ವರಶಶಿಯಾಲೋಕನದಿಂ
ದರಳ್ವುದು ಕುಮುದಂ ಕುಮುದ್ವತೀವಲ್ಲರಿಯೊಳ್ ॥

ಇದು ಸಾಧರ್ಮ್ಯ-ಮೂಲಕವಾದ ದೃಷ್ಟಾಂತ.[25] ಕೆಳಗಿನ ದೃಷ್ಟಾಂತವು ವೈಧರ್ಮ್ಯಮೂಲಕವಾದುದು :—

---

[23] ಇಲ್ಲಿ ಸಾಮಾನ್ಯ—ವಿಶೇಷ ಭಾವವಿರುವಂತೆ ಭಾಸವಾದರೂ ಅರ್ಥಾಂತರನ್ಯಾಸಾಲಂಕಾರ ವೆನ್ನುವಂತಿಲ್ಲ. ಏಕೆಂದರೆ ಕವಿಗೆ ಸಾಧಾರಣಧರ್ಮದ ಪ್ರತಿಪಾದನೆ ವಿವಕ್ಷಿತವೇ ಹೊರತು ಬೆಂಕಿಯೇ ಮೊದಲಾದುವುಗಳ ವರ್ಣನೆಯಲ್ಲ.

[24] ನಿದರ್ಶನಾಲಂಕಾರದಲ್ಲಾದರೆ ಎರಡು ವಾಕ್ಯಗಳೂ ಹೀಗೆ ಸ್ವಯಂಪೂರ್ಣವಾಗಿರುವುದಿಲ್ಲ ; ಪರಸ್ಪರ ಸಾಪೇಕ್ಷವಾಗಿರುತ್ತವೆ. ಎರಡೂ ಕೂಡಿ ಒಂದರ್ಥಕ್ಕೆ ಪೋಷಕವಾಗುತ್ತವೆ. ಒಂದೇ ವಾಕ್ಯದಲ್ಲಿ ಕೂಡ ನಿದರ್ಶನೆ ಬರಬಹುದು. ಇಲ್ಲಂತೂ ನಿದರ್ಶನವು ಅಸಂಭವ ವಸ್ತುವನ್ನು ಕುರಿತದ್ದಾಗಿರುವುದಿಲ್ಲ. ಹೀಗೆ ದೃಷ್ಟಾಂತಕ್ಕೂ ನಿದರ್ಶನಾಲಂಕಾರಕ್ಕೂ ಭೇದವಿದೆ.

[25] ಈ ಅಲಂಕಾರವು ಕಾವ್ಯನಾಟಕಗಳಲ್ಲಿ ಹೇರಳವಾಗಿ ಬರುತ್ತದೆ.

ತವಾಹವೇ ಸಾಹಸಕರ್ಮಶರ್ಮಣಃ
ಕರಂ ಕೃಪಾಣಾಂತಿಕಮಾನಿನೀಷತಃ ।
ಭಟಾಃ ಪರೇಷಾಂ ವಿಶರಾರುತಾಮಗುಃ
ದಧತ್ಯವಾತೇ ಸ್ಥಿರತಾಂ ಹಿ ಪಾಂಸವಃ ॥

ಸಾಹಸಕರ್ಮನೆ; ನೃಪ! ನೀ
ನಾಹವದೊಳ್ ಕತ್ತಿಯೆಡೆಗೆ ಕೈ ನೀಡಲೊಡಂ ।
ಓಡಿದರರಿಭಟರನಿಬರ್
ಗಾಳಿಗಳಿರದಂದು ಧೂಳಿಯುಂ ಸ್ಥಿರಮಲ್ತೇ ॥

(೧೫) ದೀಪಕ

ಸಕೃದ್ ವೃತ್ತಿಸ್ತು ಧರ್ಮಸ್ಯ ಪ್ರಕೃತಾಪ್ರಕೃತಾತ್ಮನಾಮ್ ।
ಸೈವ ಕ್ರಿಯಾಸು ಬಹ್ವೀಷು ಕಾರಕಸ್ಯೇತಿ ದೀಪಕಮ್ ॥ ೧೭ ॥

ಪ್ರಕೃತ (=ಉಪಮೇಯ), ಅಪ್ರಕೃತ (=ಉಪಮಾನ) ಧರ್ಮವು (ಗುಣ ಕ್ರಿಯಾದಿ) ಒಂದೇ ಬಾರಿ ಪ್ರಯುಕ್ತವಾಗಿರುವುದು; ಇಲ್ಲವೆ ಒಂದೇ ಕಾರಕಕ್ಕೆ ಅನೇಕ ಕ್ರಿಯೆಗಳೊಡನೆ ಸಂಬಂಧ ವರ್ಣಿತವಾಗುವುದು, ಇದೇ ದೀಪಕ.

ಪ್ರಾಕರಣಿಕ ಮತ್ತು ಅಪ್ರಾಕರಣಿಕ ಅರ್ಥಗಳ, ಅರ್ಥಾತ್, ಉಪಮಾನೋಪಮೇಯಗಳ 'ಧರ್ಮ' ಎಂದರೆ ಕ್ರಿಯೆ ಮುಂತಾದುದು ಒಂದೇ ಒಂದು ಬಾರಿ ಉಕ್ತವಾಗುತ್ತಿದ್ದರೆ, ಆಗ ಒಂದು ಕಡೆ ಇದ್ದುಕೊಂಡೇ ಅದು ಸಮಸ್ತ ವಾಕ್ಯವನ್ನೂ ಬೆಳಗುವುದರಿಂದ 'ದೀಪಕಾಲಂಕಾರ'.[26] ಉದಾಹರಣೆ:—

(a) ಕ್ರಿಯಾದೀಪಕ

ಕಿವಣಾಣಂ ಧಣಂ ಣಾಆಣಂ ಫಣಮಣೀ ಕೇಶರಾಇಁ ಸೀಹಾಣಂ ।
ಕುಲವಾಲಿಆಣಂ ತ್ಥಣಆ ಕುತ್ತೋ ಛಿಪ್ಪನ್ತಿ ಅಮುಆಣಂ ॥

ಕೃಪಣರ ಪಣಮುಂ ನಾಗೇಂ-
ದ್ರಫಣಾಮಣಿಯುಂ ಸುಕೇಸರಂ ಮೃಗಪತಿಯಾ ।

[26] ಇದು ಬಹು ಪ್ರಾಚೀನವಾದ ಅಲಂಕಾರ. ಭರತನೇ ನಾಟ್ಯಶಾಸ್ತ್ರದಲ್ಲಿ ಇದನ್ನು ವಿಸ್ತಾರವಾಗಿ ನಿರೂಪಿಸಿರುವನು. ಮುಂದೆ ದಂಡಿಯೂ ಇದರ ಬಹುಭೇದಗಳನ್ನು ವಿವರಿಸಿದ್ದಾನೆ.

ಕುಲವಧುಗಳ ಕುಚಮುಮವರ್
ಮಡಿಯದೆ ಇರ್ಪನ್ನಮೆಂತು ಪಿಡಿಯಲ್ಕಕ್ಕುಂ ||

(b) ಕಾರಕದೀಪಕ

ಒಂದೇ ಕಾರಕವು ಅನೇಕ ಕ್ರಿಯೆಗಳೊಡನೆ ಅನ್ವಯಿಸುವದೇ ಕಾರಕದೀಪಕ. ಉದಾಹರಣೆ :—

ಸ್ವಿದ್ಯತಿ ಕೂಣತಿ ವೇಲ್ಲತಿ
ವಿಚಲತಿ ನಿಮಿಷತಿ ವಿಲೋಕಯತಿ ತಿರ್ಯಕ್ |
ಅಂತರ್ನನ್ದತಿ ಚುಂಬಿತು
ಮಿಚ್ಛತಿ ನವಪರಿಣಯಾ ವಧೂಃ ಶಯನೇ ||

ಬೆಮರ್ವಳದಿರ್ವಳ್ ನಮೆವಳ್
ನಿಮಿರ್ವಳ್ ಕಣ್ಮುಚ್ಚಿ ಸೋಳ್ಪಳೆಲ್ಲೆಡೆಯೊಳೆನಲ್ |
ಮನದೊಳ್ ನಲಿವಳ್ ನವವಧು
ಶಯನಗತಳ್ ಚುಂಬಿಸಲ್ಕೆ ಬಯಸುತೆ ಪತಿಯಂ ||

(೧೬) ಮಾಲಾದೀಪಕ

ಮಾಲಾದೀಪಕಮಾದ್ಯಂ ಚೇದ್ ಯಥೋತ್ತರ ಗುಣಾವಹಮ್ || ೧೮ *ab* ||
ಮೊದಲಿನದು ಮುಂದಿನದಕ್ಕೆ ಅನುಕ್ರಮವಾಗಿ ಗುಣೋತ್ಕರ್ಷವನ್ನು ತರುವಂತೆ ವರ್ಣಿಸಿದರೆ ಮಾಲಾದೀಪಕ.[27] ಉದಾಹರಣೆ :—

ಸಂಗ್ರಾಮಾಂಗಣಮಾಗತೇನ ಭವತಾ ಚಾಪೇ ಸಮಾರೋಪಿತೇ
ದೇವಾಕರ್ಣಯ ಯೇನ ಯೇನ ಸಹಸಾ ಯದ್ಯತ್ ಸಮಾಸಾದಿತಮ್ |
ಕೋದಂಡೇನ ಶರಾಃ ಶರೈರರಿಶಿರಸ್ತೇನಾಪಿ ಭೂಮಂಡಲಂ
ತೇನ ತ್ವಂ ಭವತಾ ಚ ಕೀರ್ತಿರತುಲಾ ಕೀರ್ತ್ಯಾ ಚ ಲೋಕತ್ರಯಮ್ ||

[27] ಇದನ್ನು ಸ್ವತಂತ್ರವಾದ ಅಲಂಕಾರವೆಂದು ವಿಭಾಗಿಸಿರುವುದು ಅದರ ಚಮತ್ಕಾರದೃಷ್ಟಿಯಿಂದ ಎಂದು ಸಮಾಧಾನ ಹೇಳಬೇಕಾಗುತ್ತದೆ. ಇಲ್ಲಿ ಮಾಲೆಯೆಂದರೆ ಸರಪಳಿಯಂತೆ ಎಂದರ್ಥ. ದೀಪಕದಲ್ಲಿರುವಂತೆ ಇಲ್ಲಿ ಔಪಮ್ಯವೇ ಇರಬೇಕಾಗಿಲ್ಲ ; ಈ ದೃಷ್ಟಿಯಿಂದ ಇದು ಮುಂದೆ ಹೇಳುವ 'ಏಕಾವಲೀ' ಅಲಂಕಾರವನ್ನು ಹೋಲುತ್ತದೆ.

ಸಂಗ್ರಾಮಾಂಗಣಕ್ಕೈದಿ ನೀಂ ವಹಿಲದಿಂ ಬಿಲ್ಗೊಳ್ಳಲಂದೋಜೆಯಿಂ
ದೇವಾ, ಒಂದರಿನೊಂದು ಕೂಡಿದುದ ಕೇಳ್ ಸಾಲ್ಗೊಂಡು ಸಂತೋಷದಿಂ|
ಬಿಲ್ಲಿಂದಂಬೆನಲಂಬಿನಿಂದರಿಶಿರಂ ಭೂಮಂಡಲಂ ಶೀರ್ಷದಿಂ
ನೀಂ ಭೂಮಂಡಲದಿಂದೆ ಕೀರ್ತಿಯತುಲಂ ನಿನ್ನಿಂ ಜಗಂ ಕೀರ್ತಿಯಿಂ ‖

(೧೭) ತುಲ್ಯಯೋಗಿತೆ

ನಿಯತಾನಾಂ ಸಕೃದ್ಧರ್ಮಃ ಸಾ ಪುನಸ್ತುಲ್ಯಯೋಗಿತಾ ‖ ೧೮ *cd* ‖

ನಿಯತವಾದವುಗಳಲ್ಲಿ ಒಂದೇ ಸಾಧಾರಣಧರ್ಮವಿರುವುದು ತುಲ್ಯಯೋಗಿತೆ. "ನಿಯತವಾದವು" ಎಂದರೆ (i) ಕೇವಲ ಪ್ರಸ್ತುತ ವಸ್ತುಗಳು ಇಲ್ಲವೆ (ii) ಕೇವಲ ಅಪ್ರಸ್ತುತ ವಸ್ತುಗಳು.[28] ಅನುಕ್ರಮವಾಗಿ ಉದಾಹರಣೆ :—

(i) ಪಾಂಡು ಕ್ಷಾಮಂ ವದನಂ
ಹೃದಯಂ ಸರಸಂ ತವಾಲಸಂ ಚ ವಪುಃ ।
ಆವೇದಯತಿ ನಿತಾಂತಂ
ಕ್ಷೇತ್ರಿಯರೋಗಂ [29]ಸಖಿ ಹೃದಂತಃ ‖

ವದನಂ ಪಾಂಡುಕ್ಷೀಣಂ
ಹೃದಯಂ ಸರಸಂ ಶರೀರಮಲಸಂ ನಿನ್ನಾ |
ಸುದತಿಯೆ ಬಿಡದೆಲ್ಲವ ಪೇ
ಳ್ವುದು ಹೃದಯದೊಳಿರ್ಪ ಯಕ್ಷ್ಮರೋಗದ ಪರಿಯಂ ‖

(ii) ಕುಮುದಕಮಲನೀಲನೀರಜಾಲಿ
ರ್ಲಲಿತ ವಿಲಾಸಜುಷೋರ್ದೃಶೋಃ ಪುರಃ ಕಾ ।

---

28 ತುಲ್ಯಯೋಗಿತೆ
- ಕೇವಲ ಪ್ರಸ್ತುತಗಳು
  - ಒಂದೇ ಕ್ರಿಯೆ
  - ಒಂದೇ ಗುಣ
- ಕೇವಲ ಅಪ್ರಸ್ತುತಗಳು
  - ಒಂದೇ ಕ್ರಿಯೆ
  - ಒಂದೇ ಗುಣ

ದೀಪಕದಲ್ಲಿ ಪ್ರಸ್ತುತಾಪ್ರಸ್ತುತಗಳ ಸಂಮಿಶ್ರಣವಿರುತ್ತದೆ; ತುಲ್ಯಯೋಗಿತೆಯಲ್ಲಿರುವುದಿಲ್ಲ.

29 ಕ್ಷೇತ್ರಿಯರೋಗ = ಚಿಕಿತ್ಸೆ ಸಾಧ್ಯವಿಲ್ಲದ ರೋಗ.

ಅಮೃತಮಮೃತ ರಶ್ಮಿರಂಬುಜನ್ಮ
ಪ್ರತಿಹತಮೇಕಪದೇ ತವಾನನಸ್ಯ ||

ಕುಮುದಾರವಿಂದ ನೀಲೋ
ತ್ಪಲರಾಜಿಯದೆಣೆಯೆ ನಿನ್ನ ಕಣ್ಣಿನ ಚೆಲ್ವಿಂ |
ಗಮೃತಂ ಮೇಣಮೃತಕರಂ
ಜಲಜಂ ಪರಿಭೂತಮಲ್ತೆ ನಿನ್ನಾನನದಿಂ ||

(೧೮) ವ್ಯತಿರೇಕ

ಉಪಮಾನಾದ್ಯದನ್ಯಸ್ಯ ವ್ಯತಿರೇಕಃ ಸ ಏವ ಸಃ || ೧೯ *ab* ||

ಉಪಮಾನಕ್ಕಿಂತಲೂ ಇನ್ನೊಂದೇ ಹೆಚ್ಚೆನ್ನುವುದು ವ್ಯತಿರೇಕ. 'ಇನ್ನೊಂದು' ಎಂದರೆ ಉಪಮೇಯ; 'ವ್ಯತಿರೇಕ' ಎಂದರೆ ಆಧಿಕ್ಯ :—

ಕ್ಷೀಣಃ ಕ್ಷೀಣೋಽಪಿ ಶಶೀ
ಭೂಯೋ ಭೂಯೋಽಭಿವರ್ಧತೇ ಸತ್ಯಮ್ |
ವಿರಮ ಪ್ರಸೀದ ಸುಂದರಿ
ಯೌವನಮನಿವರ್ತಿ ಯಾತಂ ತು ||

ಎನಿತೆನಿತುಂ ಕೃಶನಿರೆಯುಂ
ಶಶಿ ಮಗುಳ್ದುಂ ವೃದ್ಧಿವಡೆವನೆಂಬುದು ಸತ್ಯಂ |
ಶಶಿಮುಖಿ ಬಿಡು ನೀಂ ಮುನಿಸಂ
ಬರಲಾರದು ಮತ್ತೆ ಕಳೆದ ಯೌವನಮೆಂದುಂ ||

ಈ ಉದಾಹರಣೆಯಲ್ಲಿ ಉಪಮೇಯಕ್ಕಿಂತ ಉಪಮಾನವೇ ಅಧಿಕವಾಗಿದೆಯೆಂದು ಲಾಕ್ಷಣಿಕನೊಬ್ಬನು ಹೇಳಿರುವುದು[30] ಸರಿಯಲ್ಲ; ಇಲ್ಲಿ ಕವಿಗೆ ವಿವಕ್ಷಿತ

[30] ಇಲ್ಲಿ ಮಮ್ಮಟನು ರುದ್ರಟನನ್ನು ಖಂಡಿಸುತ್ತಿದ್ದಾನೆ. ರುದ್ರಟನ ಪ್ರಕಾರ ಇಲ್ಲಿ 'ಯೌವನ' ಉಪಮೇಯ, 'ಶಶಿ' ಉಪಮಾನ. ಮಮ್ಮಟನ ಅಭಿಪ್ರಾಯದಲ್ಲಿ 'ಯೌವನದ ಅಸ್ಥಿರತೆ' ಉಪಮೇಯ; 'ಶಶಿಯ ಅಸ್ಥಿರತೆ' ಉಪಮಾನ. ಶಶಿಯು ಯೌವನಕ್ಕಿಂತ ಅಧಿಕನೆಂದು ವರ್ಣಿತವಾಗಿದೆಯೆಂದು ರುದ್ರಟನು ಹೇಳಿದರೆ ಮಮ್ಮಟನು ಯೌವನದ ಅಸ್ಥಿರತೆಯೇ ಶಶಿಯ ಅಸ್ಥಿರತೆಗಿಂತ ಅಧಿಕವೆಂದು ವರ್ಣಿತವಾಗಿದೆಯೆಂದು ಹೇಳುತ್ತಿದ್ದಾನೆ. ಈ ಅಲಂಕಾರದ ವಿಷಯದಲ್ಲಿ

ವಾಗಿರುವ ಅಂಶವೆಂದರೆ ಯೌವನದ ಅಸ್ಥಿರತೆಯ ಆಧಿಕ್ಯವೇ. (ಹೊರತು ಚಂದ್ರನ ವೃದ್ಧಿಯ ಪ್ರಶಂಸೆಯಲ್ಲ).

ವ್ಯತಿರೇಕದ ಭೇದ—ಪ್ರಭೇದಗಳು

ಹೇತ್ವೋರುಕ್ತಾವನುಕ್ತೀನಾಂ ತ್ರಯೇ ಸಾಮ್ಯೇ ನಿವೇದಿತೇ ‖ ೧೯ *cd* ‖
ಶಬ್ದಾರ್ಥಾಭ್ಯಾಮಥಾಕ್ಷಿಪ್ತೇ ಶ್ಲಿಷ್ಟೇ ತದ್ವತ್ ತ್ರಿರಷ್ಟ ತತ್ ‖ ೨೦ *ab* ‖

ವ್ಯತಿರೇಕದ ನಿಮಿತ್ತಗಳೆರಡನ್ನೂ ಸ್ಪಷ್ಟವಾಗಿ ಹೇಳಿರುವುದು, ಇಲ್ಲವೆ ಇವುಗಳಲ್ಲಿ ಒಂದನ್ನು, ಇಲ್ಲವೆ ಇನ್ನೊಂದನ್ನು, ಇಲ್ಲವೆ ಎರಡನ್ನೂ ಹೇಳದಿರುವುದು ಎಂಬ ಮೂರು ಬಗೆಗಳು, ಎಂಬ ಒಟ್ಟು ನಾಲ್ಕು ಪ್ರಕಾರಗಳಲ್ಲಿ ಶಾಬ್ದ ಸಾಧರ್ಮ್ಯ ಪ್ರಕಟನೆ, ಆರ್ಥ ಸಾಧರ್ಮ್ಯ ಪ್ರಕಟನೆ, ಮತ್ತು ಸಾಧರ್ಮ್ಯದ ಅಭಿವ್ಯಂಜನೆ ಎಂಬ ಒಳಭೇದಗಳಾಗಿ, ಮತ್ತೆ ಇವುಗಳಲ್ಲಿ ಶ್ಲೇಷೆಯೂ ಬರುವುದಾದರೆ ಒಟ್ಟು ಇಪ್ಪತ್ತು ನಾಲ್ಕು ಪ್ರಭೇದಗಳಾಗುತ್ತವೆ.

ವ್ಯತಿರೇಕಕ್ಕೆ ಉಪಮೇಯಗತವಾದ ಉತ್ಕರ್ಷ, ಉಪಮಾನಗತವಾದ ಅಪಕರ್ಷ ಎಂಬ ಎರಡು ನಿಮಿತ್ತಗಳಿರುತ್ತವೆ. ಇವುಗಳಲ್ಲಿ ಎರಡನ್ನೂ ಸ್ಪಷ್ಟವಾಗಿ ಶಬ್ದದಿಂದ ಹೇಳುವುದು ಒಂದು ಪ್ರಕಾರ; ಎರಡರಲ್ಲಿ ಯಾವುದೋ ಒಂದನ್ನು ಹೇಳದಿರುವುದು ಅಥವಾ ಎರಡನ್ನೂ ಹೇಳದಿರುವುದು—ಹೀಗೆ ಅನುಕ್ತಿಯಲ್ಲಿ ಮೂರು ಪ್ರಕಾರಗಳು, ಎಲ್ಲವೂ ಸೇರಿ ಇವು ನಾಲ್ಕಾದುವು. ಮತ್ತೆ ಇವುಗಳಲ್ಲಿ ಉಪಮಾನೋಪಮೇಯಭಾವವು ಶಾಬ್ದವಾಗಿರುವುದು ಆರ್ಥವಾಗಿರುವುದು ಅಥವಾ ವ್ಯಂಗ್ಯವಾಗಿರುವುದು ಎಂಬ ವಿಕಲ್ಪಗಳನ್ನಾಶ್ರಯಿಸಿ ಒಟ್ಟು ಹನ್ನೆರಡು ಪ್ರಕಾರಗಳಾಗುತ್ತವೆ. ಶ್ಲೇಷೆಯೂ ಕೂಡಿದರೆ ಇವುಗಳಂತೆ ಇನ್ನೂ ಹನ್ನೆರಡು ಪ್ರಕಾರಗಳಾಗುವುದರಿಂದ ಒಟ್ಟು ಭೇದಗಳ ಸಂಖ್ಯೆ ಇಪ್ಪತ್ತುನಾಲ್ಕಾಗುತ್ತದೆ.

೧. ಉಕ್ತ ಉತ್ಕರ್ಷನಿಮಿತ್ತ-ಶಾಬ್ದಸಾಧರ್ಮ್ಯಯುಕ್ತ-ಅಶ್ಲಿಷ್ಟ

ಅಸಿಮಾತ್ರ ಸಹಾಯಸ್ಯ ಪ್ರಭೂತಾರಿಪರಾಭವೇ ।
ಅನ್ಯತುಚ್ಛಜನಸ್ಯೇವ ನ ಸ್ಮಯೋಽಸ್ಯ ಮಹಾಧೃತೇಃ ‖

ಹೀಗೆ ಮತಭೇದವಿದೆ. ಮುಂದೆಯೂ ರುಯ್ಯಕಾದಿಗಳು ಉಪಮಾನಾಧಿಕ್ಯ ಅಥವಾ ಉಪಮೇಯ ನ್ಯೂನತೆಯ ವರ್ಣನೆಯಿದ್ದಾಗ ವ್ಯತಿರೇಕಾಲಂಕಾರ ಸಾಧ್ಯವೆನ್ನುತ್ತಾರೆ. ಜಗನ್ನಾಥಾದಿಗಳು ಇದನ್ನೊಪ್ಪುವುದಿಲ್ಲ.

ಅಸಿಮಾತ್ರಸಹಾಯನೆನಲ್
ಪಸರಿಪ ಪಗೆಯೋಳಿಯೆಲ್ಲಮಂ ಗೆಲ್ಲುತ್ತುಂ |
ಅಸಮಮಹಾತ್ಮಂ ತಾಂ ಗ
ರ್ವಿಸದಿರ್ಪಂ ಮಿಕ್ಕ ತುಚ್ಛ ಜನಗಳ ತೆರದಿಂ ||

ಈ ಉದಾಹರಣೆಯಲ್ಲಿಯೇ 'ತುಚ್ಛ,' 'ಮಹಾಧೃತಿ' ಎಂಬ ಶಬ್ದಗಳ ಪೈಕಿ ಯಾವುದೇ ಒಂದನ್ನು ಇಲ್ಲವೆ ಎರಡನ್ನು ಬಿಟ್ಟುಬಿಡುವುದಾದರೆ ಅನುಕ್ತಿಯ ಭೇದ ತ್ರಯಕ್ಕೂ ಉದಾಹರಣೆಯಾದಂತಾಗುತ್ತದೆ. ಹೀಗೆಯೇ ಉಳಿದ ಕಡೆಗಳಲ್ಲೂ ತಿಳಿಯಬೇಕು. ಇಲ್ಲಿ 'ಇವ' ಶಬ್ದವು ಇರುವುದರಿಂದ ಔಪಮ್ಯವು ಶಾಬ್ದ.

೨. ಉಕ್ತ-ಉತ್ಕರ್ಷನಿಮಿತ್ತ ; ಆರ್ಥಸಾಧರ್ಮ್ಯಯುಕ್ತ-ಅಶ್ಲಿಷ್ಟ

ಅಸಿಮಾತ್ರಸಹಾಯೋಽಪಿ ಪ್ರಭೂತಾರಿಪರಾಭವೇ |
ನೈವಾನ್ಯತುಚ್ಛಜನವತ್ ಸಗರ್ವೋಽಯಂ ಮಹಾಧೃತಿಃ ||

ಇಲ್ಲಿ '. . . ಜನವತ್' ಎಂಬಾಗ ತುಲ್ಯಾರ್ಥದಲ್ಲಿ 'ವತ್' ಪ್ರತ್ಯಯ ಬಂದಿರುವುದರಿಂದ ಔಪಮ್ಯವು ಆರ್ಥ.

೩. ಉಕ್ತ-ಉತ್ಕರ್ಷನಿಮಿತ್ತ ; ವ್ಯಂಗ್ಯಸಾಧರ್ಮ್ಯಯುಕ್ತ-ಅಶ್ಲಿಷ್ಟ

ಇಯಂ ಸುನಯನಾ ದಾಸೀಕೃತತಾಮರಸಶ್ರಿಯಾ |
ಆನನೇನಾಕಲಂಕೇನ ಜಯತೀಂದುಂ ಕಲಂಕಿನಮ್ ||

ಪದುಮದ ಸಿರಿಯುಂ ಗೆಲ್ದಾ
ಸುದತಿಯಿವಳ್ ನಿಷ್ಕಳಂಕಮೆನಿಪಾನನದಿಂ |
ಗೆಲೆವರ್ಪಳ್ ನಲವಿಂದಂ
ಹಿಮಕರನಂ ದಲ್ ಕಳಂಕಮಡಸಿರಲವನೊಳ್ ||

ಇಲ್ಲಿ 'ಇವ,' 'ತುಲ್ಯ,' 'ಸದೃಶ' ಮುಂತಾದ ಪದವೊಂದೂ ಇಲ್ಲದ ಕಾರಣ ಔಪಮ್ಯವು ವ್ಯಂಗ್ಯವೆಂದರಿಯುವುದು.

೪. ಉಕ್ತ-ಉತ್ಕರ್ಷನಿಮಿತ್ತ ; ಶಾಬ್ದಸಾಧರ್ಮ್ಯಯುಕ್ತ-ಶ್ಲಿಷ್ಟ

ಜಿತೇಂದ್ರಿಯತಯಾ ಸಮ್ಯಗ್ ವಿದ್ಯಾವೃದ್ಧ ನಿಷೇವಿಣಃ |
ಅತಿಗಾಢಗುಣಸ್ಯಾಸ್ಯ ನಾಬ್ಜವದ್ ಭಂಗುರಾ ಗುಣಾಃ ||

ವಿಜಿತೇಂದ್ರಿಯನೆನಲೀತಂ
ಭಜಿಸಿರ್ಪಂ ಜ್ಞಾನವೃದ್ಧರಂ ಬಹುಕಾಲಂ |
ಅತಿಗಾಢಗುಣಂ ನೋಡಲ್
ಪದುಮದ ಗುಣದಂತೆ ಭಂಗುರಂ ಗುಣಮಲ್ಲಂ ||

ಇಲ್ಲಿ 'ಅಬ್ಜವತ್' ಎನ್ನುವಾಗ ಇವಾರ್ಥದಲ್ಲಿ ವತ್—ಪ್ರತ್ಯಯ ಬಂದಿದೆ. 'ಗುಣ' ಶಬ್ದದಲ್ಲಿ ಶ್ಲೇಷೆಯಿದೆ. ಔಪಮ್ಯ ಶಾಬ್ದ.

೫. ಉಕ್ತ-ಉತ್ಕರ್ಷನಿಮಿತ್ತ ; ಅರ್ಥಸಾಧರ್ಮ್ಯಯುಕ್ತ-ಶ್ಲಿಷ್ಟ

ಅಖಂಡಮಂಡಲಃ ಶ್ರೀಮಾನ್ ಪಶ್ಯೈಷ ಪೃಥಿವೀಪತಿಃ |
ನ ನಿಶಾಕರವಜತು ಕಲಾವೈಕಲ್ಯಮಾಗತಃ ||

ನರಪತಿಯೀತಂ ಶ್ರೀಕಂ
ಸುರುಚಿರಪರಿಪೂರ್ಣಮಂಡಲಂ ನಿರುಕಿಸು ನೀಂ |
ಕರಮೆ ಕಲಾವಿಕಲತೆಯುಂ
ಬರಲೀಯಂ ಚಂದ್ರನಂತೆ ನೋಡಲ್ಕೆಂದುಂ ||

ಇಲ್ಲಿ 'ವತ್' ಪ್ರತ್ಯಯವು ತುಲ್ಯಾರ್ಥದಲ್ಲಿ ಬಂದಿದೆ; 'ಕಲಾ' ಶಬ್ದದಲ್ಲಿ ಶ್ಲೇಷೆಯಿದೆ.

ಮಾಲಾಪ್ರತಿವಸ್ತೂಪಮೆಯಂತೆ ಮಾಲಾವ್ಯತಿರೇಕಕ್ಕೂ ಸಂಭವವಿದೆ; ಅದರ ಭೇದಗಳನ್ನೂ ಹಾಗೆಯೇ ಊಹಿಸಿಕೊಳ್ಳಬೇಕು. ದಿಕ್ಸೂಚನೆಗಾಗಿ ಕೆಲವು ಉದಾಹರಣೆಗಳನ್ನು ಮಾತ್ರ ಬರೆದಿದೆ :—

ಹರವನ್ನ ವಿಷಮದೃಷ್ಟಿ
ಹರಿವನ್ನ ವಿಭೋ ವಿಧೂತವಿತತವೃಷಃ |
ರವಿರನ್ನ ಚಾತಿದುಃಸಹ
ಕರತಾಪಿತಭೂಃ ಕದಾಚಿದಸಿ ||

ಹರನವೊಲಸಮಾಕ್ಷಂ
ದೊರೆಯೇ, ನೀನಲ್ತು ಧೂತವೃಷನುಂ ಹರಿವೊಲ್ |
ಉರುದುಸ್ಸಹರಶ್ಮಿಗಳಿಂ
ಧರೆಗಂ ಸಂತಾಪಕಾರಿಯಲ್ಲಂ ನೋಡಲ್ ||

ಇಲ್ಲಿ 'ವತ್' ಪ್ರತ್ಯಯವು ತುಲ್ಯಾರ್ಥದಲ್ಲಿ ಬಂದಿದೆ. 'ವಿಷಮ' ಇತ್ಯಾದಿ ಶಬ್ದಗಳು ಶ್ಲಿಷ್ಟ.

ನಿತ್ಯೋದಿತಪ್ರತಾಪೇನ ತ್ರಿಯಾಮಾಮೀಲಿತಪ್ರಭಃ।
ಭಾಸ್ವತಾನೇನ ಭೂಪೇನ ಭಾಸ್ವಾನೇಷ ವಿನಿರ್ಜಿತ್ ॥

ನಿತ್ಯೋದಿತಮೆನೆ ತೇಜಂ
ನಿತ್ಯಂ ಭಾಸ್ವಂತನಪ್ಪ ನರಪತಿಯೀತಂ।
ಸತ್ಯಂ ಗೆಲ್ದಂ ರಾತ್ರಿಯೊ
ಳಸ್ತಂಗತನಪ್ಪ ರವಿಯ ಭಾಸ್ವರಗುಣಮಂ ॥

ಇಲ್ಲಿ ಉಪಮೆ ವ್ಯಂಗ್ಯ; 'ಭಾಸ್ವತಾ' ಎಂಬಲ್ಲಿ ಶ್ಲೇಷೆಯಿದೆ.[31] ಅಥವಾ—

ಸ್ವಚ್ಛಾತ್ಮತ್ವಾಗುಣ ಸಮುಲ್ಲಸಿತೇಂದು ಬಿಂಬಂ
ಬಿಂಬಪ್ರಭಾಧರಮಕೃತ್ರಿಮಹೃದ್ಯಗಂಧಂ।
ಯೂನಾಮತೀವ ಪಿಬತಾಂ ರಜನೀಷು ಯತ್ರ
ತೃಷ್ಣಾಂ ಜಹಾರ ಮಧು ನಾನನಮಂಗನಾನಾಮ್ ॥

ಸ್ವಚ್ಛಾತ್ಮತಾಗುಣ ಸಮುಲ್ಲಸಿತೇಂದುವೊಪ್ಪಲ್
ಬಿಂಬಪ್ರಭಾಧರಮಕೃತ್ರಿಮ ಗಂಧಹೃದ್ಯಂ।
ದ್ರಾಕ್ಷಾರಸಂ ಯುವಕರಾ ಕುಡಿವಿಚ್ಛೆಯಂ ತಾಂ
ತೀರ್ಚಿತ್ತು, ತೀರ್ಚದಿರುಳೊಳ್ ವನಿತಾನನಂ ಮೇಣ್ ॥

ಇಲ್ಲಿ 'ಇವ', 'ತುಲ್ಯ' ಮುಂತಾದ ಉಪಮಾವಾಚಕ ಶಬ್ದಗಳೇನೂ ಇಲ್ಲದಿದ್ದರೂ ಕೂಡ, ಶ್ಲಿಷ್ಟವಾಗಿರುವ ವಿಶೇಷಣಗಳ ಬಲದಿಂದ ಔಪಮ್ಯ ವ್ಯಂಗ್ಯವಾಗಿದೆ. ಶ್ಲಿಷ್ಟವಿಶೇಷಣಗಳ ವಿಶೇಷ್ಯಗಳೆರಡರ ಪೈಕಿ, ಕೇವಲ ಒಂದನ್ನೇ ವಾಚ್ಯವಾಗಿ ಹೇಳುವುದಾದರೂ ಈ ಅಲಂಕಾರವುಳಿಯುವುದರಿಂದ, ವ್ಯತಿರೇಕದ ಒಳಭೇದಗಳು ಇನ್ನೂ ಹೆಚ್ಚಾಗುತ್ತವೆ. ಅವನ್ನೆಲ್ಲ ಹೀಗೆಯೇ ಊಹಿಸಿಕೊಳ್ಳುವುದು.

ಡಾ|| ಕೆ. ಕೃಷ್ಣಮೂರ್ತಿ

(ಸಶೇಷ)

31 'ಹೊಳೆಯುವ' ಮತ್ತು 'ಸೂರ್ಯ'.

ನಮ್ಮ ಕುಟುಂಬ ಜೀವನದ ಆದರ್ಶ

ಭಾರತೀಯ ಸಮಾಜದಲ್ಲಿ ಕುಟುಂಬ ಮೂಲ ಸಂಸ್ಥೆ. ಅದು ಉಳಿದೆಲ್ಲ ಸಂಸ್ಥೆಗಳ ತಳಹದಿ. ಎಲ್ಲ ಆಶ್ರಮಗಳಿಗೂ ಗೃಹಸ್ಥಾಶ್ರಮ ಆಧಾರ. ಬಾಳಿನ ಎಲ್ಲ ಪುರುಷಾರ್ಥಗಳಿಗೂ ಕುಟುಂಬ ಜೀವನ ಆಶ್ರಯ. ಕುಟುಂಬ ಹುಟ್ಟುವುದಕ್ಕೆ ಸ್ತ್ರೀ ಪುರುಷರ ಕಾಮ ಕಾರಣ. ಅದು ನಡೆಯುವುದಕ್ಕೆ ಅರ್ಥ ಸಾಧನ. ಅವೆರಡೂ ಮೇರೆ ಮೀರದೆ, ಅವೆರಡೂ ಒಂದಕ್ಕೊಂದು ವಿರುದ್ಧವಾಗದೆ, ಅವೆರಡೂ ಹದವಾಗಿ ಕೂಡುವುದಕ್ಕೆ ಧರ್ಮ ಅಗತ್ಯ. ಈ ಮೂರೂ ಅಂತಿಮ ಗುರಿಗಳಲ್ಲ. ಮೋಕ್ಷ, ಬಿಡುಗಡೆ, ಅಂತಿಮ ಗುರಿ, ಕಾಮವೂ ಅರ್ಥವೂ ಧರ್ಮಕ್ಕೆ ಅಧೀನವಾಗಿ ಆ ಮೂರೂ ಕೊನೆಯಲ್ಲಿ ಮೋಕ್ಷಕ್ಕೆ ದಾರಿ ಮಾಡಿಕೊಡಬೇಕು. ಆತ್ಮವನ್ನು ತಿಳಿದುಕೊಳ್ಳುವುದಕ್ಕೆ ಆತ್ಮ ಸಿದ್ಧಿಯನ್ನು ಪಡೆಯುವುದಕ್ಕೆ ಈ ಮೂರೂ ಅಗತ್ಯವಾದ ಸಾಧನಗಳು. ಬ್ರಹ್ಮಚರ್ಯ ಮತ್ತು ಗಾರ್ಹಸ್ಥ್ಯಗಳನ್ನು ಸಾಂಗವಾಗಿ ನಡೆಸಿದ ನಂತರ ವಾನಪ್ರಸ್ಥವನ್ನೂ ಸಂನ್ಯಾಸವನ್ನೂ ಕೈಕೊಳ್ಳುವುದೇ ಕ್ರಮವಾದ ಜೀವನ. ಮೊದಲನೆಯ ಮೂರು ಆಶ್ರಮಗಳನ್ನು ಪ್ರವೇಶಿಸದೆಯೇ ಸಂನ್ಯಾಸವನ್ನು ಆಶ್ರಯಿಸುವುದು ಕ್ರಮವಿರೋಧ. ಅಲ್ಲದೆ ಬಾಲ್ಯ ಸಂನ್ಯಾಸಿಗಳಿಗೆ ಬಾಳಿನ ಸತ್ಯ ತಿಳಿಯುವುದೂ ಅಸಂಭವ. ಬಾಳಿಗೆ ಬೇಕಾದ ತತ್ತ್ವವನ್ನು ಬೋಧಿಸುವ ಅರ್ಹತೆಯೂ ಇರುವುದಿಲ್ಲ. ಕೊರೆ ಜೀವನದಿಂದ ಹುಟ್ಟಿದ ವೈರಾಗ್ಯಕ್ಕಿಂತಲೂ ತುಂಬು ಜೀವನದಿಂದ ಹುಟ್ಟಿದ ವೈರಾಗ್ಯ ವೈಯಕ್ತಿಕವಾಗಿಯೂ ಉತ್ತಮವಾದದ್ದು, ಸಮಾಜದ ಹಿತ ದೃಷ್ಟಿಯಿಂದಲೂ ಪರಿಣಾಮಕಾರಿಯಾದದ್ದು. ವೇದಕಾಲದಿಂದ ಯಾಜ್ಞವಲ್ಕ್ಯ ಮುಂತಾದ ಋಷಿಗಳು ತುಂಬು ಜೀವನ ನಡೆಸಿ ಆತ್ಮ ಸಿದ್ಧಿ ಪಡೆದವರು. ಅವರು ಕಾಮಕ್ಕಾಗಿ ಕಾಮವನ್ನು ಪ್ರೀತಿಸಲಿಲ್ಲ. ಅರ್ಥಕ್ಕಾಗಿ ಅರ್ಥವನ್ನು ಪ್ರೀತಿಸಲಿಲ್ಲ. ಧರ್ಮಕ್ಕಾಗಿ ಧರ್ಮವನ್ನು ಪ್ರೀತಿಸಲಿಲ್ಲ. ಗಂಡನ ಸಲುವಾಗಿ ಗಂಡನನ್ನೂ ಅಥವಾ ಹೆಂಡತಿಯ ಸಲುವಾಗಿ ಹೆಂಡತಿಯನ್ನೂ ಪ್ರೀತಿಸಲಿಲ್ಲ. ತನ್ನ ಆತ್ಮೋದ್ಧಾರಕ್ಕಾಗಿ ಗಂಡನು ಹೆಂಡತಿಯನ್ನು ಪ್ರೀತಿಸಿದನು, ಹೆಂಡತಿಯು ಗಂಡನನ್ನು ಪ್ರೀತಿಸಿದಳು. ಇಬ್ಬರಿಗೂ ಸಮಾನವಾದದ್ದು ಆತ್ಮ. ಆ ಸಮಾನಾತ್ಮದ ಸಿದ್ಧಿಯೇ ದಂಪತಿಗಳ ಆತ್ಮಸಿದ್ಧಿ. ಇದು ಯಾಜ್ಞವಲ್ಕ್ಯರು ನಾಲ್ಕನೆಯ ಆಶ್ರಮವನ್ನು ಸ್ವೀಕರಿಸುವ ಸಂದರ್ಭದಲ್ಲಿ ಸಮಾನ ಮನೋಧರ್ಮವನ್ನು ಪಡೆದಿದ್ದ ತಮ್ಮ ಪ್ರೀತಿಯ ಹೆಂಡತಿ ಮೈತ್ರೇಯಿಗೆ ಕೊಟ್ಟ

ಉಪದೇಶ. ಇದು ಲೋಕೋತ್ತರವಾದ ಉಪದೇಶ. ಇಂಥ ಉಪದೇಶವನ್ನು ಇಷ್ಟು ಸ್ಪಷ್ಟವಾಗಿ ಬಹುಶಃ ಅವರ ಹಿಂದೆಯಾಗಲಿ ಅಥವಾ ಅವರ ನಂತರವಾಗಲಿ ಭಾರತದಲ್ಲಿ ಯಾರೂ ಉಪದೇಶಿಸಿದಂತೆ ಕಾಣುವುದಿಲ್ಲ. ಈ ಆದರ್ಶದಾಂಪತ್ಯ ಭಾರತ ಜನರಿಂದ ಕಣ್ಮರೆಯಾದ ಆದರ್ಶ.

ನಮ್ಮ ಕಣ್ಣುಮುಂದೆ ಇರುವ ಆದರ್ಶ ಬೇರೆಯಾದದ್ದು. ಆ ಆದರ್ಶದ ಪ್ರಕಾರ ಹೆಣ್ಣುಗಂಡುಗಳು ಸಮಾನರಲ್ಲ. ಹೆಣ್ಣು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ. ಅವಳು ಜೀವನದ ಉದ್ದಕ್ಕೂ ತಂದೆ, ಗಂಡ, ಅಥವಾ ಮಗ, ಒಬ್ಬರು ತಪ್ಪಿದರೆ ಮತ್ತೊಬ್ಬರಿಗೆ ಅಧೀನಳು. ಅವಳಿಗೆ ಗಂಡನನ್ನು ವರಿಸುವ ಸ್ವಾತಂತ್ರ್ಯವೂ ಇಲ್ಲ, ಗಂಡನನ್ನು ಬಿಡುವ ಸ್ವಾತಂತ್ರ್ಯವೂ ಇಲ್ಲ. ಸ್ವಾತಂತ್ರ್ಯವಿಲ್ಲದವಳಿಗೆ ಆಸ್ತಿಯೂ ಇಲ್ಲ. ಹೆಣ್ಣಿಗೆ ಬೇರೇ ಆತ್ಮವಿಲ್ಲ; ಗಂಡನೇ ಅವಳ ಪ್ರಾಣ. ಗಂಡನೇ ಅವಳ ಆತ್ಮ. ಗಂಡನ ಆತ್ಮಕ್ಕೆ ಒಳ್ಳೆಯದಾದರೆ ಅವಳಿಗೆ ಒಳ್ಳೆಯದಾಗುತ್ತದೆ. ಅವನಿಗೆ ಅಮಂಗಳವಾದರೆ ಅವಳಿಗೂ ಅಮಂಗಳ. ಅಲ್ಲದೆ ಹೆಣ್ಣನ್ನು ಕಂಡರೆ ನಿಕೃಷ್ಟಭಾವನೆ ಬೇರೆ ಇದೆ. ಅವಳು ಚಂಚಲೆ, ಕಾಮುಕಿ, ಮೋಹಿನಿ, ಪ್ರಮದೆ. ಗಂಡಸನ್ನು ಕೆಡಿಸುವವಳು, ಅವನನ್ನು ಉತ್ತಮಸ್ಥಿತಿಯಿಂದ ಅಧೋಗತಿಗೆ ಎಳೆಯುವಂಥವಳು. ಆದದ್ದರಿಂದ ಗಂಡಸು ಹೆಂಗಸಿನ ಮೋಹಜಾಲಕ್ಕೆ ಸಿಕ್ಕದೆ ಎಚ್ಚರದಿಂದಿರಬೇಕು. "ನಂಬಿದಂತಿರಬೇಕು, ನಂಬದಲೆ ಇರಬೇಕು, ಇಂಬರಿದು ಎಚ್ಚರಿರಬೇಕು; ಹೆಣ್ಣು ನಂಬಿದವ ಕೆಟ್ಟ." ಇದು ಎರಡು ನಾಲಗೆಯ ನೀತಿ. ಗಂಡಿಗೊಂದು ನೀತಿ, ಹೆಣ್ಣಿಗೆ ಬೇರೆಯ ನೀತಿ. ಹೆಣ್ಣು ಪತಿವ್ರತೆಯಾಗಿರಬೇಕು. ಒಬ್ಬನನ್ನು ಮದುವೆಯಾದರೆ, ಒಂದುಸಲ ಮದುವೆಯಾದರೆ ಅವಳ ಆಟ ತೀರಿತು. ಒಂದು ಮದುವೆಯಾದರೆ ಗಂಡಿನ ಬಾಳು ತೀರುವುದಿಲ್ಲ. ಅವನು ಎರಡನೆಯ ಮದುವೆಮಾಡಿಕೊಳ್ಳಬಹುದು. ಹೆಂಡತಿ ಬದುಕಿರುವಾಗಲೇ ಬೇರೊಬ್ಬಳನ್ನು ಮದುವೆಯಾಗಬಹುದು. ಸಮಾಧಾನವಿಲ್ಲದಿದ್ದರೆ ಹೆಂಡತಿಯನ್ನು ಒತ್ತಟ್ಟಿಗೆ ಇಡಬಹುದು. ಈ ದ್ವೈತ ನೀತಿಯ ಸಮರ್ಥನೆಗಾಗಿ ಸಾವಿರಾರು ಧರ್ಮಶಾಸ್ತ್ರಗಳು ಹುಟ್ಟಿರಬಹುದು; ಸಾವಿರಾರು ವರ್ಷಗಳ ಕಾಲ ತಡೆ ಬಡೆಯಿಲ್ಲದೆ ಅದು ಧರ್ಮವಾಗಿ ನಡೆದುಕೊಂಡು ಬಂದಿರಬಹುದು. ಅದನ್ನು ಒಪ್ಪಿದ್ದಕ್ಕೆ ಎಷ್ಟೋ ನಿಮಿತ್ತಗಳಿರಬಹುದು, ನೆಪಗಳಿದ್ದರಬಹುದು. ಅವುಗಳ ಮೇಲೆ ಅದು ಭದ್ರವಾಗಿ ನಿಂತಿರುವಂತೆ ಕಾಣಬಹುದು. ಆದರೆ ಅದಕ್ಕೆ ಮುಖ್ಯವಾದ ಒಂದರ ಆಸರೆ ಇಲ್ಲ. ಅದು ನ್ಯಾಯ (Reason)ದ ಆಸರೆ. ಶಾಸ್ತ್ರ ಅದನ್ನು ನ್ಯಾಯವೆಂದು ಹೇಳಬಹುದು, ಸಮಾಜ ಅದನ್ನು ನ್ಯಾಯವೆಂದು ಒಪ್ಪಿಕೊಳ್ಳಬಹುದು. ಆದರೆ ಆನ್ವೀಕ್ಷಿಕೀಯ ಒರೆಗಲ್ಲಿಗೆ ಹಚ್ಚಿದಾಗ ಅದು ನ್ಯಾಯವಾಗಿ ತೋರ್ಪಡಿಸಿಕೊಳ್ಳುವುದಿಲ್ಲ.

ಬೇರೆ ಕೋಟಿ ಆಸರೆಗಳಿದ್ದರೂ ಈ ಒಂದು ಆಸರೆ ಇಲ್ಲದ ಅದು ನೆಲೆಯಾಗಿ ನಿಲ್ಲ ತಕ್ಕದಲ್ಲ, ನಿಲ್ಲುವುದಿಲ್ಲ. ಅದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ನ್ಯಾಯ ಬಲವಿಲ್ಲದ ಆ ದ್ವೈತ ನೀತಿಗೆ ಬುಡ ಭದ್ರವಿಲ್ಲ.

ಈ ದ್ವೈತಕ್ಕೆ ಪ್ರಕೃತಿಯ ಪ್ರಮಾಣವೇ ಆಧಾರವಾಗಿರುವಾಗ, ನ್ಯಾಯದ ಆಧಾರವೇಕೆಂದು ವಾದಿಸಬಹುದು. ಗಂಡಸು ಹೆಂಗಸು ಎಂಬ ಭೇದವು ಮನುಷ್ಯನು ಮಾಡಿದ್ದಲ್ಲ; ಅದು ಪ್ರಕೃತಿವಿಧಾಯಕ ಮಾಡಿದ್ದು. ಹೆಂಗಸು ಅಬಲೆ, ಗಂಡಸು ಬಲಿಷ್ಠ, ಹೆಂಗಸು ಚಂಚಲೆ, ಚಪಲೆ, ಗಂಡಸು ಸ್ಥಿರಚಿತ್ತದವನು ಆತ್ಮಸಂಯಮ ಉಳ್ಳವನು. ಹೆಂಗಸು ಮಕ್ಕಳನ್ನು ಹೆರುವವಳು, ಹಾಲು ಕೊಡುವವಳು, ಗಂಡಸು ಹೆರುವವನೂ ಅಲ್ಲ, ಹಾಲು ಕೊಡುವವನೂ ಅಲ್ಲ. ಗಂಡಸು ಸಂಪಾದಿಸಿ ತಂದು ಹಾಕುವವನು, ಹೆಂಗಸು ಮಾಡಿಡುವವಳು. ಭೇದ ಪ್ರಕೃತಿಯ ಕಾರಣದಿಂದ ಭೇದ ನೀತಿ ಹುಟ್ಟಿದೆ. ಪ್ರಕೃತಿಯ ನ್ಯಾಯದ ಮುಂದೆ ಬೇರೆ ನ್ಯಾಯ ನಿಲ್ಲದು.

ಈ ವಾದಕ್ಕೆ ಪ್ರತಿವಾದ ಇದ್ದೇ ಇದೆ. ಹೆಂಗಸರು ಮತ್ತು ಗಂಡಸರ ದೇಹ ಪ್ರಕೃತಿಯು ಭಿನ್ನವಾಗಿರುವುದು ನಿಜ. ಹೆಂಗಸು ಗಂಡಸಿಗಿಂತ ಬಲಹೀನಳು ಎಂದು ಒಪ್ಪೋಣ. ಕುಸ್ತಿ ಪಂದ್ಯವನ್ನಿಟ್ಟರೆ ಗಂಡಸರು ಹೆಂಗಸರನ್ನು ಸೋಲಿಸಬಹುದು. ಈ ವ್ಯತ್ಯಾಸಗಳ ಕಾರಣ ಹೆಂಗಸಿಗೆ ಸ್ವಾತಂತ್ರ್ಯ ಕೂಡದು ಎಂದು ವಾದಿಸುವುದ ಕ್ಕಾಗುತ್ತದೆಯೇ? ಒಬ್ಬ ಗಂಡಸು ಮತ್ತೊಬ್ಬನನ್ನು ಕುಸ್ತಿಯಲ್ಲಿ ಸೋಲಿಸ ಬಹುದು. ಆ ಕಾರಣದಿಂದ ಬಲಹೀನನಿಗೆ ಸ್ವಾತಂತ್ರ್ಯ ಕೂಡದು ಎಂದು ವಾದಿಸು ವುದಕ್ಕಾಗುತ್ತದೆಯೆ? ಗಂಡಸು ಗಂಡಸರಿಗೆ ಬಲದಲ್ಲಿ ವ್ಯತ್ಯಾಸವಿದ್ದರೂ ಸ್ವಾತಂತ್ರ್ಯದ ಹಕ್ಕಿನಲ್ಲಿ ವ್ಯತ್ಯಾಸವಿರಕೂಡದಾದರೆ ಆ ನ್ಯಾಯವನ್ನು ಹೆಂಗಸಿಗೂ ಅನ್ವಯ ಮಾಡಬೇಕಲ್ಲವೆ?

ಭಿನ್ನ ನೀತಿಗೆ ಬರಿಯ ಬಲದ ವ್ಯತ್ಯಾಸವಲ್ಲ, ಲೈಂಗಿಕ ಭಿನ್ನತೆಯು ಭಿನ್ನ ನೀತಿಗೆ ಕಾರಣವೆಂದು ವಾದಿಸಬಹುದು. ಹೆಂಗಸರು ಮಕ್ಕಳನ್ನು ಹೆರುತ್ತಾರೆ. ಗಂಡಸರು ಹೆರುವುದಿಲ್ಲ ಆದದ್ದರಿಂದ ಅವರ ನೀತಿ ಬೇರೆಯಾಗಿರಬೇಕು; ಹೆಂಗಸರಿಗೆ ಸ್ವಾತಂತ್ರ್ಯ ಕೂಡದು ಗಂಡಸರಿಗೆ ಸ್ವಾತಂತ್ರ್ಯವಿರಬೇಕು. ಈ ವಾದವೂ ನ್ಯಾಯವಾಗಿ ತೋರುವು ದಿಲ್ಲ. ಇಬ್ಬರಲ್ಲೂ ಒಂದೊಂದು ಬಗೆಯ ದೌರ್ಬಲ್ಯವಿದೆ. ಗಂಡಸರು ಮಕ್ಕಳನ್ನು ಹೆರಲಾರರು. ಆದ್ದರಿಂದ ಅವರಿಗೆ ಸ್ವಾತಂತ್ರ್ಯ ಸಲ್ಲದು ಎಂದು ವಾದಿಸಬಹುದಲ್ಲವೆ? ಹೆಂಗಸರು ಮಕ್ಕಳನ್ನು ಹೆರಲು ನಿರಾಕರಿಸಿದರೆ ಆಗ ಗಂಡಸರೂ ಇರುವುದಿಲ್ಲ ಹೆಂಗಸರೂ ಇರುವುದಿಲ್ಲ. ಮಾನವ ಸಮಾಜವೇ ನಿರ್ನಾಮವಾಗುತ್ತದೆ. ಸ್ವಾತಂತ್ರ್ಯದ ಸಮಸ್ಯೆಯೇ ಇಲ್ಲವಾಗುತ್ತದೆ.

ಹೆಣ್ಣು ಚಪಲೆ, ಗಂಡಸು ಸ್ಥಿರ ಚಿತ್ತದವನು ಎಂಬ ವಾದವೂ ಸರಿಯಲ್ಲ. ಹೆಂಗಸರಷ್ಟೇ ಗಂಡಸರಲ್ಲೂ ಚಪಲಚಿತ್ತರೂ ಚಂಚಲ ಸ್ವಭಾವದವರೂ ಇರುತ್ತಾರೆ. ಈ ಗುಣಾವಗುಣಗಳು ಹೆಂಗಸರೊಬ್ಬರಿಗೆ ಮಾತ್ರ ಸೇರಿದುವಲ್ಲ; ಗಂಡಸು ಹೆಂಗಸರಿಬ್ಬರಿಗೂ ಸಮಾನವಾದವು. ಹಾಗೆ ನೋಡಿದರೆ ಗಂಡಸರಿಗಿಂತ ಹೆಂಗಸರಿಗೆ ತ್ಯಾಗ, ಆತ್ಮಸಂಯಮನ ಹೆಚ್ಚು. ಅನೇಕ ವಿಧವೆಯರು ತಮ್ಮ ಜೀವಮಾನವನ್ನು ಪಾತಿವ್ರತ್ಯದಲ್ಲಿ ಕಳೆಯುತ್ತಾರೆ, ಆದರೆ ಹೆಂಡತಿ ಕಳೆದುಕೊಂಡವರು ಶವಸಂಸ್ಕಾರತೀರಿದ ಕೂಡಲೆ ಮದುವೆಯಾಗಲು ಹೆಣ್ಣನ್ನು ಹುಡುಕುತ್ತಾರೆ. ವಿಧವಾ ವಿವಾಹದ ಹಕ್ಕು ದೊರೆತಮೇಲೂ ಕೂಡ ಹೆಂಗಸರು ಪುನರ್ವಿವಾಹ ಮಾಡಿಕೊಳ್ಳುವುದಕ್ಕಿಂತ ಗಂಡಸರು ಪುನರ್ವಿವಾಹ ಮಾಡಿಕೊಳ್ಳುವುದೇ ಹೆಚ್ಚಾಗಿದೆ. ಬೀದಿಯಲ್ಲಿ ಹೋಗುವ ಹೆಂಗಸರನ್ನು ಕಂಡು ಅಸಭ್ಯವಾಗಿ ವರ್ತಿಸುವವರು ಗಂಡಸರೋ? ಹೆಂಗಸರೋ? ಈ ಎಲ್ಲ ವಿಷಯುಗಳೂ ಗಂಡಸಿಗಿಂತ ಹೆಂಗಸರಿಗೆ ಆತ್ಮ ಸಂಯಮ, ಮಾನಮರ್ಯಾದೆ ಹೆಚ್ಚೆಂದು ಸ್ಪಷ್ಟಪಡಿಸುವುದಿಲ್ಲವೆ? ವಸ್ತುಸ್ಥಿತಿ ಹೀಗಿದ್ದರೂ ಹೆಂಗಸರ ಅವಗುಣ ಹೆಚ್ಚೆಂದು ಅವರಿಗೆ ಸ್ವಾತಂತ್ರ್ಯವು ಸಲ್ಲದೆಂದು ವಾದಿಸುವುದು ಅನ್ಯಾಯವಲ್ಲವೆ? ಗುಣಗಳೂ ಅವಗುಣಗಳೂ ಸಮಾನವಾಗಿ ಹಂಚಿಕೆಯಾಗಿವೆ. ಅವಗುಣಗಳು ಯಾರಲ್ಲಿದ್ದರೂ ತ್ಯಾಜ್ಯ. ಸುಗುಣಗಳು ಯಾರಲ್ಲಿದ್ದರೂ ಅವು ಪೂಜ್ಯ.

ಮಾನವ ಸಮಾಜ ಉಳಿಯಬೇಕಾದರೆ, ಬೆಳೆಯ ಬೇಕಾದರೆ ಗಂಡು ಹೆಣ್ಣುಗಳಿಬ್ಬರಲ್ಲೂ ಪರಸ್ಪರ ಸಹನೆ, ಸಹಕಾರ, ಅನುಕಂಪ, ಅನುನಯ ಅಗತ್ಯ. ಇಬ್ಬರಿಗೂ ಸಮಾನಹಕ್ಕು ಬಾಧ್ಯತೆಗಳಿರಬೇಕು. ಸಮಾನಹಕ್ಕು ಬಾಧ್ಯತೆಗಳು, ಸಮಾನ ಕರ್ತವ್ಯಗಳು ಇರಬೇಕು ಎಂದಾಗ ಅವರ ಜೀವನ ರೀತಿ ಒಂದೇ ಆಗಿರಬೇಕೆಂದು ಅರ್ಥವಲ್ಲ. ಅವರ ನೀತಿ ಒಂದೇ ಆಗಿರಬೇಕು. ಸ್ತ್ರೀಯರು ಒಂದೇ ಸಲ ಮದುವೆಯಾಗಬೇಕೆಂಬುದು ನೀತಿಯಾದರೆ, ಆ ನೀತಿ ಪುರುಷರಿಗೂ ಅನ್ವಯಿಸಬೇಕು. ವ್ಯಭಿಚಾರ ನಡೆಸಿದ ಪತ್ನಿಯನ್ನು ಗಂಡನು ಬೇರೆ ಇಡಬಹುದಾದರೆ, ಬಿಡಬಹುದಾದರೆ ಹೆಂಡತಿಯೂ ಕೂಡ ವ್ಯಭಿಚಾರಿ ಗಂಡನನ್ನು ಬಿಡಲು ಅವಕಾಶವಿರಬೇಕು. ಹೆಂಡತಿ ಕಳೆದುಕೊಂಡವನು ಬೇರೆ ಮದುವೆಯಾಗಬಹುದಾದರೆ, ಗಂಡನನ್ನು ಕಳೆದುಕೊಂಡ ಹೆಂಡತಿಯೂ ಬೇರೆ ಮದುವೆಮಾಡಿಕೊಳ್ಳಲು ಅವಕಾಶವಿರಬೇಕು. ಗಂಡನು ಸಂಪಾದಿಸುವ ಹಕ್ಕನ್ನು ಪಡೆದಿದ್ದರೆ ಹೆಂಡತಿಯೂ ಸಂಪಾದಿಸುವ ಹಕ್ಕನ್ನು ಪಡೆಯಬೇಕು. ಗಂಡನು ಹೊರಗೆ ದುಡಿಯುತ್ತಾನೆ, ಹೆಂಗಸು ಒಳಗೆ ದುಡಿಯುತ್ತಾಳೆ. ಆದ್ದರಿಂದ ಕುಟುಂಬದ ಆಸ್ತಿಯಲ್ಲಿ ಅವರಿಬ್ಬರಿಗೂ ಹಕ್ಕಿರಬೇಕು. ಒಂದು ಪಕ್ಷ ಹೆಂಡತಿಯೂ ಹೊರಗೆ ದುಡಿದು ಸಂಪಾದಿಸಿದರೆ ಆಗ ಗಂಡ ಹೆಂಡತಿಯರಿ

ಬ್ಬರೂ ಮನೆಗೆಲಸ ಮಕ್ಕಳ ಪೋಷಣೆಯಲ್ಲಿ ಭಾಗಿಗಳಾಗಬೇಕು. ಇದರಿಂದ ಅವರಲ್ಲಿ ಮಧುರ ಭಾವವೇರ್ಪಡುತ್ತದೆ. ಸಹಾನುಭೂತಿ ಸ್ನೇಹ ಹೆಚ್ಚುತ್ತದೆ. ದಾಂಪತ್ಯ ಜೀವನ ಸುಗಮವಾಗುತ್ತದೆ.

ಸುಸಂಸ್ಕೃತರಾದ ಈಗಿನ ಕಾಲದ ಯುವಕಯುವತಿಯರ ಜೀವನ ದೃಷ್ಟಿ ದ್ವೈತ ನೀತಿಯಿಂದ ಅದ್ವೈತ ನೀತಿಯ ಕಡೆಗೆ ಹರಿಯುತ್ತಿದೆ. ಕಾಮದ ವಿಚಾರದಲ್ಲೂ ಅವರ ಮನೋಭಾವ ಬದಲಾಯಿಸಿದೆ. ಅವರು ಕಾಮವನ್ನು ಅಸಹ್ಯಕರವೆಂದಾಗಲಿ, ಅಪವಿತ್ರವೆಂದಾಗಲಿ ಎಣಿಸುವುದಿಲ್ಲ. ಅದೂ ಜೀವನದಲ್ಲಿ ಸುಂದರ ರೂಪತಾಳಬಹುದು, ರಸಿಕತೆ ಹುಟ್ಟಿಸಬಹುದು, ಪವಿತ್ರವಾಗಬಹುದು ಎಂದು ನಂಬಿದ್ದಾರೆ. ಅದೂ ಕೂಡ ಆತ್ಮ ಸಾಕ್ಷಾತ್ಕಾರಕ್ಕೆ ಸಹಾಯಕವಾಗಬಹುದೆಂದು ತಿಳಿದಿದ್ದಾರೆ. ಹಾಗೆಯೇ ಅರ್ಥವೂ ಕೂಡ ಕೀಳಾದ ಬೆಲೆಯಲ್ಲ. ಅದು ಜೀವನಕ್ಕೆ ಬೇಕಾದದ್ದು. ಅದನ್ನು ಗಳಿಸುವುದರಲ್ಲೂ ಪ್ರತಿಯೊಬ್ಬನ ಆತ್ಮವೂ ವಿಕಾಸವಾಗುತ್ತದೆ. ಅರ್ಥಾರ್ಜನೆಯೂ ಪ್ರತಿಯೊಬ್ಬನ ಸತ್ವವನ್ನು ಪರೀಕ್ಷಿಸುತ್ತದೆ. ಅದು ಅವನಲ್ಲಿ ಅನೇಕ ಒಳ್ಳೆಯ ಗುಣ ಗಳನ್ನು ಹೊರಹೊಮ್ಮಿಸುತ್ತದೆ. ಈ ಎರಡು ಪುರುಷಾರ್ಥಗಳೂ ಹದವಾಗಿ ಬೆಳೆಯುವು ದರ ಮೂಲಕವೇ ಧರ್ಮವೂ ಕೂಡ ಬೆಳೆಯುತ್ತದೆ. ಕಾಮವನ್ನೂ ತ್ಯಜಿಸಿ, ಅರ್ಥ ವನ್ನೂ ತ್ಯಜಿಸಿ ಬಾಳಬೇಕೆಂಬುದು ಬರಡು ಧರ್ಮ. ಅದು ಬಾಳನ್ನು ನಿರಾಕರಿಸುವ ಧರ್ಮ (Life denying). ಬಾಳನ್ನು (Life Affirming) ಸ್ಥಿರೀಕರಿಸುವ ಧರ್ಮ ವಲ್ಲ; ಅದು ಕುಂದಿದ ಧರ್ಮ, ತುಂಬಿದ ಧರ್ಮವಲ್ಲ. ಈಗ ನಮಗೆ ಬೇಕಾಗಿರುವುದು ನಿವೃತ್ತಿಯಿಂದ ಪಡೆಯುವ ಮುಕ್ತಿಯಲ್ಲ, ಪ್ರವೃತ್ತಿಯಿಂದ ಪಡೆಯುವ ಮುಕ್ತಿ.

ಕಾಮ ಮತ್ತು ಹಣದ ಆಸೆ, ಇವು ತುಂಬ ಪ್ರಬಲವಾದ ಶಕ್ತಿಗಳು. ಅರಿ ವಿಲ್ಲದೆ, ಗುರಿ ಇಲ್ಲದೆ, ಮಿತಿಯಿಲ್ಲದೆ, ಮೇರೆಯಿಲ್ಲದೆ ಅವುಗಳನ್ನು ಹರಿಯಬಿಡುವುದು ಅಪಾಯಕರ. ಸ್ವೇಚ್ಛಾವರ್ತನೆಯಿಂದ ವ್ಯಕ್ತಿಗಳಿಗೂ ಹಾನಿಯುಂಟಾಗುತ್ತದೆ, ಸಮಾಜಕ್ಕೂ ಹಾನಿ ತಟ್ಟುತ್ತದೆ. ಆಧುನಿಕರು ಸ್ವೇಚ್ಛಾವಿಹಾರಪರರೂ ಅಲ್ಲ, ಸ್ವಾರ್ಥಪರರೂ ಅಲ್ಲ. ಆಧುನಿಕ ಜೀವನದಲ್ಲಿ ಕ್ರಾಂತಿ ಉಂಟಾಗಿರುವುದು ಕಾಮವನ್ನೂ ಅರ್ಥವನ್ನೂ ಸ್ವಾರ್ಥದಿಂದ ಬಿಡುಗಡೆಮಾಡುವುದಕ್ಕಾಗಿ. ಆಧುನಿಕರು ಸ್ವಾತಂತ್ರ್ಯವನ್ನಪೇಕ್ಷಿಸುವುದು ಸ್ವೇಚ್ಛಾ ಜೀವನ ನಡಸಬೇಕೆಂಬ ಉದ್ದೇಶದಿಂದಲ್ಲ, ಸ್ವಾರ್ಥಪರ ವ್ಯಕ್ತಿಗಳ ಆಧಿಪತ್ಯದಿಂದ ಬಿಡುಗಡೆಮಾಡುವುದಕ್ಕಾಗಿ. ಇಬ್ಸೆನ್ ಮತ್ತು ಬರ್ನಾರ್ಡ್ ಷಾ ಅವರ ನಾಟಕಗಳನ್ನು ಪರಿಚಯಮಾಡಿಕೊಂಡವರಿಗೆ ಆಧುನಿಕರ ಹೃದಯ ತಿಳಿಯುತ್ತದೆ. ಇಂದಿನ ರಷ್ಯದ ಸಂಸ್ಕೃತಿಯ ಸ್ಥಾಪಕ ರಾದ ಮಾರ್ಕ್ಸ್ ಮತ್ತು ಲೆನಿನ್ ಅವರು ತಮ್ಮ ತತ್ತ್ವವನ್ನು ಚಾರಿತ್ರಿಕ

ಭೌತತತ್ವ (Historical materialism)ವೆಂದು ಕರೆದುಕೊಂಡಿರುತ್ತಾರೆ. ಈ ಹೆಸರು ಅವರ ನಿಜವಾದ ತತ್ವವನ್ನು ಪ್ರಕಾಶಪಡಿಸುವುದಕ್ಕಿಂತ ಅದರ ವಿಷಯವಾಗಿ ತಪ್ಪು ಭಾವನೆಗೆ ಅವಕಾಶಕೊಟ್ಟಿದೆ. ಆ ತತ್ತ್ವದ ಉದ್ದೇಶ ಧಾರ್ಮಿಕವಾದದ್ದು ಭೌತ ವಾದ್ದದಲ್ಲ. ಅಗಾಧವಾಗಿ ಹಣ ಕೆಲವರಲ್ಲಿ ಸೇರುವುದು ಮಾನವ ಸ್ವಾತಂತ್ರ್ಯಕ್ಕೆ ಹಾನಿಕರವಾದದ್ದೆಂಬುದು ಅವರ ಮೂಲಧರ್ಮ. ಕೆಲವರ ಸ್ವಾರ್ಥಕ್ಕೆ ಬಹು ಸಂಖ್ಯಾತರಾದ ಗಂಡಸರ ಮತ್ತು ಹೆಂಗಸರ ಸ್ವಾತಂತ್ರ್ಯವನ್ನೂ ಅಭ್ಯುದಯವನ್ನೂ ಬಲಿಕೊಡುವುದನ್ನು ತಪ್ಪಿಸುವುದು ಅದರ ಧ್ಯೇಯ. ಆ ಧ್ಯೇಯ ತುಂಬ ಧಾರ್ಮಿಕ ವಾದದ್ದು. ಆದರೆ ಅದನ್ನು ಸಾಧಿಸುವ ಮಾರ್ಗ ಧಾರ್ಮಿಕವಾದದ್ದಲ್ಲ. ಬಲಾತ್ಕಾರ ದಿಂದ, ರಕ್ತಪಾತದಿಂದ ಅದನ್ನು ಸಾಧಿಸಬೇಕೆಂದು ಹೇಳುವುದು ಅದರ ಒಂದು ದೊಡ್ಡ ದೋಷ. ಪ್ರಜಾಸತ್ತಾ ತತ್ತ್ವದ ಮೂಲಕ ಶಾಂತಿಯುತವಾದ ವಿಚಾರ ವಿನಿಮಯದ ಮೂಲಕ ಅದನ್ನು ಸಾಧಿಸಬೇಕೆಂಬುದು ಅಮೆರಿಕಾದವರ ತತ್ವ. ಅಮೆರಿಕಾದವರು ಅವಲಂಬಿಸಿರುವ ಸಾಧನತತ್ವ ರಷ್ಯಾದವರು ಅವಲಂಬಿಸಿರುವ ಸಾಧನ ತತ್ವಕ್ಕಿಂತ ಮೇಲಾದದ್ದು. ಆದರೆ ರಷ್ಯಾದಲ್ಲಿ ಆದರ್ಶ ಧರ್ಮ ಆಚರಣೆಗೆ ಬಂದಿರುವಷ್ಟು ಅಮೆರಿಕಾದಲ್ಲಿ ಬಂದಿಲ್ಲ. ಈಚೀಚೆಗೆ ರಷ್ಯಾದಲ್ಲೂ ಸಾಧನದ ವಿಚಾರವಾಗಿಯೂ ಅವರ ದೃಷ್ಟಿ ಸ್ವಲ್ಪಮಟ್ಟಿಗೆ ಮಾರ್ಪಾಡಾಗಿದೆ. ಅವರೂ ಶಾಂತಿಯ ಮಾರ್ಗಕ್ಕೆ ವಿಚಾರ ವಿನಿಮಯ ಮಾರ್ಗಕ್ಕೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮನ್ನಣೆಕೊಡಲು ಪ್ರಾರಂಭಿಸಿದ್ದಾರೆ.

ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ಇದು. ಎರಡು ಸಂಸ್ಕೃತಿಯ ವರೂ ಈಗ ಕುಟುಂಬ ಜೀವನದ ವಿಚಾರವಾಗಿ ದ್ವೈತನೀತಿಯನ್ನು ತ್ಯಜಿಸುತ್ತಿದ್ದಾರೆ. ಅದ್ವೈತ ನೀತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಆಯಾ ದೇಶಗಳ ಸ್ಥಿತಿಗತಿಗಳನ್ನನು ಸರಿಸಿ ಅದನ್ನು ಸಾಧಿಸಬೇಕೆಂದು ಪಣತೊಟ್ಟಿದ್ದಾರೆ. ನಾವೂ ಅದೇ ಧ್ಯೇಯವನ್ನು ಪುರಸ್ಕರಿಸುತ್ತಿದ್ದೇವೆ. ಆದರೆ ನಾವು ಯಾರನ್ನೂ ಅನುಕರಿಸಬೇಕಾದ್ದಿಲ್ಲ. ಏಕೆಂದರೆ ಅನುಕರಣದ ಮೂಲಕ ನಮಗೆ ಆತ್ಮ ಸಿದ್ಧಿಸುವುದಿಲ್ಲ. ನಮಗೆ ಆತ್ಮ ಸಿದ್ಧಿಯಾಗ ಬೇಕಾದರೆ ನಮ್ಮ ಸಮಸ್ಯೆಗಳನ್ನು ನಾವೇ ತಿಳಿದು ಸ್ವಪ್ರಯತ್ನದಿಂದ ಸಾಧಿಸಬೇಕು.

ದಾಂಪತ್ಯ ಜೀವನದ ಮೂಲಕ ಆತ್ಮ ಸಿದ್ಧಿಯನ್ನು ಪಡೆಯಬೇಕಾದರೆ, ದಾಂಪತ್ಯ ಜೀವನದ ಆದರ್ಶ ಮುಟ್ಟಬೇಕಾದರೆ ಮೊಟ್ಟಮೊದಲು ನಾವು ಹೆಣ್ಣಿರು ವುದು ಗಂಡಿನ ಸ್ವಾರ್ಥಕ್ಕಾಗಿ ಅಥವಾ ಗಂಡಿರುವುದು ಹೆಣ್ಣಿನ ಸ್ವಾರ್ಥಕ್ಕಾಗಿ ಎಂಬ ಭಾವನೆಯಿಂದ ದೂರವಾಗಿರಬೇಕು. ಪತಿಯ ಕಾಮಕ್ಕಾಗಿ ಪತ್ನಿ ಇರುವುದಿಲ್ಲ, ಪತ್ನಿಯ ಕಾಮಕ್ಕಾಗಿ ಪತಿಯೂ ಇರುವುದಿಲ್ಲ. ಅವರಿಬ್ಬರೂ ಇರುವುದು ಇಬ್ಬರಿಗೂ

ಸಮಾನವಾದ ಒಂದೇ ಧ್ಯೇಯಕ್ಕಾಗಿ, ಆತ್ಮ ಸಿದ್ಧಿಗಾಗಿ. (ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಾಮಿ, ನಾತಿಚರಿತವ್ಯಂ) ಧರ್ಮದ ನಿಮಿತ್ತವಾಗಲಿ, ಹಣದ ಆಶೆಯಿಂದಾಗಲಿ, ಕಾಮದ ಸೆಳೆತದಿಂದಾಗಿ ನಾನು ಬೇರೆಯಾಗುವುದಿಲ್ಲ, ಬೇರೆಯಾಗ ಕೂಡದು ಎಂದು ಮದುವೆಯ ಕಾಲದಲ್ಲಿ ನಾವು ಪ್ರಮಾಣಮಾಡಿ ಹೇಳುತ್ತೇವೆ. ಇದಕ್ಕಿಂತ ಉತ್ತಮವಾದ ದಾಂಪತ್ಯ ನೀತಿ ಬೇರೊಂದಿಲ್ಲ. ಭಾರತೀಯ ಮದುವೆಯ ನೀತಿ ಆದರ್ಶ ನೀತಿ. ಇಲ್ಲಿ ತಿಳಿಸಿರುವ ಪ್ರೇಮಸಂಬಂಧ ಲೋಕಾತೀತವಾದ ಸಂಬಂಧ. ಈ ರೀತಿ ಪ್ರೇಮ ನಡೆಸಿ ಕೃತಾರ್ಥರಾದ ಭಾರತೀಯರು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ವಾಸ್ತವವಾಗಿ ಎಷ್ಟೇ ವಿಘ್ನಗಳು ತೊಡಕುಗಳು ಇದ್ದರೂ ಅವುಗಳನ್ನು ಜಯಿಸಿ ಅವರು ಇಹಪರಗಳನ್ನು ಸಾಧಿಸಿದ್ದಾರೆ.

ಇವರಿಗಿದ್ದ ತಡೆಗಳು ಯಾವುವೆಂಬುದನ್ನು ಸ್ವಲ್ಪ ವಿಚಾರಮಾಡೋಣ. ಮದುವೆಯಾದವರು ಒಬ್ಬರೊನ್ನೊಬ್ಬರು ತಿಳಿದವರಲ್ಲ, ಪ್ರೀತಿಸಿದವರೂ ಅಲ್ಲ. ಒಬ್ಬರು ಮತ್ತೊಬ್ಬರನ್ನು ಯಾಚಿಸಿದವರೂ ಅಲ್ಲ. ಹೆಣ್ಣು ದಾನವಾಗಿ ಬಂದವಳು. ಗಂಡು ದಾನಪಡೆದವನು. ಅವರಿಬ್ಬರೂ ಸೇರಿ ದಂಪತಿಗಳಾದರೆ, ಒಬ್ಬರ ಮೂಲಕ ಒಬ್ಬರು ಆತ್ಮವನ್ನು ಸಾಧಿಸಿಕೊಂಡರೆ ಅದು ಅವರ ಅದೃಷ್ಟ. ಈ ಪರಿಸ್ಥಿತಿ ಆದರ್ಶ ಪರಿಸ್ಥಿತಿಯಲ್ಲ. ಈ ಪರಿಸ್ಥಿತಿಯಲ್ಲಿ ದಂಪತಿಗಳು ಆತ್ಮಸಿದ್ಧಿಯನ್ನು ಗಳಿಸುವುದು ಅತ್ಯಂತ ಕಷ್ಟ. ಈ ಪರಿಸ್ಥಿತಿ ಸುಧಾರಣೆಯಾಗಬೇಕು.

ಕುಟುಂಬದಲ್ಲಿ ಹೆಣ್ಣಿಗೂ ಗಂಡಿಗೂ ಅವರವರ ಜೀವನಕ್ಕೆ ಯೋಗ್ಯವಾದ ವಿದ್ಯಾಭ್ಯಾಸ ಹತ್ತು ಹನ್ನೆರಡು ವರುಷಗಳಷ್ಟಾದರೂ ನಡೆಯಬೇಕು. ಹೆಣ್ಣು ಗಂಡುಗಳು ಸುಸಂಸ್ಕೃತರಾಗುವಂತೆ ಅವರಿಬ್ಬರಿಗೂ ಸಾಮಾನ್ಯ ವಿದ್ಯಾಭ್ಯಾಸ ಬೇಕು. ಅದರ ಜೊತೆಗೆ ಕುಟುಂಬದಲ್ಲಿ ಅವರ ಪಾತ್ರವನ್ನು ಸರಿಯಾಗಿ ನಡೆಸಲು ವಿಶೇಷ ವಿದ್ಯಾಭ್ಯಾಸವೂ ಬೇಕು. ವೃತ್ತಿ ಜೀವನ ಮತ್ತು ದಾಂಪತ್ಯ ಜೀವನಕ್ಕೆ ಬೇಕಾದ ತಿಳಿವನ್ನು ಅವರು ಪಡೆಯಬೇಕು. ಮಾನವ ದೇಹದ ಅಂಗರಚನೆ, ಅವುಗಳ ವ್ಯಾಪಾರಗಳು, ಶಿಶುವಿನ ಜನನ, ಅದರ ಬೆಳವಳಿಗೆ, ಅದರ ಪೋಷಣೆ, ಇವು ಗಂಡ ಹೆಂಡಿರಿಬ್ಬರಿಗೂ ತಿಳಿದಿರಬೇಕು. ಇಷ್ಟು ವಿದ್ಯಾಭ್ಯಾಸ ಮುಗಿಯುವ ವೇಳೆಗೆ ಸಾಮಾನ್ಯವಾಗಿ ಹೆಣ್ಣಿಗೆ ಹದಿನೆಂಟು ಇಪ್ಪತ್ತು ವಯಸ್ಸಾಗುತ್ತದೆ. ಕೆಲವು ವೇಳೆ ಕೆಲವು ಹೆಂಗಸರ ವಿದ್ಯಾಭ್ಯಾಸ ಗಂಡಸರ ವಿದ್ಯಾಭ್ಯಾಸದಂತೆ ಇಪ್ಪತ್ತುಮೂರು ಇಪ್ಪತ್ತುನಾಲ್ಕರವರೆಗೂ ನಡೆಯಬೇಕಾಗುತ್ತದೆ. ಸಾಮಾನ್ಯವಾಗಿ ಹೆಣ್ಣಿಗೆ ಹದಿನೆಂಟು ವರ್ಷಕ್ಕೆ ಮುಂಚೆ ಗಂಡಿಗೆ ಇಪ್ಪತ್ತುಮೂರು ಇಪ್ಪತ್ತುನಾಲ್ಕು ವರ್ಷಗಳ ಮುಂಚೆ ವಿವಾಹ ನಡೆಯಲು ಸಾಧ್ಯವಿಲ್ಲ.

ಹೀಗೆ ವಿದ್ಯಾಭ್ಯಾಸ ಮುಗಿಸಿದ ಹೆಣ್ಣುಗಂಡುಗಳು ಕುಟುಂಬದ ಆವರಣದಲ್ಲಿ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳಲು ಅವಕಾಶವಿರಬೇಕು. ಅವರು ಒಪ್ಪಿ ಮದುವೆಯಾಗಬೇಕು. ರೂಪ ಮತ್ತು ಗುಣ ಎರಡೂ ನೋಡಿ ಸಮಾನರೂಪ ಮತ್ತು ಸಮಾನ ಗುಣವುಳ್ಳವರು ಮದುವೆಯಾದರೆ ಅವರ ದಾಂಪತ್ಯ ಜೀವನ ಹಸನಾಗುವುದು ಸುಲಭ. ಆದರೆ ಎಲ್ಲ ಹೆಣ್ಣುಗಳೂ ಚೆಲುವೆಯರಲ್ಲ; ಎಲ್ಲ ಗಂಡಸರೂ ಸ್ಫುರದ್ರೂಪಿಗಳಲ್ಲ. ಸಾಮಾನ್ಯರೂಪದ ಗಂಡು ಹೆಣ್ಣುಗಳೇ ಹೆಚ್ಚು. ಆದ್ದರಿಂದ ಸಾಮಾನ್ಯವಾಗಿ ರೂಪಕ್ಕಿಂತ ಗುಣವೇ ಆಯ್ಕೆಗೆ ಆಧಾರವಾಗುತ್ತದೆ. ಕುರೂಪಿಯಾದವನು ಸುಂದರಿಯನ್ನು ಮದುವೆಯಾಗುವುದೂ ರೂಪವಿಲ್ಲದವಳು ಸುಂದರರೂಪನನ್ನು ಮದುವೆಯಾಗುವುದೂ ಅಸಹಜ, ಹಾಗೆ ಮದುವೆಯಾದಾಗ ಅವರ ಜೀವನ ವಿಷಾದಾಂತವಾಗದಿರುವುದು ಅಪರೂಪ. ಅಂಥವರು ಒಬ್ಬರನ್ನೊಬ್ಬರು ವರಿಸಿದರೆ ಅವರಿಬ್ಬರಲ್ಲೂ ಅಸಾಧಾರಣ ಗುಣಗಳಿರಬೇಕು. ಈ ಅಸಾಧಾರಣ ಮದುವೆಗಳ ವಿಚಾರ ನಮಗೆ ಬೇಡ. ಅವು ಯೋಚನೆಗೆ ನಿಲುಕದವು. ನಮಗೆ ಬೇಕಾಗಿರುವುದು ನಮ್ಮ ಯೋಚನೆಗೆ ನಿಲುಕುವಂಥವು. ದುಡ್ಡಿನ ಆಸೆಗೆ, ದೊಡ್ಡಸ್ತಿಕೆಯ ಆಸೆಗೆ ಕೆಲವರು ಮದುವೆಯಾಗುವುದುಂಟು. "ಅಸಮಾನದವಳ ಬದುಕಿಂದ ತಿಂಗಳು ಹಸಿದಿರುವುದೇ ಲೇಸು" ಎಂದು ಹೇಳಿ ನಾವು ಹೆಣ್ಣುಗಂಡುಗಳನ್ನು ಎಚ್ಚರಗೊಳಿಸಬೇಕು. ಕಡು ಬಡವನಾದವನನ್ನು ಮದುವೆಯಾದರೂ ಅಂಥ ದಾಂಪತ್ಯವೂ ನೇರ್ಪಾಗುವುದು ಕಷ್ಟ, "ಬಡವನಾ ಹೆಂಡತಿಯು ಕಡು ಚಲುವೆಯಾದರೆ ನಡಬೀದಿಯೊಳಗೆ ದವನವನ್ನು ಬಿತ್ತಲು ಮುಡಿಯದವರಾರು?" ಹೇಗೇ ಆಗಲಿ ಮುಖ್ಯವಾಗಿ ಪರಸ್ಪರ ಒಪ್ಪಿಗೆ ಇದ್ದರೆ ಎಷ್ಟು ಏರುಪೇರುಗಳಿದ್ದರೂ ದಾಂಪತ್ಯ ಸರಿಹೋಗಬಹುದು. 'ತಾನೊಲಿದ ಮಂಕೆ ಮಾಣಿಕ್ಯವಾಗುತ್ತಾಳೆ'. ಸಹ್ಯವಾದ ರೂಪ, ಜೀವನಕ್ಕೆ ಸಾಕಾಗುವಷ್ಟು ಹಣ, ಪರಸ್ಪರ ಇಂಗಿತವರಿತ ನಡವಳಿಕೆ ಇದ್ದರೆ ಆ ದಾಂಪತ್ಯ ಜೀವನ ಸುಖಪ್ರದವಾಗುತ್ತದೆ. "ಬೆಚ್ಚನಾಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ಇಚ್ಚೆಯನರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ" ಈ ಸರ್ವಜ್ಞವಚನ ತುಂಬ ಅನುಭವದ ಆಧಾರದ ಮೇಲೆ ಹುಟ್ಟಿದ್ದು. ಅನೇಕರ ಮನೆಯ ಜೀವನ ಕಷ್ಟತರವಾಗುವುದಕ್ಕೆ ಗಂಡಹೆಂಡತಿಯರಿಗೆ ಮನೆವಾರ್ತೆ ಮತ್ತು ಮಕ್ಕಳ ಪೋಷಣೆ ತಿಳಿಯದಿರುವುದು ಮುಖ್ಯಕಾರಣ. ಅರಿಕೆಯಿಲ್ಲದ ಮನೆವಾರ್ತೆ, ಬೇಸರದ ಮನೆವಾರ್ತೆ, ಹಸನಿಲ್ಲದ ಮನವಾರ್ತೆ ತಿಪ್ಪೆಯ ಕಸದಂತೆ, ಅನ್ನದ ಕರಕು ಸವಿದಂತೆ.

ಮದುವೆಯಾದ ಹೆಂಗಸು ಗಂಡಸಿನಂತೆ ದುಡಿದು ಸಂಸಾರಕ್ಕಾಗಿ ಸಂಪಾದನೆ ಮಾಡಬೇಕೆ? ಎಂಬ ಪ್ರಶ್ನೆ ಈಗ ನಮ್ಮ ಸಮಾಜದಲ್ಲಿ ತಲೆ ಎತ್ತಿದೆ. ಹೆಂಗಸು

ಹೊರಗೆ ದುಡಿದು ಸಂಪಾದಿಸುವ ಸ್ವಾತಂತ್ರ್ಯವಿರಬೇಕು ಎಂಬ ಭಾವನೆ ಹೆಂಗಸರಲ್ಲಿ ಬೆಳೆಯುತ್ತಿದೆ. ಇಷ್ಟಪಟ್ಟವರಿಗೆ ಆ ಸ್ವಾತಂತ್ರ್ಯವಿರಬೇಕು. ಆದರೆ ಸಂಪಾದಿಸುವುದೂ ಸಂಸಾರ ನಡೆಸುವುದೂ ಎರಡೂ ಒಟ್ಟಿಗೆ ಸಿದ್ಧಿಸುವುದು ದುರ್ಲಭ. ಗಂಡನು ಸಂಪಾದಿಸುವುದು ಕುಟುಂಬ ಜೀವನಕ್ಕೆ ಸಾಲದಾದರೆ ಹೆಂಡತಿಯೂ ದುಡಿದು ಸಂಪಾದಿಸುವುದು ಅನಿವಾರ್ಯವಾಗುತ್ತದೆ. ಆಗ ಹೆಂಗಸು ಕುಟುಂಬದ ಕೆಲಸಗಳನ್ನೂ ಮಕ್ಕಳ ಪೋಷಣೆಯನ್ನೂ ನಿರ್ವಹಿಸುವುದು ತುಂಬ ಕಷ್ಟವಾಗುತ್ತದೆ. ಗಂಡನ ಕೆಲಸದ ವೇಳೆ ಬೇರೆಯಾಗಿ ಹೆಂಡತಿಯ ಕೆಲಸದ ವೇಳೆ ಬೇರೆಯಾದರೆ ಅವರು ಗೃಹಕೃತ್ಯಗಳನ್ನು ಹಂಚಿಕೊಂಡು ಸಂಸಾರ ತೂಗಿಸಬಹುದು. ಹಾಗಿಲ್ಲದಿದ್ದರೆ ಅವರ ಜೀವನ ಕಷ್ಟಮಯವಾಗುತ್ತದೆ. ನಮ್ಮ ದೇಶದಲ್ಲಿ ಹೊರ ದೇಶಗಳಲ್ಲಿರುವಂತೆ ವೇತನವೂ ಹೆಚ್ಚಾಗಿಲ್ಲ, ಕೆಲಸಮಾಡುವ ಸ್ಥಳಗಳಲ್ಲಿ ಊಟದ ಸೌಕರ್ಯವೂ ಇರುವುದಿಲ್ಲ. ಮದುವೆಯಾದವರಿಗೆ ದಾಂಪತ್ಯದ ಭತ್ಯವೂ ದೊರೆಯುವುದಿಲ್ಲ, ಅವರ ಮಕ್ಕಳನ್ನು ನೋಡಿಕೊಳ್ಳುವ ಸಂಸ್ಥೆಗಳೂ ಇಲ್ಲ. ಬಡತನದಲ್ಲಿರುವ ದಂಪತಿಗಳಿಗೆ ಸರಕಾರದ ನೆರವು ಅಗತ್ಯ. ಆರ್ಥಿಕದಲ್ಲಿ ಹಿಂದೆ ಬಿದ್ದಿರುವ ನಮ್ಮ ದೇಶದಲ್ಲಿ ಇಂಥ ನೆರವನ್ನು ನೀಡುವುದಕ್ಕೆ ಸರಕಾರಕ್ಕೆ ಚೈತನ್ಯವಿಲ್ಲ. ನಮ್ಮ ದೇಶದಲ್ಲಿ ಹಂಚಿಕೊಳ್ಳುವುದಕ್ಕೆ ಹಣವಿಲ್ಲ. ಹಂಚಿಕೊಳ್ಳುವುದಕ್ಕೆ ಇರುವುದು ಬಡತನವೊಂದೇ.

ಕಟುಂಬ ಜೀವನವು ಗುಲಾಬಿ ಮೆತ್ತೆಯಲ್ಲ, ಅದು ಗಡುಸಾದ ಜೀವನ. ಜೀವನಾದ್ಯಂತವೂ ಪೂರ್ಣಕಾಲ ಶ್ರಮಿಸಿ ನಡೆಸುವ ಜೀವನ. ಅದು ಸಮಸ್ಯೆಗಳಿಲ್ಲದ ಸುಲಭ ಜೀವನವಲ್ಲ. ಗಂಡಹೆಂಡತಿಯರಿಗೆ ಮನಸ್ತಾಪವಿಲ್ಲದಿದ್ದರೂ ಅವರಿಗೆ ಶ್ರಮವಿಲ್ಲದಿರುವುದಿಲ್ಲ. ಪರಸ್ಪರ ಸೌಖ್ಯಕ್ಕಾಗಿ ಮಕ್ಕಳ ಸೌಖ್ಯಕ್ಕಾಗಿ ಅವರು ನಿರಂತರವಾಗಿ ಪ್ರಯತ್ನ ಮಾಡುತ್ತಲೇ ಇರಬೇಕು. ಅದಕ್ಕಾಗಿ ಅವರ ಶರೀರದಲ್ಲಿರುವ ಸಮಸ್ತ ಶಕ್ತಿಯೂ ಅವರ ಬುದ್ಧಿ ತೋರಿಸಬಹುದಾದ ಸಮಸ್ತ ಯುಕ್ತಿಗಳೂ ಸಾಧ್ಯವಾಗಬಹುದಾದಷ್ಟು ಭಾವ ಸೌಜನ್ಯವೂ ಸಹನೆಯೂ ಸಹಕಾರವೂ, ಎಲ್ಲವೂ ದಾಂಪತ್ಯ ಜೀವನಕ್ಕೆ ಮೀಸಲಾಗಬೇಕಾಗುತ್ತದೆ. ಹಾಗೆ ಮೀಸಲಾಗಿಟ್ಟವರಿಗೆ ತಮ್ಮ ವ್ಯಕ್ತಿತ್ವದಲ್ಲಿ ತಮಗೇ ಗೌರವ ಹುಟ್ಟುತ್ತದೆ, ಧನ್ಯರಾದವೆಂಬ ಸಮಾಧಾನ ತೋರುತ್ತದೆ. ಇಂಥವರನ್ನು ಸಮಾಜವೂ ಮಾನ್ಯರೆಂದು ಗಣಿಸುತ್ತದೆ. ರಷ್ಯಾದಲ್ಲಿ ಇಂಥಾ ದಂಪತಿಗಳನ್ನು "ವೀರ ದಂಪತಿಗಳೆಂದು" ಕರೆದು ರಾಷ್ಟ್ರವು ಗೌರವಿಸುತ್ತದೆ. ಭಾರತ ಸರ್ಕಾರದ ಗಮನ ಅಷ್ಟಾಗಿ ಇತ್ತ ಕಡೆ ಹರಿದಿಲ್ಲ. ನಟ ನಟಿಯರಿಗೆ, ಕಲಾಕೋವಿದರಿಗೆ ಸಲ್ಲಿಸುತ್ತಿರುವ ಸನ್ಮಾನ, ಸದ್ದಂಪತಿಗಳಿಗೆ ದೊರೆಯದಿರುವುದು ನಮ್ಮ ಸಮಾಜದ ಒಂದು ಕಳಂಕ. ಮೂಲಭೂತವಾದವು ಮೊದಲನೆಯವಾಗಬೇಕೆಂಬ ನೀತಿಯು ಮೊದಲ ನೀತಿಯಾಗುವುದು ಹೋಗಲಿ ಕೊನೆಯ ನೀತಿಯಾಗಿ ಕೂಡ ಇರುವುದಿಲ್ಲ.

ಕನ್ಯಾದಾನ ಕಾಲದಲ್ಲಿ ಕನ್ಯೆಯನ್ನು "ಸ್ನೇಹಾಯ" ಸ್ನೇಹಕ್ಕಾಗಿ ಕೊಟ್ಟಿರುತ್ತೇನೆ ಎಂದು ಹೆಣ್ಣಿನ ತಂದೆಯು ಹೇಳುವುದುಂಟು. ಆ ಮಾತು ಜನರ ಗಮನಕ್ಕೆ ಮುಖ್ಯವಾಗಿ ಮದುವೆಯಾಗುವ ಗಂಡನ ಗಮನಕ್ಕೆ ಹೆಣ್ಣಿನ ಅತ್ತೆಮಾವಂದಿರ ಗಮನಕ್ಕೆ ಬಂದಿದ್ದಂತೆ ಕಾಣುವುದಿಲ್ಲ. ಆ ಮಾತನ್ನು ಲಕ್ಷಿಸುವುದು, ಲಕ್ಷ್ಯವಾಗಿಟ್ಟುಕೊಳ್ಳುವುದು ಆದರ್ಶ ದಾಂಪತ್ಯಕ್ಕೆ ಅತಿಮುಖ್ಯ. ಸ್ನೇಹವಿದ್ದೆಡೆಯಲ್ಲಿ ಸಾವಿರ ಕಷ್ಟಗಳಿದ್ದರೂ ಜೀವನವು ಸಹ್ಯವಾಗುತ್ತದೆ. ಅರಿದ ಮನಸ್ಸು, ತೆರೆದಮನಸ್ಸು ಸ್ನೇಹಕ್ಕೆ ಆಧಾರ; ಸ್ನೇಹಿತರೊಂದಿಗೆ ನಾವು ಹೇಳಿಕೊಳ್ಳದ ಯಾವ ವಿಷಯವೂ ಇಲ್ಲ. ಸ್ನೇಹಸಂಬಂಧ ಸ್ವಾರ್ಥವಿಲ್ಲದ ಸಂಬಂಧ. ಅದು ಬಡತನ ಸಿರಿತನವೆಂಬ ಭೇದಕ್ಕೆ ಅತೀತವಾದದ್ದು. ಸ್ನೇಹಿತರು ಸ್ವತಂತ್ರರು, ಸಹೃದಯರು, ಸಮಾನ ಮನೋಧರ್ಮ ಉಳ್ಳವರು. ಗಂಡಸು ಗಂಡಸರು, ಹೆಂಗಸು ಹೆಂಗಸರು ಸ್ನೇಹಿತರಾಗಿ ತಮ್ಮ ಆತ್ಮವನ್ನು ವಿಕಾಸಗೊಳಿಸಿಕೊಂಡಿರುತ್ತಾರೆ. ಸ್ನೇಹದ ಮೂಲಕ ಆತ್ಮವಿಕಾಸಪಡೆಯಲು ದಂಪತಿಗಳಿಗೆ ಇನ್ನೂ ಹೆಚ್ಚಿನ ಅವಕಾಶವಿದೆ. ಸ್ನೇಹದ ಮೂಲಕ ಅವರ ಹೃದಯದಭಾರ ಇಳಿಯುತ್ತದೆ, ಆಹ್ಲಾದ ಹೆಚ್ಚುತ್ತದೆ, ಸ್ವಾರ್ಥ ಕಡಮೆಯಾಗುತ್ತದೆ, ಸಹಕಾರ ಹೆಚ್ಚುತ್ತದೆ, ದಾಂಪತ್ಯ ಸಮಸ್ಯೆಗಳು ಪರಿಹಾರವಾಗಿ ದಾಂಪತ್ಯ ಜೀವನವು ರಚನಾತ್ಮಕವಾಗುತ್ತದೆ, ಸೃಷ್ಟ್ಯಾತ್ಮಕವಾಗುತ್ತದೆ. ಜೀವನದ ಬಲೆ ಒಂದು ಕಲೆಯಾಗಿ ಪರಿಣಮಿಸುತ್ತದೆ. ಸೇವೆ ಮತ್ತು ತ್ಯಾಗ ಸಹಜ ವೃತ್ತಿಗಳಾಗುತ್ತವೆ. ದಾಂಪತ್ಯ ಜೀವನವು ಹಗುರವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಅದು ಹಸನಾಗುತ್ತದೆ. ಈ ಮೂಲಕ ಒಬ್ಬೊಬ್ಬರೂ ತಮ್ಮ ಆತ್ಮದ ಆಳವನ್ನೂ ನಿಲುವನ್ನೂ ನೆಲೆಯನ್ನೂ ಬಲವನ್ನೂ ಬೆಲೆಯನ್ನೂ ಕಂಡುಕೊಳ್ಳುತ್ತಾರೆ. ಈ ಅರಿವು ದಂಪತಿಗಳಿಗಿರುವುದು ಅಪರೂಪ. ಅದು ಸಾಮಾನ್ಯವಾಗಬೇಕು.

Only-but this is rare-
When a beloved hand is laid in ours,
Where, jaded with the rush and glare
Of the interminable hours,
Our eyes can in another's read clear
When our world-deafen'd ear
Is by the tones of beloved caress'd
A bolt is shot back somewhere in our breast
And a lost pulse of feeling stirs again.
The eye sinks inward, and the heart lies plain
And what we mean, we say, and what we would, we know.

A man becomes aware of his life's flow
And hears its winding murmur and he sees
The meadows where it glides, the sun, the breeze.
    And there arrives a lull in the hot race
Werein he doth for ever chase
That flying and elusive shadow, Rest.
An air of coolness plays on his face,
And an unwonted calm pervades his breast.
    And then he thinks he knows
the hills where his life rose
And the Sea where it goes.

MATHEW ARNOLD, *The Buried Life.*

ಇದು ಅಪರೂಪ,—

ಕಣ್ಣು ಕುಕ್ಕುವ ಬೆಳಕಿನಲ್ಲಿ ಕೊನೆಯಿಲ್ಲದಷ್ಟು ಕಾಲ ಅವಸರ ಅವಸರವಾಗಿ ಓಡಾಡಿ ಬಳಲಿ ಬೇಸತ್ತಾಗ, ಒಲುಮೆಯ ಕೈ ನಮ್ಮ ಕೈಮುಟ್ಟಿದಾಗ, ಒಬ್ಬರ ದೃಷ್ಟಿ ಮತ್ತೊಬ್ಬರದರಲ್ಲಿ ಬೆರೆತು ಮನಸ್ಸಿನ ಇಂಗಿತ ತಿಳಿದಾಗ, ಸಂತೆಯ ಗದ್ದಲದಿಂದ ಕಿವುಡಾದ ಕಿವಿಯನ್ನು ಮಡದಿಯ ಮೆಲುದನಿಯು ಮುತ್ತಿದಾಗ, ನಮ್ಮ ಹೃದಯದಲ್ಲಿ ಎಲ್ಲಿಯೋ ಒಂದು ಅಗಣಿ ತೆರೆದಂತಾಗುತ್ತದೆ. ನಿಂತು ಹೋಗಿದ್ದ ಭಾವನಾಡಿ ಮರಳಿ ಮಿಡಿದಂತಾಗುತ್ತದೆ. ನಮ್ಮ ದೃಷ್ಟಿ ಅಂತರ್ಮುಖಿಯಾಗುತ್ತದೆ, ಹೃದಯವು ಸಮನಾಗುತ್ತದೆ, ನಮ್ಮ ಮನಸ್ಸಿನ ಇಂಗಿತವು ಮಾತಿನಲ್ಲಿ ಸೂಸುತ್ತದೆ, ನಾವು ಮಾಡಬೇಕಾದದ್ದು ನಮಗೆ ಸ್ಪಷ್ಟವಾಗುತ್ತದೆ. ಜೀವನದ ಹೊನಲಿನ ಹರಿವು ನಮಗೆ ಅರಿವಾಗುತ್ತದೆ, ಅದರ ಪರಿವು ತಿರುವುಗಳ ಮರ್ಮರ ನಿನಾದ ಕೇಳಿಬರುತ್ತದೆ. ಅದು ಹರಿಯುವ ಹುಲ್ಲುಗಾವಲು ಅದರಮೇಲೆ ಬೀಸುವ ಮಂದಮಾರುತ, ಅದಕ್ಕೆ ಮೆರುಗುಕೊಡುವ ಸೂರ್ಯಕಾಂತಿ ನಮ್ಮ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಕೈ ತಪ್ಪಿಸಿಕೊಂಡು ಓಡುತ್ತಿರುವ ಆ ನೆರಳಿಗಾಗಿ—ವಿಶ್ರಾಂತಿಗಾಗಿ, ನಿರಂತರವಾಗಿ ನಡೆಸುತ್ತಿರುವ ಅಲೆದಾಟ ನೆಲೆಕಂಡು ನಿಲ್ಲುತ್ತದೆ. ಅವನ ಮೋರೆಯ ಮೇಲೆ ತಂಗಾಳಿ ಸುಳಿದಾಡಿದಂತಾಗುತ್ತದೆ. ಅಸಾಧಾರಣವಾದ ಶಾಂತಿ ಅವನ ಹೃದಯವನ್ನು ಆವರಿಸುತ್ತದೆ. ತನ್ನ ಜೀವನವು ಹುಟ್ಟಿದ ಗುಡ್ಡಗಳನ್ನೂ ತನ್ನ ಜೀವನವು ಸೇರುವ ಸಮುದ್ರವನ್ನೂ ಅವನು ತಿಳಿದಂತೆ ಬಗೆಯುತ್ತಾನೆ.

ಜಿ. ಹನುಮಂತರಾವ್

ಅನುಭೂತಿ

ತಾಲೆಲೋ ಲಿಂಗ ತಾಲೆಲೋ
ತಾಲೇಲೋ ಲಿಂಗ || ಪ ||

ಹೊರಗಣ ಶಬ್ದವ ಕೇಳದಂದದಿ ಮುನ್ನ
ಮೊರೆವುತಲಿದೆ ನಾದ ತಾಲೇಲೋ |
ಎರಲುಣಿ ಪಡೆಯನು ಪಸರಿಸಿ ಮನೆಯೊಳ-
ಗಿರದೆಯಾಡುತಲಿದೆ ತಾಲೇಲೋ || ೧ ||

ಕರಣಂಗಳೆಲ್ಲವು ಪರಶಿವ ಲಿಂಗದ
ಕಿರಣಂಗಳಾದವು ತಾಲೇಲೋ
ಪರಿ ಪರಿಯಾಗಿಹ ಬಿಂದು ರತ್ನಂಗಳವೆ
ಸರಗೊಳಿಸಿರುತಿವೆ ತಾಲೇಲೋ || ೨ ||

ಕಂಗಳಿಗತಿಶಯವಾಗಿ ಹೊಳೆವ ಬೆಳ-
ದಿಂಗಳು ಮೂಡಿತು ತಾಲೇಲೋ |
ತಿಂಗಳವೆಳಗಿಲಿ ತಾರಕಿಗಳು ಮಿಗೆ
ರಂಜಿಸುತಿರುತಿವೆ ತಾಲೇಲೋ || ೩ ||

ಕತ್ತಲೆ ಮನೆಯೊಳು ಕಣ್ಣುದೆರೆದು ನೋಡೆ
ಹೊತ್ತುಮೂಡುತಲಿದೆ ತಾಲೇಲೋ
ಎತ್ತೆತ್ತ ನೋಡಲು ತಾವರೆ ಹೂವಿನ
ಗೊತ್ತುಕಾಣುತಲಿದೆ ತಾಲೇಲೋ || ೪ ||

ತಾವರೆ ಹೂವಿನ ಮೇಲಣ ಕೊಳದೊಳು
ದೇವಾಲಯವಿದೆ ತಾಲೆಲೋ |
ದೇವಾಲಯದೊಳು ಗುರುಸಂಗಮೇಶನ
ಭಾವವನರಿದೆನು ತಾಲೆಲೋ || ೫ ||

ಅಜ್ಞಾತ ಕವಿ

ಅರಿಸ್ಟಾಟಲಿನ ಕಾವ್ಯಮೀಮಾಂಸೆ

(ಅನುವಾದ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅಧ್ಯಾಯ ೧೯

ವಸ್ತು ಮತ್ತು ಪಾತ್ರಗಳನ್ನು ವಿಮರ್ಶಿಸಾಗಿರುವುದರಿಂದ ಇನ್ನು ಉಳಿದಿರುವುದು ಶೈಲಿ ಮತ್ತು ಭಾವನೆಗಳ ವಿಮರ್ಶೆ. ಭಾವನೆಯ ವಿಷಯಕ್ಕೆ ಅದನ್ನು ಕುರಿತು ನಮ್ಮ **ಭಾಷಣಕಲೆ**ಯಲ್ಲಿ ಹೇಳಿರುವುದನ್ನು ನಾವು ಅಂಗೀಕರಿಸಬಹುದು, ಏಕೆಂದರೆ ನ್ಯಾಯವಾಗಿ ಅದು ಆ ಶಾಸ್ತ್ರಕ್ಕೇ ಹೆಚ್ಚು ಸೇರಿದ್ದು. ಪಾತ್ರಗಳ ಭಾವನೆಯು ಅವರ ಮಾತಿನಿಂದ ಉಂಟಾಗಬೇಕಾದ[1] ಪ್ರತಿಯೊಂದರಲ್ಲಿಯೂ—ಯಾವುದೋ ಒಂದನ್ನು ಸಮರ್ಥಿಸುವ ಅಥವಾ ಖಂಡಿಸುವ, ಕರುಣೆ, ಭಯ, ಕ್ರೋಧ ಮೊದಲಾದ ಭಾವಗಳನ್ನು ಪ್ರಚೋದಿಸುವ, ಅಥವಾ ವಿಷಯಗಳನ್ನು ಉತ್ಪ್ರೇಕ್ಷಿಸುವ ಅಥವಾ ತೃಣೀಕರಿಸುವ ಸಲುವಾಗಿ ಮಾಡುವ ಪ್ರತಿಯೊಂದು ಪ್ರಯತ್ನದಲ್ಲಿಯೂ—ಅಭಿವ್ಯಕ್ತವಾಗುತ್ತದೆ. ಕರುಣೆಯನ್ನೋ ಅಥವಾ ಭಯವನ್ನೋ ಪ್ರಚೋದಿಸಬೇಕಾದ, ಅಥವಾ ಮಹತ್ತ್ವದ ಅಥವಾ ಸಂಭಾವ್ಯತೆಯ ತೋರಿಕೆಯನ್ನುಂಟುಮಾಡಬೇಕಾದ ಸಂದರ್ಭಗಳಲ್ಲಿಯೂ, ಅವರ ಕ್ರಿಯೆಗಳಲ್ಲಿ ಕೂಡ ಅವರ ವಿಚಾರಸರಣಿಯು ಇದೇ ರೀತಿಯಲ್ಲಿರಬೇಕೆಂಬುದೂ ವಿಶದವಾಗಿಯೇ ಇದೆ.[2] ಒಂದೇ ಒಂದು ವ್ಯತ್ಯಾಸವೇನೆಂದರೆ ಕ್ರಿಯೆಯಿಂದ ಈ ಪ್ರಭಾವವು ವಿವರಣೆಯ ಸಹಾಯವಿಲ್ಲದೆಯೇ ಆಗಬೇಕು[3]; ಭಾಷಣದಲ್ಲಿಯಾದರೋ ಅದು ವಕ್ತೃವಿನಿಂದ ಜನ್ಯವಾಗಿ, ಅವನ ಮಾತಿನ ಫಲವಾಗಿ ಆಗಬೇಕು. ವಕ್ತೃವು ಹೇಳುವ ಯಾವುದರ ಸಹಾಯವೂ ಇಲ್ಲದೆಯೇ ವಿಷಯಗಳು ಅಪೇಕ್ಷಿತ ರೀತಿಯಲ್ಲಿ ಗೋಚರವಾಗಿಬಿಟ್ಟರೆ, ವಕ್ತೃವಿನ ಪ್ರಯೋಜನವಾದರೂ ಏನು?

ಶೈಲಿಯನ್ನು ಕುರಿತು ಹೇಳಬೇಕಾದರೆ, ಮಾತನಾಡುವಾಗ ಭಾಷೆಯಲ್ಲಾಗುವ

---

1 ಎಂದರೆ ಭಾವಗಳ ಅಥವಾ ಬುದ್ಧಿಯ ಮೇಲಾಗುವ ಪರಿಣಾಮಗಳು.

2 ನಾಟಕದ ವ್ಯಕ್ತಿಗಳ ಭಾವನೆಗಳು ಅವರ ನಡೆಯಿಂದಲೂ, ನುಡಿಯಿಂದಲೂ ಅಭಿವ್ಯಕ್ತವಾಗಬಹುದು. ಆದರೆ ಅಪೇಕ್ಷಿತಪ್ರಭಾವವನ್ನುಂಟುಮಾಡಲು ಅನುಸರಿಸಬೇಕಾದ ನಿಯಮಗಳು ಕ್ರಿಯೆ, ಭಾವನೆ, ಮತ್ತು ನುಡಿ ಮೂರಕ್ಕೂ ಒಂದೇ.

3 ಎಂದರೆ ಕೇವಲ ಸನ್ನಿವೇಶ, ಸಂದರ್ಭಗಳಿಂದಲೇ.

ಮಾರ್ಪಾಡುಗಳು[4] ಈ ವಿಮರ್ಶೆಯ ಒಂದು ವಿಭಾಗವಾಗುತ್ತವೆ: ಉದಾ— ಆಜ್ಞೆ ಮತ್ತು ಪ್ರಾರ್ಥನೆ, ಬರಿಯ ಹೇಳಿಕೆ ಮತ್ತು ಬೆದರಿಕೆ, ಪ್ರಶ್ನೆ ಮತ್ತು ಉತ್ತರ ಮುಂತಾದುವುಗಳಲ್ಲಿನ ವ್ಯತ್ಯಾಸಗಳು. ಆದರೆ ಈ ವಿಷಯಗಳ ಮೀಮಾಂಸೆಯು ಭಾಷಣಕಲೆಗೂ, ಆ ಕಲೆಯ ಪಂಡಿತರಿಗೂ ಸೇರಿದ್ದು. ಕವಿಯು ಇವುಗಳನ್ನು ತಿಳಿದಿರಲಿ ಅಥವಾ ಇಲ್ಲದಿರಲಿ, ಅವನ ಕವಿತಾ ಕೌಶಲವು ಈ ಕಾರಣದಿಂದ ಯಾವಾಗಲೂ ತೀವ್ರ ಟೀಕೆಗೊಳಗಾಗುವುದಿಲ್ಲ. ಹೋಮರನ "ಕೋಪದ ಕಥೆಯನ್ನು ಹಾಡು, ದೇವಿ"[5] ಎಂಬುದರಲ್ಲಿ ಕಾಣುವ ದೋಷವಾದರೂ ಯಾವುದು? ಉದ್ದೇಶವು ಪ್ರಾರ್ಥನೆಯಾಗಿರಲು ಇದು ವಿಧಿರೂಪದಲ್ಲಿದೆಯೆಂದು ಪ್ರೋಟಗೊರಸನು ಇದನ್ನು ಖಂಡಿಸಿದ್ದಾನೆ, ಏಕೆಂದರೆ ಯಾರನ್ನಾದರೂ ಮಾಡು ಅಥವಾ ಮಾಡಬೇಡವೆನ್ನುವುದು ಒಂದು ಆಜ್ಞೆ ಎಂದು ಅವನು ಅನ್ನುತ್ತಾನೆ. ಇದು ಕಾವ್ಯಕಲೆಯನ್ನುಳಿದು ಬೇರೆ ಶಾಸ್ತ್ರಕ್ಕೆ ಸಂಬಂಧಿಸಿರುವುದರಿಂದ[6] ಇದನ್ನು ಬಿಟ್ಟು ಮುಂದುವರಿಯೋಣ.

ಅಧ್ಯಾಯ ೨೦

ಭಾಷೆಯು, ಒಟ್ಟಿನಲ್ಲಿ ನೋಡಿದರೆ, ಈ ಭಾಗಗಳನ್ನು ಒಳಗೊಂಡಿರುತ್ತದೆ: ವರ್ಣ [Letter], ಅಕ್ಷರ [Syllable], ಸಂಯೋಜಕ [Conjunction], ನಿರ್ದೇಶವಾಚಕ [Article], ನಾಮಪದ, ಕ್ರಿಯಾಪದ, ಪ್ರತ್ಯಯ [Inflexion or case], ಮತ್ತು ವಾಕ್ಯ. (೧) ವರ್ಣವೆಂದರೆ ಸಾರ್ಥಕ ಶಬ್ದವೊಂದರ ಅಂಗವಾಗುವಂತಹ ಒಂದು ವಿಧದ ಅಖಂಡಧ್ವನಿ. ಅಖಂಡಧ್ವನಿಗಳೇನೋ ಪ್ರಾಣಿಗಳಿಂದಲೂ ಉಚ್ಚರಿಸಲ್ಪಡುತ್ತವೆ, ಆದರೆ ಅವುಗಳಲ್ಲಿ ಯಾವುದೂ ನಮ್ಮ ಅರ್ಥದಲ್ಲಿ ವರ್ಣವಾಗುವುದಿಲ್ಲ. ಈ ಮೂಲಧ್ವನಿಗಳು ಸ್ವರಗಳೋ [Vowels], ಅರ್ಧಸ್ವರಗಳೋ [Semivowels], ಅಥವಾ ವ್ಯಂಜನಗಳೋ [Mutes] ಆಗಿರುತ್ತವೆ. ಇನ್ನೊಂದು ವರ್ಣದ ಸಂಯೋಗವಿಲ್ಲದೆಯೇ ಶ್ರುತವಾಗುವ ಸ್ವನವುಳ್ಳ ವರ್ಣವು ಸ್ವರವೆನಿಸುತ್ತದೆ. ಅರ್ಧಸ್ವರವೆಂದರೆ ಇನ್ನೊಂದು ವರ್ಣದ ಸಂಯೋಗದಿಂದ ಶ್ರುತವಾಗುವ ಸ್ವನವುಳ್ಳ ವರ್ಣ: ಉದಾ. ಸ್ [S] ಮತ್ತು ರ್ [R] ವ್ಯಂಜನವೆಂದರೆ ಸ್ವಂತವಾಗಿ ಯಾವ

---

[4] ಎಂದರೆ ವಿವಿಧ ಕಾಲವಾಚಕ, ಭಾವವಾಚಕ ಪ್ರತ್ಯಯಗಳಿಂದ ಅರ್ಥವು ವ್ಯತ್ಯಾಸವಾಗುವ ರೀತಿ.

[5] ಇಲಿಯಡ್ ನ ಆರಂಭವಾಕ್ಯ. ದೇವತೆಯನ್ನು ವಿಧಿರೂಪದ ಕ್ರಿಯಾಪದದಿಂದ ಆಜ್ಞಾಪಿಸಿರುವುದು ಅನುಚಿತವೆಂದು ಪ್ರೋಟಗೊರಸನ ಭಾವನೆ.

[6] ಇದನ್ನು ೨೦ ನೆಯ ಅಧ್ಯಾಯದಲ್ಲಿ ಅರಿಸ್ಟಾಟಲನು ಪುನಃ ಚರ್ಚಿಸಿದ್ದಾನೆ.

ಸ್ವನವೂ ಇಲ್ಲದ, ಆದರೆ ಯಾವುದಾದರೂ ಒಂದು ವಿಧದ ಸ್ವಂತ ಸ್ವನವುಳ್ಳ ವರ್ಣವೊಂದರ ಸಂಯೋಗದಿಂದ ಶ್ರುತವಾಗುವುದು: ಉದಾ. **ದ್** [D] ಮತ್ತು **ಗ್** [G]. ವರ್ಣಗಳು ಅನೇಕ ವಿಧಗಳಲ್ಲಿ ಬೇರೆಬೇರೆಯಾಗಿವೆ. ಬಾಯಿನ ಬೇರೆಬೇರೆ ಆಕಾರ ಅಥವಾ ಬೇರೆಬೇರೆ ಸ್ಥಾನಗಳಲ್ಲಿ ಜನಿಸುವುದರಿಂದ; ಮಹಾಪ್ರಾಣ, ಅಲ್ಪಪ್ರಾಣ, ಅಥವಾ ಕೆಲವು ಸಲ ಒಂದೂ, ಇನ್ನು ಕೆಲವು ಸಲ ಇನ್ನೊಂದೂ ಆಗುವುದರಿಂದ; ದೀರ್ಘ, ಹ್ರಸ್ವ, ಅಥವಾ ಅನಿಯತ ಮಾತ್ರೆಯದಾಗುವುದರಿಂದ; ಮತ್ತು ಉದಾತ್ತ, ಅನುದಾತ್ತ, ಅಥವಾ ಸ್ವರಿತ ಸ್ವರಗಳಾಗುವುದರಿಂದ. ಈ ವಿಷಯಗಳ ವಿವರಗಳನ್ನು ನಾವು ಛಂದಶ್ಶಾಸ್ತ್ರಜ್ಞರಿಗೆ ಬಿಟ್ಟುಬಿಡಬೇಕು. (೨) ಅಕ್ಷರ ಎಂದರೆ ಒಂದು ಸಸ್ವನ (ಸ್ವರ ಅಥವಾ ಅರ್ಧಸ್ವರ) ವರ್ಣ ಮತ್ತು ಒಂದು ವ್ಯಂಜನವುಳ್ಳ ಅರ್ಥರಹಿತವಾದ ಒಂದು ಸಂಯುಕ್ತಶಬ್ದ: ಏಕೆಂದರೆ **ಅ** [A] ರಹಿತವಾದ **ಗ್ರ್** [GR], **ಅ** [A] ಸಹಿತವಾದ **ಗ್ರ** [GRA]ನಷ್ಟೇ ಒಂದು ಅಕ್ಷರ. ಅಕ್ಷರಗಳ ವಿವಿಧ ಪ್ರಕಾರಗಳೂ ಸಹ ಛಂದಶ್ಶಾಸ್ತ್ರಕ್ಕೇ ಸೇರಿದವು. (೩) ಸಂಯೋಜಕವು (i) ಅರ್ಥರಹಿತವಾದ ಅನೇಕ ಶಬ್ದಗಳಿಂದ ಸಾರ್ಥಕಶಬ್ದವೊಂದು ಸಿದ್ಧವಾಗುವಂತಿದ್ದರೆ, ಆ ಸಂಯೋಗಕ್ಕೆ ಸಾಧಕವೂ ಬಾಧಕವೂ ಆಗದ ಒಂದು ಅರ್ಥರಹಿತವಾದ ಶಬ್ದ; ಮತ್ತು ಹೀಗೆ ರಚಿತವಾದ ವಾಕ್ಯವು ಸ್ವತಂತ್ರ (ಇತರ ವಾಕ್ಯಗಳಿಂದ ಪ್ರತ್ಯೇಕ)ವಾಗಿದ್ದರೆ, ಇದು ಅದರ ಆದಿಯಲ್ಲಿ ಉಪಯುಕ್ತವಾಗಬಾರದು: ಉದಾ. **ಮೆನ್, ದೇ, ತೊಯ್, ದೆ**[7] ಅಥವಾ (ii) ಅದು ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಸಾರ್ಥಕಶಬ್ದಗಳನ್ನು ಸಂಯೋಜಿಸುವಂತಹ ಒಂದು ಅರ್ಥರಹಿತವಾದ ಶಬ್ದ: ಉದಾ. **ಅಂಫಿ, ಪೆರಿ**[8] ಮುಂತಾದುವು. (4) ನಿರ್ದೇಶವಾಚಕವು ಒಂದು ವಾಕ್ಯದ ಆದಿ, ಅಂತ್ಯ, ಅಥವಾ ವಿಭಾಜಕ ಸ್ಥಾನಗಳನ್ನು ಸೂಚಿಸುವ ಒಂದು ಅರ್ಥರಹಿತವಾದ ಶಬ್ದ. ಇದರ ಸ್ವಾಭಾವಿಕವಾದ ಸ್ಥಾನ ಮೊದಲು, ಕೊನೆ, ಅಥವಾ ಮಧ್ಯದಲ್ಲಿರುತ್ತದೆ. (೫) ಕಾಲವಾಚಕವಲ್ಲದೆ, ಸ್ವತಂತ್ರವಾದ ಅರ್ಥವಿಲ್ಲದ ಭಾಗಗಳನ್ನುಳ್ಳ ಸಾರ್ಥಕ ಸಮಾಸ ಶಬ್ದವು ನಾಮಪದವೆನಿಸುತ್ತದೆ. ಸಮಾಸಪದವೊಂದರಲ್ಲಿ ಅದರ ಅಂಗಪದಗಳು ಸ್ವತಂತ್ರವಾಗಿಯೂ ಅರ್ಥವುಳ್ಳವುಗಳೆಂದು ನಾವು ಭಾವಿಸುವುದಿಲ್ಲವೆಂಬುದನ್ನು ಗಮನದಲ್ಲಿಡಬೇಕು: ಉದಾ. "ಥಿಯೋದೋರೊಸ್" (ದೇವದತ್ತ) ಎಂಬ

---

[7] **ಮೆನ್** ಎಂಬುದು ವಿಶೇಷ್ಯಕ್ಕೆ ಪುಷ್ಟಿ ಕೊಡುವಂತಹ ಒಂದು ವಿಶೇಷಣ. ಇದಕ್ಕೆ ಸ್ವತಂತ್ರವಾದ ಅರ್ಥವಿಲ್ಲ. **ದೇ** — ನಿಜವಾಗಿ, ಆದ್ದರಿಂದ, ಹಾಗಾದರೆ. **ತೊಯ್** — ನಿಜವಾಗಿ, ಆದ್ದರಿಂದ, ಹಾಗಾದರೆ. **ದೆ**—ಆದರೆ, ಮತ್ತು.

[8] **ಅಂಫಿ**—ಆಚೆ ಈಚೆ, ಅಕ್ಕಪಕ್ಕ, ಸುತ್ತ. **ಪೆರಿ**— ಪರಿತಃ, ಸುತ್ತಲೂ, ಹತ್ತಿರ.

ನಾಮಪದದಲ್ಲಿ, **ದೊರೋನ್** (ದಾನ) ಎಂಬುದು ನಮಗೆ ಯಾವ ಅರ್ಥವನ್ನೂ ಕೊಡುವುದಿಲ್ಲ. (೬) ನಾಮಪದದಂತೆಯೇ ಸ್ವತಂತ್ರಾರ್ಥವಿಲ್ಲದ ಅಂಗಗಳನ್ನುಳ್ಳ, ಕಾಲವಾಚಕವಾದ ಸಾರ್ಥಕಸಮಾಸ ಶಬ್ದವು ಕ್ರಿಯಾಪದವೆನಿಸುತ್ತದೆ. "ಮನುಷ್ಯ" ಅಥವಾ "ಬಿಳಿಯದು" ಎನ್ನುವುದು **ಯಾವಾಗ** ಎನ್ನುವುದನ್ನು ಸೂಚಿಸುವುದಿಲ್ಲ. ಆದರೆ "ನಡೆಯುತ್ತಾನೆ" ಮತ್ತು "ನಡೆದಿದ್ದಾನೆ" ಎಂಬುವು ಗಮನಾರ್ಥದೊಂದಿಗೆ ವರ್ತಮಾನ ಅಥವಾ ಭೂತಕಾಲಾರ್ಥಗಳನ್ನೂ ಒಳಗೊಳ್ಳುತ್ತವೆ. (೭) ನಾಮಪದದ ಅಥವಾ ಕ್ರಿಯಾಪದದ ಪ್ರತ್ಯಯವು ಒಂದು ಶಬ್ದವು ಒಂದು ವಸ್ತುವಿ"**ನ**" ಅಥವಾ "**ಗೆ**" ಮುಂತಾದುವುಗಳನ್ನು, ಅಥವಾ ಒಂದು ಅಥವಾ ಅನೇಕ (ಉದಾ. "ಮನುಷ್ಯ" ಮತ್ತು "ಮನುಷ್ಯರು") ಎಂಬುದನ್ನು ತಿಳಿಸುವಲ್ಲಿ ಇರುತ್ತದೆ; ಅಥವಾ ಅದು ಪ್ರಶ್ನೆ, ಆಜ್ಞೆ ಮುಂತಾದುವುಗಳಲ್ಲಿರುವಂತೆ ಕೇವಲ ಉಚ್ಚಾರಣಾ ವಿಧಾನವಾಗಿಯೇ ಇರಬಹುದು. "ನಡೆದನೋ ?" ಮತ್ತು "ನಡಿ !" ಎಂಬುವು "ನಡಿ" ಎಂಬ ಕ್ರಿಯಾಪದದ ಈ ಕೊನೆಯ ವಿಧದ ಪ್ರತ್ಯಯಗಳು. (೮) ಸ್ವತಂತ್ರವಾಗಿಯೂ ಸ್ವಲ್ಪ ಅರ್ಥವುಳ್ಳ ಕೆಲವು ಅಂಗಗಳಿಂದ ಕೂಡಿದ ಒಂದು ಸಮಸ್ತವಾದ ಸಾರ್ಥಕಶಬ್ದವು ವಾಕ್ಯವೆನಿಸುತ್ತದೆ. ವಾಕ್ಯವು ಸದಾ ನಾಮಪದ ಮತ್ತು ಕ್ರಿಯಾಪದಗಳಿಂದ ಕೂಡಿರಬೇಕಾಗಿಲ್ಲವೆಂಬುದನ್ನು ಗಮನದಲ್ಲಿಡಬೇಕು. ಅದು ಕ್ರಿಯಾಪದವಿಲ್ಲದೆಯೇ ಇರಬಹುದು : ಉದಾ. "ಮನುಷ್ಯನ ಲಕ್ಷಣ" ಎಂಬುದು. ಆದರೆ ಅದು ಯಾವಾಗಲೂ ಸ್ವತಂತ್ರವಾದ ಅರ್ಥವುಳ್ಳ ಯಾವುದಾದರೂ ಒಂದು ಭಾಗವನ್ನು ಹೊಂದಿರುತ್ತದೆ. "ಕ್ಲಿಯೊನನು ನಡೆಯುತ್ತಾನೆ" ಎಂಬ ವಾಕ್ಯದಲ್ಲಿ "ಕ್ಲಿಯೊನನು" ಎಂಬುದು ಅಂತಹ ಭಾಗದ ನಿದರ್ಶನ. ವಾಕ್ಯವು ಎರಡು ವಿಧದಲ್ಲಿ ಏಕವಾಗಿರುತ್ತದೆಯೆಂದು ಪರಿಗಣಿತವಾಗಿದೆ: ಏಕವಿಷಯಕವಾಗಿರುವುದರಿಂದಾಗ ಬಹುದು ಅಥವಾ ಸಂಯೋಜಕದಿಂದ ಏಕೀಕೃತವಾದ ಅನೇಕ ವಾಕ್ಯಗಳ ಸಂಯೋಗದಿಂದಾಗಬಹುದು. ಆದ್ದರಿಂದ ಅನೇಕ ವಾಕ್ಯಗಳ ಸಂಯೋಗದಿಂದ **ಇಲಿಯಡ್** ಏಕವಾಕ್ಯವಾಗಿದೆ; ಮತ್ತು ಒಂದು ವಿಷಯವನ್ನು ಸೂಚಿಸುವುದರಿಂದ "ಮನುಷ್ಯನ ಲಕ್ಷಣ" ಎಂಬುದು ಏಕವಾಕ್ಯವಾಗಿದೆ.

ಅಧ್ಯಾಯ ೨೧

ನಾಮಪದಗಳು ಎರಡು ವಿಧವಾಗಿವೆ: (1) ಸರಳ [Simple], ಎಂದರೆ ಅರ್ಥ ರಹಿತವಾದ ಅಂಗಗಳಿಂದ ರಚಿತವಾದುದು, ಉದಾ. ಗೇ[9] ಎಂಬ ಪದದಂತಹದ್ದು;

[9] ಗೇ=ಭೂಮಿ, ನೆಲ.

ಅಥವಾ (2) ದ್ವಂದ್ವ [Double]. ಈ ಎರಡನೆಯದರಲ್ಲಿ ಪದವು ಒಂದು ಸಾರ್ಥಕ ಮತ್ತು ಇನ್ನೊಂದು ನಿರರ್ಥಕ (ಈ ವ್ಯತ್ಯಾಸವು ಆ ಸಮಾಸದಲ್ಲಿ ಕಾಣುವುದಿಲ್ಲ) ಭಾಗದಿಂದಲೋ, ಅಥವಾ ಎರಡು ಸಾರ್ಥಕಭಾಗಗಳಿಂದಲೋ ರಚಿತವಾಗಿರುತ್ತದೆ.[10] ಮೂರು, ನಾಲ್ಕು, ಅಥವಾ ಇನ್ನೂ ಹೆಚ್ಚು ಪದಗಳುಳ್ಳ ಸಮಾಸಗಳೂ ಸಾಧ್ಯ. ನಮ್ಮ ಧೀರ್ಘವಾದ ಹೆಸರುಗಳಲ್ಲಿ ಅನೇಕವು ಇಂತಹವು: ಉದಾ. **"ಹರ್ಮೋ ಕಾಯಕೋ—ಕ್ಸಾನ್ಥ ಸ್"**[11] ಮುಂತಾದುವು.

ರಚನೆಯು ಹೇಗೆ ಬೇಕಾದರೂ ಇರಲಿ, ಒಂದು ನಾಮಪದವು ಇವುಗಳಲ್ಲಿ ಯಾವುದಾದರೂ ಒಂದಾಗಿರಬೇಕು: (೧) ಪದಾರ್ಥವನ್ನು ಕುರಿತ ಸಾಮಾನ್ಯಪದ, ಅಥವಾ (೨) ಅಪರಿಚಿತಪದ, ಅಥವಾ (೩) ರೂಪಕ, ಅಥವಾ (೪) ಆಲಂಕಾರಿಕಪದ,[12] ಅಥವಾ (೫) ಕಲ್ಪಿತಪದ, ಅಥವಾ (೬) ವಿಸ್ತೃತಪದ, ಅಥವಾ (೭) ಸಂಕ್ಷಿಪ್ತಪದ, ಅಥವಾ (೮) ವಿಕೃತರೂಪದ್ದು. ಸಾಮಾನ್ಯ ಪದವೆಂದರೆ ದೇಶದಲ್ಲಿ ದಿನ ಬಳಕೆಯಲ್ಲಿರುವ ಪದವೆಂದು ನನ್ನ ಅರ್ಥ. ಅಪರಿಚಿತ ಪದವೆಂದರೆ, ಇನ್ನೆಲ್ಲೋ ಬಳಕೆಯಲ್ಲಿರುವುದು. ಆದ್ದರಿಂದ ಒಂದೇ ಪದವು ಒಂದೇ ಜನರಲ್ಲದಿದ್ದರೂ, ಒಂದೇ ಕಾಲದಲ್ಲಿ ಸಾಮಾನ್ಯವೂ ಅಪರಿಚಿತವೂ ಒಟ್ಟಿಗೇ ಆಗಬಹುದು. ಉದಾ. **ಸಿಗುನೊಸ್**(ಈಟಿ) ಎಂಬುದು ಸೈಪ್ರೆಸಿನಲ್ಲಿ ರೂಢಿಯ ಪದ[13], ಆದರೆ ನಮಗೆ ಅಪರಿಚಿತವಾದದ್ದು. ಒಂದು ಪದಾರ್ಥಕ್ಕೆ ಇನ್ನಾವುದೋ ಒಂದರ ಹೆಸರನ್ನು ಅನ್ವಯಿಸುವುದೇ ರೂಪಕ.[14] ಈ ಆರೋಪವು ವ್ಯಕ್ತಿಯ ಮೇಲೆ ಜಾತಿಯದೂ,

---

10 ಉದಾ. (೧) "ಚಂದ್ರ" ಎಂಬ ಪದದ ಭಾಗಗಳಿಗೆ ಅರ್ಥವಿಲ್ಲ; (೨) "ಶೇಖರ" ಎಂಬಲ್ಲಿ ಶೇ ಎಂಬುದು ನಿರರ್ಥಕ, ಖರ ಎನ್ನುವುದು ಸಾರ್ಥಕ, ಆದರೆ ಈ ಪದದಲ್ಲಿ ಅದಕ್ಕೆ ಆ ಅರ್ಥ ವಿಲ್ಲ; (೩) "ಚಂದ್ರಶೇಖರ" ಎಂಬಲ್ಲಿ ಸಮಾಸದ ಎರಡು ಪದಗಳಿಗೂ ಅರ್ಥವುಂಟು.

11 ಏಷ್ಯಾ ಮೈನರಿನ ಮೂರು ನದಿಗಳ—**ಹರ್ಮುಸ್, ಕಾಯಕಸ್** ಮತ್ತು **ಕ್ಸಾನ್ಥಸ್**—ಹೆಸರುಗಳನ್ನು ಕೂಡಿಸಿ ರಚಿಸಿದ ಪದ; ಪ್ರಾಯಶಃ ಇದು ಯಾವುದೋ ದೇವತೆಯ ವಿಶೇಷಣವಾಗಿ ಉಪಯೋಗಿಸಿದ್ದಿರಬಹುದು.

12 ಇದು ೨೨ ನೆಯ ಅಧ್ಯಾಯದಲ್ಲೂ ಉಕ್ತವಾಗಿದೆ, ಆದರೆ ಇದರ ಅರ್ಥವು ಸಂದಿಗ್ಧ. ಪ್ರಾಯಶಃ ಇದು ರಾಜರನ್ನು "ಮಹಾಪ್ರಭುಗಳು" ಸೈನಿಕರನ್ನು "ವೀರರು," ಮತ್ತು ಇತರರನ್ನು "ಮಾನ್ಯ" ಎಂದು ಮೊದಲಾಗಿ ಕರೆಯುವಂತಹ ರೂಢಿಯಲ್ಲಿನ ಔಪಚಾರಿಕಪದಗಳಾಗಿರಬಹುದು.

13 ಎಂದರೆ, 'ಈಟಿ' ಎನ್ನುವುದಕ್ಕೆ.

14 ರೂಪಕದ ಈ ಲಕ್ಷಣವು ನೀರಸವೆನಿಸಿದರೂ, ಅದರ ವಿಶ್ಲೇಷಣೆಯು ಸರಿಯಾಗಿದೆ. ರೂಪಕೋಕ್ತಿಯು ಅಕ್ಷರಶಃ ಸತ್ಯವಲ್ಲ, ಆದರೆ ಅಭಿಧಾಪದಕ್ಕೆ ಬದಲಾಗಿ ರೂಪಕ ಪದವನ್ನು

ಅಥವಾ ಜಾತಿಯ ಮೇಲೆ ವ್ಯಕ್ತಿಯದೂ, ಅಥವಾ ವ್ಯಕ್ತಿಯ ಮೇಲೆ ವ್ಯಕ್ತಿಯದೂ, ಅಥವಾ ಸಾದೃಶ್ಯ ಮೂಲವೂ ಆಗಬಹುದು. "ಇಲ್ಲಿ ನನ್ನ ಹಡಗು ನಿಂತಿದೆ" ಎನ್ನುವುದು ವ್ಯಕ್ತಿಯ ಮೇಲೆ ಜಾತಿಯ ಆರೋಪಕ್ಕೆ ನಿದರ್ಶನ, ಏಕೆಂದರೆ ಲಂಗರಿನಲ್ಲಿರುವುದು ಯಾವುದೋ ಒಂದು ವಸ್ತುವು "ನಿಲ್ಲುವ" ವಿಧ. ಜಾತಿಯ ಮೇಲೆ ವ್ಯಕ್ತಿಯದಕ್ಕೆ "ನಿಜವಾಗಿಯೂ ಯೂಲಿಸಿಸನು ಹತ್ತು ಸಾವಿರ ಒಳ್ಳೆಯ ಕೆಲಸಗಳನ್ನೆ ಮಾಡಿದ್ದಾನೆ" ಎನ್ನುವುದು; ಇಲ್ಲಿ "ಹತ್ತು ಸಾವಿರ"ವೆಂಬ ಒಂದು ನಿರ್ದಿಷ್ಟವಾದ ಮಹತ್ಸಂಖ್ಯೆಯು "ಬಹು ಸಂಖ್ಯೆಯ" ಎಂಬ ಸಾಮಾನ್ಯ ಪದದ ಸ್ಥಾನದಲ್ಲಿ ಬಳಸಿದೆ. ವ್ಯಕ್ತಿಯ ಮೇಲೆ ವ್ಯಕ್ತಿಯದಕ್ಕೆ: "ಕಂಚಿನಿಂದ ಪ್ರಾಣವನ್ನು ಸೆಳೆದು" ಮತ್ತು "ಕಠಿನವಾದ ಕಂಚಿನಿಂದ ಕತ್ತರಿಸಿ" ಎಂಬಲ್ಲಿ ಕವಿಯು "ಸೆಳಿ" ಎಂಬ ಪದವನ್ನು "ಕತ್ತರಿಸು" ಎಂಬರ್ಥದಲ್ಲಿಯೂ, "ಕತ್ತರಿಸು" ಎಂಬುದನ್ನು "ಸೆಳಿ" ಎಂಬರ್ಥದಲ್ಲಿಯೂ ಉಪಯೋಗಿಸಿದ್ದಾನೆ, ಏಕೆಂದರೆ ಈ ಎರಡು ಪದಗಳೂ ಯಾವುದಾದರೂ ಒಂದನ್ನು "ತೆಗೆದು ಹಾಕುವ." ಅರ್ಥವುಳ್ಳವು.

ಸಾದೃಶ್ಯಮೂಲವಾದುದು ಸಿದ್ಧವಾಗಬೇಕಾದರೆ ವಿಷಯಗಳು ನಾಲ್ಕು ಇದ್ದು, ಅವುಗಳಲ್ಲಿ ನಾಲ್ಕನೆಯದು (D) ಮೂರನೆಯದಕ್ಕೆ (C) ಸಂಬಂಧಿಸಿರುವಂತೆಯೇ ಎರಡನೆಯದು (B) ಮೊದಲನೆಯದಕ್ಕೆ (A) ಸಂಬಂಧಿಸಿರಬೇಕು; ಏಕೆಂದರೆ ಆಗ ನಾಲ್ಕನೆಯದರ (D) ಬದಲು ಎರಡನೆಯದನ್ನು (B) ಮತ್ತು ಎರಡನೆಯದರ (B) ಬದಲು ನಾಲ್ಕನೆಯದನ್ನೂ (D) ಲಾಕ್ಷಣಿಕವಾಗಿ ಉಪಯೋಗಿಸಬಹುದು. ಯಾವ ಪದದ ಸ್ಥಾನದಲ್ಲಿ ರೂಪಕ ಪದವು ಬಂದಿದೆಯೋ ಅದಕ್ಕೆ ಸಂಬಂಧಿಸಿರುವ ಪದವನ್ನೇ ಆ ರೂಪಕ ಪದಕ್ಕೆ ವಿಶೇಷಣವನ್ನಾಗಿ ಕೆಲವು ವೇಳೆ ಸೇರಿಸುವುದೂ

ಬಳಸಿದರೆ ಅದರಿಂದ ಒಂದು ವಿಧದ ಅರ್ಥ ಪುಷ್ಟಿಯೋ ಅಥವಾ ಅರ್ಥಾಂತರ ಸೂಚನೆಯೋ ಉಂಟಾಗುತ್ತದೆ. ಈ ರೂಪಕ ಪದವು (೧) ಮುಖ್ಯಾರ್ಥದ ಜಾತಿಗೆ ಸೇರಿರುವ ಪ್ರಕಾರವೊಂದನ್ನು ನಿರೂಪಿಸಬಹುದು: "ಲಂಗರಿನಲ್ಲಿರುವುದು" ನಿಲ್ಲುವುದರ ಒಂದು ಪ್ರಕಾರ; (೨) ಮುಖ್ಯಾರ್ಥದ ಪ್ರಕಾರವು ಸೇರಿರುವ ಜಾತಿಯನ್ನು: "ಹತ್ತು ಸಾವಿರ"ವು ಬಹು ಸಂಖ್ಯೆಯ ಒಂದು ಪ್ರಕಾರ; ಅಥವಾ (೩) ಒಂದೇ ಜಾತಿಯ ಭಿನ್ನಪ್ರಕಾರಗಳನ್ನು. ಅರಿಸ್ಟಾಟಲನು ಕೊಟ್ಟಿರುವ ಉದಾಹರಣೆಯು ಅಷ್ಟು ಸ್ಪಷ್ಟವಾಗಿಲ್ಲ. ಬಹುಶಃ ಮೊದಲನೆಯ ವಾಕ್ಯದಲ್ಲಿನ "ಕಂಚು" ವೈದ್ಯನ ಚಿಕಿತ್ಸೆಯ ಚಾಕುವನ್ನೋ ಅಥವಾ ಕತ್ತಿಯನ್ನೋ ಸೂಚಿಸುತ್ತದೆ. ಎರಡನೆಯ ವಾಕ್ಯದಲ್ಲಿಯದು ರಕ್ತ ಚೋಷಕಯಂತ್ರವಿರಬಹುದು. "ಕತ್ತರಿಸು"ವುದು ಮತ್ತು "ಸೆಳೆಯು"ವುದು ಎರಡೂ ಕೂಡ "ತೆಗೆದು ಹಾಕು"ವುದರ ಪ್ರಕಾರಗಳೇ. ಅಥವಾ (೪) ಸದೃಶ ಪದದಿಂದ ಹಾಗೆ ಮಾಡಬಹುದು. ಎಲ್ಲಾ ರೂಪಕಗಳೂ ಈ ನಾಲ್ಕರಲ್ಲಿ ಅಂತರ್ಗತವಾಗುತ್ತವೆ.

ಉಂಟು.[15] ಡಯೊನೈಸಸನಿಗೆ (A) ಪಾನಪಾತ್ರೆಯು (B) ಏರಿಸನಿಗೆ (C) ಗುರಾಣಿ ಯಂತೆ (D) ಇದೆ.[16] ಆದ್ದರಿಂದ ಪಾನಪಾತ್ರೆಯು "ಡಯೊನೈಸಸನ ಗುರಾಣಿ" (D+A)ಯೆಂದೂ, ಮತ್ತು ಗುರಾಣಿಯು "ಏರಿಸನ ಪಾನಪಾತ್ರೆ" (B+C) ಯೆಂದೂ ರೂಪಕೋಕ್ತಿಯಿಂದ ವರ್ಣಿತವಾಗುತ್ತವೆ. ಅಥವಾ ಇನ್ನೊಂದು ದೃಷ್ಟಾಂತವನ್ನು ತೆಗೆದುಕೊಂಡರೆ: ಜೀವಿತಕ್ಕೆ (C) ಮುಪ್ಪು (D) ಇರುವಂತೆ ದಿವಸಕ್ಕೆ (A) ಸಂಜೆಯು (B) ಇರುತ್ತದೆ. ಆದ್ದರಿಂದ ಸಂಜೆ (B)ಯನ್ನು "**ದಿವಸದ ಮುಪ್ಪು**" (D+A) ಎಂತಲೋ—ಅಥವಾ ಅದನ್ನು ಎಂಪಿದೊಕ್ಲಿಸನು ಹೇಳಿದ ರೀತಿಯಲ್ಲಿಯೋ[17]; ಮತ್ತು ಮುಪ್ಪನ್ನು (D) "**ಜೀವಿತದ ಸಂಜೆ**" ಅಥವಾ "ಸೂರ್ಯಾಸ್ತ" (B+C) ಎಂದು ವರ್ಣಿಸಬಹುದು.[18] ಈ ವಿಧವಾಗಿ ಸಂಬಂಧಿಸಿರುವ ಕೆಲವು ವಿಷಯಗಳಿಗೆ ಸ್ವಂತವಾದ ಪಾರಿಭಾಷಿಕ ನಾಮಗಳಿಲ್ಲದಿರಬಹುದು; ಆದರೂ ಅವುಗಳು ಇದೇ ರೀತಿಯಲ್ಲಿಯೇ ರೂಪಕೋಕ್ತಿಯಿಂದ ವರ್ಣಿಸಲ್ಪಡುತ್ತವೆ. ಬೀಜಗಳನ್ನು ಚೆಲ್ಲುವುದು "ಬಿತ್ತನೆ"ಯೆನಿಸುತ್ತದೆ, ಆದರೆ ಸೂರ್ಯನು ಬೆಳಕನ್ನು ಚೆಲ್ಲುವುದಕ್ಕೆ ಯಾವ ವಿಶೇಷಪದವೂ ಇಲ್ಲ. ಆದರೆ ಬಿತ್ತನೆಯು (D) ಬೀಜಗಳೊಂದಿಗೆ (C) ಹೊಂದಿರುವ ಸಂಬಂಧವನ್ನೇ ಈ ಹೆಸರಿಲ್ಲದ ಕ್ರಿಯೆಯು (B) ಅದರ ವಿಷಯವಾದ ಸೂರ್ಯನ ಬೆಳಕಿನೊಂದಿಗೆ (A) ಹೊಂದಿದೆ. ಆದ್ದರಿಂದಲೇ "ದೈವಿಕವಾದ ಬೆಳಕೊಂದನ್ನು ಸುತ್ತಲೂ ಬಿತ್ತುತ್ತಾ" ಎಂಬುದಾಗಿ ಕವಿಯೊಬ್ಬನ ಉಕ್ತಿಯಿರುವುದು.[19] ವಿಶೇಷಣವುಳ್ಳ ರೂಪಕದಲ್ಲಿ ಇನ್ನೊಂದು ಬಗೆಯೂ ಇದೆ. ಒಂದು ಪದಾರ್ಥಕ್ಕೆ ಅನ್ಯವಾದ ಹೆಸರನ್ನು ಕೊಟ್ಟನಂತರ, ಅದಕ್ಕೆ ನಿಷೇಧಾರ್ಥಕ

---

[15] ಉದಾ. ಹೂವುಗಳು (A) : ತೋಟ (B) : ನಕ್ಷತ್ರಗಳು (C) : ಆಕಾಶ (D). ನಾವು D ಯನ್ನು B ಗೆ ಬದಲು ಉಪಯೋಗಿಸಿ, ತೋಟವನ್ನು ಆಕಾಶವೆನ್ನಬಹುದು. ಈಗ ಬದಲಾದ ಪದ ತೋಟ (B). B ಗೆ ಸಂಬಂಧಿಸಿರುವ ಎಂದರೆ ಹೂವುಗಳು (A), ಪದವನ್ನು ಇದಕ್ಕೆ ಸೇರಿಸಿದರೆ, "ಹೂವಿರುವ ಆಕಾಶ" ಎಂಬ ರೂಪಕವು ಸಿದ್ಧವಾಗುತ್ತದೆ. ಹೀಗೆಯೇ ಆಕಾಶವನ್ನು "ನಕ್ಷತ್ರಗಳ ತೋಟ"ವೆನ್ನಬಹುದು.

[16] ಡಯೊನೈಸಸನು ಗ್ರೀಕರ ಮಧುದೇವತೆ, ಅವನ ಲಾಂಛನ ಪಾನಪಾತ್ರೆ. ಏರಿಸ್ ಗ್ರೀಕರ ಯುದ್ಧದೇವತೆ, ಅವನ ಆಯುಧಗಳು ಕತ್ತಿ, ಗುರಾಣಿಗಳು.

[17] ಇದು ನಮಗೆ ಸಿಕ್ಕಿಲ್ಲ.

[18] ಎಂದರೆ ದಿವಸ (A) : ಸಂಜೆ (B) : : ಜೀವಿತ (C) : ಮುಪ್ಪು (D). ಆದ್ದರಿಂದ ಮುಪ್ಪನ್ನು ಜೀವಿತದ ಸಂಜೆಯಂತಲೂ, ಸಂಜೆಯನ್ನು ದಿವಸದ ಮುಪ್ಪಂತಲೂ ಕರೆಯುತ್ತೇವೆ.

[19] ನಾವು "ಆಸೆ ಚಿಗುರಿತು" ಎನ್ನುವಾಗ, ಆಸೆಯ ಈ ಕಾರ್ಯವನ್ನು ಅಭಿಧಾವೃತ್ತಿಯಿಂದ ಹೇಳುವ ಪದವು ನಮ್ಮಲ್ಲಿಲ್ಲ. ಇದೂ ಹೀಗೆಯೇ.

ಪ್ರತ್ಯಯವೊಂದನ್ನು ಹಚ್ಚಿ, ಆ ಹೊಸ ಹೆಸರಿಗೆ ಸಹಜವಾಗಿಯೇ ಸಂಬಂಧಿಸಿರುವ ಗುಣಗಳಲ್ಲಿ ಒಂದನ್ನು ಅದರಲ್ಲಿ ಇಲ್ಲವೆನ್ನುವುದು. ಇದಕ್ಕೆ ಉದಾಹರಣೆ: ಗುರಾಣಿಯನ್ನು ಹಿಂದಿನಂತೆ "ಏರಿಸನ ಪಾನಪಾತ್ರೆ" ಎಂದು ಕರೆಯದೆ, ಅದನ್ನು "ಮದ್ಯ ರಹಿತವಾದ ಪಾನಪಾತ್ರೆ" ಎನ್ನುವುದು.

ಜನಗಳಿಗೆ ತೀರ ಅಪರಿಚಿತವಾಗಿ, ಕವಿಯಿಂದ ಸ್ವಂತವಾಗಿ ಉಪಯೋಗಿಸಲಾದ ಪದವು ಕಲ್ಪಿತಪದವೆನಿಸುತ್ತದೆ. ಕೆಲವು ಪದಗಳು ಈ ರೀತಿ ಹುಟ್ಟಿರಬಹುದಾಗಿ ಕಾಣುತ್ತವೆ: ಉದಾ. ಕೊಂಬುಗಳನ್ನು **ಎರ್ನುಗೆಸ್** (ಚಿಗುರುಗಳು), ಮತ್ತು ಪೂಜಾರಿಯನ್ನು **ಅರೇತೇರ್** (ಬೇಡುವವನು) ಎನ್ನುವುದು. ಹ್ರಸ್ವಸ್ವರವೊಂದು ದೀರ್ಘವಾದರೆ, ಅಥವಾ ಅಕ್ಷರವೊಂದನ್ನು ಅಧಿಕವಾಗಿ ಸೇರಿಸಿದರೆ, ಪದವು ವಿಸ್ತೃತವಾಗುತ್ತದೆ ಎನ್ನುತ್ತಾರೆ: ಉದಾ. **ಪೊಲೆಯೋಸ್** ಎನ್ನುವುದಕ್ಕೆ **ಪೊಲೇಯೊಸ್, ಪೇಲ್ಯೈದೂ** ಎನ್ನುವುದಕ್ಕೆ **ಪೇಲೇಯಿಯಾದೇಓ** ಎನ್ನುವುದು. ಅದರ ಅಂಗವೊಂದು ಲೋಪವಾದರೆ, ಅದು ಸಂಕ್ಷಿಪ್ತವಾಯಿತೆನ್ನುತ್ತಾರೆ: ಉದಾ. **ಕ್ರಿ, ದೋ,** ಮತ್ತು **ಮಿಯಗಿನೆತಾಯ್ ಅಂಫೊತೆರೋನ್ ಒಪ್ಸ್.** ಎಂಬಲ್ಲಿ **ಒಪ್ಸ್.** ಪದದ ಒಂದು ಭಾಗವು ಅದು ಇದ್ದಂತೆಯೇ ಉಳಿದು, ಇನ್ನೊಂದು ಭಾಗವು ಕವಿನಿರ್ಮಿತವಾದರೆ, ಅದು ವಿಕೃತಪದವೆನಿಸುತ್ತದೆ: ಉದಾ. **ದೆಕ್ಸಿತೆರೊನ್ ಕತ ಮಸೊನ್** ಎಂಬಲ್ಲಿ **ದೆಕ್ಸಿಯೊನ್** ಎಂಬುದಕ್ಕೆ ಬದಲಾಗಿ **ದೆಕ್ಸಿತೆರೊನ್** ಎಂದು ಇರುವುದು.

ನಾಮಪದಗಳು (ಅವು ಯಾವ ವರ್ಗಕ್ಕೆ ಬೇಕಾದರೂ ಸೇರಿರಲಿ) ಪುಲ್ಲಿಂಗಗಳೋ, ಸ್ತ್ರೀಲಿಂಗಗಳೋ, ಅಥವಾ ನಪುಂಸಕಲಿಂಗಗಳೋ ಆಗಿರುತ್ತವೆ. **ನ** ಕಾರ, **ರ** ಕಾರ, **ಸ** ಕಾರ, ಅಥವಾ ಕೊನೆಯದರ ಸಂಯುಕ್ತಾಕ್ಷರಗಳಾದ **ಪ್ಸ, ಕ್ಸ,** ಇವುಗಳ ಅಂತ್ಯದಲ್ಲಿರುವುವೆಲ್ಲಾ ಪುಲ್ಲಿಂಗಗಳು. ಯಾವಾಗಲೂ ಧೀರ್ಘವಾಗಿರುವ **ಏ, ಓ** ಸ್ವರಗಳೂ, ಮತ್ತು ಧೀರ್ಘವಾಗಬಹುದಾದ ಸ್ವರಗಳಲ್ಲಿ **ಅ,** ಇವುಗಳು ಅಂತ್ಯದಲ್ಲಿರುವುವೆಲ್ಲಾ ಸ್ತ್ರೀಲಿಂಗಗಳು. ಆದ್ದರಿಂದ ಸ್ತ್ರೀ ಮತ್ತು ಪುಲ್ಲಿಂಗಾಂತಗಳು ಸಮಸಂಖ್ಯಾಕವಾಗಿವೆ. **ಪ್ಸ್, ಕ್ಸ್** ಗಳು **ಸ** ಕಾರವೇ ಆಗಿರುವುದರಿಂದ, ಅವುಗಳನ್ನು ಎಣಿಸಬೇಕಾಗಿಲ್ಲ. ಆದರೆ ವ್ಯಂಜನಾಂತವಾಗಿರುವ ಅಥವಾ ಹ್ರಸ್ವಸ್ವರಗಳಾದ **ಎ, ಒ** ಗಳಲ್ಲಿ ಒಂದು ಅಂತ್ಯವಾಗಿರುವ ಒಂದು ನಾಮಪದವೂ ಇಲ್ಲ. ಕೇವಲ ಮೂರು (**ಮೆಲಿ, ಕೊಮ್ಮಿ, ಪೆಪೆರಿ**) ಇ ಕಾರಾಂತವಾಗಿವೆ; ಐದು **ಉ** ಕಾರಾಂತವಾಗಿವೆ. ನಪುಂಸಕಗಳು ವಿಕಾರಗಳನ್ನು ಹೊಂದುವ ಸ್ವರಗಳು, ಅಥವಾ **ನ, ರ, ಸಾಂತ**ಗಳೋ ಆಗಿರುತ್ತವೆ.

ಅಧ್ಯಾಯ ೨೨

ಶೈಲಿಯು ಪರಿಪೂರ್ಣವಾಗಿರಬೇಕಾದರೆ ಅದು ಸ್ಪಷ್ಟವಾಗಿಯೂ, ಹೀನವಲ್ಲ ದೆಯೂ ಇರಬೇಕು. ವಸ್ತುಗಳಿಗೆ ರೂಢಿಯಲ್ಲಿರುವ ಪದಗಳಿಂದ ರಚಿತವಾದ ಶೈಲಿಯು ಸ್ಪಷ್ಟತಮವಾದುದೇನೋ ನಿಜ, ಆದರೆ ಅದು ಹೀನಗುಣದ್ದು : ಇದು ಕ್ಲಿಯೊಫೊನ್ ಮತ್ತು ಸ್ಥೆನೆಲಸರ ಕಾವ್ಯದಲ್ಲಿ[20] ಗೋಚರವಾಗುತ್ತದೆ. ಆದರೆ ಅಪೂರ್ವಪದಗಳ—ಎಂದರೆ ಅಪರಿಚಿತಪದಗಳು, ರೂಪಕಗಳು, ವಿಸ್ತೃತರೂಪಗಳು, ಮತ್ತು ರೂಢಿಯಲ್ಲಿರುವ ಭಾಷಾ ರೀತಿಗಳಿಗಿಂತ ಭಿನ್ನವಾದ ಎಲ್ಲವೂ—ಬಳಕೆಯಿಂದ ಶೈಲಿಯು ಉನ್ನತವೂ, ಅಸಾಧಾರಣವೂ ಆಗುತ್ತದೆ.—ಆದರೆ ವಾಕ್ಯವೊಂದು ಸಂಪೂರ್ಣವಾಗಿ ಈ ವಿಧದ ಪದಗಳಿಂದ ರಚಿತವಾಗಿದ್ದರೆ ಅದು ಒಂದು ಒಗಟೋ ಅಥವಾ ಅನಾರ್ಯವಾಕ್ಯವೋ ಆಗಿಬಿಡುತ್ತದೆ. ರೂಪಕಗಳಿಂದ ರಚಿತವಾಗಿದ್ದರೆ ಒಗಟೂ, ಅಪರಿಚಿತಪದಗಳಿಂದ ರಚಿತವಾಗಿದ್ದರೆ ಅನಾರ್ಯವೂ ಆಗುತ್ತದೆ. ಒಂದು ವಿಷಯವನ್ನು ಅಸಾಧ್ಯವಾದ ಪದಸಂಯೋಗವೊಂದರ ಮೂಲಕ ನಿರೂಪಿಸುವುದೇ ಒಗಟಿನ ನಿಜವಾದ ಸ್ವಭಾವ; ಇದನ್ನು ವಸ್ತುಗಳ ನಿಜವಾದ ಹೆಸರುಗಳಿಂದ ಮಾಡ ಲಾಗುವುದಿಲ್ಲ, ಆದರೆ ಅವುಗಳ ಲಾಕ್ಷಣಿಕ ಪದಾಂತರಗಳಿಂದ ಸಾಧ್ಯ; ಉದಾ. "ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಬೆಂಕಿಯಿಂದ ಹಿತ್ತಾಳೆಯ ಬೆಸಗೆಯನ್ನು ಹಾಕುತ್ತಿದ್ದುದನ್ನು ನಾನು ಕಂಡೆ," ಮುಂತಾದವು.[21] ಇದೇ ರೀತಿಯಲ್ಲಿ ಅಪರಿಚಿತ ಪದಗಳನ್ನು ಉಪಯೋಗಿಸುವುದು ಅನಾರ್ಯವೆನಿಸುತ್ತದೆ.[22]—ಆದ್ದರಿಂದ ಅಪೂರ್ವ ಪದಗಳ ಒಂದು ನಿರ್ದಿಷ್ಟ ಮಿಶ್ರಣವು ಆವಶ್ಯಕ. ಅಪರಿಚಿತಪದ, ರೂಪಕ, ಆಲಂಕಾರಿಕ ಪರ್ಯಾಯಪದ, ಇವೇ ಮೊದಲಾದುವುಗಳು ಶೈಲಿಯನ್ನು ಗ್ರಾಮ್ಯತೆ, ನೀರಸತೆಗಳಿಂದ ರಕ್ಷಿಸುತ್ತವೆ; ರೂಢಿಯ ಪದಗಳು ಅದಕ್ಕೆ

[20] ರುದ್ರಕವಿ ಸ್ಥೆನೆಲಸನ ಶೈಲಿಯು ಹೃದ್ಯವಾಗಿರಲಿಲ್ಲವೆಂದು ಅರಿಸ್ಟೊಫೆನಸನು ಹೇಳು ತ್ತಾನೆ. ೬ ನೆಯ ಅಧ್ಯಾಯದಲ್ಲಿ ಅರಿಸ್ಟಾಟಲನು ಕ್ಲಿಯೊಫೊನನ ಪಾತ್ರಗಳು ನಮ್ಮ ಮಟ್ಟದವು ಎಂದು ಹೇಳಿರುವುದರಿಂದ, ಅವನ ಶೈಲಿಯೂ ನೀರಸವಾಗಿದ್ದಿರಬಹುದು.

[21] ಇಲ್ಲಿನ ಒಗಟು ಹಿತ್ತಾಳೆಯಿಂದ ಮಾಡಿದ ರಕ್ತಚೋಷಕ ಪಾತ್ರೆಗೆ ಸಂಬಂಧಿಸಿದೆ. ದೇಹದಲ್ಲಿ ಒಂದು ರಂಧ್ರವನ್ನು ಮಾಡಿ, ಈ ಬಟ್ಟಲನ್ನು ಅದರಮೇಲೆ ಒತ್ತಿ ಹಿಡಿದು, ಬಟ್ಟಲನ್ನು ಬೆಂಕಿಯಿಂದ ಕಾಯಿಸಿದರೆ, ಅಲ್ಲಿ ಆದ ವಾಯುಶೂನ್ಯತೆಯಿಂದ ರಕ್ತವು ಬಟ್ಟಲೊಳಗೆ ಬರು ತ್ತಿತ್ತು. ಇಲ್ಲಿ "ಹಿತ್ತಾಳೆ" ಒಂದುಜಾತಿ, "ಬಟ್ಟಲು" ಅದರ ಒಂದು ಪ್ರಕಾರ; ಬೆಸಗೆ ಹಾಕುವುದು ಮತ್ತು ಅಂಟಿಸುವುದು ಒಂದೇ ಜಾತಿಯ ಕ್ರಿಯೆಯ ಎರಡು ಪ್ರಕಾರಗಳು.

[22] ಅನಾರ್ಯರ, ಎಂದರೆ ಗ್ರೀಕರಲ್ಲದವರ, ಭಾಷೆಯು ಅರ್ಥವಾಗದೆ ಇದ್ದುದರಿಂದ ಅನಾರ್ಯವೆಂದರೆ ಅರ್ಥರಹಿತವಾದ ಎಂಬ ಅರ್ಥವು ಒದಗಿತು.

ಆವಶ್ಯಕವಾದ ಸ್ಪಷ್ಟತೆಯನ್ನು ಕೊಡುತ್ತವೆ. ಆದರೂ ಶೈಲಿಯು ಸ್ಪಷ್ಟವಾಗಿಯೂ, ನೀರಸವಾಗದೆಯೂ ಇರುವಂತೆ ಮಾಡಲು ಅತ್ಯಂತ ಸಹಾಯಕವಾಗುವುದು ಪದಗಳ ವಿಸ್ತೃತ, ಸಂಕ್ಷಿಪ್ತ, ಮತ್ತು ವಿಕೃತರೂಪಗಳ ಪ್ರಯೋಗ. ಇವುಗಳಿಗೂ ರೂಢಿಯ ಪದಗಳಿಗೂ ಇರುವ ವ್ಯತ್ಯಾಸವು ಶೈಲಿಯನ್ನು ವಾಡಿಕೆಯ ಪ್ರಯೋಗದ್ದಕ್ಕಿಂತಲೂ ವಿಲಕ್ಷಣವನ್ನಾಗಿ ಮಾಡುವುದರಿಂದ ಅದಕ್ಕೊಂದು ಹೃದ್ಯರೂಪವನ್ನು ಕೊಡುತ್ತದೆ; ಮತ್ತು ಬಳಕೆಯಲ್ಲಿರುವ ಪದಗಳಿಗೂ ಇವುಗಳಿಗೂ ಇರುವ ಬಹಳವಾದ ಸಾಮ್ಯವು ಅದಕ್ಕೆ ಸ್ಪಷ್ಟತೆಯನ್ನು ಕೊಡುತ್ತದೆ. ಆದ್ದರಿಂದ, ಕೆಲವರು ಮಾಡಿರುವಂತೆ, ಶೈಲಿಯ ಈ ವಿಧಾನಗಳನ್ನು ಖಂಡಿಸುವುದೂ, ಮತ್ತು ಅವುಗಳ ಪ್ರಯೋಗಕ್ಕಾಗಿ ಕವಿಯನ್ನು ಅಲ್ಲಗಳೆಯುವುದೂ ಸರಿಯಲ್ಲ. ವಾಕ್ಯದಲ್ಲಿನ ಪದಗಳನ್ನು ಇಷ್ಟಬಂದಷ್ಟು ಲಂಬಿಸಲು ಅವಕಾಶವನ್ನಿತ್ತದ್ದೇ ಆದರೆ ಕಾವ್ಯವನ್ನು ಬರೆಯುವುದು ಸುಲಭದ ಕೆಲಸ ಎಂದು ವೃದ್ಧ ಯೂಕ್ಲಿಡನು ಹೇಳಿದ್ದು ಇದಕ್ಕೆ ಒಂದು ನಿದರ್ಶನ. **ಎಪಿಖರೇನ್ ಐದೊನ್ ಮರಥೋನದೆ ಬದಿಝೊಂತ,** ಮತ್ತು **ಊಕ್ ಅನ್ ಗೆ' ರಮೆನೊಸ್ ತೊನ್ ಎಕೈನೂ ಎಲ್ಲೆಬೊರೊನ್**[23] ಎಂಬುವುಗಳನ್ನು ಪದ್ಯಗಳಂತೆ ಓದಿ ಈ ವಿಧಾನವನ್ನು ಅಣಕಮಾಡಿದನು. ಈ ಸ್ವಾತಂತ್ರ್ಯಗಳನ್ನು ಎದ್ದು ಕಾಣುವ ರೀತಿಯಲ್ಲಿ ಬಳಸಿದರೆ, ಅದು ಹಾಸ್ಯಾಸ್ಪದವಾಗುತ್ತದೆ, ಆದರೆ ಇದಾಗುವುದು ಅವುಗಳ ವಿಷಯದಲ್ಲಿ ಮಾತ್ರವೇ ಅಲ್ಲ. ಮಿತದ ನಿಯಮವು (Rule of Moderation) ಕಾವ್ಯೋಕ್ತಿಯ ಎಲ್ಲಾ ಅಂಶಗಳಿಗೂ ಅನ್ವಯಿಸುತ್ತದೆ. ರೂಪಕಗಳು, ಅಪರಿಚಿತಪದಗಳು, ಮತ್ತು ಇತರವುಗಳಲ್ಲಿಯೂ ಸಹ, ಅವುಗಳನ್ನು ಔಚಿತ್ಯವಿಲ್ಲದೆ ಮತ್ತು ಹಾಸ್ಯವನ್ನುಂಟುಮಾಡುವ ಉದ್ದೇಶದಿಂದ ಪ್ರಯೋಗಿಸಿದರೆ, ಅವುಗಳ ಪರಿಣಾಮವು ಇದೇ ವಿಧವಾಗುತ್ತದೆ. ಅವುಗಳ ಯಥೋಚಿತ ಪ್ರಯೋಗವಾದರೋ ಸಂಪೂರ್ಣವಾಗಿ ಬೇರೆಯಾದದ್ದು. ಈ ವ್ಯತ್ಯಾಸವು ಗೊತ್ತಾಗಬೇಕಾದರೆ ಮಹಾಕಾವ್ಯದ ಒಂದು ಪಂಕ್ತಿಯನ್ನು ತೆಗೆದುಕೊಂಡು, ಅದಕ್ಕೆ ರೂಢಿಯಲ್ಲಿರುವ ಪದಗಳನ್ನು ಸೇರಿಸಿದಾಗ ಹೇಗೆ ಕಾಣುತ್ತದೆಯೆಂಬುದನ್ನು ನೋಡಬೇಕು. ಅಪರಿಚಿತಪದ, ರೂಪಕ, ಇತ್ಯಾದಿಗಳ ವಿಷಯದಲ್ಲಿಯೂ ಹೀಗೆಯೇ ಮಾಡಬೇಕು. ಏಕೆಂದರೆ ಅವುಗಳ ಸ್ಥಾನದಲ್ಲಿ ರೂಢಿಯ ಪದಗಳನ್ನು ಇಡುವಷ್ಟ

---

[23] ಈ ಗ್ರೀಕ್ ಪದಗಳ ಅರ್ಥವು ಅಷ್ಟು ಮುಖ್ಯವಲ್ಲ. ಮಹಾಕಾವ್ಯದಲ್ಲಿ ಹ್ರಸ್ವಾಕ್ಷರವೊಂದು ಕೆಲವು ವೇಳೆ ಸ್ವರದ (Accent) ಆಘಾತದಿಂದ (Stress) ದೀರ್ಘವಾಗುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ತತ್ತ್ವ. ಇದರ ವಿಪರೀತ ಪ್ರಯೋಗವನ್ನು ವಿಡಂಬಿಸಿ ಅಣಕಕಾವ್ಯವೊಂದನ್ನು ಬರೆದ ವೃದ್ಧಯೂಕ್ಲಿಡನು ಯಾರೆಂಬುದು ಗೊತ್ತಾಗಿಲ್ಲ. ಈ ವಾಕ್ಯಗಳ ಅರ್ಥ :

ರಿಂದಲೇ, ನಾವು ಹೇಳುತ್ತಿರುವುದರ ಸತ್ಯದ ಅರಿವಾಗುತ್ತದೆ. ಉದಾಹರಣೆಗೆ, ಒಂದೇ ವಿಧದ ಅಯಾಂಬಿಕ್ ಪಂಕ್ತಿಯೊಂದು ಈಸ್ಕಿಲಸ್ ಮತ್ತು ಯೂರಿಪಿಡೀಸರಲ್ಲಿದೆ; ಈಸ್ಕಿಲಸನದು ನೀರಸವಾಗಿದೆ; ಯೂರಿಪಿಡೀಸನಾದರೋ ಒಂದೇ ಒಂದು ಪದವನ್ನು ಬದಲಾಯಿಸಿ, ರೂಢಿಯಲ್ಲಿನ ಸಾಮಾನ್ಯಪದವೊಂದಕ್ಕೆ ಬದಲಾಗಿ ಅಪರಿಚಿತಪದವೊಂದನ್ನು ಬಳಸಿ, ಅದನ್ನು ಸುಂದರವಾಗಿ ಮಾಡಿದ್ದಾನೆ. ಈಸ್ಕಿಲಸನು ತನ್ನ **ಫಿಲೊಕ್ಟೆಟಿಸ್**‌ನಲ್ಲಿ:

ಫಗೆದಯ್'ನ ಹೇ ಮೂ ಸರ್ಕಸ್ ಎಸ್ಥಿಐ ಪೊದೊಸ್ ಎಂಬುದರಲ್ಲಿ ಎಸ್ಥಿಐ ಎಂಬುದನ್ನು ಮಾತ್ರ ಯೂರಿಪಿಡೀಸನು **ಥೊಯ್ನತಯ್** ಎಂದು ಬದಲಾಯಿಸಿದನು.[24] ಅಥವಾ

ನುನ್ ದೆ ಮೆ'ಎಓನ್ ಒಲಿಗೊಸ್ ತೆ ಕಯ್ ಊತಿದನೊಸ್ ಕಯ್ ಅಐಕೇಸ್ ಎಂಬುದಕ್ಕೆ ರೂಢಿಯ ಪದಗಳನ್ನು ಬಳಸಿ

ನುನ್ ದೆ ಮೆ'ಓನ್ ಮಿಕ್ರೊಸ್ ತೆ ಕಯ್ ಅಸ್ಥೆನಿಕೊಸ್ ಕಯ್ ಅಐದೇಸ್ ಎಂದು ವ್ಯತ್ಯಾಸಮಾಡಿದಾಗ[25]; ಅಥವಾ

ದಿಫ್ರೊನ್ ಅಐಕೆಲಿಯೊನ್ ಕತಥೈಸ್ ಒಲಿಗೇನ್ ತೆ ತ್ರಾಪೆಸನ್ ಎಂಬ ಸಾಲನ್ನು

ದಿ ಫ್ರೊನ್ ಮೊಖ್ಥೇರೋನ್ ಕತಥೈಸ್ ಮಿಕ್ರಾನ್ ತೆ ತ್ರಾಪೇಸನ್ ಎಂದು ಮಾಡಿದಾಗ[26]; ಅಥವಾ

ಏಯಿಯೋನೆಸ್ ಬೊಒಓಸಿನ್ ಎಂಬುದನ್ನು **ಏಯಿಯೋನೆಸ್**

"ಎಪಿಖರೇಸ್ ನಡೆದನು ಮರಥಾನಿಗೆ"; ಮತ್ತು "ಕೊಳ್ಳಿರಿವನಾ ಹೆಲ್ಲೆಬೋರನು ಪ್ರೇಮಿಜನರಾ ತಾಪಕೆ". ಮಾರ್ಗೋಲಿಯತರ ಅಭಿಪ್ರಾಯದಲ್ಲಿ ಎರಡನೆಯ ವಾಕ್ಯವು ಜಾಹಿರಾತೊಂದರ ಭಾಗ. ಯೂಕ್ಲಿಡನ ಅಣಕದ ಗುರಿ: ಈ ವಾಕ್ಯಗಳ ಶೈಲಿಯ ನೀರಸತೆ, ಮತ್ತು ಇವುಗಳನ್ನು ಪದ್ಯದಂತೆ ಪರಿಗಣಿಸಬೇಕಾದಲ್ಲಿ ಅವುಗಳ ಕೆಲವು ಶಬ್ದಗಳನ್ನು ದೀರ್ಘವಾಗಿ ಓದಬೇಕಾದ ಪರಿಸ್ಥಿತಿ.

24 ಈಸ್ಕಿಲಸನ ಮಾತನ್ನು ಹೀಗೆ ಅನುವಾದಮಾಡಬಹುದು: "ಈ ಹುಣ್ಣು ನನ್ನ ಈ ಕಾಲಿನ ಮಾಂಸವನ್ನು ತಿನ್ನುತ್ತಿದೆ". ಯೂರಿಪಿಡೀಸನು "ನನ್ನ ಕಾಲಿನ ಔತಣವನ್ನು ಸವಿಯುತ್ತಿದೆ" ಎಂದು ಹೇಳಿದನು.

25 "ಮಾನ್ಯನೂ, ಸುಂದರನೂ ಅಲ್ಲದ ಅಲ್ಪನಾದ ನಾನು" ಎಂಬುದನ್ನು ರೂಢಿಯ ಪದಗಳನ್ನೂ ಬಳಸಿ "ದುರ್ಬಲನೂ, ಕುರೂಪಿಯೂ, ಚಿಕ್ಕವನೂ ಆದ ನಾನು" ಎಂದು ಲಘುವಾಗಿ ಮಾಡಬಹುದು.

26 "ಚೆನ್ನಲ್ಲದ ಕಾಲುಮಣೆಯನ್ನೂ, ಕಿರಿದಾದ ಮೇಜುವನ್ನೂ ಹಾಕಿ" ಎಂಬುದನ್ನು "ಕೊಳಕಾದ ಕಾಲುಮಣೆಯನ್ನೂ, ಕುಳ್ಳಾದ ಮೇಜುವನ್ನೂ ಹಾಕಿ" ಎಂದು ಮಾಡಿ. ಈ ದೃಷ್ಟಾಂತಗಳಲ್ಲಿರುವ ವ್ಯತ್ಯಾಸವು ಗ್ರೀಕ್ ಭಾಷೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ.

ಕ್ರಾಸೂಸಿನ್[27] ಎಂದು ಮಾಡಿದರೆ ಹೇಗಿರುತ್ತೆಂಬುದನ್ನು ಗಮನಿಸಿ. ಇದರ ಜೊತೆಗೆ, ಸಾಮಾನ್ಯಜೀವನದ ಭಾಷೆಗೆ ಅಪರಿಚಿತವಾದ ಶಬ್ದಪ್ರಯೋಗಗಳನ್ನು— **ದೋಮತೋನ್ ಆಪೊ** (**ಅಪೊದೋಮತೋನ್** ಎಂಬುದಕ್ಕೆ), **ಸೆಥೆನ್**, **ಎಗೋ ದೆ ನಿನ್**, **ಅಖಿಲ್ಲೋಸ್ ಪೆರಿ** (**ಪೆರಿ ಅಖಿಲ್ಲೋಸ್** ಎಂಬುದಕ್ಕೆ), ಇತ್ಯಾದಿಗಳನ್ನು[28]—ಮಾಡಿದ್ದಕ್ಕೆ ರುದ್ರನಾಟಕಕಾರರನ್ನು ಅರಿಫ್ರಡೆಸನು ಹಾಸ್ಯ ಮಾಡುತ್ತಿದ್ದನು. ರೂಢಿಯ ಭಾಷೆಯಲ್ಲಿ ಅವುಗಳು ಇಲ್ಲದಿರುವ ಅಂಶದ ಮಾತ್ರದಿಂದಲೇ ಶೈಲಿಗೊಂದು ವೈಶಿಷ್ಟ್ಯವು ಪ್ರಾಪ್ತವಾಗುತ್ತದೆ; ಆದರೆ ಅರಿಫ್ರಡೆಸನು ಇದನ್ನು ಅರಿತಿರಲಿಲ್ಲ. ಈ ಕಾವ್ಯರೂಪಗಳನ್ನು, ಮತ್ತು ಹೀಗೆಯೇ ಸಮಾಸ ಮತ್ತು ಅಪರಿಚಿತ ಪದಗಳನ್ನು, ಸರಿಯಾಗಿ ಉಪಯೋಗಿಸುವುದು ನಿಜವಾಗಿಯೂ ಒಂದು ಮಹತ್ಕಾರ್ಯವೇ. ಆದರೆ ಇವೆಲ್ಲಕ್ಕಿಂತಲೂ ಮಹತ್ತರವಾದುದು ರೂಪಕದ ಮೇಲಿನ ಪ್ರಭುತ್ವ. ಇತರರಿಂದ ಕಲಿಯಲಾರದ್ದು ಇದೊಂದೇ. ಮತ್ತು ಇದು ಪ್ರತಿಭೆ (Genius) ಯ ಒಂದು ಲಕ್ಷಣವೂ ಹೌದು, ಏಕೆಂದರೆ ಒಂದು ಉತ್ತಮ ರೂಪಕವು ಭಿನ್ನವಸ್ತುಗಳಲ್ಲಿರುವ ಸಾದೃಶ್ಯದ ಪ್ರಜ್ಞಾ ಗ್ರಾಹಿತ್ವ [Intuitive perception] ವನ್ನು ಸೂಚಿಸುತ್ತದೆ.[29]

ನಾವು ಪರಿಗಣಿಸಿರುವ ಪದಜಾತಿಗಳಲ್ಲಿ ಸಮಾಸಗಳು ಡಿಥಿರಾಂಬಿನಲ್ಲಿಯೂ, ಅಪರಿಚಿತ ಪದಗಳು ಮಹಾಕಾವ್ಯದಲ್ಲಿಯೂ, ಮತ್ತು ರೂಪಕಗಳು ಅಯಾಂಬಿಕ್ ಕಾವ್ಯದಲ್ಲಿಯೂ ಇರಲು ಅರ್ಹಗಳೆಂದು ಹೇಳಬಹುದು. ಮಹಾಕಾವ್ಯವು ವಾಸ್ತವವಾಗಿ ಇವೆಲ್ಲವನ್ನೂ ಬಳಸಿಕೊಳ್ಳಬಹುದು. ಆದರೆ ಸಾಧ್ಯವಾದ ಮಟ್ಟಿಗೂ ವ್ಯಾವಹಾರಿಕ ಭಾಷೆಯನ್ನು ಅನುಕರಿಸುವ ಅಯಾಂಬಿಕ್ ಕಾವ್ಯದಲ್ಲಾದರೋ ಭಾಷಣವೊಂದರಲ್ಲಿ ಅವಕಾಶವಿರುವಂಥವುಗಳು--ಎಂದರೆ, ರೂಢಿಯ ಪದ, ರೂಪಕ, ಮತ್ತು ಆಲಂಕಾರಿಕ ಪರ್ಯಾಯಪದ—ಮಾತ್ರ ಯೋಗ್ಯವಾದವು. ಹೀಗೆ, ರಂಗದ ಮೇಲೆ ಅಭಿನಯದ ಮೂಲಕ ಅನುಕರಿಸುವ ಕಲೆಯಾದ ರುದ್ರನಾಟಕದ ವಿಷಯವಾಗಿ ಇಷ್ಟು ಸಾಕು.

---

[27] "ಸಮುದ್ರತೀರಗಳು ಭೋರ್ಗರೆಯುತ್ತವೆ" ಎಂಬುದನ್ನು "ಸಮುದ್ರತೀರಗಳು ಕಿರುಚುತ್ತವೆ" ಎಂದು ಪರಿವರ್ತಿಸಿದರೆ.

[28] "ಪೇಳ್ವೆಂ", "ಕೇಳ್ದಂ", "ಇಂತೆಂದಂ" ಮುಂತಾದುವುಗಳನ್ನು ಹೋಲಿಸಿ.

[29] ಭಿನ್ನವಸ್ತುಗಳಲ್ಲಿರುವ ಸಾದೃಶ್ಯವನ್ನು ಗ್ರಹಿಸುವ ಕೌಶಲವು ಕವಿ ಮತ್ತು ವಿಜ್ಞಾನಿಗಳಿಗಿಬ್ಬರಿಗೂ ಸಮಾನವಾಗಿದೆ.

ಅಧ್ಯಾಯ ೨೩

ಕೇವಲ ಕಥನಾತ್ಮಕವಾದ, ಅಥವಾ (ಅಭಿನಯರಹಿತವಾದ) ಛಂದೋಬದ್ಧವಾದ ಭಾಷೆಯ ಮೂಲಕ ಅನುಕರಿಸುವ ಕಾವ್ಯವಾದರೋ,[30] ಅದು ರುದ್ರನಾಟಕದ ಅನೇಕ ಅಂಶಗಳನ್ನು ಒಳಗೊಂಡಿರುವುದು ಸ್ವಯಂವೇದ್ಯವೇ ಆಗಿದೆ.

I. ಅದರ ಕಥೆಗಳ ಸಂಯೋಜನೆಯು ನಾಟಕದಲ್ಲಿರುವಂತೆಯೇ ಇರಬೇಕೆಂಬುದು ಸ್ಪಷ್ಟವೇ; ಅವು ಒಂದೇ ಕಾರ್ಯವನ್ನು ಅವಲಂಬಿಸಿರಬೇಕು. ಅವು ಆದಿಮಧ್ಯಾಂತಗಳಿಂದ ಕೂಡಿ ಸ್ವಸಂಪೂರ್ಣವಾಗಿರುವ ಒಂದೇ ಒಂದು ಕಾರ್ಯವನ್ನು ಅವಲಂಬಿಸಿದ್ದು, ಕೃತಿಯು ಜೀವಂತ ಪ್ರಾಣಿಯೊಂದರ ಅವಯವೈಕ್ಯತೆಯನ್ನು ಹೊಂದಿ ತನಗೆ ಅನುರೂಪವಾದ ಆನಂದವನ್ನೀಯಲು ಶಕ್ತವಾಗುವಂತೆ ಮಾಡಬೇಕು. ನಮ್ಮ ಪ್ರಚಲಿತ ಇತಿಹಾಸಕೃತಿಗಳಲ್ಲಿ ಇವುಗಳಂತೆ ಯಾವುದಾದರೂ ಇದೆಯೆಂದು ಯಾರೂ ಭಾವಿಸಬಾರದು.[31] ಇತಿಹಾಸವು ನಿರೂಪಿಸಬೇಕಾದುದು ಒಂದು ಕಾಲವನ್ನೋ ಮತ್ತು ಆ ಅವಧಿಯಲ್ಲಿ ಒಬ್ಬನಿಗೋ ಅಥವಾ ಅನೇಕರಿಗೋ ಸಂಭವಿಸಿದ ಎಲ್ಲವನ್ನೋ ಹೊರತು, ಒಂದೇ ಒಂದು ಕಾರ್ಯವನ್ನಲ್ಲ. ಈ ವಿವಿಧ ಘಟನೆಗಳು ಪರಸ್ಪರವಾಗಿ ಸಂಬಂಧಿಸಿಲ್ಲದಿರಬಹುದು. ಎರಡು ಘಟನೆಗಳು—ಉದಾ. ಸಲಾಮಿಸನ ಹತ್ತಿರದ ನೌಕಾಯುದ್ಧ ಮತ್ತು ಸಿಸಿಲಿಯ ಕಾರ್ಥಿಜಿನಿಯರೊಂದಿಗೆ ಯುದ್ಧ[32]—ಸಮಕಾಲೀನವಾಗಿದ್ದರೂ ಒಂದೇ ಗುರಿಗೆ ಅಭಿಮುಖವಾಗದಿರುವಂತೆಯೇ, ಅನುಕ್ರಮವಾದ ಎರಡು ಘಟನೆಗಳು ಅವುಗಳ ಸಮಾನ ಫಲವಾಗಿ ಒಂದೇ ಗುರಿಯನ್ನು ಹೊಂದಿರದಿದ್ದರೂ, ಅವುಗಳಲ್ಲಿ ಒಂದು ಕೆಲವು ವೇಳೆ ಇನ್ನೊಂದರ ಅನಂತರದಲ್ಲಿ ಬರಬಹುದು. ಆದರೂ ನಮ್ಮ ಮಹಾಕಾವ್ಯ ಕರ್ತೃಗಳಲ್ಲಿ ಅನೇಕರು ಈ ವ್ಯತ್ಯಾಸವನ್ನು ಕಡೆಗಣಿಸಿದ್ದಾರೆಂದು ಹೇಳಬಹುದು.

ನಾವು ಹಿಂದೆ ಹೇಳಿದ್ದನ್ನು[33] ಪುನಃ ಹೇಳುವುದಾದರೆ, ಹೋಮರನಿಗೆ ಇತರರಿ

---

[30] ಎಂದರೆ, ಮಹಾಕಾವ್ಯ.

[31] ಅಧ್ಯಾಯಗಳು ೮ ಮತ್ತು ೯ ನ್ನು ನೋಡಿ. ಅಲ್ಲಿ ಐಕ್ಯತಾತತ್ತ್ವವು ಮಹಾಕಾವ್ಯ, ರುದ್ರನಾಟಕಗಳೆರಡಕ್ಕೂ ಅನ್ವಯಿಸಿದೆ, ಮತ್ತು ಇತಿಹಾಸದ ಐಕ್ಯತೆಯಿಂದ ಬೇರ್ಪಡಿಸಿದೆ.

[32] ಗೆಲೋ ಕಾರ್ಥಿಜಿನಿಯರನ್ನು ಸೋಲಿಸಿದ್ದು, ಮತ್ತು ಅಥಿನಿಯನ್ನರು ಪರ್ಶಿಯಾದವರನ್ನು ಸಲಾಮಿಸನ ಬಳಿ ಸೋಲಿಸಿದ್ದು ಒಂದೇ ವರ್ಷದಲ್ಲಿ—ಕ್ರಿ. ಪೂ. ೪೮೦. ಇವೆರಡೂ ಒಂದೇ ದಿನದಲ್ಲಾದುವೆಂದು ಹೆರೊಡೊಟಸನು ಹೇಳುತ್ತಾನೆ.

[33] ೮ ನೆಯ ಅಧ್ಯಾಯದಲ್ಲಿ.

ಗಿಂತಲೂ ಇರುವ ಅದ್ಭುತವಾದ ಶ್ರೇಷ್ಠತೆಗೆ ಇನ್ನೂ ಒಂದು ಪ್ರಮಾಣವನ್ನು ನಾವು ಇಲ್ಲಿ ಕಾಣುತ್ತೇವೆ. ಟ್ರೋಜನರ ಯುದ್ಧವು ಖಚಿತವಾದ ಆದ್ಯಂತಗಳುಳ್ಳ ಪೂರ್ಣ ಕಾರ್ಯವೊಂದಾಗಿದ್ದರೂ, ಅದನ್ನೂ ಕೂಡ ಅವನು ಸಂಪೂರ್ಣವಾಗಿ ಹೇಳಲು ಯತ್ನಿಸಲಿಲ್ಲ. ಪ್ರಾಯಶಃ ಒಂದೇ ನೋಟದಲ್ಲಿ ಗ್ರಹಿಸಲು ಅದು ಬಹಳ ಧೀರ್ಘವಾದ ಕಥೆಯೆಂದೋ, ಅಥವಾ ಅದರ ಘಟನೆಗಳ ವೈವಿಧ್ಯದ ಕಾರಣ ಅದು ಬಹಳ ಜಟಿಲವಾದುದೆಂಬ ಭಾವನೆಯಿಂದಲೋ ಇರಬಹುದು. ವಸ್ತುತಃ ಅವನು ಆ ಪೂರ್ಣಕಾರ್ಯದ ಒಂದು ಭಾಗವನ್ನು ಮಾತ್ರ ಆರಿಸಿಕೊಂಡಿದ್ದಾನೆ: ಆದರೆ ಇತರ ಘಟನೆಗಳಲ್ಲಿ ಅನೇಕವನ್ನು ಪ್ರಾಸಂಗಿಕವಾಗಿ ತರುತ್ತಾನೆ: ಉದಾ. ಹಡಗುಗಳ ನಾಮಕಥನ;[34] ಮತ್ತು ಇತರ ಪ್ರಸಂಗಗಳನ್ನು ತನ್ನ ಕಥೆಯ ಏಕನಾದವನ್ನು ತಪ್ಪಿಸಲು ಉಪಯೋಗಿಸಿದ್ದಾನೆ. ಬೇರೆ ಮಹಾ ಕಾವ್ಯಕರ್ತೃಗಳಾದರೋ ಒಬ್ಬ ವ್ಯಕ್ತಿ ಅಥವಾ ಒಂದು ಕಾಲವನ್ನು ಕುರಿತು ಬರೆಯುತ್ತಾರೆ; ಇಲ್ಲದಿದ್ದರೆ, ಕಾರ್ಯವೇನೋ ಒಟ್ಟಿನಲ್ಲಿ ಒಂದೇ ಆಗಿದ್ದರೂ, ಬಹುಸಂಖ್ಯೆಯ ಅಂಗಗಳುಳ್ಳದ್ದನ್ನು ಕುರಿತು ಬರೆಯುತ್ತಾರೆ.[35] **ಸೈಪ್ರಿಯ** ಮತ್ತು **ಕಿರಿಯ ಇಲಿಯಡ್**‌ಗಳ ಕರ್ತೃಗಳು ಈ ಕೊನೆಯ ರೀತಿಯದನ್ನು ಮಾಡಿದ್ದಾರೆ.[36] ಇದರ ಪರಿಣಾಮವೇನೆಂದರೆ **ಇಲಿಯಡ್** ಅಥವಾ **ಒಡಿಸ್ಸಿ** ಒಂದೇ ಒಂದು, ಇಲ್ಲವೇ ಹೆಚ್ಚೆನಿಸಿದರೆ ಎರಡು ರುದ್ರನಾಟಕಗಳಿಗೆ ವಸ್ತುಗಳನ್ನು ಒದಗಿಸಿದರೆ, **ಸೈಪ್ರಿಯವು** ಅನೇಕಕ್ಕೂ, **ಕಿರಿಯ ಇಲಿಯಡ್** ಎಂಟಕ್ಕೂ ಹೆಚ್ಚಿನವುಗಳಿಗೂ ಒದಗಿಸುತ್ತವೆ: **ಶಸ್ತ್ರಪರೀಕ್ಷೆ, ಫಿಲೊಕ್ಟೆಟಿಸ್, ನಿಯೊಪ್ಟೊಲೆಮಸ್, ಯೂರಿಪೈಲಸ್, ಭಿಕ್ಷುಕ ಯೂಲಿಸಿಸ್, ಲಕೋನಿಯದ ಸ್ತ್ರೀಯರ, ಇಲ್ಲಿಯಡ ಪತನ,** ಮತ್ತು **ನೌಕಾನಿರ್ಗಮನ**ಗಳಿಗೆ ಹಾಗೂ **ಸೈನೋನ್** ಮತ್ತು **ಟ್ರಾಯ್**‌ನ **ಸ್ತ್ರೀಯರು** ಎಂಬುವುಗಳಿಗೂ ಕೂಡ.

---

34 ಎಂದರೆ **ಇಲಿಯಡ್** ಎರಡನೆಯ ಸರ್ಗದ ಉತ್ತರಾರ್ಧ.

35 ಆದರೆ ೧೮ ನೆಯ ಅಧ್ಯಾಯದಲ್ಲಿ ಅರಿಸ್ಟಾಟಲನ **ಇಲಿಯಡ್**‌ನಲ್ಲಿಯೂ ಬಹು ಸಂಖ್ಯೆಯ ಕಥೆಗಳಿವೆಯೆಂದಿದ್ದಾನೆ.

36 ಈ ಮಹಾಕಾವ್ಯಗಳು ದೊರೆಕಿಲ್ಲ. ಇವು ಅಷ್ಟು ಉತ್ತಮವೂ ಆಗಿಲ್ಲದಿದ್ದಿರಬಹುದು. ನಮಗೆ ಇವುಗಳ ವಿಷಯ ತಿಳಿದಿರುವುದು ಪ್ರೋಕ್ಲಸನಿಂದ ಕ್ರಿ. ಶ. ೪ ಅಥವಾ ೫ ನೆಯ ಶತಮಾನದಲ್ಲಿ ರಚಿತವಾದ ಗ್ರೀಕ್ ಪುರಾಣ ಕಥೆಗಳ ಗದ್ಯ ಸಂಗ್ರಹದಿಂದ **ಸೈಪ್ರಿಯದ** ವಿಷಯವು ಪಾರಿಸ್ಸಿನ ತೀರ್ಪು ಮತ್ತು ಟ್ರೋಜನ್ ಯುದ್ಧದ ಕಾರಣ. **ಕಿರಿಯ ಇಲಿಯಡ್** ಅಕಿಲಿಸನ ಮರಣದ ಅನಂತರದಿಂದ ಪ್ರಾರಂಭಿಸುತ್ತದೆ.

ಅಧ್ಯಾಯ ೨೪

II. ಇದೂ ಅಲ್ಲದೆ, ಮಹಾಕಾವ್ಯವು ರುದ್ರನಾಟಕದ ಪ್ರಭೇದಗಳಿಗೆ ಸದೃಶವಾದ ಪ್ರಭೇದಗಳನ್ನು ಹೊಂದಿರಬೇಕು. ಅದು ಶುದ್ಧವೋ ಅಥವಾ ಸಂಕೀರ್ಣವೋ,[37] ಪಾತ್ರದ ಕಥೆಯೋ ಅಥವಾ ವೇದನೆಯ [Suffering] ಕಥೆಯೋ ಆಗಿರಬೇಕು. ಸಂಗೀತ ಮತ್ತು ದೃಶ್ಯಗಳನ್ನುಳಿದು, ಅದರ ಅಂಗಗಳೂ ಕೂಡ ಸಮಾನವಾಗಿರಬೇಕು, ಏಕೆಂದರೆ ರುದ್ರನಾಟಕದಂತೆಯೇ ಇದೂ ಕೂಡ ಪರಿವೃತ್ತಿ, ಅನಜ್ಞಾನ, ಮತ್ತು ವೇದನಾ ದೃಶ್ಯಗಳನ್ನು ಅಪೇಕ್ಷಿಸುತ್ತದೆ. ಕೊನೆಯದಾಗಿ ಅದರ ಭಾವನೆ ಮತ್ತು ಶೈಲಿಗಳು ಅವುಗಳಿಗೆ ತಕ್ಕ ರೀತಿಯಲ್ಲಿ ಉತ್ತಮವಾಗಿರಬೇಕು. ಈ ಎಲ್ಲಾ ಗುಣಗಳೂ ಮೊದಲು ಹೋಮರಿನಲ್ಲಿ ಕಂಡುಬರುವುವು. ಅವನು ಇವುಗಳನ್ನು ಸೂಕ್ತವಾಗಿ ಬಳಸಿದ್ದಾನೆ. ಅವನ ಎರಡು ಕಾವ್ಯಗಳು ಒಂದೊಂದೂ ಸಂವಿಧಾನಕ್ಕೆ ನಿದರ್ಶನಗಳಾಗಿವೆ. **ಇಲಿಯಡ್** ಶುದ್ಧ ರೀತಿಯದು ಮತ್ತು ವೇದನೆಯ ಕಥೆ; **ಒಡಿಸ್ಸಿಯು** ಸಂಕೀರ್ಣ ರೀತಿಯದು (ಅನಜ್ಞಾನವು ಅದರುದ್ದಕ್ಕೂ ಇದೆ) ಮತ್ತು ಪಾತ್ರದ ಕಥೆ. ಅವು ಇದಕ್ಕಿಂತಲೂ ಮೇಲಾಗಿ, ಶೈಲಿ ಮತ್ತು ಭಾವನೆಗಳಲ್ಲಿಯೂ ಇತರ ಎಲ್ಲಾ ಕಾವ್ಯಗಳನ್ನೂ ಮೀರಿಸುತ್ತವೆ.

ಆದರೆ ರುದ್ರನಾಟಕದೊಡನೆ ಹೋಲಿಸಿದಾಗ ಮಹಾಕಾವ್ಯದಲ್ಲಿ ಒಂದು ವ್ಯತ್ಯಾಸವು ಕಂಡುಬರುತ್ತದೆ, (೧) ಅದರ ಪ್ರಮಾಣದಲ್ಲಿ, ಮತ್ತು (೨) ಅದರ ಛಂದಸ್ಸಿನಲ್ಲಿ. (೧) ಅದರ ಪ್ರಮಾಣದ ವಿಷಯದಲ್ಲಿ ಹಿಂದೆ ಹೇಳಿರುವ[39] ಪರಿಮಿತಿಯೇ ಸಾಕು: ಕೃತಿಯ ಪ್ರಾರಂಭ ಮತ್ತು ಸಮಾಪ್ತಿಗಳನ್ನು ಒಂದು ನೋಟದಲ್ಲಿ ಗ್ರಹಿಸಲು ಸಾಧ್ಯವಾಗಿರಬೇಕು. ಪ್ರಾಚೀನ ಮಹಾಕಾವ್ಯಗಳಿಗಿಂತ ಚಿಕ್ಕದಾಗಿಯೂ, ಮತ್ತು ಒಂದು ಸಲ ಕುಳಿತಾಗ ನೋಡುವುದಕ್ಕಾಗಿ ಪ್ರದರ್ಶಿತವಾದ ರುದ್ರನಾಟಕ ಮಾಲೆಯಷ್ಟು ಸುಮಾರಾಗಿ ಕಾವ್ಯವೊಂದು ಉದ್ದವಾಗಿದ್ದರೆ ಈ ನಿಯಮವನ್ನು ಪಾಲಿಸಬಹುದು.[40] ಮಹಾಕಾವ್ಯವು ತನ್ನ ವೈಶಾಲ್ಯವನ್ನು ಹೆಚ್ಚಿಸಲು, ಅದಕ್ಕೊಂದು

---

[37] ಅಧ್ಯಾಯ ೧೦ ನ್ನು ನೋಡಿ. [38] ಅಧ್ಯಾಯ ೧೧ ನ್ನು ನೋಡಿ.

[39] ಎಂದರೆ, ೭ ನೆಯ ಅಧ್ಯಾಯದಲ್ಲಿ.

[40] ಎಂದರೆ, ಪ್ರಾಯಶಃ ಒಂದು ಹಬ್ಬದಲ್ಲಿ. ನಗರದ ಡಯೊನೈಸಸ್ ಹಬ್ಬದಲ್ಲಿ ಕಾವ್ಯಸ್ಪರ್ಧೆಯಲ್ಲಿ ಅವಕಾಶ ಕೊಡುತ್ತಿದ್ದುದು ಮೂರು ಜನಕ್ಕೆ ಮಾತ್ರ. ಅವರಲ್ಲಿ ಪ್ರತಿಯೊಬ್ಬರೂ ಮೂರು ರುದ್ರನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಮತ್ತು ಕ್ರಿ. ಪೂ. ಐದನೆಯ ಶತಮಾನದ ಅನಂತರ ಮೂರು ಸ್ಯಾಟಿರ್ ನಾಟಕಗಳನ್ನೂ ಪ್ರದರ್ಶಿಸುತ್ತಿದ್ದರು. ಒಂದು ಹಬ್ಬದಲ್ಲಿ ಇವುಗಳ ಒಟ್ಟು ಮೊತ್ತವು ಪ್ರಾಯಶಃ ಹದಿನೈದು ಅಥವಾ ಹದಿನಾರು ಸಾವಿರ ಪಂಕ್ತಿಗಳಾಗುತ್ತಿದ್ದುವು. ಇಲಿಯಡ್ ನ ಪಂಕ್ತಿಗಳ ಸಂಖ್ಯೆಯು ಹದಿನಾರರಿಂದ ಹದಿನೇಳು ಸಾವಿರದೊಳಗೆ ಇದೆ.

ವಿಶೇಷವಾದ ಅನುಕೂಲವಿದೆ, ಮತ್ತು ಅದನ್ನು ಅದು ಯಥೇಚ್ಛವಾಗಿ ಬಳಸುತ್ತಲೂ ಇದೆ. ನಾಟಕದಲ್ಲಿ ಕಾರ್ಯದ ಅನೇಕ ಭಾಗಗಳು ಏಕಕಾಲದಲ್ಲಿ ಜರುಗುತ್ತಿರುವಂತೆ ಪ್ರದರ್ಶಿಸಲು ಸಾಧ್ಯವಿಲ್ಲ; ಅದು ರಂಗದ ಮತ್ತು ನಟರ ಪರಿಮಿತಿಗೆ ಒಳಪಟ್ಟಿರುತ್ತದೆ. ಮಹಾಕಾವ್ಯದಲ್ಲಾದರೋ ಅದರ ಕಥನರೂಪವು ಸಮಕಾಲೀನವಾದ ಅನೇಕ ಸಂಗತಿಗಳನ್ನು ನಿರೂಪಿಸಲು ಸಾಧ್ಯವಾಗುವಂತೆ ಮಾಡುತ್ತದೆ; ಅವು ಅದರ ವಸ್ತುವಿಗೆ ಸಂಬಂಧಿಸಿದ್ದಲ್ಲಿ ಆ ಕಾವ್ಯದ ಗಾತ್ರವನ್ನು ಹೆಚ್ಚಿಸುತ್ತವೆ. ಆದ್ದರಿಂದ ಇದು ಮಹಾಕಾವ್ಯಕ್ಕೆ ಒಂದು ಲಾಭವೇ ಸರಿ, ಏಕೆಂದರೆ ಇದು ಮಹಾಕಾವ್ಯಕ್ಕೆ ಮಹತ್ವವನ್ನೂ, ರುಚಿ ವೈವಿಧ್ಯವನ್ನೂ, ಮತ್ತು ಬಗೆಬಗೆಯ ಪ್ರಸಂಗಗಳಿಗೆ ಅವಕಾಶವನ್ನೂ ಕೊಡುತ್ತದೆ. ಘಟನೆಯು ಒಂದೇ ರೀತಿಯಲ್ಲಿದ್ದರೆ ಅದು ಬಹಳ ಬೇಗ ಕಟ್ಟರೆಯನ್ನುಂಟುಮಾಡಿ ರುದ್ರನಾಟಕಗಳು ರಂಗದ ಮೇಲೆ ವಿಫಲವಾಗುವಂತೆ ಮಾಡಬಹುದು. (೨) ಅದರ ಛಂದಸ್ಸಿನ ವಿಷಯವಾಗಿ ಹೇಳುವುದಾದರೆ, ಹಿರಾಯಿಕ್ ಛಂದಸ್ಸು ಅದಕ್ಕೆ ಅನುಭವದಿಂದ ನಿಯೋಜಿತವಾಗಿದೆ. ಯಾರಾದರೂ ಕಥನ ಕಾವ್ಯವೊಂದನ್ನು ಇತರ ಛಂದಸ್ಸುಗಳಲ್ಲಿ ಯಾವುದಾದರೂ ಒಂದರಲ್ಲೋ ಅಥವಾ ಹಲವೊಲ್ಲೋ ರಚಿಸಲು ಪ್ರಯತ್ನಿಸಿದಾಗ ಅದರ ಅನೌಚಿತ್ಯವು ವ್ಯಕ್ತವಾಗುತ್ತದೆ.[41] ಹಿರಾಯಿಕ್ ಛಂದಸ್ಸು ವಾಸ್ತವವಾಗಿಯೂ ಛಂದಸ್ಸುಗಳಲ್ಲೆಲ್ಲಾ ಅತ್ಯಂತ ಗಂಭೀರವೂ, ಘನ [Weight]ವೂ ಆದುದು. ಅಪರಿಚಿತ ಪದಗಳು ಮತ್ತು ರೂಪಕಗಳಿಗೆ ಅವಕಾಶವು ಇತರ ಛಂದಸ್ಸುಗಳಿಗಿಂತಲೂ ಅದರಲ್ಲಿ ಹೆಚ್ಚಾಗಿರುವುದಕ್ಕೆ ಕಾರಣವೂ ಇದೇ. ಕಥನಕಾವ್ಯವು ಇತರ ಎಲ್ಲಾ ಕಾವ್ಯಪ್ರಕಾರಗಳಿಗಿಂತಲೂ ಮುಂದೆ ಹೋಗಿರುವ ಅಂಶಗಳಲ್ಲಿ ಇದೂ ಒಂದು. ಅಯಾಂಬಿಕ್ ಮತ್ತು ಟ್ರೋಕೇಯಿಕ್ ಛಂದಸ್ಸುಗಳಾದರೋ ಚಲನೆಯ [Movement] ಛಂದಸ್ಸುಗಳು: ಒಂದು ಜೀವನದ ಮತ್ತು ಕಾರ್ಯದ ಗತಿಯನ್ನೂ, ಇನ್ನೊಂದು ನೃತ್ಯದ ಗತಿಯನ್ನೂ ಅನುಕರಿಸುತ್ತದೆ[42]. ಕೆರಿಮೊನನು ಮಾಡಿದಂತೆ[43], ಬಗೆಬಗೆಯ ಛಂದಸ್ಸುಗಳನ್ನು ಕಲಬೆರಸಿ ಮಾಡಿದ ಛಂದಸ್ಸೊಂದರಲ್ಲಿ ಒಂದು ಮಹಾಕಾವ್ಯವನ್ನು ಯಾರಾದರೂ ರಚಿಸಿದ್ದಾದರೆ, ಅದು ಇನ್ನೂ ವಿಜಾತೀಯವಾಗಿ ಕಂಡುಬರುತ್ತದೆ. ಆದ್ದರಿಂದಲೇ ದೀರ್ಘವಾದ ಒಂದು ಕಥೆಯನ್ನು ಯಾರೂ ಹಿರಾಯಿಕ್ಕನ್ನುಳಿದ ಇನ್ನಾವ ಛಂದಸ್ಸಿ

---

[41] ಇದೇ ರೀತಿಯಲ್ಲಿಯೇ ಪ್ರಕೃತಿಯೇ ನಾಟಕದ ಸಂಭಾಷಣೆಗಳಿಗೆ ಅನುರೂಪವಾದ ಛಂದಸ್ಸನ್ನೊದಗಿಸಿತೆಂದು ೪ನೆಯ ಅಧ್ಯಾಯದಲ್ಲಿ ಹೇಳಿದೆ.

[42] ೪ ನೆಯ ಅಧ್ಯಾಯವನ್ನು ನೋಡಿರಿ.

[43] ೧ ನೆಯ ಅಧ್ಯಾಯವನ್ನು ನೋಡಿ.

ನಲ್ಲಿಯೂ ಬರೆದಿಲ್ಲ. ನಾವು ಹೇಳಿರುವಂತೆ, ಅಂತಹ ಕಥೆಗೆ ಅನುರೂಪವಾದ ಛಂದಸ್ಸನ್ನು ಆರಿಸಲು ಪ್ರಕೃತಿಯೇ ನಮಗೆ ಗುರುವಾಗಿದ್ದಾಳೆ.

ಹೋಮರನು ಇತರ ಎಲ್ಲಾ ಅಂಶದಲ್ಲಿಯೂ ಶ್ಲಾಘ್ಯನಾಗಿದ್ದರೂ, ಈ ವಿಷಯದಲ್ಲಂತೂ ಅವನು ಇನ್ನೂ ಹೆಚ್ಚಾಗಿ ಶ್ಲಾಘ್ಯನಾಗಿದ್ದಾನೆ. ಕಾವ್ಯದಲ್ಲಿ ಕವಿಯಿಂದ ಸ್ವಂತವಾಗಿ ನಿರ್ವಹಿಸಬೇಕಾದ ಪಾತ್ರವನ್ನು ಅರಿತಿರುವವನು ಮಹಾ ಕಾವ್ಯಕರ್ತೃಗಳ ನಡುವೆ ಅವನೊಬ್ಬನೇ. ಕವಿಯು ತಾನಾಗಿಯೇ ಮುಂದೆ ಬಂದು[44] ಬಹಳ ಸ್ವಲ್ಪ ಹೇಳಬೇಕು, ಏಕೆಂದರೆ ಹಾಗೆ ಮಾಡುತ್ತಿರುವಾಗ ಅವನು ಅನುಕರ್ತೃವಾಗಿರುವುದಿಲ್ಲ. ಇತರ ಕವಿಗಳು ಸರ್ವದಾ ತಾವೇ ಮುಂದೆ ಮುಂದೆ ಬರುತ್ತಾ, ಅನುಕರ್ತೃಗಳ ರೀತಿಯಲ್ಲಿ ಅತಿ ಸ್ವಲ್ಪವನ್ನೋ, ಮತ್ತು ಅದೂ ಸಹ ಅಲ್ಲಿ ಇಲ್ಲಿ ಮಾತ್ರ ಹೇಳಿದರೆ, ಹೋಮರನಾದರೋ ಸಂಕ್ಷೇಪವಾದೊಂದು ಪ್ರಸ್ತಾವನೆಯ ಅನಂತರ ಕೂಡಲೇ ಒಬ್ಬ ಗಂಡಸನ್ನೋ, ಒಬ್ಬಳು ಹೆಂಗಸನ್ನೋ ಅಥವಾ ಬೇರೆ ಯಾವುದಾದರೂ ಒಂದು ಪಾತ್ರವನ್ನೋ ತರುತ್ತಾನೆ. ಅವುಗಳಲ್ಲಿ ಯಾವುದೊಂದೂ ವ್ಯಕ್ತಿತ್ವಹೀನವಾಗಿರುವುದಿಲ್ಲ; ಪ್ರತಿಯೊಂದೂ ವಿಶೇಷ ಗುಣ ಗಳನ್ನು ಹೊಂದಿರುತ್ತವೆ.

ಅದ್ಭುತಗುಣವು [The Marvellous] ರುದ್ರನಾಟಕಕ್ಕೆ ನಿಜವಾಗಿಯೂ ಆವಶ್ಯಕವೇನೋ ಹೌದು. ಆದರೆ ಅದ್ಭುತದ ಮುಖ್ಯಾಂಶವಾದ ಅಸಂಭಾವ್ಯಕ್ಕೆ [Improbable] ಹೆಚ್ಚು ಅವಕಾಶವನ್ನು ಮಹಾಕಾವ್ಯವು ಕೊಡುತ್ತದೆ. ಏಕೆಂದರೆ ಅದರಲ್ಲಿ[45] ಪಾತ್ರಗಳು ನಮ್ಮ ಕಣ್ಣೆದುರಿಗಿರುವುದಿಲ್ಲ. ಹೆಕ್ಟರನನ್ನು ಬೆನ್ನಟ್ಟುವ ದೃಶ್ಯವು ರಂಗದ ಮೇಲೆ ಹಾಸ್ಯಾಸ್ಪದವಾಗುತ್ತದೆ—ಉದಾ. ಅವನನ್ನು ಹಿಂಬಾಲಿ ಸುವ ಬದಲು ಗ್ರೀಕರು ಸುಮ್ಮನೆ ನಿಂತುಬಿಡುವುದು, ಮತ್ತು ಅವರು ನಿಲ್ಲುವಂತೆ ಮಾಡಲು ಅಕಿಲಸನು ತಲೆಯಾಡಿಸುವುದು.[46] ಆದರೆ ಕಾವ್ಯದಲ್ಲಾದರೋ ಈ

---

[44] ಹೋಮರನ ಅನುಕರಣ ವಿಧಾನವು ಒಂದು ಸಲ ಕಥನರೂಪದಲ್ಲಿಯೂ ಮತ್ತು ಇನ್ನೊಂದು ಸಲ ಪಾತ್ರದ ಮೂಲಕವಾಗಿಯೂ ಇದೆಯೆಂದು ೩ ನೆಯ ಅಧ್ಯಾಯದಲ್ಲಿ ಹೇಳಿದೆ. ಇಲ್ಲಿ ಹೇಳುವುದು ಕಥನದ ಭಾಗವನ್ನಲ್ಲ, ಅವನು ತನ್ನ ಸ್ವಂತ ಬಾಯಿಂದ ಮಾಡಿರುವ ಕಾವ್ಯದೇವತೆಯ ಪ್ರಾರ್ಥನೆ ಮುಂತಾದುವುಗಳನ್ನುಳ್ಳ ಮುನ್ನುಡಿಗಳ ವಿಷಯ.

[45] ಎಂದರೆ ಮಹಾಕಾವ್ಯದಲ್ಲಿ.

[46] ಇಲಿಯಡ್ xxii. ೨೦೫ : ಈಸ್ಕಿಲಸನು ತಲೆಯಲ್ಲಾಡಿಸಿ ಆ ವೀರಯೋಧರು ಹೆಕ್ಟರನ ಮೇಲೆ ಬಾಣಬಿಡದಂತೆ ಸೂಚನೆ ಕೊಟ್ಟನು. ಏಕೆಂದರೆ ಅವರಲ್ಲಿ ಯಾರಾದರೂ ಹೆಕ್ಟರನನ್ನು ಮೊದಲು ಹೊಡೆದರೆ, ತಾನು ಎರಡನೆಯನವನಾಗಿಬಿಡುತ್ತಾನೆಂದು ಭಾವಿಸಿ ಹಾಗೆ ಮಾಡಿದನು. ಇದು ರಂಗದಮೇಲೆ ಬಹಳ ವಿಚಿತ್ರವಾಗಿ ಕಾಣುತ್ತದೆ.

ಅಸಂಗತವು ಲಕ್ಷ್ಯಕ್ಕೇ ಬರುವುದಿಲ್ಲ. ಅದ್ಭುತವು ಆಹ್ಲಾದಜನಕವೇನೋ ಹೌದು. ನಾವೆಲ್ಲರೂ ಕಥೆಯೊಂದನ್ನು ಹೇಳುವಾಗ ಕೇಳುತ್ತಿರುವವರಿಗೆ ಸಂತೋಷವನ್ನು ನೀಡುತ್ತೇವೆ ಎಂಬ ಭಾವನೆಯಿಂದ, ಅದಕ್ಕೆ ಏನೇನನ್ನೋ ಸೇರಿಸಿ ಹೇಳುವುದು ಇದನ್ನು ವ್ಯಕ್ತಪಡಿಸುತ್ತದೆ.

ಸುಳ್ಳುಸಂಗತಿಗಳನ್ನು ಸೂಕ್ತರೀತಿಯಲ್ಲಿ ಹೇಳುವ ಕೌಶಲವನ್ನು ಬೇರೆ ಎಲ್ಲರಿಗಿಂತಲೂ ಹೆಚ್ಚಾಗಿ ಹೋಮರನು ನಮಗೆ ಕಲಿಸಿದ್ದಾನೆ. ಎಂದರೆ ದುಷ್ಟಾನುಮಾನದ [Paralogism][47] ಪ್ರಯೋಗವನ್ನು ಎಂದು ನನ್ನ ಅರ್ಥ. ಒಂದು ವಸ್ತುವು (A) ಇದ್ದಾಗ ಅಥವಾ ಸಂಭವಿಸಿದಾಗಲೆಲ್ಲಾ ಅದರ ಫಲವಾಗಿ ಇನ್ನೊಂದು ವಸ್ತುವು (B) ಇದ್ದರೆ ಅಥವಾ ಸಂಭವಿಸಿದರೆ, ಎರಡನೆಯದು (B) ಇದ್ದರೆ ಮೊದಲನೆಯದೂ (A) ಕೂಡ ಇದ್ದೇ ಇರುತ್ತದೆಂದು ಜನಗಳ ಭಾವನೆಯು ಇರುತ್ತದೆ,—ಆದರೆ ಇದು ದುಷ್ಟಾನುಮಾನ. ಹೀಗೆಯೇ ಮೊದಲನೆಯದು (A) ಅಸತ್ಯವಾಗಿದ್ದು, ಅದನ್ನು ಸತ್ಯವೆಂದು ಪರಿಗ್ರಹಿಸಿದರೆ ಪ್ರಾಪ್ತವಾಗುವ ಇನ್ನಾವುದೋ ಎರಡನೆಯ ವಸ್ತುವು (B) ಸಿದ್ಧವಾಗಿದ್ದರೆ, ಆಗ ಎರಡನೆಯದನ್ನು (B) ಸೇರಿಸುವುದು ಸೂಕ್ತವಾದುದು. ಎರಡನೆಯದರ ಸತ್ಯವನ್ನು ನಾವು ಅರಿತಿದ್ದೇವೆಂಬ ಕಾರಣದ ಮಾತ್ರದಿಂದಲೇ, ನಾವು ನಮ್ಮ ಮನಸ್ಸಿನಲ್ಲಿಯೇ ಮೊದಲನೆಯದರ ಸತ್ಯವನ್ನು ಕುರಿತು ದುಷ್ಟಾನುಮಾನವನ್ನು

---

[47] ಭಾಷಣ ಶಾಸ್ತ್ರದಲ್ಲಿ ಅರಿಸ್ಟಾಟಲನು ಯಥೋಚಿತವಾದ ಉಚ್ಚಾರಣೆ, ಅಭಿನಯ, ಮತ್ತು ಶೈಲಿಗಳ ಪ್ರಾಮುಖ್ಯತೆಯನ್ನು ಹೇಳುತ್ತಿರುವಾಗ, ಈ ದುಷ್ಟಾನುಮಾನದ ಪ್ರಯೋಜನವನ್ನೂ ಹೇಳಿದ್ದಾನೆ. "ಭಾಷಣಕಾರನ ಮಾತುಗಳನ್ನು ಸತ್ಯವೆಂದು ಎಣಿಸಿ ಶ್ರೋತೃಗಳ ಬುದ್ಧಿಯು ಒಂದು ದುಷ್ಟಾನುಮಾನವನ್ನು ಮಾಡುತ್ತದೆ, ಏಕೆಂದರೆ ಅವನು ತೋರ್ಪಡಿಸಿಕೊಳುತ್ತಿರುವ ಸನ್ನಿವೇಶದಲ್ಲಿ ಜನರು ನಿಜವಾಗಿಯೂ ಇದ್ದಿದ್ದರೆ ಅವರು ಅವನಂತೆಯೇ ವರ್ತಿಸುವುದರಿಂದ, ವಿಷಯಗಳು ವಸ್ತುತಃ ಅವನು ಹೇಳುತ್ತಿರುವ ಹಾಗಿಲ್ಲದಿದ್ದರೂ ಹಾಗಿವೆಯೆಂದು ನಾವು ಭಾವಿಸಿಬಿಡುತ್ತೇವೆ". ಇಲ್ಲಿನ ದುಷ್ಟಾನುಮಾನವು ಹೀಗಿದೆ: ಅವನು ಹೇಳುತ್ತಿರುವುದು ನಿಜವಾಗಿದ್ದರೆ, ಅವನು ಕೋಪದಿಂದ ಸಿಡುಗುಟ್ಟುತ್ತಿದ್ದನು; ಆದರೆ ಈಗ ಅವನು ಹಾಗೆ ಮಾಡುತ್ತಿದ್ದಾನೆ. ಆದ್ದರಿಂದ ಅವನು ಹೇಳುತ್ತಿರುವುದು ನಿಜ. ಕಟ್ಟುಕಥೆಗಳ ಸತ್ಯಭ್ರಾಂತಿಯು ಇಂತಹುದೇ. ಕೊಳವೊಂದರಲ್ಲಿ ಇಳಿದರೆ, ಕಾಡೊಂದನ್ನು ಹೊಕ್ಕರೆ, ಗಿರಿಯೊಂದನ್ನು ಏರಿದರೆ, ನಾವು ನಾಗರ, ಗಾಂಧರ್ವ ಮುಂತಾದ ಅಮಾನುಷ ಲೋಕಗಳಿಗೆ ಹೋಗುತ್ತೇವೆಂದು ಎಣಿಸುತ್ತೇವೆ; ಈ ಕಥೆಗಳಲ್ಲಿ ನಾವು ನೋಡುವ ಲೋಕಗಳು ಅಂಥವೇ; ಆದ್ದರಿಂದ ಅವುಗಳು ಸತ್ಯವಾಗಿಯೂ ಇವೆಯೆಂದು ದುಷ್ಟಾನುಮಾನವನ್ನು ಮಾಡುತ್ತೇವೆ.

ಮಾಡಲು ತೊಡಗುತ್ತೇವೆ. **ಒಡಿಸ್ಸಿಯ ಸ್ನಾನದ-ಕಥೆಯಲ್ಲಿ**[48] ಇದಕ್ಕೆ ಒಂದು ನಿದರ್ಶನವಿದೆ.

ಅಸಂಭಾವ್ಯವಾದ ಸಾಧ್ಯತೆಗಿಂತಲೂ [Unconvincing possibility] ಸಂಭಾವ್ಯವಾದ ಅಸಾಧ್ಯತೆಯು [Likely impossibility] ಯಾವಾಗಲೂ ಗ್ರಾಹ್ಯವಾದುದು. ಕಥೆಯು ಯಾವಾಗಲೂ ಅಸಂಭವನೀಯವಾದ ಘಟನೆಗಳಿಂದ ಕೂಡಿರಬಾರದು; ಅದರಲ್ಲಿ ಆ ವಿಧವಾದುದು ಯಾವುದೂ ಇರಬಾರದು. ಆದರೆ ಅಂತಹ ಸಂಗತಿಗಳು ಅನಿವಾರ್ಯಗಳಾದರೆ, ಅವು ಕೃತಿಯ ಹೊರಗಡೆ ಇರಬೇಕು—ಉದಾ. **ಈಡಿಪಸ್**'ನಲ್ಲಿ ಲಾಯಿಯಸನ ಮರಣದ ಪರಿಸ್ಥಿತಿಗಳ ಅಜ್ಞಾನ. ಅವು ಕೃತಿಯ ಗರ್ಭದಲ್ಲಿ ಇರಬಾರದು: ಉದಾ. **ಎಲೆಕ್ಟ್ರಾ** ನಲ್ಲಿರುವ ಪಿಥಿಯದ ಕ್ರೀಡೆಗಳ ಕಥನ[49], ಅಥವಾ **ಮೈಸಿಯುದವರು** ಎಂಬುದರಲ್ಲಿರುವ ಟೆಗೆಯದಿಂದ ಮೈಸಿಯಕ್ಕೆ ದಾರಿಯಲ್ಲಿ ಒಂದು ಮಾತನ್ನೂ ಆಡದೆ ಬಂದು ತಲುಪಿದ ಮನುಷ್ಯನ ವೃತ್ತಾಂತ.[50] ಹೀಗಿರುವುದರಿಂದ ಅವುಗಳಿಲ್ಲದಿದ್ದರೆ ವಸ್ತುವಿಗೆ [Plot] ಕುಂದುಂಟಾಗುತ್ತಿತ್ತೆಂದು ಹೇಳುವುದು ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ ಈ ವಿಧದ ವಸ್ತುಗಳನ್ನು ರಚಿಸುವುದೇ ಮೂಲತಃ ತಪ್ಪಾದುದು. ಕವಿಯು ಈ ವಿಧದ ವಸ್ತುವೊಂದನ್ನು ಈಗಾಗಲೇ ತೆಗೆದುಕೊಂಡಿದ್ದು, ಅದನ್ನು ಇನ್ನೂ ಹೆಚ್ಚು ಸಂಭಾವ್ಯವಾದ ರೂಪದಲ್ಲಿ ರಚಿಸಬಹುದಾಗಿತ್ತೆಂದು ಯಾರಿಗಾದರೂ ಕಾಣಿಸಿದರೆ, ಅವನು ಅವಿವೇಕದ ಜೊತೆಗೆ ಕೌಶಲದ ದೋಷಕ್ಕೂ ಪಾತ್ರನಾಗುತ್ತಾನೆ. ಒಡಿಸ್ಸಿಯಲ್ಲಿಯೂ ಯೂಲಿಸಿಸನು ದಡ

---

48 ಸ್ನಾನದ—ಕಥೆಯಲ್ಲಿ (ಒಡಿಸ್ಸಿ ೧೯ ನೆಯ ಸರ್ಗ) ಯೂಲಿಸಿಸನು ಗ್ನೋಸಸನಿಂದ ಬಂದ ಕ್ರೀಟ್ ದೇಶದವನಂತೆ ವೇಷ ಧರಿಸಿಕೊಂಡು ಅವನ ಹೆಂಡತಿ ಪೆನೆಲೋಪೆಯ ಬಳಿಗೆ ಹೋಗುತ್ತಾನೆ. ಅವಳ ಗಂಡನು ಟ್ರಾಯ್‌ಗೆ ಹೋಗುವಾಗ ತನ್ನ ಅತಿಥಿಯಾಗಿದ್ದನೆಂದು ಅವಳಿಗೆ ಹೇಳಿ, ಯೂಲಿಸಿಸಿನ ವೇಷಭೂಷಣಗಳನ್ನೂ, ಸಂಗಡಿಗರನ್ನೂ ಅವಳೆದುರಿಗೆ ವರ್ಣಿಸುತ್ತಾನೆ. ಆಗ ಪೆನೆಲೊಪೆಯ ಆಲೋಚನೆಯು ಹೀಗೆ ಓಡುತ್ತದೆ: ಇವನ ಕಥೆಯು ನಿಜವಾಗಿದ್ದಲ್ಲಿ, ಇವನಿಗೆ ಈ ವಿವರಗಳೆಲ್ಲವೂ ಗೊತ್ತಿರಬೇಕು; ಇವು ಇವನಿಗೆ ಗೊತ್ತಿವೆ; ಆದ್ದರಿಂದ ಇವನ ಕಥೆಯು ನಿಜ.

49 ಸೋಪೋಕ್ಲಿಸನ ಎಲೆಕ್ಟ್ರಾದಲ್ಲಿ ಒರೆಸ್ಟಿಸನ ವೃದ್ಧಗುರುವು ಡೆಲ್ಪಿಯಲ್ಲಿ ರಥಗಳ ಪಂದ್ಯದಲ್ಲಿ ಒರೆಸ್ಟಿಸನು ಸತ್ತುಹೋದನೆಂಬ ಸುಳ್ಳುಸುದ್ದಿಯನ್ನು ಹೃದಯವಿದ್ರಾವಕ ರೀತಿಯಲ್ಲಿ ಹೇಳುತ್ತಾನೆ. ಆದರೆ ಒರೆಸ್ಟಿಸನ ಕಾಲದಲ್ಲಿ ಪಿಥಿಯದ ಕ್ರೀಡೆಗಳು ಇನ್ನೂ ಪ್ರಾರಂಭವೇ ಆಗಿಲ್ಲದುದರಿಂದ, ಈ ದೋಷವು ವಿಮರ್ಶಕರನ್ನು ಕೆರಳಿಸಿದ್ದಿರಬಹುದು, ಅಥವಾ ಆ ಸುದ್ದಿಯು ಒರೆಸ್ಟಿಸನ ಗುರುವು ಹೇಳುವುದಕ್ಕಿಂತ ಮೊದಲೇ ಗೊತ್ತಾಗದಿದ್ದುದು ಅಸಂಭವವೆಂದು ಕಂಡಿರಬಹುದು.

50 ಬಹುಶಃ ಇದು ಈಸ್ಕಿಲಸನ ಒಂದು ನಾಟಕವಿದ್ದಿರಬಹುದು. ಆ ವ್ಯಕ್ತಿಯ ಹೆಸರು ಟೆಲೆಫಸ್. ಈ ನಾಟಕವು ದೊರೆತಿಲ್ಲ.

ಸೇರಿದಾಗಿನ ಅಸಂಭಾವ್ಯಸಂಗತಿಗಳು[51] ಕುಕವಿಯೊಬ್ಬನ ಕೈಯಲ್ಲಿ ಅಸಹನೀಯವುವೇ ಆಗುತ್ತಿದ್ದುವು. ಈಗಿರುವುದರಲ್ಲಿ ಕವಿಯು ಅವುಗಳನ್ನು ಮರೆಮಾಡಿದ್ದಾನೆ. ಅವನ ಇತರ ಗುಣಾತಿಶಯಗಳು ಈ ಅಸಂಗತವನ್ನು ಮುಚ್ಚಿವೆ. ಕಾರ್ಯವು ಜರುಗದೆ, ಮತ್ತು ಶೀಲವಾಗಲೀ ಭಾವನೆಯಾಗಲೀ ಪ್ರದರ್ಶಿತವಾಗದಿರುವ ಸಂದರ್ಭಗಳಲ್ಲಿ ಮಾತ್ರ ವಿಜೃಂಭಿತವಾದ [Elaborate] ಶೈಲಿಯು ಅಗತ್ಯವೆನಿಸುತ್ತದೆ. ಆದರೆ ಶೀಲವೋ ಅಥವಾ ಭಾವನೆಯೋ ಇದ್ದಲ್ಲಿ, ಅತಿಯಾಗಿ ಅಲಂಕಾರಗಳಿಂದ ಕೂಡಿದ ಶೈಲಿಯು ಅವುಗಳನ್ನು ಮಸುಕುಮಾಡುತ್ತದೆ.

ಅಧ್ಯಾಯ ೨೫

ಸಮಸ್ಯೆಗಳು ಮತ್ತು ಅವುಗಳ ಪರಿಹಾರವನ್ನು ಕುರಿತು ಹೇಳುವುದಾದರೆ, ಅವುಗಳನ್ನು ಈ ಕೆಳಗೆ ಕಾಣುವ ರೀತಿಯಲ್ಲಿ ಪರೀಕ್ಷಿಸಿದರೆ ಅವುಗಳ ಕಾರಣಗಳ ಸ್ವರೂಪ ಮತ್ತು ಸಂಖ್ಯೆಗಳು ಗೊತ್ತಾಗುತ್ತವೆ. (೧) ಚಿತ್ರಕಾರನಂತೆ ಅಥವಾ ಇತರ ಪ್ರತಿಕೃತಿಕಾರನಂತೆಯೇ, ಕವಿಯೂ ಕೂಡ ಒಬ್ಬ ಅನುಕರ್ತೃವಾಗಿರುವುದರಿಂದ, ಅವನು ವಿಷಯಗಳನ್ನು ಎಲ್ಲಾ ಸಂದರ್ಭಗಳಲ್ಲಿಯೂ ಈ ಮೂರು ವಿಧಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಅವಶ್ಯವಾಗಿ ನಿರೂಪಿಸಬೇಕು: ಅವುಗಳು ಇದ್ದ ಅಥವಾ ಇರುವಹಾಗೆ; ಅವು ಇವೆಯೆಂದು ಅಥವಾ ಇದ್ದುವೆಂದು ಹೇಳಲಾದ ಅಥವಾ ಭಾವಿತವಾದಹಾಗೆ; ಅಥವಾ ಅವು ಇರಬೇಕಾದಹಾಗೆ.[52] (೨) ಅವನು ಇದೆಲ್ಲವನ್ನೂ ಭಾಷೆಯ ಮೂಲಕ ಮಾಡುತ್ತಾನೆ. ಅದರಲ್ಲಿ ಅವನು ಅಪರಿಚಿತಪದ, ರೂಪಕ, ಮತ್ತು ಪದಗಳ ಅನೇಕ ವಿಧವಾದ ವಿಕೃತರೂಪಗಳ ಮಿಶ್ರಣವನ್ನು ತರಬಹುದು, ಏಕೆಂದರೆ ಕಾವ್ಯದಲ್ಲಿ ಇವುಗಳ ಪ್ರಯೋಗವು ಸಮ್ಮತವಾಗಿವೆ[53]. (೩) ಇದೂ ಅಲ್ಲದೆ ಕಾವ್ಯದಲ್ಲಿನ ಸಾಧುತ್ವಾಂಶವು [Correctness] ರಾಜನೀತಿಯಲ್ಲಿಯೋ[54] ಅಥವಾ ಇನ್ನಾವ ಕಲೆಯಲ್ಲಿಯೋ ಇರುವ ಸಾಧುತ್ವದ ವಿಧದ್ದಲ್ಲವೆಂಬುದನ್ನು ಗಮನದಲ್ಲಿಡಬೇಕು. ಆದರೆ ಕಾವ್ಯದ ವ್ಯಾಪ್ತಿಯೊಳಗೇ ಎರಡು ವಿಧವಾದ

---

51 ಒಡಿಸ್ಸಿಯ ೧೩ ನೆಯ ಅಧ್ಯಾಯದಲ್ಲಿ ಯೂಲಿಸಿಸನು ನಿದ್ರಿಸುತ್ತಿದ್ದಾಗಲೇ, ಅವನ ಸಂಗಡಿಗರು ಅವನನ್ನು ಹಡಗಿನಿಂದ ಕೆಳಗಿಳಿಸುತ್ತಾರೆ.

52 ಅಧ್ಯಾಯ ೨ ನ್ನು ನೋಡಿ.

53 ಅಧ್ಯಾಯ ೨೧ ನ್ನು ನೋಡಿ.

54 ಪದಕ್ಕೆ ಗ್ರೀಕ್ ಭಾಷೆಯಲ್ಲಿ ವಿಶಾಲವಾದ ಅರ್ಥವಿದೆ, ಅದು ಸಮಾಜಧರ್ಮ, ಲೋಕನೀತಿಗಳನ್ನು ಒಳಗೊಂಡಿದೆ. ಈಡಿಪಸ್ ಅಥವಾ ಒಥೆಲೋ ಮಹತ್ತಾದ ದೋಷಗಳಿಂದ ಕೂಡಿರಬಹುದು. ಆದರೂ ಅವರು ನಾಟಕದಲ್ಲಿ ಉತ್ತಮ "ನಾಯಕ"ರೆನಿಸಬಹುದು.

ದೋಷಗಳು ಸಂಭವಿಸಬಹುದು: ಒಂದು ಆ ಕಲೆಗೆ ಸಾಕ್ಷಾತ್ತಾಗಿಯೂ, ಇನ್ನೊಂದು ಪ್ರಾಸಂಗಿಕವಾಗಿಯೂ ಸಂಬಂಧಿಸಿದ್ದು. ಒಬ್ಬ ಕವಿಯು ಒಂದು ವಸ್ತುವನ್ನು ಯಥಾವಿಧವಾಗಿ ವರ್ಣಿಸಲು ಉದ್ದೇಶಿಸಿ, ನಿರೂಪಣಾಶಕ್ತಿಯ ಅಭಾವದಿಂದ ವಿಫಲನಾದರೆ, ಅಲ್ಲಿನ ದೋಷ ಅವನ ಕಲೆಯದೇ. ಆದರೆ ಅವನು ಅದನ್ನು ಉದ್ದೇಶಪೂರ್ವಕವಾಗಿಯೇ ಯಾವುದೋ ಒಂದು ರೀತಿಯಲ್ಲಿ ತಪ್ಪಾಗಿ ವರ್ಣಿಸಲು ಹೊರಟಿದ್ದರಿಂದ[55] (ಉದಾ. ಚಲಿಸುತ್ತಿರುವ ಕುದುರೆಯೊಂದು ಅದರ ಬಲಗಾಲುಗಳೆರಡನ್ನೂ ಮುಂಚಾಚಿರುವಂತೆ ಮಾಡುವುದು) ಆ ತಾಂತ್ರಿಕವಾದ (ಎಂದರೆ, ವೈದ್ಯಕ್ಕೆ ಅಥವಾ ಇನ್ನಾವುದಾದರೂ ಶಾಸ್ತ್ರವಿಶೇಷಕ್ಕೆ ಸಂಬಂಧಿಸಿದ) ದೋಷ ಅಥವಾ ಇನ್ನು ಯಾವುದಾದರೂ ರೀತಿಯ ಅಸಂಭಾವ್ಯಗಳು ಅವನ ವರ್ಣನೆಯಲ್ಲಿ ಸೇರಿದ್ದರೆ, ಆ ಸಂದರ್ಭದಲ್ಲಿ ಅವನ ದೋಷವು ಕಾವ್ಯಕಲೆಯ ಮೂಲತತ್ತ್ವಗಳಿಗೆ ಸಂಬಂಧಿಸಿರುವುದಿಲ್ಲ. ಆದ್ದರಿಂದ ಸಮಸ್ಯೆಗಳ ವಿಷಯವಾಗಿರುವ ಟೀಕೆಗಳಿಗೆ ಉತ್ತರವಾಗಿ ಕೊಡುವ ಸಮಾಧಾನಗಳಿಗೆ ಇವುಗಳನ್ನು ಆಧಾರವಾಗಿ ಇಟ್ಟುಕೊಳ್ಳಬೇಕು.

I. ಕವಿಯ ಕಲೆಗೇ ಸಂಬಂಧಿಸಿದ ಟೀಕೆಗಳ ವಿಷಯವನ್ನು ತೆಗೆದುಕೊಳ್ಳೋಣ. ಅವನು ವಸ್ತುಗಳನ್ನು ವರ್ಣಿಸಿರುವುದರಲ್ಲಿ ಇರಬಹುದಾದ ಅಸಾಧ್ಯವೆನಿಸುವುಗಳೆಲ್ಲವೂ ದೋಷಗಳು. ಆದರೆ ಇನ್ನೊಂದು ದೃಷ್ಟಿಯಲ್ಲಿ, ಅವು ಕಾವ್ಯದ ಉದ್ದೇಶವನ್ನು ಪೋಷಿಸುತ್ತಿದ್ದರೆ—(ನಾವು ಆ ಉದ್ದೇಶದ ವಿಷಯವಾಗಿ ಹಿಂದೆ ಹೇಳಿರುವುದನ್ನು ಒಪ್ಪಿಕೊಂಡಲ್ಲಿ) ಅವು ಆ ಕೃತಿಯ ಯಾವುದಾದರೂ ಒಂದು ಭಾಗದ ಪ್ರಭಾವವನ್ನು ಹೆಚ್ಚು ಅದ್ಭುತವನ್ನಾಗಿ ಮಾಡಿದರೆ—ಅವು ಸಮರ್ಥನೀಯಗಳಾಗುತ್ತವೆ. ಹೆಕ್ಟರನನ್ನು ಬೆನ್ನಟ್ಟುವ ಸಂಗತಿಯು ಇದಕ್ಕೆ ಒಂದು ನಿದರ್ಶನವಾಗಿದೆ. ಆದರೆ ಇಂತಹ ಸಂದರ್ಭಗಳಲ್ಲಿ ತಾಂತ್ರಿಕವಾದ ಯಥಾರ್ಥತೆ [Technical Correctness] ಯನ್ನು ತ್ಯಜಿಸದೆ, ಕಾವ್ಯದ ಉದ್ದೇಶವನ್ನು ಅಷ್ಟೇ ಚೆನ್ನಾಗಿ ಅಥವಾ ಇನ್ನೂ ಉತ್ತಮವಾಗಿ ಸಾಧಿಸಬಹುದೆಂದೆನಿಸಿದರೆ, ಆಗ ಆ ಅಸಾಧ್ಯತೆಯ ಅಂಶವನ್ನು

---

[55] ಎಂದರೆ ಅವನ ಮೂಲಭಾವನೆಯೇ ದೋಷಯುಕ್ತವಾಗಿರಬಹುದು, ಆದರೆ ಅವನು ತನ್ನ ಭಾವನೆಯನ್ನು ಪರಿಣಾಮಕಾರಿಯಾಗುವಂತೆ ನಿರೂಪಿಸಿದ್ದೇ ಆದರೆ, ಅವನ ದೋಷವು ಕಲೆಗೆ ಸಂಬಂಧಿಸಿರುವುದಿಲ್ಲ. ಅರಿಸ್ಟಾಟಲನು ಮುಂದೆ ಹೇಳುವಂತೆ, ಹೆಣ್ಣು ಜಿಂಕೆಯೊಂದನ್ನು ಗುರುತಿಸಲಾಗದಂತೆ ಚಿತ್ರಿಸುವುದಕ್ಕಿಂತಲೂ ಅದಕ್ಕೆ ಕೊಂಬುಗಳಿರುವಂತೆ ಚಿತ್ರಿಸುವುದು ಕಲೆಯ ದೃಷ್ಟಿಯಿಂದ, ಕಡಿಮೆಯಾದ ದೋಷ. ಆ ದೋಷವು ಕಲೆಯ ತಂತ್ರಕ್ಕೆ ಸಂಬಂಧಿಸಿದ್ದಲ್ಲ, ಪ್ರಾಣಿಶಾಸ್ತ್ರ (Zoology) ಕ್ಕೆ ಸಂಬಂಧಿಸಿದ್ದು. ಇದೇ ತತ್ತ್ವವನ್ನು ಇಂದಿನ "ಅನನುಕರಣ" (Non-representational) ಕಲೆಗಳಿಗೂ ಅನ್ವಯಿಸಬಹುದು.

ಸಮರ್ಥಿಸಬಾರದು, ಏಕೆಂದರೆ ವರ್ಣನೆಯು, ಸಾಧ್ಯವಿದ್ದಲ್ಲಿ, ಸಂಪೂರ್ಣವಾಗಿ ದೋಷ ವರ್ಜಿತವಾಗಿರಬೇಕು. ಒಂದು ವಿಷಯದಲ್ಲಿರುವ ದೋಷವು ಕಾವ್ಯಕಲೆಗೆ ಸಾಕ್ಷಾತ್ತಾಗಿ ಸಂಬಂಧಿಸಿದುದೋ ಅಥವಾ ಕೇವಲ ಆಕಸ್ಮಿಕವಾಗಿಯೋ ಎಂದು ಕೂಡ ಯಾರಾದರೂ ಕೇಳಬಹುದು. ಏಕೆಂದರೆ, ದೃಷ್ಟಾಂತಕ್ಕೆ, ಹೆಣ್ಣು ಜಿಂಕೆಯನ್ನು ಗುರುತಿಸಲಾಗದಂತೆ ಚಿತ್ರಿಸುವುದಕ್ಕಿಂತಲೂ, ಅದಕ್ಕೆ ಕೊಂಬುಗಳಿಲ್ಲವೆಂದು ಗೊತ್ತಿಲ್ಲದಿರುವುದು ಕಲೆಗಾರನಲ್ಲಿ ಕಡಿಮೆಯಾದ ದೋಷ.

II. ಕವಿಯ ನಿರೂಪಣೆಯು ಯಥಾರ್ಥವಾಗಿಲ್ಲವೆಂದು ಯಾರಾದರೂ ಆಕ್ಷೇಪಿಸಿದರೆ, ಆ ವಸ್ತುವು ನಿರೂಪಿತವಾಗಿರುವಂತೆ ಇರಬೇಕು ಎಂದು ವಾದಿಸಬಹುದು. ಈ ಉತ್ತರವು ಸೋಫೋಕ್ಲಿಸನು ಕೊಟ್ಟ ಉತ್ತರದಂತಹುದು: ತಾನು ಜನರನ್ನು ಅವರು ಇರಬೇಕಾದ ಹಾಗೆ[56] ಚಿತ್ರಿಸಿದನೆಂದೂ, ಯೂರಿಪಿಡೀಸನು ಅವರು ಇದ್ದ ಹಾಗೆ ಚಿತ್ರಿಸಿದನೆಂತಲೂ ಹೇಳಿದನು. ಆದರೆ ನಿರೂಪಣೆಯು ಯಥಾರ್ಥವಾಗದೆಯೂ ಮತ್ತು ವಸ್ತುವಿನ ಇರಬೇಕಾದ ರೂಪದ್ದೂ ಆಗಿರದಿದ್ದರೆ, ಆಗ ಅದು ಲೋಕಸಮ್ಮತವಾಗಿ ಇದೆ ಎನ್ನುವುದೇ ಅದಕ್ಕೆ ಉತ್ತರ. ಉದಾಹರಣೆಗೆ, ದೇವತೆಗಳ ವಿಷಯದಲ್ಲಿರುವ ಕಥೆಗಳು ಕ್ಸೆನೊಫಾನನು[57] ಭಾವಿಸುವಷ್ಟು ತಪ್ಪಾಗಿರಬಹುದು—ಅವು ಸತ್ಯವೂ ಅಲ್ಲ ಅಥವಾ ಹೇಳಲು ಉತ್ತಮವಾದುವೂ ಅಲ್ಲ. ಆದರೆ ನಿಜವಾಗಿಯೂ ಅವು ಲೋಕಾಭಿಮತವಾಗಿವೆ. ಕಾವ್ಯದಲ್ಲಿರುವ ಇತರ ವಾಕ್ಯಗಳ ವಿಷಯದಲ್ಲಿ ಅವು ವಸ್ತುಸ್ಥಿತಿಗಿಂತಲೂ ಉತ್ತಮವಾಗಿದೆಯೆಂದು ಹೇಳದಿದ್ದರೂ, ಆ ಕಾಲದಲ್ಲಿ ವಸ್ತುಸ್ಥಿತಿಯು ಹಾಗಿದ್ದಿತೆಂದು ನಾವು ಹೇಳಬಹುದು. ಉದಾಹರಣೆಗೆ ಶಸ್ತ್ರಗಳ ವರ್ಣನೆ: "ಅವರ ಈಟಿಗಳು ನೆಟ್ಟಗೆ ಅವುಗಳ ತುದಿಗಳು ನೆಲದ ಮೇಲಿರುವಂತೆ ನಿಂತಿದ್ದವು"; ಏಕೆಂದರೆ ಅವುಗಳನ್ನು ಸಾಮಾನ್ಯವಾಗಿ ನಿಲ್ಲಿಸುತ್ತಿದ್ದ ವಿಧಾನವು ಆಗಿನ ಕಾಲದಲ್ಲಿ ಇದೇ ಆಗಿದ್ದಿತು; ಇಲ್ಲಿರಿಯದವರಲ್ಲಿ ಇಂದಿಗೂ ಅದು ಹೀಗೆಯೇ ಇದೆ.[58] ಕಾವ್ಯವೊಂದರಲ್ಲಿ ನುಡಿದಿರುವ ಅಥವಾ

56 ಎಂದರೆ, ಅವರ ಆದರ್ಶರೂಪವನ್ನು.

57 ಕ್ರಿ. ಪೂ. ೬ ನೆಯ ಶತಮಾನದ ದಾರ್ಶನಿಕ ಕ್ಸೆನೊಫಾನನು ಹೋಮರನ ಪುರಾಣಗಳಲ್ಲಿ ಕಂಡುಬರುವ ಮನುಷ್ಯರನ್ನು ಹೋಲುವ ದೇವತೆಗಳು ಮತ್ತು ಅವರ ಅನೈತಿಕ ಚರ್ಯೆಗಳನ್ನು ಒಳಗೊಂಡಿದ್ದ ಮತವನ್ನು ಖಂಡಿಸಿದನು. ಆದರೆ ಕವಿಯು ತಾನು ಸಂಪ್ರದಾಯವನ್ನು ಅನುಸರಿಸುತ್ತಿದ್ದೇನೆಂದು ಹೇಳಿಬಿಡಬಹುದು. ಏಕೆಂದರೆ ಈ ಭಾವನೆಗಳು ಸಂಪ್ರದಾಯಸಮ್ಮತವಾಗಿದ್ದುವು.

58 ಇಲಿಯಡ್ x. ೧೫೨ ಈ ರೀತಿ ಈಟಿಗಳನ್ನು ನಿಲ್ಲಿಸುವುದು ಸರಿಯಲ್ಲ. ಏಕೆಂದರೆ ರಾತ್ರಿಯ ಹೊತ್ತಿನಲ್ಲಿ ಅವು ಕೆಳಗೆ ಬಿದ್ದು ಗಾಬರಿಯನ್ನುಂಟುಮಾಡಬಹುದು. ಆದರೆ ಹಿಂದೆ ಹೀಗೆಯೇ ಇದ್ದಿತೆಂದು ಕವಿಯು ಉತ್ತರ ಕೊಟ್ಟುಬಿಡಬಹುದು.

ನಡೆದಿರುವ ಯಾವುದಾದರೂ ಒಂದು ನೈತಿಕವಾಗಿ ಸರಿಯೇ ಅಥವಾ ಅಲ್ಲವೇ ಎಂಬ ಪ್ರಶ್ನೆಯ ವಿಷಯಕ್ಕೆ, ಅದನ್ನು ವಿಮರ್ಶಿಸುವಾಗ ಪ್ರಸ್ತುತವಾದ ಮಾತಿನ ಅಥವಾ ಕ್ರಿಯೆಯ ಸ್ವರೂಪಗುಣವನ್ನು ಮಾತ್ರವೇ ಅಲ್ಲದೆ, ಅದನ್ನು ಆಡುವ ಅಥವಾ ಮಾಡುವ ವ್ಯಕ್ತಿ, ಅವನು ಅದನ್ನು ಕುರಿತು ಹೇಳುವ ಅಥವಾ ಮಾಡುವ ವ್ಯಕ್ತಿ, ಅದರ ಕಾಲ, ಅದರ ಸಾಧನ, ಮತ್ತು ಅದರ ಕರ್ತೃವಿನ ಉದ್ದೇಶ—ಎಂದರೆ ಮಹತ್ತಾದ ಪುಣ್ಯವೊಂದನ್ನು ಗಳಿಸಲೋ ಅಥವಾ ಮಹತ್ತಾದ ಪಾಪವೊಂದ ರಿಂದ ಪಾರಾಗಲೋ ಅವನು ಅದನ್ನು ಮಾಡುತ್ತಾನೆಯೇ ಎಂಬುದು—ಇವು ಗಳನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕು.

III. ಕವಿಯ ಭಾಷಾಪ್ರಯೋಗವನ್ನು ಗಮನಿಸುವುದರಿಂದ ಉಳಿದ ಆಕ್ಷೇಪ ಗಳಿಗೆ ಉತ್ತರವನ್ನು ಕೊಡಬೇಕು; (೧) ಕಾವ್ಯದ ಆ ಭಾಗದಲ್ಲಿ ಅಪರಿಚಿತಪದದ ಪ್ರಯೋಗವಿದೆಯೆಂದು ಭಾವಿಸುವುದರಿಂದ: ಉದಾ. **ಊರೇಯುಸ್ ಮೆನ್ ಪ್ರೋತೊನ್** ಎಂಬಲ್ಲಿ **ಊರೇಯುಸ್** ಎಂದರೆ ಹೋಮರನ ಅರ್ಥವು ಹೇಸರಕತ್ತೆ ಗಳು ಎಂದಲ್ಲದೆ ಪಹರೆಯುವರು ಎಂದು ಇದ್ದಿರಬಹುದು[59] ಡೋಲೊನನ ವಿಷಯ ವಾಗಿ **ಹೋಸ್ ರ್‍ಹ ತೊಯ್ ಐದೊಸ್ ಮೆನ್ ಏನ್ ಕಕೊಸ್**[60] ಎಂದಿರುವಲ್ಲಿ ಪ್ರಾಯಶಃ ಅವನ ಅರ್ಥವು ಡೊಲೊನನ ದೇಹವು ವಿಕಾರವಾದ್ದಿತು ಎಂಬುದಲ್ಲದೆ, ಅವನ ಮುಖವು ಸುಂದರವಾಗಿರಲಿಲ್ಲ ಎಂದಿರಬಹುದು. ಏಕೆಂದರೆ ಸುಂದರವಾದ ಮುಖವುಳ್ಳವನು ಎಂಬುದಕ್ಕೆ ಕ್ರೀಟಿನರಲ್ಲಿ **ಯೂಐಡೇಸ್** ಎಂಬ ಶಬ್ದ ವಿದೆ. ಹೀಗೆಯೇ **ಸೋರೊತೆರೊನ್ ದೆ ಕೆರೈ**[61] ಎಂದರೆ ಕುಡುಕರಿಗೋ ಎಂಬಂತೆ "ಮದ್ಯವನ್ನು ತೀಕ್ಷ್ಣವಾಗಿರುವಂತೆ ಬೆರಸು" ಎಂದಲ್ಲದೆ; "ಅದನ್ನು ಉಲ್ಲಾಸಕೊಡುವಂತೆ ಬೆರಸು"

---

59 ಇಲಿಯಡ್ I. ೫೦ : "ಅವನು ಮೊದಲು ಹೇಸರಕತ್ತೆಗಳ ಮತ್ತು ವೇಗವಾಗಿ ಓಡುವ ಬೇಟೆನಾಯಿಗಳ ಮೇಲೆ ತನ್ನ ಬಾಣಗಳನ್ನು ಬಿಟ್ಟನು." ಅಪಾಲೋ ದೇವತೆಯು ಗ್ರೀಕರ ಮಧ್ಯೆ ರೋಗಗಳನ್ನು ಹರಡುತ್ತಿರುವ ದೃಶ್ಯದ್ದು. "ದೇವತೆಯೊಬ್ಬನ ಶಕ್ತಿಗೆ ಇದು ಬಹಳ ತೃಣಪ್ರಾಯವಾದ ಕಾರ್ಯ"ವೆಂದು "ಹೋಮರನಿಗೆ ಯಮ"ನೆಂದೆನಿಸಿದ್ದ ಝೊಯಿಲ ಸನು ಇದನ್ನು ಹಾಸ್ಯಮಾಡಿದನು. ಇದಕ್ಕೆ ಉತ್ತರ ಮೊದಲನೆಯ ಪದದ ಅರ್ಥ "ಪಹರೆಯುವರು" ಎನ್ನುವುದು—ಆದರೂ ಬೇಟೆನಾಯಿಗಳ ಖಂಡನೆಯೂ ಹಾಗೆಯೇ ಉಳಿದಿರುತ್ತದೆ.

60 ಇಲಿಯಡ್ X. ೩೧೬ : "ದೇಹವು ಬಹಳವಾಗಿ ದೋಷಯುಕ್ತವಾಗಿದ್ದರೂ ವೇಗ ವಾಗಿ ಓಡುತ್ತಿದ್ದವನು". ಡೊಲೊನನ ದೇಹವು ಸರಿಯಾಗಿರದಿದ್ದರೆ ಅವನು ವೇಗವಾಗಿ ಓಡು ಲಾಗುತ್ತಿರಲಿಲ್ಲ. ಆದರೆ ಕವಿಯ ಅರ್ಥ ಅವನ ಮುಖವು ದೋಷಗಳಿಂದ ಕೂಡಿದ್ದಿತು ಎಂದಷ್ಟೇ ಇರಬಹುದು.

61 ಇಲಿಯಡ್ IX. ೨೦೨.

ಎಂದಾಗಬಹುದು. (೨) ಹೋಮರಿನ ಇತರ ಪದಪ್ರಯೋಗಗಳನ್ನು ಲಾಕ್ಷಣಿಕವೆಂದು ಹೇಳಬಹುದು. ಉದಾ—"ಅಂದು ಇಡೀ ರಾತ್ರಿ ಎಲ್ಲಾ ದೇವತೆಗಳೂ, ಮನುಷ್ಯರೂ ಮಲಗಿದ್ದರು" ಎಂಬ ವಾಕ್ಯವನ್ನು ಅವನು ಅದೇ ಸಂದರ್ಭದಲ್ಲಿಯೇ ಹೇಳುವ: "ಅವನು ತನ್ನ ಕಣ್ಣನ್ನು ಟ್ರೋಜನರ ಪಾಳೆಯದ ಕಡೆಗೆ ತಿರುಗಿಸಿದಾಗ ಅನೇಕ ಸಲ ಕೊಳಲು ಮತ್ತು ವಾಲಗಗಳ ಶಬ್ದಗಳನ್ನು ಕೇಳಿ ಆಶ್ಚರ್ಯಪಟ್ಟನು"[62] ಎಂಬುದರೊಡನೆ ಹೋಲಿಸಿದರೆ, "ಎಲ್ಲಾ" ಎಂಬ ಪದವು ಲಾಕ್ಷಣಿಕವಾಗಿ "ಬಹಳ" ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಏಕೆಂದರೆ "ಎಲ್ಲಾ" ಎನ್ನುವುದು "ಬಹುತ್ವ"ದ ಒಂದು ಪ್ರಕಾರ. ಹೀಗೆಯೇ ಅವನ "ಅವಳೊಬ್ಬಳು ಮಾತ್ರ ಭಾಗವಹಿಸುವುದಿಲ್ಲ" ಎಂಬುದೂ ಲಾಕ್ಷಣಿಕ ಪ್ರಯೋಗವೇ. ಏಕೆಂದರೆ ಅತ್ಯಂತ ಪ್ರಸಿದ್ಧವಾದುದು "ಏಕಮಾತ್ರ"ವೂ ಆಗಿರುತ್ತದೆ.[63] (೩) ಹಿಪ್ಪಿಯಸನು ಸೂಚಿಸಿದಂತೆ, ಪದವೊಂದನ್ನು ಓದುವ ರೀತಿಯಲ್ಲಿ ವ್ಯತ್ಯಾಸವನ್ನು ಮಾಡಿದರೆ "ನಾವು ಅವನಿಗೆ ವರವಿತ್ತಿದ್ದೇವೆ" ಮತ್ತು "ಮಳೆಯಲ್ಲಿ ಕೊಳೆಯದಿರುವ" ಎಂಬಲ್ಲಿರುವ ತೊಡಕನ್ನು ಪರಿಹರಿಸಬಹುದು.[64] (೪) ವಿರಾಮಸ್ಥಾನ (Punctuation) ವನ್ನು

---

62 ಈ ಎರಡು ಪಂಕ್ತಿಗಳು ಇಲಿಯಡ್ i i. ೧, ೨ (ಇದು ಇಲಿಯಡ್ X. 1, 2 ಕ್ಕೆ ತಪ್ಪಾಗಿ ಉಲ್ಲೇಖಿತವಾಗಿವೆ), ಮತ್ತು ಇಲಿಯಡ್ X. 13, 14. ಎಲ್ಲರೂ ಮಲಗಿದ್ದಾರೆಂದರೆ, ಈ ಶಬ್ದಗಳನ್ನು ಯಾರು ಮಾಡುತ್ತಿದ್ದಾರೆ ಎಂಬ ಪ್ರಶ್ನೆಯೇ ಇಲ್ಲಿನ ಭಾವ.

63 ಇಲಿಯಡ್ XVIII. ೪೮೯ ರಲ್ಲಿ ಸಪ್ತರ್ಷಿಮಂಡಲವನ್ನು "ಅವಳೊಬ್ಬಳೇ ಸಮುದ್ರಸ್ನಾನದಲ್ಲಿ ಭಾಗವಹಿಸುವುದಿಲ್ಲ" ಎಂದರೆ ಅಸ್ತವಿಸುವುದಿಲ್ಲ, ಎಂದು ವರ್ಣಿಸಿದೆ. ಇದಕ್ಕೆ ಆಕ್ಷೇಪ: ಅಂತಹ ಬೇರೆ ನಕ್ಷತ್ರಮಂಡಲಗಳೂ ಇವೆ. ಇದಕ್ಕೆ ಉತ್ತರ: ಅಂತಹವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಸಪ್ತರ್ಷಿಮಂಡಲ; 'ಅತ್ಯಂತ ಪ್ರಸಿದ್ಧವಾದುದು' ಏಕಮಾತ್ರದ ಒಂದು ವಿಧ; ಇಲ್ಲಿ ಜಾತಿಪದವನ್ನು ವ್ಯಕ್ತಿವಾಚಕದ ಸ್ಥಾನದಲ್ಲಿ ಲಾಕ್ಷಣಿಕವಾಗಿ ಬಳಸಿದೆ (೨೧ ನೇ ಅಧ್ಯಾಯ ನೋಡಿ).

64 "ಓದುವ ರೀತಿ" ಎಂದರೆ ಉಚ್ಚಾರಣೆ, ಧ್ವನಿ, ಸ್ವರ ಮುಂತಾದುವು. ಮೊದಲನೆಯ ಪಂಕ್ತಿಯು ಇಲಿಯಡ್‌ನ ಎರಡನೆಯ ಸರ್ಗದ ಪ್ರಾರಂಭದಲ್ಲಿದೆ, ಆದರೆ ಲಬ್ಧವಾಗಿರುವ ಪಾಠಕ್ಕಿಂತ ಬೇರೆಯಾಗಿದೆ. ಅಗೆಮೆಮ್ನಾನನನ್ನು ಮೋಸಗೊಳಿಸಲು ಝ್ಯೂಸನು ಅವನಿಗೊಂದು "ಕೆಟ್ಟ ಕನಸ"ನ್ನು ಕಳುಹಿಸುವಾಗ, ಆ ಕನಸಿಗೆ "ಅವನು ಮಹತ್ತಾದ ಯಶಸ್ಸಿನ ಪ್ರಶಸ್ತಿಯನ್ನು ಗಳಿಸುವಂತೆ ಅವನಿಗೆ ನಾವು ವರವಿತ್ತಿದ್ದೇವೆ" ಎಂದು ಹೇಳುತ್ತಾನೆ. ಇದು ಝ್ಯೂಸನ ಬಾಯಲ್ಲಿ ಸುಳ್ಳಾಡಿಸಿದಂತಾಗುತ್ತದೆ. ಆದ್ದರಿಂದ ಉಚ್ಚಾರಣೆಯ ಸ್ವರವನ್ನು ಬದಲಾಯಿಸಬೇಕು. ಆಗ ಅದರ ಅರ್ಥವು "ನೀನು ಅವನಿಗೆ ವರವನ್ನು ಕೊಡು" ಎಂದಾಗುತ್ತದೆ. ಆಗ ಸುಳ್ಳು ಹೇಳುವುದು ಕನಸೇ ಹೊರತು, ಝ್ಯೂಸನಲ್ಲ!

ಎರಡನೆಯ ಉದಾಹರಣೆ ಇಲಿಯಡ್ xxiii. ೩೨೭: "ನೆಲದಿಂದ ಆರಡಿ ಮೇಲೆ

ಬದಲಾಯಿಸಿಕೊಂಡರೆ ಕೆಲವು ಸಮಸ್ಯೆಗಳು ಬಗೆಹರಿಯುತ್ತವೆ: ಉದಾ. "ಹಿಂದೆ ಅಮರವಾಗಿದ್ದುವೆಲ್ಲಾ ಕ್ಷಿಪ್ರದಲ್ಲಿಯೇ ಮರ್ತ್ಯವಾದುವು, ಮತ್ತು ಶುದ್ಧವಾದುವು ಹಿಂದೆ ಸಂಕರವಾದುವು" ಎಂಬ ಎಂಪಿಡೋಕ್ಲಿಸನ ವಾಕ್ಯದಲ್ಲಿ[65] ಅಥವಾ (೫) ಅನೇಕಾರ್ಥವುಳ್ಳಪದವೊಂದನ್ನು ಪರಿಗ್ರಹಿಸಿ: "ರಾತ್ರಿಯ ಎರಡು ಭಾಗಗಳಿಗಿಂತಲೂ ಹೆಚ್ಚಾಗಿ" ಎಂಬುದರಲ್ಲಿ "ಹೆಚ್ಚಾಗಿ" ಎಂಬುದು.[66] ಅಥವಾ (೬) ಭಾಷಾಸಂಪ್ರದಾಯವನ್ನು ಆಧಾರವಾಗಿ ಕೊಡುವುದರಿಂದಾಗಬಹುದು. ನೀರು ಮತ್ತು ಮದ್ಯದ ಮಿಶ್ರಣವನ್ನು ನಾವು "ಮದ್ಯ"ವೆಂದೇ ಕರೆಯುತ್ತೇವೆ. ಈ ತತ್ತ್ವವನ್ನೇ ಅನುಸರಿಸಿ ಹೋಮರನು "ಹೊಸದಾಗಿ ತಯಾರಿಸಿದ ತವರದ ಚರಬಿಕಳಪೆ" ಎಂದು ಪ್ರಯೋಗಿಸಿದ್ದಾನೆ.[67] ಕಬ್ಬಿಣದ ಕೆಲಸದವನನ್ನು ನಾವು "ಕಂಚುಗಾರ"ನೆಂದೇ ಕರೆಯುತ್ತೇವೆ. ಈ ನಿಯಮಕ್ಕನುಸಾರವಾಗಿಯೇ, ದೇವತೆಗಳು ಮದ್ಯವನ್ನು ಕುಡಿಯುದಿದ್ದರೂ, ಗಾನಿಮಿಡನನ್ನು ಝ್ಯೂಸಿನ "ಮದ್ಯವಾಹಕ"ನೆಂದು ವರ್ಣಿಸಿರುವುದು. ಆದರೆ ಈ ಕೊನೆಯದನ್ನು ರೂಪಕದ ಒಂದು ನಿದರ್ಶನವೆನ್ನಬಹುದು.[67A] ಆದರೆ ಒಂದು ಶಬ್ದವು ಯಾವುದಾದರೂ ಒಂದು ವಿರೋಧವನ್ನು ಸೂಚಿಸುವಂತಿದ್ದಾಗಲೂ, ಆ ಸಂದರ್ಭದಲ್ಲಿ ಅದನ್ನು ಎಷ್ಟುರೀತಿಗಳಲ್ಲಿ ಅರ್ಥಮಾಡಿಕೊಳ್ಳಬಹುದೆಂಬುದನ್ನು ಆಲೋಚಿಸುವುದು ಆವಶ್ಯಕ: ಉದಾ. ಹೋಮರನ

ಒಂದು ಒಣಗಿಕೊಂಡಿರುವ, ಆದರೆ ಮಳೆಯಲ್ಲಿ ಕೊಳೆಯದಿರುವ, ಒಂದು ಓಕ್ ಅಥವಾ ಪೈನ್ ಮರದ ಬುಡವಿದೆ''. ಇದು ಸ್ವಲ್ಪ ನಂಬಿಕೆಗೆ ಮೀರಿದ್ದೆಂದು ಕಂಡರೆ, ಇಲ್ಲಿನ ಮಹಾಪ್ರಾಣವೊಂದನ್ನು ವ್ಯತ್ಯಾಸಮಾಡಿದರೆ, ಅರ್ಥವು ಹೆಚ್ಚು ನಂಬಲರ್ಹವಾದ (ಆದರೆ ಹೃದ್ಯತೆಯು ಕಡಿಮೆಯಾದ) ''ಸ್ವಲ್ಪ ಭಾಗ ಮಳೆಯಲ್ಲಿ ಕೊಳೆಯುವ'' ಎಂದಾಗುತ್ತದೆ.

65 ಎಂಪಿಡಾಕ್ಲಿಸನು ಇಲ್ಲಿ ಪರಮಾಣುಗಳ ವಿಷಯವನ್ನು ಹೇಳುತ್ತಿದ್ದಾನೆ. ಆದರೆ ಅವನ ಅರ್ಥವು ಹಿಂದೆ ಶುದ್ಧವಾಗಿದ್ದವು ಈಗ ಸಂಕರವಾಗಿವೆ ಎಂದೇ ಅಥವಾ ಹಿಂದೆ ಸಂಕರವಾಗಿದ್ದವು ಈಗ ಶುದ್ಧವಾಗಿವೆ ಎಂದೇ? ಇದು ಓದುವವನು ನಿಲ್ಲಿಸುವ ಸ್ಥಾನವನ್ನವಲಂಬಿಸಿರುತ್ತದೆ.

66 **ಇಲಿಯಡ್** X. ೨೫೩: ''ನಕ್ಷತ್ರಗಳು ಬಹು ಮುಂದೆ ಚಲಿಸಿವೆ, ರಾತ್ರಿಯು ಎರಡು ಭಾಗಕ್ಕಿಂತಲೂ ಹೆಚ್ಚಾಗಿ ಕಳೆದಿದೆ, ಆದರೆ ಮೂರನೆಯ ಭಾಗ ನಮಗುಳಿದಿದೆ.'' ಇದು ಗಣಿತಶಾಸ್ತ್ರರೀತ್ಯಾ ಅಸಾಧ್ಯ. ಆದರೆ ಇದರ ಪರಿಹಾರಕ್ಕೊಂದು ದಾರಿಯಿದೆ. ಇದರಲ್ಲಿ ಅನೇಕಾರ್ಥವಿದೆಯೆಂದು ಪರಿಗ್ರಹಿಸಿದರೆ, ಅದರ ಅರ್ಥವು ''ಸಂಪೂರ್ಣವಾಗಿ ರಾತ್ರಿಯ ಎರಡು ಭಾಗಗಳು'' ಎಂದಾಗಿ ಎಲ್ಲವೂ ಸರಿಹೋಗುತ್ತದೆ.

67 ಚರಬಿಕಳಪೆಗಳನ್ನು ತವರ ಮತ್ತು ತಾಮ್ರದ ಮಿಶ್ರಣದಿಂದ ಮಾಡುತ್ತಿದ್ದರು. ಆದರೆ ರೂಢಿಯಲ್ಲಿ ಈ ಮಿಶ್ರಲೋಹವನ್ನು ತವರವೆಂದೇ ಕರೆಯುತ್ತಿದ್ದರು.

67A ಅಮೃತ: ದೇವತೆಗಳು: ಮದ್ಯ: ಮನುಷ್ಯರು.

"ಕಂಚಿನ ಭರ್ಜಿಯು ಅಲ್ಲಿ ತಡೆಯಲ್ಪಟ್ಟಿತು"[68] ಎಂಬಲ್ಲಿ "ಅಲ್ಲಿ ತಡೆಯಲ್ಪಟ್ಟಿತು" ಎಂಬುದರ ಸಾಧ್ಯವಾದ ಎಲ್ಲಾ ಅರ್ಥಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅದನ್ನು ಈ ಅರ್ಥದಲ್ಲಿ ಅಥವಾ ಆ ಅರ್ಥದಲ್ಲಿ ಗ್ರಹಿಸಿದರೆ ಗ್ಲಾಕಾನನು ಹೇಳುವ ದೋಷದಿಂದ ಉತ್ತಮರೀತಿಯಲ್ಲಿ ಪಾರಾಗಬಹುದೆಂಬುದನ್ನು ಯೋಚಿಸಬೇಕು. "ಅವರು[69] ಯಾವುದೋ ಒಂದು ಅಸಂಭವನೀಯವಾದ ಪಕ್ಷವನ್ನು ಪರಿಗ್ರಹಿಸಿ ಪ್ರಾರಂಭಿಸುತ್ತಾರೆ. ಅದನ್ನು ತಾವೇ ಸ್ವತಃ ಹಾಗಿರುವಂತೆ ನಿರ್ಣಯಿಸಿಬಿಟ್ಟು, ಅದರಿಂದ ಅನುಮಾನಗಳನ್ನು ಮಾಡಲು ತೊಡಗುತ್ತಾರೆ. ಕವಿಯ ವಾಕ್ಯವೇನಾದರೂ ತಾವು ವಸ್ತುಗಳ ವಿಷಯವಾಗಿ ಹೊಂದಿರುವ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ, ತಾವು ನಂಬಿರುವುದನ್ನೇ ಕವಿಯು ನಿಜವಾಗಿಯೂ ಹೇಳಿದ್ದಂತೆ ಭಾವಿಸಿ ಅವನನ್ನು ಖಂಡಿಸುತ್ತಾರೆ" ಎಂದು ಗ್ಲಾಕಾನನು[70] ಹೇಳುತ್ತಾನೆ. ಇಕಾರಿಯುಸನ[71] ವಿಷಯವಾಗಿ ಹೋಮರನ ಮೌನವನ್ನು ಈ ರೀತಿಯಲ್ಲಿ ವಿಮರ್ಶಿಸಿದ್ದಾರೆ. ಇಕಾರಿಯುಸನು ಲಾಸಿಡೆಮೋನಿಯದವನು ಎಂಬ ಭಾವನೆಯಿಂದ ಪ್ರಾರಂಭಿಸಿ, ಟೆಲೆಮಾಕಸನು ಲಾಸಿಡೆಮೊನಿಗೆ ಹೋದಾಗ ಅವನನ್ನು ಸಂಧಿಸದೇ ಇದ್ದುದು ಆಶ್ಚರ್ಯವೆಂದು ವಿಮರ್ಶಕರು ಆಲೋಚಿಸುತ್ತಾರೆ. ಆದರೆ ನಿಜಸ್ಥಿತಿಯಾದರೋ ಸೆಫಾಲಿಯನ್ನರು ಹೇಳುವಂತೆ ಇದ್ದಿರಬಹುದು: ಎಂದರೆ, ಯುಲಿಸಿಸನ ಹೆಂಡತಿಯು ಸೆಫಾಲಿಯನ್ನರ ಮನೆಯವಳು ; ಮತ್ತು ಅವಳ ತಂದೆಯ ಹೆಸರು ಇಕಾಡಿಯಸ್ ಎಂದಾಗಿದ್ದಿತು,

---

68 ಇಲಿಯಡ್ XX. ೨೭೨. ಅಕಿಲಿಸನು ಹೆಫೆಸ್ಟಸನಿಂದ ನಿರ್ಮಿತವಾದ ಕವಚವನ್ನು ತೊಟ್ಟಿದ್ದಾನೆ. ಅದರಲ್ಲಿ ಒಂದು ಚಿನ್ನದ, ಎರಡು ಕಂಚಿನ, ಮತ್ತು ಒಳಕೊನೆಯ ಎರಡು ತವರದ, ಹೀಗೆ ಒಟ್ಟು ಐದು ಲೋಹದ ಪದರಗಳಿರುತ್ತವೆ. ಈನಿಯಸನಿಂದ ಅವನ ಮೇಲೆ ಎಸೆಯಲ್ಪಟ್ಟ ಭರ್ಜಿಯು "ಎರಡು ಪದರಗಳನ್ನು ಹಾದು ಚಿನ್ನದ್ದರಲ್ಲಿ ನಾಟಿಕೊಂಡಿತು" ಎಂದು ಹೋಮರನು ವರ್ಣಿಸಿದ್ದಾನೆ. ಆದರೆ ಚಿನ್ನವು ಅಲಂಕಾರದ ವಸ್ತುವಾಗಿರುವುದರಿಂದ ಅದು ಹೊರಗಡೆಯದಾಗಿರಬೇಕು. ಅದ್ದರಿಂದ ಭರ್ಜಿಯು ಎರಡು ಪದರಗಳನ್ನು ಭೇದಿಸಿದ್ದು ತಾನೆ ಹೇಗೆ? ಪ್ರಾಯಶಃ ಭರ್ಜಿಯ ತುದಿಯು ಚಿನ್ನದ್ದರ ಒಳಗಿನ ಎರಡು ಕಂಚಿನ ಪದರಗಳನ್ನು ಭೇದಿಸಿದ್ದರೂ, ಅದನ್ನು ನಿಜವಾಗಿಯೂ 'ತಡೆದದ್ದು' ಮೇಲಿನ ಪದರದ ಚಿನ್ನವಾಗಿದ್ದಿರಬಹುದು.

69 ಎಂದರೆ ವಿಮರ್ಶಕರು.

70 ಪ್ರಾಯಶಃ ಅಥೆನ್ಸಿನ ಒಬ್ಬ ವಿಮರ್ಶಕ. ಹೋಮರನ ಮೇಲಿನ ಇವನ ವಿಮರ್ಶೆಯು ಬಹಳ ಮಾನ್ಯವಾಗಿದ್ದಿರಬಹುದು.

71 ಇವನು ಯೂಲಿಸಿಸನ ಹೆಂಡತಿ ಪೆನಿಲೋಪೆಯ ತಂದೆ. ಯೂಲಿಸಿಸ್ ಮತ್ತು ಪೆನಿಲೊಪೆಯರ ಮಗನಾದ ಟೆಲಿಮಾಕಸನು ಲೆಸಿಡೆಮೊನಿನಲ್ಲಿ ಇವನನ್ನು ನೋಡದೆಹೋದುದು (ಒಡಿಸ್ಸಿ iv) ಆಶ್ಚರ್ಯವಾಗಿ ಕಂಡಿತು.

ಇಕಾರಿಯಸ್ ಎಂದಲ್ಲ. ಆದ್ದರಿಂದ ಈ ಸಮಸ್ಯೆಗೆ ಕಾರಣವಾದುದು ಪ್ರಾಯಶಃ ವಿಮರ್ಶಕರ ಒಂದು ಪ್ರಮಾದವಿರಬಹುದು.

ಸಾಮಾನ್ಯವಾಗಿ ಹೇಳುವುದಾದರೆ, (೧) ಅಸಾಧ್ಯ [The Impossible] ವಾದುದನ್ನು ಕಾವ್ಯದ ಆವಶ್ಯಕತೆಗಳ, ಅಥವಾ ಮೇಲ್ಮೆಯ,[72] ಅಥವಾ ಜನಾಭಿಪ್ರಾಯದ ದೃಷ್ಟಿಯಿಂದ ಸಮರ್ಥನೆ ಮಾಡಬೇಕು. ಕಾವ್ಯದ ಆವಶ್ಯಕತೆಗಳಿಗೆ ನಂಬಲಾಗದ ಸಾಧ್ಯತೆ [Unconvincing Possibility] ಯುಳ್ಳದ್ದಕ್ಕಿಂತಲೂ ನಂಬಲಾಗುವ ಅಸಾಧ್ಯತೆ [Convincing impossibility] ಯುಳ್ಳದ್ದೇ ಹೆಚ್ಚು ಗ್ರಾಹ್ಯವಾದುದು.[73] ಝ್ಯೂಕ್ಸಿಸನು[74] ಚಿತ್ರಿಸಿರುವಂತಹ ವ್ಯಕ್ತಿಗಳಿರುವುದು ಸಾಧ್ಯವಿಲ್ಲದಿದ್ದರೆ, ಅವರು ಹಾಗಿರುವುದೇ ಉತ್ತಮವಾದುದು ಎಂಬುದು ಅದಕ್ಕೆ ಉತ್ತರ, ಏಕೆಂದರೆ ಕಲೆಗಾರನು ತನ್ನ ಮಾದರಿಯಾಗಿರುವುದಕ್ಕಿಂತಲೂ ಉತ್ತಮವಾಗಿರುವುದನ್ನು ಮಾಡಬೇಕು. (೨) ಅಸಂಭವನೀಯ [The Improbable] ವಾದುದನ್ನು ಅದು ಜನಾಭಿಪ್ರಾಯಕ್ಕೆ ಸಮ್ಮತವಾಗಿದೆಯೆಂದು ತೋರಿಸುವುದರಿಂದಲೋ, ಅಥವಾ ಕೆಲವು ಸಂದರ್ಭಗಳಲ್ಲಿ ಅದು ಅಸಂಭವವಲ್ಲವೆಂದು ವಾದಿಸುವುದರಿಂದಲೋ ಅದನ್ನು ಸಮರ್ಥಿಸಬೇಕು. ಏಕೆಂದರೆ ಸಂಭಾವ್ಯತಾನಿಯಮಕ್ಕೆ ವಿರುದ್ಧವಾಗಿ ಘಟನೆಗಳು ಜರುಗುವ ಸಂಭವವೂ ಉಂಟು. (೩) ಕವಿಯ ಮಾತುಗಳಲ್ಲಿ ಕಂಡುಬರುವ ವಿರೋಧಗಳನ್ನು ವಾಕ್ಯಾರ್ಥವಾದ (Dialectical argument) ದಲ್ಲಿ ಪ್ರತಿಕಕ್ಷಿಯ ದೂಷಣವಾಕ್ಯಗಳನ್ನು ಪರೀಕ್ಷಿಸುವಂತೆ ಮೊದಲು ಪರೀಕ್ಷಿಸಬೇಕು. ಹಿಂದೆ ತಾನೇ ಹೇಳಿರುವುದನ್ನೋ ಅಥವಾ ವಿವೇಕವುಳ್ಳ ವ್ಯಕ್ತಿಯೊಬ್ಬನು ಸತ್ಯವೆಂದು ಒಪ್ಪುವುದನ್ನೋ ಅವನು ವಿರೋಧಿಸಿದ್ದಾನೆಂದು ಒಪ್ಪಿಕೊಳ್ಳುವುದಕ್ಕೆ ಮುಂಚಿತವಾಗಿ, ಅವನು ಅದೇ ವಿಷಯವನ್ನೇ, ಅದೇ ಸಂಬಂಧದಲ್ಲಿಯೇ, ಮತ್ತು ಅದೇ ಅರ್ಥದಲ್ಲಿಯೇ ಹೇಳಿದ್ದಾನೆಯೇ ಎಂಬುದನ್ನು ನೋಡಬೇಕು. ಆದರೆ ವಸ್ತು (Plot) ವಿನ ಅಸಂಭವನೀಯತೆಯಾಗಲೀ ಅಥವಾ ಪಾತ್ರದ ನೀಚತೆ (Depravity) ಯಾಗಲೀ[75] ಅನಾವಶ್ಯಕವಾಗಿಯೂ ಮತ್ತು ಉಪಯೋಗವಾಗದೆಯೂ ಇದ್ದರೆ ಅವುಗಳಿಗೆ ಯಾವ ಬಗೆಯ ಸಮರ್ಥನೆಯೂ ಸಾಧ್ಯವಿಲ್ಲ. ಉದಾಹರಣೆಗೆ, **ಮೀಡಿಯ**

---

[72] ಎಂದರೆ "ವಸ್ತು ಇರಬೇಕಾದ ರೀತಿಯಲ್ಲಿ," ಎಂದರೆ ಆದರ್ಶರೂಪದಲ್ಲಿ.

[73] ಅಧ್ಯಾಯ ೨೪ ನ್ನು ನೋಡಿ, [74] ೫, ಅಧ್ಯಾಯ ೬ ನ್ನು ನೋಡಿ.

[75] ರುದ್ರನಾಟಕದಲ್ಲಿ ಎಲ್ಲಾ ಪಾತ್ರಗಳೂ ಉತ್ತಮವಾಗಿರಬೇಕು (ಅಧ್ಯಾಯ ೧೫), ಮತ್ತು ವಸ್ತುವಿನಿಂದ ಅಪೇಕ್ಷಿತವಾದ ದೋಷಗಳಿಂದ ಮಾತ್ರವೇ ಕೂಡಿರಬೇಕು.

ದಲ್ಲಿ[76] ಎಗ್ಯೂಸನ ಪ್ರವೇಶದಲ್ಲಿರುವ ಅಸಂಭವನೀಯತೆ ಮತ್ತು ಓರೆಸ್ಟಿಸ್‌ನಲ್ಲಿ[77] ಮೆನೆಲೌಸನ ಅಲ್ಪತನ.

ಹೀಗೆ ವಿಮರ್ಶಕರ ಆಕ್ಷೇಪಗಳು ಐದು ವಿಧವಾದ ದೋಷಗಳಿಂದ ಜನಿಸುತ್ತವೆ: ಆ ಆಕ್ಷೇಪವು ಯಾವಾಗಲೂ ಯಾವುದೋ ಒಂದು ವಿಷಯವು (೧) ಅಸಾಧ್ಯವೆಂದೋ, (೨) ಅಸಂಭವವೆಂದೋ, (೩) ನೈತಿಕವಾಗಿ ದುಷ್ಪರಿಣಾಮಕಾರಿಯೆಂದೋ, (೪) ಸ್ವವಿರುದ್ಧವೆಂದೋ, ಅಥವಾ (೫) ತಂತ್ರಶುದ್ಧಿ (Technical correctness) ಗೆ ವ್ಯತಿರಿಕ್ತವಾಗಿದೆಯೆಂದೋ ಇರುತ್ತದೆ. ಈ ಆಕ್ಷೇಪಗಳಿಗೆ ಪರಿಹಾರಗಳನ್ನು ಮೇಲೆ ಹೇಳಿರುವ ಹನ್ನೆರಡು ಪ್ರಕಾರಗಳಲ್ಲೊಂದರಲ್ಲಿ ಹುಡುಕಬೇಕು.

ಅಧ್ಯಾಯ ೨೬

ಅನುಕರಣದ ಶ್ರೇಷ್ಠವಾದ ಪ್ರಕಾರವು ಮಹಾಕಾವ್ಯವೇ ಅಥವಾ ರುದ್ರನಾಟಕವೇ ಎಂಬ ಪ್ರಶ್ನೆಯು ಉದ್ಭವಿಸಬಹುದು. ಕಡಿಮೆಯಾಗಿ ಗ್ರಾಮ್ಯ (Vulgar) ವಾಗಿರುವುದೇ ಹೆಚ್ಚು ಉತ್ತಮವಾದುದು ಮತ್ತು ಉತ್ತಮವರ್ಗದ ಸಾಮಾಜಿಕರಿಗಾಗಿ ರಚಿತವಾಗಿರುವುದೇ ಯಾವಾಗಲೂ ಕಡಿಮೆಯಾಗಿ ಗ್ರಾಮ್ಯವಾಗಿರುವುದು ಎಂದಾದರೆ, ಎಲ್ಲಾ ಬಗೆಯವರನ್ನೂ ಕುರಿತು ಬರೆದಿರುವ ಕಲೆಯು ಅತ್ಯಂತ ಗ್ರಾಮ್ಯವಾಗಿರುತ್ತದೆಯೆಂದು ವಾದಿಸಬಹುದು. ತಾವೇ ಸ್ವತಃ ಕೆಲವನ್ನು ಸೇರಿಸದೆ ಇದ್ದರೆ ಸಾಮಾಜಿಕರು ಅದರ ಅರ್ಥವನ್ನು ಗ್ರಹಿಸಲಾರರು ಎಂಬ ಭಾವನೆಯೇ ಅನುಕರ್ತೃಗಳ[78] ಸತತವಾದ ಚಲನೆಗಳಿಗೆ ಕಾರಣವಾಗಿದೆ. ಉದಾಹರಣೆಗೆ ಅಕುಶಲ

---

[76] ಜೇಸನನಿಂದ ಪರಿತ್ಯಕ್ತಳಾದ ಮಿಡಿಯಳು ಏನೂ ತೋಚದೆ ನಿಂತಿರುವಾಗ ಅಥೆನ್ಸಿನ ರಾಜನಾದ ಎಗ್ಯೂಸನು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ಅವಳಿಗೆ ಆಶ್ರಯವನ್ನು ನೀಡುತ್ತಾನೆ. ಇದರ ಮೇಲಿನ ಆಕ್ಷೇಪವೇನೆಂದರೆ ಇದು ಕೇವಲ ಆಕಸ್ಮಿಕ ಘಟನೆ. ನಾಟಕದಲ್ಲಿನ ಪೂರ್ವದ ಘಟನೆಗಳಿಂದ ಇದು ಜನಿಸಿಲ್ಲ ಮತ್ತು ನಾಟಕದ ಸಮಾಪ್ತಿಯ ಮೇಲೆ ಇದರ ಪ್ರಭಾವವು ಯಾವುದೂ ಇಲ್ಲ. ಇದನ್ನು ಆಧುನಿಕ ವಿಮರ್ಶಕರು ಒಪ್ಪುವುದಿಲ್ಲ. ಇದು ಹೇಗಾದರೂ ಇರಲಿ ಯೂರಿಪಿಡೀಸನು "ಇದು ಹೀಗಾಯಿತೆಂದು ಸಾಂಪ್ರದಾಯಕವಾದ ಕಥೆಯಿದೆ" ಎಂದು ಅರಿಸ್ಟಾಟಲಿನ ಮಾತುಗಳನ್ನೇ ತನ್ನ ಸಮರ್ಥನೆಗೆ ಉಪಯೋಗಿಸಿಕೊಳ್ಳಬಹುದು.

[77] ಈ ವಿಷಯಕ್ಕೆ ೧೫ ನೆಯ ಅಧ್ಯಾಯವನ್ನೂ ನೋಡಿ. ಅಲ್ಲಿ ಈ ನಾಟಕದಲ್ಲಿ ಮೆನೆಲೌಸನನ್ನು "ಕಥೆಯಿಂದ ಅಪೇಕ್ಷಿತವಾಗದ ಪಾತ್ರದ ನೀಚತನಕ್ಕೆ ನಿದರ್ಶನ"ವನ್ನಾಗಿ ಕೊಟ್ಟಿದ್ದಾನೆ. "ನಿಜಸ್ಥಿತಿಯು ಹಾಗೆಯೇ ಇದ್ದಿತೆಂದು" ಯೂರಿಪಿಡೀಸನು ವಾದಿಸಬಹುದು.

[78] ಎಂದರೆ ನಟರು, ವಾದ್ಯಗಳನ್ನು ನುಡಿಸುವವರೂ, ಕಾವ್ಯವಾಚನಮಾಡುವವರು.

ರಾದ ವೇಣುವಾದನಕಾರರು ಚಕ್ರದ ಎಸೆತವನ್ನು ಅನುಕರಿಸಬೇಕಾಗಿದ್ದರೆ ತಾವೇ ಉರುಳಾಡುತ್ತಾರೆ, ಮತ್ತು ಅವರ ಕೃತಿಯ ವಿಷಯವು "ಸ್ಕಿಲ್ಲಾ"[79] ವಾಗಿದ್ದರೆ, ಸೂತ್ರಧಾರನನ್ನು ಹಿಡಿದೆಳೆಯುತ್ತಾರೆ. ರುದ್ರನಾಟಕವನ್ನು ಈ ವರ್ಗದ ಕಲೆಯೆನ್ನುತ್ತಾರೆ. ಈಚಿನ ನಟರು ಅವರ ಹಿಂದಿನವರಿಗೆ ಕಾಣಿಸಿದ್ದು ಹೀಗೆ ಎನ್ನುತ್ತಾರೆ. ಮಿನ್ನಿಸ್ಕಸನು ಕಾಲ್ಲಿಪ್ಪಿಡೀಸನನ್ನು "ಕಪಿ" ಎಂದು ಕರೆಯುತ್ತಿದ್ದನು, ಏಕೆಂದರೆ ಅವನು ತನ್ನ ಪಾತ್ರಗಳನ್ನು ಅಷ್ಟು ಅತಿರೇಕದಿಂದ ಅಭಿನಯಿಸುತ್ತಿದ್ದನೆಂದು ಮಿನ್ನಿಸ್ಕಸನು ಭಾವಿಸುತ್ತಿದ್ದನು. ಪಿಂಡಾರಸನ ವಿಷಯದಲ್ಲಿಯೂ ಇದೇ ಅಭಿಪ್ರಾಯವಿದ್ದಿತು.[80] ರುದ್ರನಾಟಕವು ಒಟ್ಟಿನಲ್ಲಿ ಮಹಾಕಾವ್ಯದೊಡನೆ ನವೀನಸಂಪ್ರದಾಯದ ನಟರು ಪ್ರಾಚೀನ ಸಂಪ್ರದಾಯದವರೊಡನೆ ಹೋಲಿಸಿದರೆ ಇರುವಂತೆ ಇದೆ. ಈ ಕಾರಣದಿಂದ ಒಂದು ಸುಸಂಸ್ಕೃತರಾದ ಶ್ರೋತೃಗಳನ್ನು ಸಂಬೋಧಿಸುತ್ತದೆ; ಅದಕ್ಕೆ ಅಭಿನಯದ ಸಹಾಯವು ಬೇಕಾಗಿಲ್ಲ. ಇನ್ನೊಂದು ಅಸಂಸ್ಕೃತರಾದವರನ್ನು ಸಂಭೋಧಿಸುತ್ತದೆ. ಆದ್ದರಿಂದ ರುದ್ರನಾಟಕವು ಗ್ರಾಮ್ಯವಾದ ಒಂದು ಕಲೆಯೆಂದಾದರೆ, ಅದು ನಿಸ್ಸಂದೇಹವಾಗಿಯೇ ಮಹಾಕಾವ್ಯಕ್ಕಿಂತಲೂ ಕೀಳಾದುದೇ.

ಇದಕ್ಕೆ ಉತ್ತರವು ಎರಡು ವಿಧವಾಗಿದೆ. ಮೊದಲನೆಯದಾಗಿ, (೧) ಈ ಆಕ್ಷೇಪವು ನಾಟಕಕಾರನ ಕಲೆಯನ್ನು ತಟ್ಟುವುದಿಲ್ಲ, ಅವನ ಪ್ರದರ್ಶಕ [Interpreter] ನದನ್ನು ಮಾತ್ರ ತಟ್ಟುತ್ತದೆ. ಏಕೆಂದರೆ ಅಭಿನಯದ ಅತಿರೇಕವನ್ನು ಸೋಸಿಸ್ಟ್ರಾಟಸನು[81] ಮಾಡಿದಂತೆ ಮಹಾಕಾವ್ಯದ ವಾಚನದಲ್ಲಿಯೂ, ಓಪುಸ್‌ನ ಮ್ನಾಸಿಥ್ಯೂಸನು[82] ಮಾಡಿದಂತೆ ಸಂಗೀತ ಸ್ಪರ್ಧೆಯಲ್ಲಿಯೂ ಮಾಡಲು ಸಾಧ್ಯ. (೨) ನೃತ್ಯವನ್ನೂ ಕೂಡ ಖಂಡಿಸುವುದು ನಮ್ಮ ಉದ್ದೇಶವಲ್ಲದಿದ್ದರೆ, ನಾವು ಎಲ್ಲಾ ವಿಧದ ಚಲನೆಯನ್ನೂ ದೂಷಿಸಬಾರದು. ಕೀಳು ತರದ ನಟರದ್ದನ್ನು ಮಾತ್ರ ಹಾಗೆ ಮಾಡಬೇಕು. ಕಾಲ್ಲಿಪ್ಪಿಡೀಸನ ಮೇಲೆ ಮತ್ತು ಇಂದು ಇತರರ ಮೇಲಿನ

---

[79] ಸ್ಕಿಲ್ಲಾ ಎಂಬುದು ಒಂದು ಸಮುದ್ರರಾಕ್ಷಸ. ಇದಕ್ಕೆ ಆರು ತಲೆಗಳೂ; ಇದರ ಕಾಲುಗಳು ಹಾವುಗಳು ಮತ್ತು ಗುರುಗುಟ್ಟುತ್ತಿರುವ ನಾಯಿಗಳು. ಗ್ರೀಕರ ವಾದ್ಯಸಂಗೀತವು 'ಅನುಕರಿಸುವ' ಅಭಿನಯದಿಂದ ಕೂಡಿರುತ್ತಿದ್ದಿತೆಂಬುದನ್ನು ಒಂದನೆಯ ಅಧ್ಯಾಯದಲ್ಲಿ ನೋಡಿದ್ದೇವೆ. ಸ್ಕಿಲ್ಲಾದ ಅಥವಾ ಚಕ್ರದೆಸೆತಗಳಂತಹ ಪ್ರಸಂಗಗಳಲ್ಲಿ ಸಾಮಾನ್ಯಜನಗಳನ್ನು ಮೆಚ್ಚಿಸಲು ಅವಕಾಶವನ್ನು ಮಾಡಿಕೊಳ್ಳುತ್ತಿದ್ದರು.

[80] ಮಿನ್ನಿಸ್ಕಸನು ಈಸ್ಕಿಲಸನ ನಟರುಗಳಲ್ಲಿ ಒಬ್ಬ; ಕಾಲ್ಲಿಪ್ಪಿಡೀಸನು ಅವನ ಮುಂದಿನ ಪೀಳಿಗೆಯವನು. ಪಿಂಡಾರಸನು ಯಾರೆಂದು ಗೊತ್ತಿಲ್ಲ.

[81] ಎಂದರೆ ನಟ, ಗಾಯಕ ಮುಂತಾದವರು.

[82] ಇವರ ವಿಷಯವಾಗಿ ಏನೂ ಗೊತ್ತಾಗಿಲ್ಲ.

ದೂಷಣೆಯ ತತ್ತ್ವವು ಇದು: ಅವರ ಸ್ತ್ರೀ ಪಾತ್ರಗಳು ಕುಲೀನರಂತಿಲ್ಲ. (೩) ಮಹಾಕಾವ್ಯದಂತೆಯೇ, ರುದ್ರನಾಟಕವು ಕೂಡ ಚಲನೆ ಅಥವಾ ಅಭಿನಯವಿಲ್ಲದೆಯೇ ತನ್ನ ಪರಿಣಾಮವನ್ನು ಉಂಟುಮಾಡಬಹುದು. ಏಕೆಂದರೆ ನಾಟಕವೊಂದನ್ನು ಓದುವ ಮಾತ್ರದಿಂದಲೇ ಅದರ ಗುಣವು ಗೋಚರವಾಗುತ್ತದೆ. ಆದ್ದರಿಂದ ಅದು ಇತರ ಎಲ್ಲಾ ಅಂಶಗಳಲ್ಲಿಯೂ ಉತ್ತಮವಾಗಿದ್ದ ಪಕ್ಷದಲ್ಲಿ, ಈ ಅವಗುಣವು ಅದರ ನೈಜವಾದ ಅಂಶವಲ್ಲ.

ಎರಡನೆಯದಾಗಿ ನಾವು ಗಮನದಲ್ಲಿಡಬೇಕಾದುದು, (೧) ರುದ್ರನಾಟಕವು ಮಹಾಕಾವ್ಯವು ಹೊಂದಿರುವುದನ್ನೆಲ್ಲಾ (ಮಹಾಕಾವ್ಯದ ಛಂದಸ್ಸೂ ಕೂಡ ಅದರಲ್ಲಿ ಪ್ರಯೋಗಾರ್ಹವಾಗಿದೆ) ಒಳಗೊಂಡಿದೆ. ಅದರ ಜೊತೆಗೆ ಸಂಗೀತ (ನಾಟಕದ ರಂಜನೆಯ ಒಂದು ಪ್ರತ್ಯಕ್ಷವಾದ ಅಂಶ) ಮತ್ತು ದೃಶ್ಯ [Spectacle] ಗಳ ರೂಪದಲ್ಲಿ ಒಂದು ಗಣನೀಯವಾದ ಅಧಿಕಾಂಶವನ್ನೂ ಹೊಂದಿದೆ. (೨) ನಾಟಕದ ಅನುಕರಣದ ಯಥಾರ್ಥತೆಯು ಅದನ್ನು ಆಡುವಾಗಿರುವಷ್ಟೇ ಅದನ್ನು ಓದುವಾಗಲೂ ಅನುಭವವೇದ್ಯವಾಗುತ್ತದೆ. (೩) ರುದ್ರಾನುಕರಣವು ತನ್ನ ಗುರಿಯನ್ನು ಸಾಧಿಸಲು ಅಲ್ಪವಾದ ಅವಕಾಶವನ್ನು ಅಪೇಕ್ಷಿಸುತ್ತದೆ. ಇದೊಂದು ದೊಡ್ಡ ಅನುಕೂಲ, ಏಕೆಂದರೆ ದೀರ್ಘಕಾಲಾವಕಾಶದಿಂದ ಉಂಟಾಗುವ ಶಿಥಿಲವಾದ ಪ್ರಭಾವಕ್ಕಿಂತಲೂ, ಸಾಂದ್ರವಾದ ಪ್ರಭಾವವು ಹೆಚ್ಚು ಆಹ್ಲಾದಕರ. ಉದಾಹರಣೆಗೆ ಸೋಫೋಕ್ಲಿಸನ **ಈಡಿಪಸ್**ನ್ನು ನೋಡಿ ಮತ್ತು ಅದನ್ನು **ಇಲಿಯಡ್**‌ನ ಪಂಕ್ತಿಗಳ ಸಂಖ್ಯೆಯುಷ್ಟು ವಿಸ್ತರಿಸಿದರೆ ಆಗುವ ಪರಿಣಾಮವನ್ನೂ ಗಮನಿಸಿ. (೪) ಮಹಾಕಾವ್ಯಕರ್ತೃಗಳ ಅನುಕರಣೆಯಲ್ಲಿ ಐಕ್ಯತೆಯು ಕಡಿಮೆಯಾಗಿರುತ್ತದೆ. ಅವರ ಯಾವುದಾದರೂ ಒಂದು ಕೃತಿಯು ಅನೇಕ ರುದ್ರ ನಾಟಕಗಳಿಗೆ ವಿಷಯವನ್ನೊದಗಿಸುವುದೇ ಇದಕ್ಕೆ ಸಾಕ್ಷಿ, ಇದರ ಪರಿಣಾಮವೇನೆಂದರೆ, ಅವರು ನಿಜವಾಗಿಯೂ ಒಂದೇ ಕಥೆಯನ್ನು ತೆಗೆದುಕೊಂಡು ಅದನ್ನು ಸಂಕ್ಷೇಪವಾಗಿ ಹೇಳಿದರೆ ಅದು ಮೊಟಕಾದಂತೆ ಕಾಣುತ್ತವೆ, ಮತ್ತು ಅವರ ಕಾವ್ಯಕ್ಕನುಗುಣವಾದ ಪ್ರಮಾಣದಲ್ಲಿ ಹೇಳಿದರೆ ಅದು ಶಿಥಿಲವಾಗಿ, ಸಪ್ಪೆಯಾಗಿ ಕಂಡುಬರುತ್ತದೆ. ಮಹಾಕಾವ್ಯದಲ್ಲಿ ಐಕ್ಯತೆಯು ಕಡಿಮೆಯಾಗಿರುತ್ತದೆ ಎನ್ನುವಾಗ ಅದು ಬಹುಸಂಖ್ಯಾಕವಾದ ಕಾರ್ಯಗಳಿಂದ ಘಟಿತವಾಗಿರುತ್ತದೆ ಎಂದು ನನ್ನ ಅರ್ಥ. ಅವುಗಳಲ್ಲಿ ಪ್ರತಿಯೊಂದೂ ಸ್ವತಂತ್ರವಾಗಿ ಸ್ವಲ್ಪ ವೈಶಾಲ್ಯವನ್ನು ಹೊಂದಿರುತ್ತದೆ. **ಇಲಿಯಡ್** ಮತ್ತು ಒಡಿಸ್ಸಿಗಳು ಇಂತಹ ಅನೇಕ ಭಾಗಗಳನ್ನು ಈ ರೀತಿಯಲ್ಲಿ ಹೊಂದಿವೆ. ಆದರೂ ಹೋಮರನ ಈ ಎರಡು ಕಾವ್ಯಗಳ ಸಂವಿಧಾನವು ಎಷ್ಟು ಸಾಧ್ಯವೋ ಅಷ್ಟು ಪರಿ

ಪೂರ್ಣವೂ, ಮತ್ತು ಅವುಗಳಲ್ಲಿನ ಕಾರ್ಯವು ಸಾಧ್ಯವಾಗಿರುವ ಮಟ್ಟಿಗೆ ಒಂದೇ ಕಾರ್ಯವಾಗಿಯೂ ಆಗಿವೆ. ರುದ್ರನಾಟಕವು ಹೀಗೆ ಈ ಅಂಶಗಳಲ್ಲಿ ಉತ್ತಮವಾಗಿದೆಯೆಂದರೆ, ಮತ್ತು ಇದರ ಜೊತೆಗೆ, ತನ್ನ ಕಾವ್ಯಪ್ರಭಾವದಲ್ಲಿಯೂ (ಕಾವ್ಯದ ಈ ಎರಡು ಪ್ರಕಾರಗಳು ನಮಗೆ ಯಾವುದೋ ವಿಧದ ಅಥವಾ ಎಲ್ಲಾ ವಿಧದ ಆನಂದವನ್ನೂ ಕೊಟ್ಟುಬಿಡದೆ, ನಾವು ಹೇಳಿರುವ[83] ವಿಲಕ್ಷಣವಾದ ವಿಧದ್ದನ್ನೇ ಕೊಡಬೇಕಾಗಿರುವುದರಿಂದ) ಅದು ಮಹಾಕಾವ್ಯಕ್ಕಿಂತಲೂ ಉತ್ತಮವಾಗಿ ಕಾವ್ಯದ ಪ್ರಭಾವವನ್ನು ಸಾಧಿಸುವುದರಿಂದ, ಅದು ಕಲೆಯ ಶ್ರೇಷ್ಠ ಪ್ರಕಾರವಾಗುವುದೆಂಬುದು ಸ್ಪಷ್ಟವಾಗಿಯೇ ಇದೆ.

ರುದ್ರನಾಟಕ ಮತ್ತು ಮಹಾಕಾವ್ಯಗಳ ವಿಷಯವಾಗಿ—ಈ ಎರಡು ಕಲೆಗಳ ಸಾಮಾನ್ಯರೂಪ ಮತ್ತು ಪ್ರಕಾರಗಳು; ಅವುಗಳ ಅಂಗಗಳ ಸಂಖ್ಯೆ ಮತ್ತು ಸ್ವರೂಪ; ಅವುಗಳಲ್ಲಿ ಸಫಲವಾಗಲು ಮತ್ತು ವಿಫಲವಾಗಲು ಕಾರಣಗಳು; ವಿಮರ್ಶಕರ ಆಕ್ಷೇಪಗಳು, ಮತ್ತು ಅವುಗಳಿಗೆ ಉತ್ತರವಾಗಿ ಸಮಾಧಾನಗಳು—ಇವುಗಳನ್ನು ಕುರಿತು ಅಂತೂ ಇಷ್ಟಾಯಿತು.

ಎನ್. ಬಾಲಸುಬ್ರಹ್ಮಣ್ಯ

(ಮುಗಿದುದು)

---

83 ಅಧ್ಯಾಯ ೧೪ ರಲ್ಲಿ : "ಕವಿಯು ನೀಡಬೇಕಾದ ರಸವು ಅನುಕರಣದ ಮೂಲಕ ಕರುಣ ಮತ್ತು ಭಯಗಳಿಂದ ಜನಿಸುವ ರಸ." ಮಹಾಕಾವ್ಯದ ರಸವೂ ಇದೇ ಗುಣದ್ದೆಂದು ನಾವು ಭಾವಿಸಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕೆಳದಿಯ ನವಣಿಯ ಕೋಟೆ

ನವಣಿ ಕ್ವಾಟಿ ಕಟ್ಟಿ ಕದನ ಹೂಡ್ಯಾಳೊ ಕೆಳದಿ ರಾಣಿ
ಹಾಳಾತೊ ಯವನರ ದಂಡು ಚಣದಾಗ ಜಾಣಿ ‖ ಪ ‖

ಕೆಳದಿಯ ಶಿವರಾಜ್ಯ ಬೆಳಿಯಲಿ ಶಿವಶಿವನೆ
ಇಳಿವ್ಯಾಗ ಸೊಗಸಲಿದು ಉಂಡುಟ್ಟು ಜಾಣಿ ‖ ೧ ‖

ಕೆಚ್ಚೆದಿ ಚೆನ್ನಮ್ಮ ಹೊತ್ತೇರಿ ಹೊಂಟಾಳು
ಸುತ್ತ ಇಕ್ಕೇರಿ ಬನದಾಗ ಜಾಣಿ ‖ ೨ ‖

ಮೊಗಲ ಖಾನರಿಗಂಜಿ ಮಾರಾಟಿ ಮರಿಯರಸ
ಮಲೆನಾಡ ರಾಣಿಗೆ ಬೆನ್ನಿಗೆ ಬಿದ್ದ ಜಾಣಿ ‖ ೩ ‖

ಹೊನ್ನೂರ ಕ್ವಾಟ್ಯಾಗ ಚೆನ್ನಮ್ಮನರಮನೆಯು
ಇನ್ನೂರ ಬಂಟರ ಕಾವಲ ಜಾಣಿ ‖ ೪ ‖

ಬಿದನೂರ ಕ್ವಾಟ್ಯಾಗ ಹದಿನೆಂಟು ಅಗಸ್ಯಾಗ
ತುದಿಗಾಲ ಒರೆಗತ್ತಿ ಸಾವಿರ ಜಾಣಿ ‖ ೫ ‖

ಮೊಗಲಶಾಹಿ ವರಂಗಖಾನ ಬಿಗುವಿಲೆ ಕೆಳದಿಗೆ ಇಳಿದ
ಹಗಲಿರುಳು ದಿಗಿಲಾಗ ದಿನದಿನಕು ಜಾಣಿ ‖ ೬ ‖

ಮುನ್ನೊಡೆ ಕೊಡಹೇಳೊ ಚೆನ್ನಮ್ಮ ರಾಜರಾಮ್ನ
ತನ್ನ ಕೊಲಿ ಸುಲಗಿ ಇಲದಿರಕ ಜಾಣಿ ‖ ೭ ‖

ಖಾನರ ಕರಿಸ್ಯಾಳ ಅರಮನಿಗೆ ಇಳಿಸ್ಯಾಳ
ನವಣಿ ನಿಟ್ಟ ಬಿಗಿಸಿ ಹುಗಿಸ್ಯಾಳ ಜಾಣಿ ‖ ೮ ‖

ಬೆಳಗಾಗಿ ಹೌಹಾರಿ ಮೊಗಲರ ಇಡಿದಂಡು
ಕಾಲಕಿತ್ತು ಓಡ್ಯಾರೊ ಖಾನರೊ ಜಾಣಿ ‖ ೯ ‖

ಉಳವಿಯ ಚೆನ್ನಬಸವ ಉಳಿಸಿದಿ ನಮ್ಮಾನ
ಕಳಸವ ಕಟ್ಟಿಕ್ಕೈ ಮುಗಿದು ಜಾಣಿ ‖ ೧೦ ‖

ಕೆಳದಿಯ ಶಿವರಾಜ್ಯ ಬೆಳಿಯಲಿ ಶಿವಶಿವನೆ
ಇಳಿವ್ಯಾಗ ಸೊಗಸಲಿದು ಉಂಡುಟ್ಟು ಜಾಣಿ ‖ ೧೧ ‖

ಸಂಗ್ರಾಹಕರು : ಡಾ ‖ ಬಿ. ಎಸ್. ಗದ್ದಗಿಮಠ


ನಾವು ನಿತ್ಯಜೀವನದಲ್ಲಿ ದೊರಕಿಸಿಕೊಳ್ಳುತ್ತಿರುವ ಶಕ್ತಿಯ ಮುಖ್ಯವಾದ ಮತ್ತೊಂದು ರೂಪವೆಂದರೆ ರಾಸಾಯನಿಕ ಶಕ್ತಿ. ಆಧುನಿಕ ನಾಗರೀಕತೆಗೆ—ಯಂತ್ರ ಯುಗಕ್ಕೆ—ಮುಖ್ಯ ಕಾರಣವಾದುದು ಈ ರಾಸಾಯನಿಕ ಶಕ್ತಿ. ಇದಕ್ಕೆ ನಾವು ಭೂಮಿಯ ಒಳಗೆ ಅಂತರಾಳದಲ್ಲಿ ಹುದುಗಿರುವ ಶಕ್ತಿಕೇಂದ್ರಗಳನ್ನು ಗಮನಿಸಬೇಕು. ಕಲ್ಲಿದ್ದಲು ಪೆಟ್ರೋಲಿಯಂ ಮುಂತಾದುವೇ ಈ ಕೇಂದ್ರಗಳು.

ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳು ಹೇಗೆ ಶಕ್ತಿಯನ್ನು ಕೊಡಬಲ್ಲವು?—ಸಹಸ್ರಾರು ವರ್ಷಗಳ ಹಿಂದೆ ಕಾಡುಗಳಲ್ಲಿ ಉರುಳಿಬಿದ್ದ ಮರಗಳು ಬಿದ್ದೆಡೆಯಲ್ಲಿಯೇ ಬಿದ್ದು ಹುಳು ತಿಂದುಹೋಗದೆ ಮಣ್ಣು ಮರಳುಗಳಲ್ಲಿ ಹೂತು ಹೋಗಿ ಭೂಮಿಯ ಒಳಗಿನ ಶಾಖ ಮತ್ತು ಒತ್ತಡಕ್ಕೆ ಸಿಕ್ಕಿ ಕಲ್ಲಿದ್ದಲಿನ ರೂಪಕ್ಕಿಳಿಯುತ್ತವೆ. ಹೀಗೆಯೇ ಪ್ರಾಚೀನಕಾಲದ ಜಲಚರಗಳು 'ಖನಿಜದ ಎಣ್ಣೆ' ಆಗಿ ಅಥವಾ ಪೆಟ್ರೋಲಿಯಂ ಆಗಿ ಪರಿಣಮಿಸುತ್ತವೆ. ಹೀಗೆ ಮಾರ್ಪಾಡಾಗುವಾಗ ಇವು ಎಷ್ಟು ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತವೆಯೋ ಅಷ್ಟು ಶಕ್ತಿಯನ್ನು ಉರಿಯುವ ಕ್ರಿಯೆಯಲ್ಲಿ ಹೊರಗೆಡಹುತ್ತವೆ. ಉದಾ.:

$$6\ CO_2 + 6\ H_2O + \underset{(\text{ಶಕ್ತಿ})}{\triangle} \rightarrow C_6H_{12}O_6 + 6\ O_2$$

ಉರಿಯುವಿಕೆ (ದಹನ) ಎಂದರೇನು?—ಕಲ್ಲಿದ್ದಲನ್ನಾಗಲೀ ಪೆಟ್ರೋಲಿಯಂನ್ನಾಗಲೀ ಉರಿಸುವಾಗ ಆ ವಸ್ತುಗಳಲ್ಲಿನ ಜಲಜನಕವು ಆಮ್ಲಜನಕದೊಂದಿಗೆ ಸೇರಿ ನೀರಾಗುವಂತೆಯೂ, ಅವುಗಳಲ್ಲಿನ ಇಂಗಾಲವು ಆಮ್ಲಜನಕದೊಂದಿಗೆ ಸೇರಿ ಇಂಗಾಲದ ಡೈ ಆಕ್ಸೈಡಾಗಿಯೂ ಆಗುವಂತೆ ಮಾಡುತ್ತಿದ್ದೇವೆ ಎನ್ನಬಹುದು. ಈ ಕೊನೆಯ ವಸ್ತುಗಳು (ಇಂಗಾಲದ ಡೈ ಆಕ್ಸೈಡ್ ಮತ್ತು ನೀರು) ಪ್ರಾರಂಭದಲ್ಲಿ ಸೂರ್ಯನ ಶಕ್ತಿಯಿಂದ ಸಸ್ಯಗಳಲ್ಲಿ ವಿಭಜಿಸಲ್ಪಟ್ಟುವಲ್ಲದೆ ಬೇರೆಯಲ್ಲ. ಆಗ ಹುದುಗಿಸಿಟ್ಟ ಶಕ್ತಿಯೇ ಇವು ಉರಿಯುವಾಗ ಹೊರಬೀಳುವುದು. ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.

CH_4 (ಮೀಥೇನ್)—ಅಣುಗಳನ್ನು ಉರಿಸುತ್ತೇವೆ ಎನ್ನೋಣ. ಅಂದರೆ O—ಪರಮಾಣುಗಳೊಡನೆ ಸಂಯೋಗ ಕ್ರಿಯೆ.



$$CH_4 + 2\ O_2 \rightarrow CO_2 + 2\ H_2O$$


ಇಲ್ಲಿ H—ಪರಮಾಣುಗಳನ್ನು C—ಪರಮಾಣುಗಳೊಡನೆ ಬಂಧಿಸಿರುವ ಕಟ್ಟುಗಳು ಕತ್ತರಿಸಲ್ಪಟ್ಟು ಎರಡು O—ಪರಮಾಣುಗಳು H—ಪರಮಾಣುಗಳನ್ನು ಸ್ಥಾನ ಪಲ್ಲಟಮಾಡಿವೆ. ಸಮೀಕರಣದಲ್ಲಿ ಪರಮಾಣು ಸಮತೋಲನ ಕಂಡುಬಂದರೂ ಬೆಳಕು ಶಾಖಗಳ ಉತ್ಪಾದನೆಯು ಕೂಡ ಇರುತ್ತದೆ. ಆ ಹೆಚ್ಚುವರಿ ಶಕ್ತಿಯನ್ನು △ ಎಂದು ನಮೂದಿಸಿದರೆ

$$CH_4 + 2\,O_2 \rightarrow CO_2 + 2\,H_2O + \underset{\text{ಶಕ್ತಿ.}}{\triangle}$$

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ ಡೈನಾಮೈಟ್ ಮುಂತಾದುವುಗಳ ಆಸ್ಫೋಟನಾ ಕ್ರಿಯೆಗೂ ಇದ್ದಲು ಮುಂತಾದುವುಗಳ ಉರಿಯುವ ಕ್ರಿಯೆ (ದಹನ)ಗೂ ಇರುವ ವ್ಯತ್ಯಾಸ. ಡೈನಾಮೈಟ್ ಅಥವಾ ನೈಟ್ರೋಗ್ಲಿಸರೀನ್‌ನಲ್ಲಿ ಕೂಡ ಸಾಮಾನ್ಯ ಉರಿಯುವಿಕೆಯಲ್ಲಿ ಆಗುವಂತೆ O—ಪರಮಾಣುವಿನೊಡನೆ ಸಂಯೋಗಕ್ರಿಯೆ ಉಂಟಾಗುತ್ತದೆ. ಆದರೆ ಈ ಕ್ರಿಯೆ ಅತ್ಯಂತ ಶೀಘ್ರವಾಗಿ ನಡೆಯುತ್ತದೆ. ಒಂದು ಸೆಕೆಂಡಿನ ಕೆಲವೇ ಅಂಶಗಳಲ್ಲಿ ಈ ಸಂಯೋಗಕ್ರಿಯೆ ಮುಗಿದು ಶಕ್ತಿಯು ಅತ್ಯಂತ ರಭಸದಿಂದ ಒತ್ತಡದ ರೂಪದಲ್ಲಿ ಹೊರಬೀಳುತ್ತದೆ. ಇದೇ ಆಸ್ಫೋಟನೆ. ಗ್ಲಿಸರೀನನ್ನು ನೈಟ್ರಿಕ್ ಆಮ್ಲದೊಡನೆ ಸೇರಿಸಿದಾಗ ಅದರಲ್ಲಿ ಅಸ್ಥಿರವಾದ ಅಣುವಿರುತ್ತದೆ. O—ಪರಮಾಣುವು ನೈಟ್ರಿಕ್ ಆಮ್ಲದ ಸಾರಜನಕದ—ಪರಮಾಣುವಿನೊಡನೆ ಸೇರಿರುತ್ತದೆಯೇ ಹೊರತು ಇಂಗಾಲ, ಜಲಜನಕ ಅಥವಾ ಗ್ಲಿಸರೀನ್‌ಗಳೊಂದಿಗಲ್ಲ. ಇಂತಹ ಸ್ಥಿತಿಯಲ್ಲಿ ಅತ್ಯಲ್ಪ ಉದ್ರೇಕ ಉಂಟಾದರೂ ಸರಿಯೆ ಈ O—ಪರಮಾಣುವು ಸಹಚರರನ್ನು ಬದಲಾಯಿಸಿಕೊಳ್ಳುತ್ತದೆ. ಇಂಗಾಲವು ಇಂಗಾಲದ ಡೈ ಆಕ್ಸೈಡ್ ಆಗುತ್ತದೆ ಮತ್ತು ಜಲಜನಕವು ನೀರಾಗುತ್ತದೆ. ಈ ಸಮಸ್ತಕ್ರಿಯೆಗಳೂ ಒಂದರೆಕ್ಷಣದಲ್ಲಿ ಮುಗಿದು ಶಾಖ (ಶಕ್ತಿ) ಅದರಿಂದ ಹೆಚ್ಚಿನ ಒತ್ತಡವೂ ಉಂಟಾಗಿ ಆಸ್ಫೋಟನೆ ಎನಿಸುವುದು. ಬರಿಯ ಉರಿಯುವ ಕ್ರಿಯೆಗೂ ಆಸ್ಫೋಟನೆಗೂ ಇಷ್ಟೇ ವ್ಯತ್ಯಾಸ. 'ಗನ್‌ಕಾಟನ್' 'ಕಾರ್ಡೈಟ್,' 'ಟಿ. ಎನ್. ಟಿ' ಮುಂತಾದುವು ಇನ್ನೂ ಪ್ರಬಲವಾದ ಆಸ್ಫೋಟಕಗಳು.

ಉರಿಯುವಿಕೆಯಲ್ಲಿ ಉಂಟಾಗುವ ಎಲೆಕ್ಟ್ರಾನ್ ಪುನರ್ಜೋಡಣೆ— ಮೇಲೆ ಹೇಳಿದ ಉರಿಯುವ ಕ್ರಿಯೆಯಲ್ಲಿ ಉರಿಯತಕ್ಕ ವಸ್ತುಗಳಲ್ಲಿನ ಎಲೆಕ್ಟ್ರಾನ್‌ಗಳು ಆಮ್ಲಜನಕದ ಎಲೆಕ್ಟ್ರಾನ್‌ಗಳೊಂದಿಗೆ ಸೇರಿ ಸ್ಥಿರವಾದ ಎಲೆಕ್ಟ್ರಾನ್—ಜೋಡಣೆಯಿರುವ ಅಂತ್ಯ ವಸ್ತುಗಳನ್ನು ಕೊಡುತ್ತವೆ. ಹಾಗೆ ಮಾಡುವಾಗ ಹೆಚ್ಚು

ವರಿಯಾದ ಶಕ್ತಿಯನ್ನು ಬಿಟ್ಟುಕೊಡುತ್ತವೆ. ಉದಾಹರಣೆಗೆ ತೆಗೆದುಕೊಳ್ಳೋಣ. *H*—ಪರಮಾಣುವಿನಲ್ಲಿ ಒಂದು ಎಲೆಕ್ಟ್ರಾನ್ ಇರುತ್ತದೆ. *O*—ಪರಮಾಣುವಿನಲ್ಲಿ ೨+೬ ಈ ರೀತಿಯಾಗಿ ಹಂಚಿಕೊಂಡು ಹೊರವಲಯದಲ್ಲಿ ೬ ಎಲೆಕ್ಟ್ರಾನ್‌ಗಳಿರುತ್ತವೆ. ಈಗ ಎರಡು H—ಪರಮಾಣುಗಳೂ ಒಂದು *O*—ಪರಮಾಣುವೂ ಸೇರಿದರೆ ಹೊರವಲಯದಲ್ಲಿ ಎಂಟು ಎಲೆಕ್ಟ್ರಾನ್‌ಗಳನ್ನು ಹೊಂದಿರುವ ಅಂದರೆ ಸ್ಥಿರವಾದ ನೀರಿನ ಅಣುವಾಗುತ್ತದೆ. ಕೆಳಗಿನ ಚಿತ್ರದಲ್ಲಿ ಇದನ್ನು ತೋರಿಸಲಾಗಿದೆ. ಹೀಗೆ ಎಲೆಕ್ಟ್ರಾನ್ ಪುನರ್ಜೋಡಣೆಯಾಗುವಾಗ ಶಕ್ತಿ ಎಂಬುದು ವಿದ್ಯುತ್ ಕಂಪನದ ರೂಪದಲ್ಲಿ ಬಿಡಲ್ಪಡುತ್ತದೆ. ಶೀಘ್ರದಲ್ಲಿಯೇ ಇದು ಶಾಖವಾಗಿ ಕಂಡುಬರುತ್ತದೆ. ಆದ್ದರಿಂದಲೇ ಆಮ್ಲಜನಕವನ್ನೂ ಜಲಜನಕವನ್ನೂ ಮಿಶ್ರಮಾಡಿ ನಂತರ ಹತ್ತಿಸಿದರೆ (ಅಂದರೆ ರಸಾಯನ ಕ್ರಿಯೆಯನ್ನು ಪ್ರಾರಂಭಿಸಿದರೆ) ಅಸ್ಫೋಟನೆಯುಂಟಾಗಿ ನೀರು ಆವಿಯ ರೂಪದಲ್ಲಿ ಉಂಟಾಗುತ್ತದೆ.



ಹೆಚ್ಚು ಪರಮಾಣು ತೂಕವಿರುವ ಒಂದು ವಸ್ತುವಿನ ನ್ಯೂಕ್ಲಿಯಸ್‌ನಿಂದ ಪ್ರೋಟಾನನ್ನಾಗಲೀ ಅಥವಾ *a* (*d*)—ಕಣವನ್ನಾಗಲೀ ಬೇರ್ಪಡಿಸಬೇಕಾದರೆ ಶಕ್ತಿ ಪ್ರಯೋಗವು ಆವಶ್ಯಕ. ರಶ್ಮಿ ವಿಕ್ಷೇಪವಾಗುತ್ತಿರುವ ವಸ್ತುಗಳಲ್ಲಿ ಈ ಕೆಲಸವು ತಾನೇ ತಾನಾಗಿ ಅಂದರೆ ನೈಸರ್ಗಿಕವಾಗಿ ನಡೆಯುತ್ತಿರುತ್ತದೆ. ಸಣ್ಣ ಕಣಗಳು ಅಂದರೆ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು ಒಂದಕ್ಕೊಂದು ಸೇರಿ ನ್ಯೂಕ್ಲಿಯಸ್ ಆಗುವಾಗ ಶಕ್ತಿ ವ್ಯಯವಾಗಿ ಅವು ಬೇರ್ಪಟ್ಟಾಗ ಇದೇ ಶಕ್ತಿಯು ಹೊರಬೀಳುತ್ತದೆ. ಸಂಯೋಗದಲ್ಲಿ ವ್ಯಯವಾಗುವ ಶಕ್ತಿಯು ಐನ್‌ಸ್ಟೀನನ ಅರ್ಥದಲ್ಲಿ ತೂಕದ ವ್ಯಯವೇ ಸರಿ. ಆದುದರಿಂದ ಒಟ್ಟು ನ್ಯೂಕ್ಲಿಯಸ್‌ನ ತೂಕವು ಪ್ರತ್ಯೇಕಿಸಲ್ಪಟ್ಟ ಸಣ್ಣ ಕಣಗಳ ಬೇರೆ ಬೇರೆ ತೂಕದ ಒಟ್ಟು ಮೊತ್ತಕ್ಕಿಂತ ಕಡಿಮೆಯಾಗಿರುತ್ತದೆ.

ಉದಾಹರಣೆಗೆ ನಾಲ್ಕು *H*-ಪರಮಾಣುಗಳಿಂದುಂಟಾಗುವ *He*-ಪರಮಾಣುವನ್ನು ತೆಗೆದುಕೊಳ್ಳೋಣ.

ನಾಲ್ಕು *H*-ಪರಮಾಣುಗಳ ತೂಕ $= 4 \times 1 \cdot 008$.

ಸಂಯುಕ್ತ ಸ್ಥಿತಿಯಲ್ಲಿ *He*-ಪರಮಾಣುವಿನ ತೂಕ $= 4{\cdot}004$.

ಆದ್ದರಿಂದ ಸಂಯೋಗಕ್ರಿಯೆಯಲ್ಲಿ ವಿಮುಕ್ತಿ ಹೊಂದಿದ ಶಕ್ತಿ ಐನ್‌ಸ್ಟೀನನ ಭಾಷೆಯಲ್ಲಿ ಹೇಳುವುದಾದರೆ $E = (4 \times 1{\cdot}008 - 4{\cdot}004)\ C^2$

$$= 0{\cdot}028\ C^2$$
$$= 0{\cdot}25 \times 10^{20}\ ergs/Mole$$

ಒಂದು *He*-ಪರಮಾಣುವನ್ನು ನಾಲ್ಕು *H*-ಪರಮಾಣುಗಳಾಗಿ ಬೇರ್ಪಡಿಸಲು ಕಡೇಪಕ್ಷ ಇಷ್ಟು ಪ್ರಮಾಣದ ಶಕ್ತಿಯನ್ನಾದರೂ ಪ್ರಯೋಗಮಾಡಬೇಕು. ಇದನ್ನು ಕ್ಯಾಲರಿಗಳಾಗಿ ಪರಿವರ್ತಿಸಿದರೆ $6{\cdot}4 \times 10^8$ *Kilo Calories/Mole* ಆಗುತ್ತವೆ. ನ್ಯೂಕ್ಲಿಯರ್ ಭೌತಶಾಸ್ತ್ರದಲ್ಲಿ ಇದನ್ನು $E = 0{\cdot}028$ ಎಂದು ಸೂಚಿಸಬಹುದು. ಅಥವಾ ಎಲೆಕ್ಟ್ರಾನ್ ತೂಕದ ಪ್ರಮಾಣದಲ್ಲಿ (ಅಥವಾ ಎಲೆಕ್ಟ್ರಾನ್ ಶಕ್ತಿ mc^2) ಇದನ್ನು *He*-ಗೆ ಸಂಬಂಧಿಸಿದಂತೆ

$E = 0{\cdot}028 \times 1840\ mc^2 = 52\ mc^2$ ಎಂದೂ ಬರೆಯುತ್ತೇವೆ. ಇದು 500,000 ವೋಲ್ಟ್‌ಗಳನ್ನುಪಯೋಗಿಸಿ ಉತ್ಪಾದಿಸಿದ ಒಂದು ಎಲೆಕ್ಟ್ರಾನಿನ ಚಲನ ಶಕ್ತಿ ಎನ್ನಬಹುದು, ಅಥವಾ 5×10^5 ev ಗಳು ಎನ್ನಬಹುದು. ಈ ರೀತಿಯಾಗಿ ಒಂದು ಗ್ರಾಂನಷ್ಟು ಹೀಲಿಯಂನಲ್ಲಿರುವ ಬಂಧನದ ಶಕ್ತಿಯನ್ನು ಹೊರಗೆಡವಿದರೆ 190,000 *KWH* ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು.

ನಕ್ಷತ್ರಗಳಲ್ಲಿ ಪರಮಾಣುಶಕ್ತಿ—ಸೂರ್ಯ ಮತ್ತು ನಕ್ಷತ್ರಗಳ ಅಂತರಾಳದಲ್ಲಿ ಯಾವುದೋ ಒಂದು ರೀತಿಯ ಶಕ್ತಿಕೇಂದ್ರಗಳಿದ್ದೇ ಇರಬೇಕೆಂದೂ ಇವು ನಮಗೆ ಇದುವರೆಗೆ ಗೋಚರಿಸಿರುವ ಶಕ್ತಿಮೂಲಗಳಿಗಿಂತ ಅತ್ಯಂತ ಪ್ರಬಲವಾದವುಗಳಾಗಿರಬೇಕೆಂದೂ ಪರಮಾಣುಶಕ್ತಿ ವೈಚಿತ್ರ್ಯಗಳ ಅರಿವಾಗುವದಕ್ಕೆ ಬಹಳ ಹಿಂದೆಯೇ ವಿಜ್ಞಾನಿಗಳಿಗೆ ಅನ್ನಿಸಿದ್ದಿತು. ಸುಮಾರು 1896 ರ ವರೆಗೂ—ಅಂದರೆ ಪ್ರಭಾ ವಿಕ್ಷೇಪದ ಆವಿಷ್ಕಾರವಾಗುವವರೆಗೂ—ಇದರ ಗುಟ್ಟು ಇಷ್ಟೇ ಇರಬಹುದೆಂದು ಗೊತ್ತಾಗಿರಲಿಲ್ಲ. ಅನಂತರವೂ ಕೂಡ ಸುಮಾರು ಮೂವತ್ತು ವರ್ಷಗಳು ಕಳೆದ ಬಳಿಕ ಸರ್ ಆರ್ಥರ್ ಎಡಿಂಗ್‌ಟನ್, ಲಾರ್ಡ್ ರದರ್‌ಫರ್ಡ್, ಜಾರ್ಜ್ ಗಾಮೋ ಮುಂತಾದವರಿಂದ ಇದರ ರಹಸ್ಯವು ತಿಳಿಯತೊಡಗಿತು.

1938 ರಲ್ಲಿ ಬೀದ್ (H. A. Bethe) ಮತ್ತು ಗಾಮೋ (G. Gamow) ಎಂಬು

ವರು ಈ ವಿಚಾರವಾಗಿ ಸಾಕಷ್ಟು ಪರಿಶೋಧನೆ ಮಾಡಿದರು. ನಕ್ಷತ್ರಗಳ ಬೆಳಕಿಗೆ ಕಾರಣ ಅವುಗಳ ಅಂತರಾಳದಲ್ಲಿ ಆಗುತ್ತಿರುವ ಥರ್ಮೋ ನ್ಯೂಕ್ಲಿಯರ್ ಕ್ರಿಯೆಗಳು. ಅಲ್ಲಿನ ಉಷ್ಣಾಂಶ ಹಲವಾರು ಕೋಟಿ ಡಿಗ್ರಿಗಳು. ಅವಲ್ಲಿ ಅತಿ ಮುಖ್ಯವಾದುದೆಂದರೆ

<i> ಪ್ರೋಟಾನ್—ಪ್ರೋಟಾನ್ ಕ್ರಿಯೆ—[ಇದರಲ್ಲಿ ಜಲಜನಕವು ಡ್ಯೂಟೀರಿಯಂ ಆಗುತ್ತದೆ]

<ii> ಇಂಗಾಲ—ಸಾರಜನಕದ ಚಕ್ರ—[ಇದರಲ್ಲಿ ಇಂಗಾಲದ ನ್ಯೂಕ್ಲಿಯಸ್‌ಗಳು ವೇಗವರ್ಧಕಗಳಾಗಿ ಕೆಲಸಮಾಡಿ ಜಲಜನಕವನ್ನು ಹೀಲಿಯಂ ಆಗಿ ಮಾಡುತ್ತವೆ]

ಲೆಕ್ಕಾಚಾರಗಳ ಪ್ರಕಾರ ಸೂರ್ಯನಲ್ಲಿ ಮುಕ್ಕಾಲುಪಾಲು ಶಕ್ತಿಯು ಮೊದಲ ನೆಯ—ಅಂದರೆ ಪ್ರೋಟಾನ್ ಕ್ರಿಯೆಯಿಂದ ಉಂಟಾಗುತ್ತದೆ ಎನ್ನಬಹುದು. ಇನ್ನೂ ಹೆಚ್ಚು ಶಾಖವಿರುವ ಕೆಲವು ನಕ್ಷತ್ರಗಳಲ್ಲಿನ ಬಹುಪಾಲು ಶಕ್ತಿಗೆ ಕಾರಣ ಭೂತವಾದುದು ಎರಡನೆಯದು ಅಂದರೆ ಇಂಗಾಲ—ಸಾರಜನಕದ ಚಕ್ರ. ಹೀಗೆ ಥರ್ಮೋ ನ್ಯೂಕ್ಲಿಯರ್ ಕ್ರಿಯೆ ಎಂಬುದು ಖಗೋಳ ಭೌತಶಾಸ್ತ್ರದಲ್ಲಿ ಬಹು ಪ್ರಮುಖವಾದ ಮತ್ತು ಪರಿಣಾಮಕಾರಿಯಾದ ತತ್ವವಾಗಿದೆ.

ವಿಶ್ವಶಕ್ತಿ ಮತ್ತು ಮಾನವನ ಬುದ್ಧಿಶಕ್ತಿ—ಒಟ್ಟಿನಲ್ಲಿ, ನಾವು ಹೀಗೆ ನೋಡುತ್ತ ಹೋದಂತೆಲ್ಲ ನಮಗೆ ಒಂದು ಸಂಗತಿ ಖಚಿತವಾಗುತ್ತದೆನ್ನಬಹುದು. ಮನುಷ್ಯನಿಗೆ ಗೋಚರವಾಗುತ್ತಿರುವ ಮತ್ತು ಇನ್ನೂ ಅಗೋಚರವಾಗಿರುವ ಶಕ್ತಿಗಳಿಗೆಲ್ಲ ಮಿಗಿಲಾದ ಮೂಲಶಕ್ತಿ ಯಾವುದೋ ಒಂದು ಇರಬೇಕು. ಅದರ ಸ್ವರೂಪ ಇಷ್ಟೇ ಎಂದು ಹೇಳಲಸಾಧ್ಯ. "ಅಣೋರಣೀಯಾನ್" "ಮಹತೋ ಮಹೀಯಾನ್" ಎಂದು ಹೇಳುವಂತೆ ಕಿರಿಯದಕ್ಕಿಂತ ಕಿರಿದಾಗಿ, ಹಿರಿಯದಕ್ಕಿಂತ ಹಿರಿದಾಗಿ ವಿಶ್ವದ ಸಮಸ್ತ ವ್ಯಾಪಾರಗಳಿಗೂ, ಸೃಷ್ಟಿಯಲ್ಲಿನ ಸಮಸ್ತಕ್ಕೂ ಹಿನ್ನೆಲೆ ಯಲ್ಲಿರುವ ಈ ಅಗೋಚರ ಶಕ್ತಿಯಿಂದಲೇ ಮನುಷ್ಯನ ಬುದ್ಧಿಶಕ್ತಿ ಎನ್ನುವುದು ಕೂಡ ಕೆಲಸಮಾಡುತ್ತಿದೆ. ಒಂದು ಎಲ್ಲೆಯೊಳಗೆ ಸಿಕ್ಕಿ ಅಷ್ಟರೊಳಗೆ ಮಾತ್ರ ಈ ಬುದ್ಧಿಶಕ್ತಿ ಎಂಬುದು ಕೆಲಸಮಾಡಬಲ್ಲುದು, ಅದನ್ನು ಮೀರಿ ಹೋಗಲಾರದು. ಆದುದರಿಂದಲೇ ಸೃಷ್ಟಿ ಸತ್ಯ—ಪ್ರಕೃತಿಯಲ್ಲಿನ ಸತ್ಯ—ಇಷ್ಟೇ ಎನ್ನುವುದು ಕಷ್ಟ. ಮನುಷ್ಯನ ಬುದ್ಧಿಶಕ್ತಿಗೆ ಅರಿವಾಗುವಂತೆ ಹೀಗಿದೆ ಎನ್ನಬಹುದು. ಅಂದಮೇಲೆ ಇದೂ ಒಂದು ರೀತಿಯ ಸಾಪೇಕ್ಷ ಜ್ಞಾನ ಅಥವಾ ಸಾಪೇಕ್ಷವಾದ ಎನ್ನಬಹುದು.

ಆರ್. ಶ್ರೀನಿವಾಸೈಂಗಾರ್

ಮಿಂಚುಹುಳು

ಇಲ್ಲೇನಿದು ಈ ಬೆಳಕು ?
ಇಲ್ಲಿ ಅಲ್ಲಿ—ಅಲ್ಲಿ ಇಲ್ಲಿ
ಹೂಹೂವಿಗು ಗಿಡಗಿಡಕೂ
ಆರದ ಬೆಳಕಾರತಿ ?
ಮಿಂಚಿನ ಹೂಗೊಂಚಲರಳಿ
ಹುಡಿಹುಡಿಯಾಗೆದ್ದಿತೆ ?

ಆಕಾಶದ ನಕ್ಷತ್ರವೆ
ಬಿಂದು ಬಿಂದು ತೊಟ್ಟಿಕ್ಕಿತೆ ?
ಗರಿಮೂಡಿತೆ ? ಹಾರಾಡಿತೆ ?
ಕಣ್ಮಿಟುಕಿಸಿತೇನು ಇರುಳೆ ?
ಕತ್ತಲ ಈ ಕಾಡೊಳೆಲ್ಲ
ಬೆಳಕಿನಂಬೆಗಾಲು !

ಸುತ್ತ ಮಲಗಿರುಳ ಕಾಡು
ಕನವರಿಸಿದೆ ; ಬೆಳಕ ತೊದಲು !
ಕಚಗುಳಿಯಿಡುತಿರುವುದೇನು
ಕಾಣದ ಕೈ ಚೆಲುವ ಬೆರಳು !—
ಅಲ್ಲಲ್ಲೇ ಬೆಳಕರಳಿದೆ !

ಕ್ಷಣ ಬೆಳಕೂ ! ಕ್ಷಣ ಕತ್ತಲು !
ಬೆಳಕು—ಇರುಳು—ಇರುಳು—ಬೆಳಕು
ಇರುಳ ಬೆಳಕ ಓ ಪವಾಡ ;
ಕಣ್ಣಾಮುಚ್ಚಾಲೆ !
ಒಂದೇ ಸಮ ನಡೆದಿದೆ ಓ
ಸೌಂದರ್ಯದ ಲೀಲೆ ;
ಕಣ್ಣಾಮುಚ್ಚಾಲೆ ;

—ಜಿ. ಎಸ್. ಸಿದ್ಧಲಿಂಗಯ್ಯ

ಆತನ ಹೆಸರು

ಅವ.—ತಮ್ಮ ಹೆಸರೇನಮ್ಮ ?

ಆಕೆ.—ನನ್ಹೆಸರೇ . . . ನನ್ಹೆಸರು ಕೃಷ್ಣವೇಣಮ್ಮಂತ.

ಅ.—(ಬರೆಯುತ್ತ) ಕೃ—ಷ್ಣ—ವೇ—ಣ—ಮ್ಮ—ಸರಿ—ತಮ್ಮ—ಇವರ, ಅಂದರೆ ಯಜಮಾನ್ರ ಹೆಸರು ?

ಆ.—ಚೆನ್ನಾಗಿ ಕೇಳಿದ್ರಿಪ್ಪ ! ಅಲ್ಲ, ನಮ್ಮ ಯಜಮಾನ್ರ ಹೆಸರ್ನ ನಾನೇ ಹೇಳೋಕಾಗುತ್ತೆಯೆ ?

ಅ.—ಮತ್ತೆ ನಾವಿಲ್ಲಿ ಬರಕೋಬೇಕಲ್ಲಮ್ಮ, ಪೂರ್ತಿ ವಿವರಗಳನ್ನ ! ಹೆಸರು ತಿಳಿಸದೇ ಇದ್ರೆ ಹೇಗೆ ?

ಆ.—ಹಾಗಾದ್ರೆ . . . ತಡೀರಿ . . . ಉಂ . . . ಇಲ್ನೋಡೀಪ್ಪ, ನೀವು ಮೇಲ್ಕೋಟೆ ನೋಡಿದೀರಾ ?

ಅ.—ಹು, ನೋಡಿದೇನೆ . . .

ಆ.—ಮೇಲ್ಕೋಟೆ ಮೇಲಿನ ದೇವರ ಹೆಸರು ಹೇಳಿ ಮತ್ತೆ ನೀವೇನೇ.

ಅ.—ಜ್ಞಾಪಕ ಇಲ್ಲವಲ್ಲಾ . . . ನೀವೇ ಹೇಳಿ ಮತ್ತೆ.

ಆ.—ಚೆನ್ನಾಯ್ತು, ನಾ ಹೇಳೋ ಹಾಗಿದ್ರೆ, ಅವರ ಹೆಸರ್ನೇ ಹೇಳ್ತಿದ್ದೆ ! ಹೋಗಲಿ . . ಅಲ್ನೋಡಿ ಮನೆ ಮುಂದೆ ತೋಡಿದ್ದಾರಲ್ಲಾ, ಅದೇನು ?

ಅ.—ಬಚ್ಚಲು !

ಆ.—ಅದಲ್ಲ, ಇನ್ನೊಂದ್ಹೆಸರಿದೆ, ಅದಕ್ಕೆ, . . .

ಅ.—ಚರಂಡಿ !

ಆ.—ಹಾಂ ! ಅದು. ಅದರ ಮೊದಲಕ್ಷರದಿಂದಲೇ ಮೊದಲಾಗುತ್ತೆ, ನಮ್ಮ ಯಜಮಾನ್ರ ಹೆಸರು !

ಅ.—ಚ . . . ಚನ್ನಪ್ಪ ಅಂತಲೇ ?

ಆ.—ಅಲ್ಲ, ಅಲ್ಲ—ಇನ್ನೂ ಹೇಳಿ. ಮೇಲುಕೋಟೆ ಜ್ಞಾಪಿಸಿಕೊಳ್ಳಿ . . .

ಅ.—ಇನ್ನೇನು ಜ್ಞಾಪಿಸಿಕೊಳ್ಳಲಿ, ಮೇಲುಕೋಟೇನಾ.

ಚಪ್ಪಡಿ . . . ಚಪ್ಪರ . . . ಚಾಮರ . . . ಛತ್ರ . . .

ಆ.—ಛೆ . . . ಛೆ ಛೆ ! ದೇವರ ಹೆಸರು ಹೇಳಿ ಸಧ್ಯ . . .

ಅ.—ಚ . . . ಚಾಮುಂಡೇಶ್ವರಿ ! . . ಚಂಡಿಕೇಶ್ವರಿ.

ಆ.—ಮೇಲುಕೋಟೆ ಮರೀಬೇಡಿ. ಮೇಲುಕೋಟೆ ದೇವರು!

ಅ.—ಅದ್ಯಾವುದಪ್ಪ "ಚ" ಕಾರದಿಂದ ಪ್ರಾರಂಭವಾಗೋ ದೇವರ ಹೆಸರು, ನೆನಪಿಗೇ ಬರವಲ್ದು. . . . ಸ್ವಲ್ಪಿರಿ . . . ಚ . . . ಚಕ್ರ . . . ಚಕ್ರಪಾಣಿ . . . ಹುಂ! ಚಕ್ರಪಾಣಿ ಅನ್ನಿ . . .

ಆ.—ಅಲ್ಲಪ್ಪ! ಇನ್ನೂ ಹೇಳಿ . . .

ಅ.—ಚ . . . ಚ ಚತ್ರಿ . . . ಚಟ್ನಿ . . . ಚಟ್ನಿ ಪುಡಿ. . . ಚಳಕು, ಚಪಲ, ಚಳಿ . . .

ಆ.—ಅಯ್ಯೋ . . . ಹೋದಿರಿ . . . ಹೊರಟೇ ಹೋದಿರಿ, ಜಾಡು ಬಿಟ್ಟು! . . . ಹಿಂದಕ್ಕೆ ಬನ್ನಿ ಸ್ವಲ್ಪ . . . ಜ್ಞಾಪಿಸಿಕೊಳ್ಳಿ . . .

ಅ.—ಚಡಪಡಿಸಬೇಡಿ ಸಧ್ಯ ನೀವು. ಚಟ್—ಅಂತ ಹಾಗೆ ಜ್ಞಾಪಕ ಬಂದ್ಬಿಡುತ್ತಯೆ, ಅಷ್ಟು ಸುಲಭವಾಗಿ; ತಡೀರಿ . . . ಚರ್ಮ . . . ಚಾವಡಿ . . . ಚಮರಿ ಮೃಗ . . . ಚರಕ . . . ಚರಟ (ಸಾರು,ಹುಳಿಯದು).

ಆ.—ಹಯ್ಯೋ ಹೊರಟೊಯ್ತು, ಹೊರಟೇ ಹೋಯ್ತು, ಹೊರಟೇ ಹೋಯ್ತು ಕಂಬಿ ತಪ್ಪಿ.

ಅ.—ಚಟಾಕಿ, ಚಾವಟಿ, ಚಾ ಅಂಗಡಿ . . . ಚಮರಿಮೃಗ, ಚಕೋರ, ಚರಬಿ . . .

ಆ.—ಹೆಸರು! ಹೆಸರು! ಹೆಸರುಗಳು ಹೇಳಿಪ್ಪ—ಸಧ್ಯ, ದೇವರದು.

ಅ.—ಆ? ಹಾದು ಹೌದು, ನೋಡಿದಿರಾ ಅದೇ ಮರೆತಿದ್ದೆ . . . ಚ . . . ಚ . . . ಚೆನ್ನಿಗರಾಯ . . .

ಆ.—ಹಾ . . . ಹಾಗೇ . . . ಹಾಗೇ ಹೇಳ್ತಾ ಬನ್ನಿ.

ಅ.—ಚಂದ್ರ ಮೌಳೀಶ್ವರ, ಚಾಮಯ್ಯ, ಚನ್ನಪ್ಪ . . . ಆಯ್ತೇನಮ್ಮ, ಇನ್ನೆಷ್ಟು ಹೇಳಲಿ ಹೇಳಿ! ಚರಾಚರ ವಸ್ತುಗಳಲ್ಲಿ ಇನ್ಯಾವುದನ್ನು ನೇಮಿಸಲಿ?

ಆ.—ಹಾಗೇ ಹೇಳ್ತಾ ಬನ್ನಿ . . . ಮೇಲುಕೋಟೆ ಮರೀಬೇಡಿ . . .

ಅ.—ಹಯ್ಯೋ ಮೇಲುಕೋಟೇನೇ! ಚ . . . ಚಂದ್ರಯ್ಯ . . . ಚಾಣಾಕ್ಷಯ್ಯ, ಚಾರುದತ್ತ . . . ಚಾಲುಕ್ಯ—ಚಾರುಕೇಶಿ, ಚಕ್ರವಾಕ, . . . ಸಾಕು ಸಧ್ಯ . . . ತಲೆ ತಿರಿಗ್ತಿದೆ ನನಗೆ, ಚಲಮೇಲರಾ (ಹಾಡುತ್ತ) ಸಾಕೇತ ರಾಮ!

ಆ.—ಪರವಾಗಿಲ್ಲ ಹಾಡಿ. ಗಂಟ್ಲು ಚೆನ್ನಾಗಿದೆ . . . ಕನ್ನಡದ ಹಾಡು . . . ಆ ಕೋಲಾಟದ ಹಾಡು . . . ಅದ್ಹೇಳಿ. . .

ಅ.—ಯಾವುದು ? ಅದೇ ? (ಹಾಡುತ್ತ) “ ಚಲುವಯ್ಯ ಚಲುವೋ, ತಾನಿ ತಂದನ್ನ ! ”

ಆ.—ಅದೇ ! ಹೂ ! ಅದೇ ! ಅದರಲ್ಲಿದೆ ನೋಡಿ ಹೆಸರು !

ಅ.—ಯಾವ ಹೆಸರು ? ಯಾರ ಹೆಸರು ?

ಆ.—ಅದೇ, ನಮ್ಮ ಯಾಜಮಾನ್ರ ಹೆಸರು, ಆ ಹಾಡಿನಲ್ಲಿಲ್ವೆ ?

ಅ.—ಚಲುವಯ್ಯ ! ಚಲುವಯ್ಯನೇ !

ಆ.—ಹೂಂ ! **ಚಲುವಯ್ಯಾಂತಲೇ** ಅವರ ಹೆಸರು ಗೊತ್ತಾಯ್ತೆ ? ಬರಕೊಳ್ಳಿ **ಚ—ಲು—ವ—ಯ್ಯ !**

ಅ.—ಹು . . . ಸ್ ! ಈಗ ಹೇಳಿದಿರಲ್ಲ ಬಾಯಿಬಿಟ್ಟು ಇದನ್ನು ಮೊದಲೇ ಹೇಳೋದಕ್ಕಿಲ್ವೇನಮ್ಮಾ ! ನನಗೆ ಹುಚ್ಚು ಹಿಡಿಯೋದಕ್ಕೆ ಮುಂಚೇನೇ . . .

ಎಸ್. ಎನ್. ಶಿವಸ್ವಾಮಿ

ಹುಟ್ಟು

ಸದಾ ತೆರೆದ ಬಾಗಿಲು—
‘ಸುಸ್ವಾಗತ’ದ ಹಲಗೆಯೊಂದು ಮುಗುಳುನಗೆಯ ಬೀರಲು
—ಅತ್ತ ಇತ್ತ ತೂಗಲು
ದಿಕ್ಕುತಪ್ಪಿ ಅಲೆವಗಾಳಿ ಥಕ್ಕನಿಲ್ಲಿ ಬಂದಿಯು
ಅರೂಪತೆಯ ಬಂಜೆತನಕೆ ಸ್ವರೂಪತೆಯಭಂದವು !
ಏನು ಇದರ ಅಂದವು
—ಅದೇನು ಇದರ ಬಂಧವು !
ಬುರುಡೆ ಕಲ್ಲಗರುಡಿಯೊಳಗೆ ಮಲ್ಲಸುಸಿರು ಕಟ್ಟಿಗೆ
ಏನು ಕಟ್ಟು ! ಏನು ಗುಟ್ಟು ! ಏದುವೆದೆಯ ಪೆಟ್ಟಿಗೆ
—ಮತ್ತಾವುದೋ ಸೃಷ್ಟಿಗೆ
ಭೂಮಿತಾಯ ಎದೆಯ ಹಾಲು ತರುಲತಾನಿಕುಂಜಸ್ತನದಿ
ಹೊಮ್ಮಿ, ಹೂವ ಮೈಯನು
ಹೊತ್ತು, ಬೀಸೆ ಕೈಯನು
ಹಸಿದಶಿಶುವಿನೆಳೆಯಕಂಗಳಾಲಿ ಅತ್ತ ಹೊರಳಲು
ನೂರು ಜೇನು ನೊಣಗಳು
ಹಾರಿಬಂದವಿಲ್ಲಿಮನೆಗೆ ಏನನೇನೊಗೊಣಗಲು
ಮಧುವು ತಾನೆ ಜಿನುಗಲು
ಕವಿವ ತಿಮಿರ ಕಾಳಮೇಘ ಮಬ್ಬಿನುಸಿರು ದುರ್ಭರ
ಗಾಳಿ ಬೀಸೆ ಬರ ಬರ
ರಕ್ಷೆಯಾಗಲೆರಡುಗಳಿಗೆ ಗುಡಿಯ ಮಾತೃವಕ್ಷಕೆ
ದಾರಿಗೆಟ್ಟು ಧೃತಿಯುಕೆಟ್ಟು, ನೋಡೆ ಅಂತರಿಕ್ಷಕೆ;
ನಭೋನ್ಮಿಲಿತಾಕ್ಷಿಯಿಂದ ಪಥಾಂತರಕೆ ಹೊಳಹುಚಿಮ್ಮೆ
ಏನೊಸೃಜಿಸುವಾಟಕೆ
ಗಂಟೆಯಾದುದೇತಕೆ
ಪಾಕವಿಳಿಸಿ ಅಚ್ಚಿಗೆಳೆವದಂಥದೊಂದುಹೂಟಕೆ
ಇಲ್ಲಿ ದುಂಬಿಕೂಟಕೆ !

—ಜೀ. ಶಂ. ಪರಮಶಿವಯ್ಯ

ರೇಡಾರಿನ ಹಿನ್ನೆಲೆ

೧. ರೇಡಾರ್ ಮತ್ತು ಬ್ಯಾಟಲ್ ಆಫ್ ಬ್ರಿಟನ್

ರೇಡಾರ್ ತಂತ್ರ ಕಳೆದ ಮಹಾಯುದ್ಧದಲ್ಲಿ ಹೆಚ್ಚಿನ ಬಳಕೆಗೆ ಬಂದಿತು. ರೇಡಾರ್ ಎಂಬ ಪದ Radio Detection and Ranging (ರೇಡಿಯೋದಿಂದ ಪತ್ತೆ ಮಾಡುವುದು ಮತ್ತು ದೂರವನ್ನು ನಿರ್ಣಯಿಸುವುದು) ಎಂಬ ಪದ ಸಮೂಹದ ಸಂಕ್ಷಿಪ್ತ ರೂಪ. ರೇಡಾರ್ ಅತಿಸಣ್ಣ ವೇವ್ ಲೆಂಗ್ತಿನ ರೇಡಿಯೋ ಅಲೆಗಳನ್ನು ಒಂದು ದಿಕ್ಕಿನಲ್ಲಿ ಪ್ರಸಾರ ಮಾಡುತ್ತದೆ. ಅಲೆಗಳು ಆ ದಿಕ್ಕಿನಲ್ಲಿರುವ ಯಾವುದಾದರೂ ಟಾರ್ಗೆಟ್ (ಗುರಿ) ಗೆ ತಗುಲಿ ಪ್ರತಿಧ್ವನಿತ (ಎಕೋ) ವಾಗಿ ಬರುವುವು. ಅಲೆಗಳು ಹಿಂದಿರುಗಲು ಎಷ್ಟುಕಾಲ ತೆಗೆದುಕೊಂಡಿವೆಯೆಂಬುದನ್ನು ಅಳೆದರೆ ರೇಡಾರ್ ಯಂತ್ರಕ್ಕೂ ಟಾರ್ಗೆಟ್ಟಿಗೂ ಇರುವ ದೂರವನ್ನು ಸುಲಭವಾಗಿ ಲೆಕ್ಕ ಹಾಕಬಹುದು. ವಿಶೇಷ ವಿಧಾನಗಳಿಂದ ವಸ್ತುವಿನ ದಿಕ್ಕು, ಅದು ಚಲಿಸುತ್ತಿದ್ದರೆ ಅದರ ವೇಗ ಇವುಗಳನ್ನು ಸಹ ಕಂಡುಹಿಡಿಯಬಹುದು.

ರಾತ್ರಿಯ ವೇಳೆಯಲ್ಲಿಯೂ ಮಂಜು ಕವಿದಾಗಲೂ ಕಣ್ಣಿಗೆ ಕಾಣದಿರುವ ವಸ್ತುಗಳನ್ನೂ ರೇಡಾರ್ ಗುರುತಿಸಬಲ್ಲುದು. ರೇಡಾರಿನ ಏರಿಯಲ್ಲನ್ನು ಎತ್ತರದ ಸ್ಥಳದಲ್ಲಿರಿಸುವುದರಿಂದ ಅದರ ವ್ಯಾಪ್ತಿಯೂ ಹೆಚ್ಚುವುದು. ಹೀಗೆ ಕಣ್ಣಿಗೂ ಕಾಣದ ವಸ್ತುಗಳನ್ನು ಸುಲಭವಾಗಿ 'ನೋಡಲು' ಸಾಧ್ಯ ಮಾಡಿಕೊಡುವ ರೇಡಾರ್ ಹಲವು ಕ್ಷೇತ್ರಗಳಲ್ಲಿ ಉಪಯೋಗಿಸಲ್ಪಡುತ್ತಿದೆ. ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ವಿಮಾನ, ಹಡಗುಗಳನ್ನು ಕ್ಷೇಮವಾಗಿ ನಡೆಯಿಸುವುದಕ್ಕೆ ಇದರ ಉಪಯೋಗವಾಗುತ್ತಿದೆ. ಹಡಗುಗಳೂ, ವಿಮಾನಗಳೂ, ಸಬ್‌ಮೆರೈನುಗಳೂ ರೇಡಾರಿನ ಪೂರ್ಣ ಪ್ರಯೋಜನವನ್ನು ಪಡೆಯುತ್ತಿವೆ. ಮಿಟಿಯರಾಲಜಿ (ಹವಾಮಾನ ಶಾಸ್ತ್ರ) ದಲ್ಲಿ ಮೋಡ, ಮಳೆ, ಉಲ್ಕೆ (ಮಿಟಿಯರ್) ಗಳನ್ನು ದೂರದಿಂದಲೇ ರೇಡಾರಿನ ಸಹಾಯದಿಂದ ನೋಡಬಹುದು. ಹಕ್ಕಿಗಳ ದೇಶಾಂತರ ಗಮನವನ್ನೂ ರೇಡಾರ್ ನೋಡಬಲ್ಲದು. ಈಚೆಗೆ ರೇಡಾರಿನಿಂದ ಚಂದ್ರಮಂಡಲವನ್ನೇ ಮುಟ್ಟಲಾಗಿದೆ.

ರೇಡಾರಿನ ಪೂರ್ಣಪ್ರಭಾವ ಮೊದಲು ಗೊತ್ತಾದದ್ದು ಬ್ಯಾಟಲ್ ಆಫ್ ಬ್ರಿಟನ್ನಿನಲ್ಲಿ. ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷ್ ಸೈನ್ಯ ಯೂರೋಪಿನಿಂದ

ಕಾಲ್ತೆಗೆದ ಮೇಲೆ ಹಿಟ್ಲರ್ ಬ್ರಿಟನ್ನಿನ ಮೇಲೆ ಒಂದು ಪ್ರಚಂಡವಾದ ವಿಮಾನ ಧಾಳಿಯನ್ನು ಮಾಡಿದ. ಪ್ರತಿ ರಾತ್ರಿಯೂ ಕತ್ತಲಿನ ಮುಸುಕಿನಲ್ಲಿ ಹಿಟ್ಲರನ ನೂರಾರು ಬಾಂಬರ್ ವಿಮಾನಗಳು ಬ್ರಿಟನ್ನಿನ ಮೇಲೆ ಹಾರಿ ತಮ್ಮ ಆಸ್ಫೋಟಕಗಳ ಅಗ್ನಿ ವರ್ಷವನ್ನು ಸುರಿಸಿ ಹಿಂದಿರುಗುತ್ತಿದ್ದವು. ಲುಫ್ಟ್‌ವಾಫೆ (ಜರ್ಮನಿಯ ವಿಮಾನದಳ)ಯ ಮೂರರಲ್ಲೊಂದು ಭಾಗದಷ್ಟು ಮಾತ್ರವಿದ್ದ ರಾಯಲ್ ಏರ್ ಫೋರ್ಸ್ (ಬ್ರಿಟಿಷ್ ವಿಮಾನದಳ)ನ ಯೋಧರು ಹೇಗೆ ತಮ್ಮ ದೇಶವನ್ನು ಈ ಬಾಂಬರುಗಳ ಧಾಳಿಯಿಂದ ರಕ್ಷಿಸಿದರೆಂಬುದು ಬ್ರಿಟನ್ನಿನ ಚರಿತ್ರೆಯ ಚಿರಸ್ಮರಣೀಯವಾದ ಪುಟಗಳಲ್ಲಿ ಸೇರಿಹೋಗಿದೆ. ಈ ವಾಯು ಯುದ್ಧವೇ ಬ್ಯಾಟಲ್ ಆಫ್ ಬ್ರಿಟನ್ ಎಂದು ಹೆಸರಾಗಿದೆ. ರಾಯಲ್ ಏರ್ ಫೋರ್ಸಿನ ಪೈಲಟ್ (ಚಾಲಕ)ಗಳು ಹೊಗಳಿಕೆಗೆ ಅರ್ಹರಾದರೂ ಅವರ ಬೆನ್ನು ಹಿಂದೆ ರೇಡಾರಿನ ಸಹಾಯವಿಲ್ಲದಿದ್ದಲ್ಲಿ ಅವರು ತಮ್ಮ ದೇಶವನ್ನು ರಕ್ಷಿಸಲು ಅಸಮರ್ಥರಾಗುತ್ತಿದ್ದರೆಂಬುದು ನಿರ್ವಿವಾದವಾದ ವಿಷಯ. ಲುಫ್ಟ್ ಬಾಂಬರುಗಳು ಯೂರೋಪಿನ ದಡವನ್ನು ಬಿಡುತ್ತಿರುವಾಗಲೇ ರೇಡಾರಿನ ದೂರ ದೃಷ್ಟಿಯುಳ್ಳ ಕಣ್ಣುಗಳು ಅವುಗಳನ್ನು ಗುರುತಿಸಿ ಬ್ರಿಟಿಷ್ ವಾಫೆಯ ಫೈಟರ್ ವಿಮಾನಗಳ ಪೈಲಟ್‌ಗಳಿಗೆ ಎಷ್ಟು ಬಾಂಬರುಗಳು ಎಲ್ಲಿಂದ ಬರುತ್ತಿವೆಯೆಂಬುದರ ವಿವರಗಳನ್ನು ಒದಗಿಸುತ್ತಿದ್ದವು. ಬಾಂಬರ್‌ಗಳಿಗೆ ಹೋರಾಟಕ್ಕೆ ತಯಾರಾದ ಫೈಟರ್, ಆಂಟಿ ಏರ್‌ಕ್ರಾಫ್ಟ್ ಗನ್ನುಗಳ ಸ್ವಾಗತ ಕಾದಿರುತ್ತಿದ್ದಿತು. ಮೊದಲು ತನ್ನ ಬಾಂಬರುಗಳನ್ನು ಎದುರಿಸಲು ರಾಯಲ್ ಏರ್ ಫೋರ್ಸ್ ಹೇಗೆ ಸದಾಕಾಲವೂ ಸಿದ್ಧವಾಗಿರುತ್ತದೆ ಎಂಬುದೇ ಹಿಟ್ಲರನಿಗೆ ದೊಡ್ಡ ಸಮಸ್ಯೆಯಾಯಿತು. ಬೇರೆ ಯಾವ ದೇಶದಲ್ಲಿಯೂ ಉಪಯೋಗದಲ್ಲಿಲ್ಲದ ರೇಡಾರನ್ನು ಮೊದಲು ನಿರ್ಮಿಸಿ ಬಳಸಿದುದರಿಂದ ಬ್ರಿಟನ್ ಅತ್ಯಮೂಲ್ಯವಾದ ಲಾಭವನ್ನು ಪಡೆಯಿತು. ರೇಡಾರ್ ಬ್ರಿಟಿಷ್ ದೇಶವನ್ನೇ ಬ್ಯಾಟಲ್ ಆಫ್ ಬ್ರಿಟನ್ನಿನಲ್ಲಿ ಕಾಪಾಡಿತು.

೨. ಮಾರಣ ಕಿರಣ

ಟೈಮ್ ಪತ್ರಿಕೆ (೧೦-೬-೫೭) ಯಲ್ಲಿನ ಸುದ್ದಿಯೊಂದರ ಪ್ರಕಾರ ರೇಡಾರ್ ಮಾರಣ ಕಿರಣವಾಗಿಯೂ ಪರಿಣಮಿಸುತ್ತದೆ.

ನಲವತ್ತೆರಡು ವರ್ಷ ವಯಸ್ಸಿನ ಕೆಲಸಗಾರನೊಬ್ಬ ಶಕ್ತಿಯುತವಾದ ರೇಡಾರ್ ಟ್ರಾನ್ಸ್‌ಮಿಟರ್ ಒಂದರ ಮುಂದೆ ಹತ್ತು ಅಡಿ ದೂರದಲ್ಲಿ ನಿಂತ. ಅವನು ನಿಂತಿದ್ದು ಎರಡು ನಿಮಿಷ ಮಾತ್ರ. ಎರಡು ವಾರಗಳಲ್ಲಿಯೇ ಅವನು ಜೀವಬಿಟ್ಟ. ಅವನ

ಶರೀರವನ್ನು ಪರೀಕ್ಷಿಸಿದ ಕ್ಯಾಲಿಫೋರ್ನಿಯಾದ ಸರ್ಜನ್ ಮೆಕಲಾಫ್‌ಲಿನ್ ಹೇಳಿದ: ರೋಗಿಯ ಮೈಮೇಲೆ ಗಾಯಗಳು ಯಾವುವೂ ಕಾಣಲಿಲ್ಲ. ಆದರೆ ಹೊಟ್ಟೆಯೊಳಗೆ ಒಂದು ರೂಪಾಯಿನಗಲದ ಸ್ಥಳ ಬೆಂದು ತೂತಾಗಿತ್ತು. ಮೆಕಲಾಫ್‌ಲಿನ್ ಇಂತಹುದೇ ಬೇನೆಯಿಂದ ನರಳಿದ ಕೆಲವರನ್ನು ಕಂಡಿದ್ದಾನೆ; ಬಲವಾದ ಮೈಕ್ರೋವೇವ್ ರೇಡಾರ್ ಟ್ರಾನ್ಸ್‌ಮಿಟರ್‌ಗಳು ರಕ್ಷಣೆಯಿಲ್ಲದ ಹತ್ತಿರದಲ್ಲಿರುವ ಜನರಿಗೆ ಅಪಾಯಕಾರಕವೆಂದು ಎಚ್ಚರಿಸುತ್ತಾನೆ. ಟ್ರಾನ್ಸ್‌ಮಿಟರಿನಿಂದ ಬರುವ ಶಕ್ತಿ ದೇಹದ ಒಳಗೆ ಸುಟ್ಟಗಾಯಗಳನ್ನು ಉಂಟುಮಾಡುತ್ತದೆ.

೩. ಮಾರಣ ಕಿರಣದ ಅನ್ವೇಷಣೆ

ರೇಡಾರ್ ಕಿರಣಗಳು ಹೀಗೆ ಅಪಾಯಕಾರಕವಾದುದು ಆಕಸ್ಮಿಕವಾಗಿ. ಆದರೆ ರೇಡಾರಿನ ಜನ್ಮಕ್ಕೆ ಕಾರಣ ಮಾರಣ ಕಿರಣವೊಂದರ ಅನ್ವೇಷಣೆಯೇ ಆಗಿದೆ. ಜಿ. ಆರ್. ಎಂ. ಗ್ಯಾರಟ್ ಈ ಅನ್ವೇಷಣೆಯನ್ನು ವಿವರಿಸಿದ್ದಾನೆ (ಎಲೆಕ್ಟ್ರಾನಿಕ್ ಎಂಜಿನಿಯರಿಂಗ್, ಮಾರ್ಚಿ ೧೯೫೮). ಈಚೆಗೆ ರೇಡಾರಿನ ಜನ್ಮದಾತನಾದ ಸರ್ ರಾಬರ್ಟ್ ವಾಟ್ಸನ್ ವಾಟನ ಪುಸ್ತಕವೂ (*Three Steps To Victory : Odhams.*) ಹೊರಬಿದ್ದಿದೆ.

೧೯೩೪ರ ಕೊನೆಯ ದಿನಗಳು. ಆಗ ನಾಜೀ ಜರ್ಮನಿಯು ಯುದ್ಧಸನ್ನದ್ಧವಾಗುತ್ತಿದ್ದುದನ್ನು ಕಂಡು ವಿಚಾರಪರರೆಲ್ಲರಿಗೂ ಯೋಚನೆಯಾಗಿದ್ದಿತು. ಬ್ರಿಟನ್ನಿನ ಏರ್‌ಮಿನಿಸ್ಟ್ರಿ (ವಾಯುಮಂತ್ರಿಯ ಕಛೇರಿ) ಯ ಸೈಂಟಿಫಿಕ್ ರಿಸರ್ಚ್ (ವಿಜ್ಞಾನ ಸಂಶೋಧನೆ) ಶಾಖೆಯ ಎ. ಪಿ. ರೋವ್ ರೇಡಿಯೋ ರಿಸರ್ಚ್ ಸ್ಟೇಷನ್ನಿನ ಮುಖ್ಯಸ್ಥ ರಾಬರ್ಟ್ ವಾಟ್ಸನ್ ವಾಟ್‌ನೊಡನೆ ಬ್ರಿಟನ್ನಿನ ರಕ್ಷಣೆಗೆ ಉಪಯೋಗವಾಗುವಂತೆ ಒಂದು ಮಾರಣಕಿರಣವನ್ನೇನಾದರೂ ಕಂಡುಹಿಡಿಯುವುದು ಸಾಧ್ಯವೇ ಎಂಬ ವಿಚಾರವನ್ನು ಚರ್ಚಿಸಿದನು. ಕಥೆಗಳಲ್ಲಿ ಮಾರಣಕಿರಣಗಳ ವಿವರಣೆ ಇರುತ್ತದೆ. ಕಿರಣವನ್ನು ಯಾರಮೇಲೆಯಾದರೂ ಹೊಳೆಯಿಸಿದರೆ ಸಾಕು, ಅವರು ಸತ್ತು ಬೀಳುವರು. ಕಿರಣ ಬೆಳಕಿನ ವೇಗದಲ್ಲಿ ಚಲಿಸುವುದು, ಎಷ್ಟುದೂರ ಬೇಕಾದರೂ ಇರುವವರನ್ನು ಬಲಿತೆಗೆದುಕೊಳ್ಳುವುದು. ಬಂದೂಕಿಗಿಂತ ಸಾವಿರಪಾಲು ಭಯಂಕರವಾದುದು, ಈ ಕಿರಣ. ಆದರೆ ಇದು ಹುಡುಗರು ಓದುವ ಕಥೆಗಳ ಪುಟಗಳಲ್ಲಿದ್ದಿತೇ ಹೊರತು ಯಾರೂ ಇಂತಹ ಕಿರಣವನ್ನು ತಯಾರಿಸುವುದೂ ಉಪಯೋಗಿಸುವುದೂ ಸಾಧ್ಯವೆಂದು ಭಾವಿಸಿರಲಿಲ್ಲ.

ವಾಟ್ಸನ್ ವಾಟ್ ಈ ವಿಷಯವನ್ನು ಒಂದೇ ಸಲ ಕೈಬಿಡಲಿಲ್ಲ. ರೇಡಿಯೋ

ಕಿರಣವನ್ನೇ ಈ ರೀತಿ ಉಪಯೋಗಿಸಿದರೆ ಪರಿಣಾಮವೇನಾಗುತ್ತದೆ ಎಂದು ಲೆಕ್ಕ ಹಾಕಿದ. ಫಲಿತಾಂಶ ಈ ರೀತಿ ಬಂದಿತು: ರೇಡಿಯೋ ಟ್ರಾನ್ಸ್‌ಮಿಟರಿನ ಏರಿಯಲ್ಲಿ ನಿಂದ ೬೦೦ ಗಜ ದೂರದಲ್ಲಿ ಒಬ್ಬ ಮನುಷ್ಯ ನಿಂತಿದ್ದಾನೆಂದು ಇಟ್ಟುಕೊಳ್ಳೋಣ. ಅವನ ಶರೀರದ ಟೆಂಪರೇಚರ್ ಬರಿಯ ಎರಡೇ ಡಿಗ್ರಿಗಳಷ್ಟು ಜಾಸ್ತಿಯಾಗ ಬೇಕಾಗಿದ್ದರೆ (ಅವನನ್ನು ಸಾಯಿಸಬೇಕಾದರೆ ಟೆಂಪರೇಚರ್ ಸುಮಾರು ನೂರು ಡಿಗ್ರಿಯಷ್ಟೇ ಹೆಚ್ಚಾಗಬೇಕಾದೀತು) ರೇಡಿಯೋ ಟ್ರಾನ್ಸ್‌ಮಿಟರಿನ ಶಕ್ತಿ ಐದು ಮಿಲಿಯನ್ (೫,೦೦೦,೦೦೦) ಕಿಲೋವಾಟುಗಳಷ್ಟು ಇರಬೇಕಾಗುತ್ತದೆ! ಇದು ಎಷ್ಟು ಜಾಸ್ತಿಯೆಂದು ಮನವರಿಕೆಯಾಗಬೇಕಾಗಿದ್ದರೆ ಈ ಶಕ್ತಿಯನ್ನು ಬೆಂಗಳೂರು ರೇಡಿಯೋ ಸ್ಟೇಷನ್ನಿನ ಐವತ್ತು ಕಿಲೋವಾಟ್ ಶಕ್ತಿಯೊಂದಿಗೆ ಹೋಲಿಸಿ ನೋಡಬಹುದು. ಆ ದೊಡ್ಡ ಏರಿಯಲ್‌ಗಳನ್ನು ಉಪಯೋಗಿಸಿ ಕಿರಣಗಳನ್ನು ಒಂದೇ ದಿಕ್ಕಿನಲ್ಲಿ ಕೇಂದ್ರೀಕರಿಸಿದರೆ ಇನ್ನೂ ಹೆಚ್ಚು ಶಕ್ತಿಯನ್ನು ಬೀರಬಹು ದಾದರೂ ಇದರಿಂದ ಏರಿಯಲ್‌ಗಳನ್ನು ಉಪಯೋಗಿಸುವುದು ಕಷ್ಟವಾಗುತ್ತದೆ.

೪. ವಾಟ್ಸನ್ ವಾಟನ ಮೆಮೊರಾಂಡಂಗಳು

ಈ ಲೆಕ್ಕಾಚಾರವನ್ನೆಲ್ಲಾ ಸೇರಿಸಿ ವಾಟ್ಸನ್ ವಾಟ್ ಒಂದು ಮೆಮೊರಾಂಡಮ (ಪತ್ರ) ನ್ನು ಒಪ್ಪಿಸಿದ. ಅದರಲ್ಲಿ ರೇಡಿಯೋವನ್ನು ಮಾರಣಕಿರಣವನ್ನಾಗಿ ಉಪ ಯೋಗಿಸುವುದು ಹೇಗೆ ಅಸಾಧ್ಯವೆಂದು ಸ್ಪಷ್ಟಮಾಡಿದ. ಆದರೆ ಕೊನೆಯಲ್ಲಿ ವಿನಾಶಕಾರಕ ರೇಡಿಯೋ ಕಿರಣಗಳ ನಿರ್ಮಾಣ ಕಷ್ಟಸಾಧ್ಯವಾದರೂ ರೇಡಿಯೋ ಕಿರಣಗಳ ಸಹಾಯದಿಂದ ದೂರದಲ್ಲಿರುವ ವಸ್ತುಗಳನ್ನು ಪತ್ತೆಮಾಡುವುದು ಸುಲಭ ವೆಂದೂ ಬರೆದಿದ್ದ.

ವಾಯು ರಕ್ಷಣೆಯ ಸಮಿತಿ ತತ್‌ಕ್ಷಣ ವಾಟ್ಸನ್ ವಾಟನನ್ನು ಈ ಬಗೆಗೆ ವಿವರಗಳನ್ನು ಒಪ್ಪಿಸಬೇಕೆಂದು ಕೇಳಿತು. 'ರೇಡಿಯೋ ವಿಧಾನಗಳಿಂದ ವಿಮಾನಗ ಳನ್ನು ಗುರುತಿಸುವುದು ಮತ್ತು ಅವುಗಳ ನೆಲೆಯನ್ನು ನಿರ್ಣಯಿಸುವುದು' ಎಂಬ ಇನ್ನೊಂದು ಮೆಮೊರಾಂಡಮನ್ನು ಆತನು ಬರೆದನು. ಈ ಪತ್ರ ರೇಡಾರ್ ವಿಷಯದ ಭವಿಷ್ಯವನ್ನೆಲ್ಲಾ ಆಶ್ಚರ್ಯಕರವಾಗುವಷ್ಟು ವಿವರವಾಗಿ, ಸ್ಪಷ್ಟವಾಗಿ ಊಹಿಸಿ ಹೇಳಿದೆ. ಸೆಕೆಂಡರಿ ರೇಡಿಯೇಷನ್ (ಪ್ರತಿ ಫಲಿತ ಕಿರಣ) ನಿಂದ ವಿಮಾನವನ್ನು ಸುಮಾರು ದೂರದಲ್ಲಿಯೇ ಕಂಡುಹಿಡಿಯಬಹುದೆಂದು ಆ ಲೇಖನ ತಿಳಿಸುತ್ತದೆ. ಕಿರಣಗಳನ್ನು ನಿರಂತರವಾಗಿ (Continuous) ಕಳುಹಿಸುವುದಕ್ಕಿಂತ ಪಲ್ಸ್‌ಗಳ (ಎಂದರೆ ಮಧ್ಯೆ ಮಧ್ಯೆ ಸ್ವಲ್ಪ ಕಾಲ ತಡೆದು ತಡೆದು ಬರುವ ಶಕ್ತಿಯ ಗುಂಪುಗಳು)

ರೂಪದಲ್ಲಿ ಕಳುಹಿಸುವುದು ಹೇಗೆ ಉಪಯೋಗಕಾರಿಯಾಗುತ್ತದೆಯೆಂದೂ, ಪಲ್ಸ್‌ಗಳು ಪ್ರತಿಧ್ವನಿತವಾಗಿ ಬಂದಾಗ ಅವುಗಳನ್ನು ಗ್ರಹಿಸಿ ಕ್ಯಾಥೋಡ್ ರೇ ಟ್ಯೂಬ್ ಎಂಬ ಉಪಕರಣದ ಸಹಾಯದಿಂದ ನೋಡಿ ಅವು ಹೊರಟ ಕಾಲಕ್ಕೂ ಹಿಂದಿರುಗಿದ ಕಾಲಕ್ಕೂ ಇರುವ ವ್ಯತ್ಯಾಸದಿಂದ ಹೇಗೆ (ಟಾರ್ಗೆಟ್ಟಿನ) ದೂರವನ್ನು ಅಳೆಯಬಹುದೆಂದೂ ಸೂಚಿಸಿದೆ. ಮೂರು ರೇಡಾರ್ ಸ್ಟೇಷನ್ನುಗಳನ್ನು ಉಪಯೋಗಿಸಿ ದೂರವನ್ನು ಅಳೆದರೆ ವಿಮಾನವಿರುವ ನಿರ್ದಿಷ್ಟವಾದ ಸ್ಥಳವನ್ನು ದೂರದೊಂದಿಗೆ ಪತ್ತೆ ಮಾಡುವುದು ಸಾಧ್ಯ; ಆದರೆ ತಿರುಗುವ ಏರಿಯಲ್‌ಗಳನ್ನು ಉಪಯೋಗಿಸಿದರೆ ಒಂದೇ ಸ್ಟೇಷನ್ ದಿಕ್ಕು, ದೂರಗಳೆರಡನ್ನೂ ಗೊತ್ತುಮಾಡುತ್ತದೆ; ಅಲ್ಲದೆ ತಿರುಗುವ ಏರಿಯಲ್‌ನಿಂದ ಎತ್ತರವನ್ನೂ ಅಳೆಯಬಹುದು ಎಂದೂ ಆ ಪತ್ರ ಚರ್ಚಿಸುತ್ತದೆ. ಬಳಕೆಯಲ್ಲಿರುವುದಕ್ಕಿಂತ ಸಣ್ಣ ಅಲೆ (ಷಾರ್ಟ್ ವೇವ್) ಗಳನ್ನು ಉಪಯೋಗಿಸುವುದರ ಆವಶ್ಯಕತೆಯೂ ಇದರಿಂದ ಗೊತ್ತಾಗುತ್ತದೆ. ಸಣ್ಣ ಅಲೆಗಳನ್ನು ಕುರಿತು ಪ್ರಯೋಗಗಳು ಮಾಡಲ್ಪಡಬೇಕೆಂದು ಹೇಳಿದರೂ ವಾಟ್ಸನ್ ವಾಟನ ಮೆಮೊರಾಂಡಂ ತತ್ಕ್ಷಣದಲ್ಲಿ ಬೇಕಾದ ಕೆಲಸಗಳಿಗೆ ಆಗ ಸಿದ್ಧವಾಗಿದ್ದ ಉಪಕರಣಗಳನ್ನೇ ಯೋಜಿಸಬಹುದೆಂದು ಸಲಹೆ ಮಾಡುತ್ತದೆ. ಮಿತ್ರ—ಶತ್ರು ವಿಮಾನಗಳನ್ನು ವಿವೇಚಿಸಲು ಉಪಾಯಗಳನ್ನೂ ಅದು ಸೂಚಿಸುತ್ತದೆ. ರೇಡಾರಿನ ಚರಿತ್ರೆಯಲ್ಲಿಯೇ ಅತಿ ಮುಖ್ಯವಾದ ಪಾತ್ರವನ್ನು ಈ ಮೆಮೊರಾಂಡಂ ವಹಿಸಿದೆ.

ರೇಡಿಯೋ ಕಿರಣಗಳು ಪ್ರತಿಧ್ವನಿತವಾಗುತ್ತವೆಯೆಂಬುದನ್ನು ಕಂಡುಹಿಡಿದವನು ವಾಟ್ಸನ್ ವಾಟನಲ್ಲ. ಪಲ್ಸ್ ವಿಧಾನಗಳೂ ಇತರರಿಂದ ಮೊದಲೇ ಉಪಯೋಗಿಸಲ್ಪಡುತ್ತಿದ್ದವು. ಆದರೆ ಈ ಎರಡು ತತ್ತ್ವಗಳನ್ನೂ ಉಪಯೋಗಿಸಿಕೊಂಡು ವಾಯು ಧಾಳಿಗಳಿಂದ ರಕ್ಷಣೆಪಡೆಯಲು ಮೊದಲು ಯೋಜನೆಗಳನ್ನು ತಯಾರಿಸಿದ ಖ್ಯಾತಿ ವಾಟ್ಸನ್ ವಾಟನಿಗೆ ಸಲ್ಲುತ್ತದೆ.

೫. ರೇಡಾರಿನ ಮೊಟ್ಟಮೊದಲ ಪ್ರಯೋಗ

ವಾಟ್ಸನ್ ವಾಟನಿಗೆ ರೇಡಿಯೋ ಕಿರಣಗಳ ನಡೆವಳಿಕೆಯ ಬಗೆಗೆ ಇದ್ದ ಅನುಭವದ ವ್ಯಾಪ್ತಿ ಎಷ್ಟಾಗಿತ್ತೆಂದರೆ ಅವನು ತಾನು ಕೊಟ್ಟ ಭರವಸೆಗಳ ನೆರವಿಗಾಗಿ ಯಾವ ಪ್ರಯೋಗ (ಎಕ್ಸ್‌ಪೆರಿಮೆಂಟ್) ಗಳನ್ನೂ ಮಾಡಬೇಕಾಗಿರಲಿಲ್ಲ. ಅವನು ಮಾಡಿದ ಲೆಕ್ಕಾಚಾರಗಳನ್ನು ರೇಡಿಯೋ ಅಲೆಗಳ ಜ್ಞಾನವಿದ್ದವರೆಲ್ಲರೂ ಒಪ್ಪುವುದರಲ್ಲಿ ಸಂಶಯವೂ ಇರಲಿಲ್ಲ. ಆದರೆ ಏರ್ ಮಿನಿಸ್ಟ್ರಿಯ ಅಧಿಕಾರಿಗಳು ಈ ರೇಡಿಯೋ ವಿಧಾನವನ್ನು ಕಾರ್ಯತಃ ತೋರಿಸಿಕೊಡಬೇಕೆಂದು ಕೇಳಿದರು. ವಾಟ್ಸನ್ ವಾಟ್

ಒಪ್ಪಿದ. ಆದರೆ ಇದಕ್ಕೋಸ್ಕರ ಬೇರೆ ರೇಡಾರ್ ಉಪಕರಣಗಳನ್ನು ಡಿಸೈನ್ ಮಾಡಿ ಉಪಯೋಗಿಸುವುದಕ್ಕೆ ಹೆಚ್ಚಿನ ಕಾಲವೂ ಹಣವೂ ವ್ಯರ್ಥವಾಗುತ್ತದೆ ಯಾದುದರಿಂದ ಸುಲಭವಾದ ದಾರಿಯೊಂದನ್ನು ಹುಡುಕಿದ. ಬಳಕೆಯಲ್ಲಿದ್ದ ಸಾಧಾರಣವಾದ ರೇಡಿಯೋ ಅಲೆಗಳನ್ನೇ ಉಪಯೋಗಿಸಿದರೆ ಆಗಲೇ ಹೆಚ್ಚು ವೆಚ್ಚವಿಲ್ಲದೆ ರೇಡಾರನ್ನು ವಿಮಾನದ ಪತ್ತೆಗಾಗಿ ಉಪಯೋಗಿಸಬಹುದೆಂದು ಯೋಚಿಸಿದ. ಡಾವೆಂಟ್ರಿಯಲ್ಲಿರುವ ಬಿ. ಬಿ. ಸಿ. (ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್) ಯ ಷಾರ್ಟ್ ವೇವ್ ಟ್ರಾನ್ಸ್‌ಮಿಟರ್ ಒಂದನ್ನೇ ಈ ಪ್ರಯೋಗ ದಲ್ಲಿ ಉಪಯೋಗಿಸುವುದೆಂದು ನಿರ್ಧಾರವಾಯಿತು. ಹತ್ತು ಕಿಲೋವಾಟ್ ಶಕ್ತಿಯ ೪೯.೮ ಮೀಟರಿನ ಅಲೆಗಳನ್ನು ದಕ್ಷಿಣ ದಿಕ್ಕಿಗೆ ಕೇಂದ್ರೀಕರಿಸಿ ಪ್ರಸಾರ ಮಾಡುವ ಏರಿಯಲ್‌ಗಳ ಮೂಲಕ ಪ್ರಸಾರವಾದ ಕಿರಣಗಳ ದಾರಿಯಲ್ಲಿ ಒಂದು ವಿಮಾನ ಮೇಲೆ—ಕೆಳಗೆ, ಕೆಳಗೆ—ಮೇಲೆ ಹಾರುತ್ತಿರಬೇಕೆಂದು ಏರ್ಪಡಿಸಲಾಯಿತು. ವಿಮಾನದಿಂದ ರಿಫ್ಲೆಕ್ಟ್ (ಪ್ರತಿಫಲಿತ) ಆದ ಕಿರಣಗಳನ್ನು ರಿಸೀವರ್ ಯಂತ್ರ ವೊಂದರಿಂದ ಆರಿಸಿಕೊಂಡು ಕ್ಯಾಥೋಡ್ ರೇ ಆಸಿಲೋಗ್ರಾಫ್ ಯಂತ್ರದಲ್ಲಿ ಕಿರಣಗಳನ್ನು ನೋಡಲು ಸಾಧ್ಯವಾಗುವಂತೆ ಮಾಡಬಹುದು.

೧೯೩೫ ನೆಯ ಇಸವಿ ಫೆಬ್ರವರಿ ಇಪ್ಪತ್ತಾರನೆಯ ತಾರೀಖು ಬೆಳಗ್ಗೆ ೯.೪೫ ಗಂಟೆಯಿಂದ ೧೦.೩೦ ರ ವರೆಗೆ ಒಂದು ವಿಮಾನ ರೇಡಿಯೋ ಸ್ಟೇಷನ್ನಿನಿಂದ ಬರುತ್ತಿದ್ದ ರೇಡಿಯೋ ಅಲೆಗಳ ದಾರಿಯಲ್ಲಿ, ೫,೦೦೦ ಅಡಿಗಳ ಎತ್ತರದಲ್ಲಿ ಮೇಲಿ ನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಹಾರುತ್ತಿರಬೇಕೆಂದು ಮೊದಲೇ ನಿಶ್ಚಯವಾಗಿ ದ್ದಿತು. ಹಿಂದಿನ ದಿನವೇ ರಿಸೀವರ್ ಉಪಕರಣಗಳೆಲ್ಲಾ ಡಾವೆಂಟ್ರಿಯಿಂದ ಐದು ಮೈಲಿ ದೂರದಲ್ಲಿದ್ದ ಮೈದಾನವೊಂದರಲ್ಲಿರಿಸಲ್ಪಟ್ಟ ವ್ಯಾನಿನಲ್ಲಿ ಜೋಡಿಸಲ್ಪಟ್ಟಿದ್ದವು. ಏರಿಯಲ್‌ಗಳು ಅಲೆಗಳನ್ನು ಗ್ರಹಿಸಲು ಸಿದ್ಧವಾಗಿದ್ದವು.

ಹೊತ್ತಿಗೆ ಸರಿಯಾಗಿ ವಾಟ್ಸನ್ ವಾಟ್ ಮತ್ತು ರೋವ್ ಬಂದಿಳಿದರು. ೯.೪೫ ಗಂಟೆಗೆ ದೂರದ ಏರೋಪ್ಲೇನಿನ ಶಬ್ದ ಕೇಳಬಂದಿತು. ವ್ಯಾನಿನಲ್ಲಿದ್ದವರೆಲ್ಲ ಕ್ಯಾಥೋಡ್ ರೇ ಟ್ಯೂಬನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರಿಗೆ ಕಾಣಬೇಕಾಗಿದ್ದು ದೇನೂ ಕಾಣಲಿಲ್ಲ. ದೂರದಲ್ಲಿ ಏರೋಪ್ಲೇನ್ ಹಾರುತ್ತಿದ್ದುದು ಕಣ್ಣಿಗೆ ಕಾಣಿಸು ತ್ತಲಿತ್ತು. ಅದು ರೇಡಿಯೋ ಕಿರಣಗಳ ಹಾದಿಗೆ ಅಡ್ಡಲಾಗಿ ಹೋಗುತ್ತಿದ್ದ ಹಾಗೆಯೇ ಕ್ಯಾಥೋಡ್ ರೇ ಟ್ಯೂಬಿನ ಮೇಲೆ ಅದರ ಗುರುತಾಗಿ ಪ್ರತಿಧ್ವನಿತವಾದ ಅಲೆಗಳ ಕುರುಹು ಕಾಣಿಸಿಕೊಂಡಿತು. ಏರೋಪ್ಲೇನ್ ರೇಡಿಯೋ ಕಿರಣಗಳ ಹಾದಿಯಿಂದ ಆಚೆ ಹೋದಂತೆ ಗುರುತು ಅಳಿಸಿತು. ಮತ್ತೆ ಅದು ಹಾದಿಗೆ ಬಂದಾಗ ಗುರುತೂ

ಪುನರಾಗಮಿಸಿತು. ಎಂಟು ಮೈಲಿ ದೂರದಲ್ಲಿದ್ದ ಆ ಬಾಂಬರ್ ವಿಮಾನವನ್ನು ಸರಳ ವಾದ ರೇಡಾರ್ ಉಪಕರಣದಿಂದ ಗುರುತಿಸಿದಂತಾಯಿತು.

ಅಂದೇ ರೇಡಾರಿನ ಜನನವಾಯಿತು. ಆ ವ್ಯಾನಿನಲ್ಲಿದ್ದವರಿಗೆ ತಾವು ಚರಿತ್ರೆಯಲ್ಲಿ ಮುಖ್ಯವಾದ ಸಾಧನವೊಂದರ ಆವಿರ್ಭಾವವಾಗುವುದರಲ್ಲಿ ಭಾಗವಹಿಸುತ್ತಿದ್ದೇವೆಂಬ ಭಾವನೆ ಮನಸ್ಸಿನಲ್ಲಿ ಆಳವಾಗಿದ್ದಿತು. ಬಾಂಬರುಗಳ ಧಾಳಿಯಿಂದ ರಕ್ಷಣೆಯನ್ನು ಪಡೆಯುವುದರಲ್ಲಿ ನೂತನವಾದ ಪ್ರಬಲ ಆಯುಧವೊಂದು ಬ್ರಿಟನ್ನಿನ ಕೈಗೆ ಬಂದಂತಾಯಿತು. ವಾಟ್ಸನ್ ವಾಟನ ಮುಂದಿನ ಸೂಚನೆಗಳನ್ನೆಲ್ಲಾ ಪರೀಕ್ಷಿಸಬೇಕೆಂಬುದು ನಿರ್ಧಾರವಾಯಿತು. ಕಾತರತೆಯಿಂದ, ಶೀಘ್ರವಾಗಿ ರೇಡಾರಿನ ಪೂರ್ಣ ಅಭಿವೃದ್ಧಿ ಅವಸರ ಅವಸರವಾಗಿ ನಡೆಯಿತು. ಸಾಧಾರಣವಾಗಿ ನಲವತ್ತು ಐವತ್ತು ವರ್ಷಗಳಲ್ಲಿಯೂ ನಡೆಯದಂತಹ ಪ್ರಗತಿ ಎಂಟು ಹತ್ತು ವರ್ಷಗಳಲ್ಲಿಯೇ ನಡೆಯಿತು—ಯುದ್ಧದ ಮಹಿಮೆಯಿಂದ. ಬ್ರಿಟನ್ ರೇಡಾರನ್ನು ಮೊದಲು ಅಭಿವೃದ್ಧಿಗೆ ತಂದುದರಿಂದ ಅದರ ಪೂರ್ಣ ಲಾಭವನ್ನು ಆ ದೇಶ ಪಡೆಯಿತು.

ಎನ್. ಕೃಷ್ಣಸ್ವಾಮಿ

ಒಂದಿರುಳು

ವಿವಿಧ ಹಚ್ಚಡಗಳಿಗೆ ಜೀವವನಿತ್ತು ಬಂದಿದೆ ಮಾಗಿಯು :
ಚಳಿಯ ದಂಷ್ಟ್ರದ ಇರುಳ ಹೆಡೆಯನು ತೆರೆದು ನಿಂತಿಹ ಭೋಗಿಯು !
ಮುಚ್ಚಿ ದೇಹವ ಒರಗಿ ಬೆಚ್ಚನೆ ಹಾಸಿನೊಳು ನಾ ಮಲಗಿದೆ ;
ಕುಳಿರ ಕಡೆತಕೆ ಕರಗಲೊಲ್ಲದೆ ಸ್ವಪ್ನಲೋಕಕೆ ತೊಲಗಿದೆ !

ನಟ್ಟನಡುರಾತ್ರಿಯಲಿ ಯಾವುದೊ ಗಳಿಗೆ ಎಚ್ಚರವಾಯಿತು—
ಕಂಬಳಿಯನೋಸರಿಸಿ ನೋಡಿದೆ: ಕೊಠಡಿ ಕಂಗೊಳಿಸಿದ್ದಿತು !
ಶುಭ್ರ ಬೆಳುದಿಂಗಳಿನ ಅಚ್ಚೊಂದಿಳಿದು ಕಿಟಕಿಯ ಮೂಲಕ
ಗೋಡೆ ಮೇಲಿರೆ ದಿಟ್ಟಿಸಿದೆ ನಾನಾಗಿ ಮುಗ್ಧನು, ಬಾಲಕ !

ಜಡತೆಯಲಿ ಬಿದ್ದಿದ್ದ ಮನ ಗರಿಗೆದರಿ ಹಾರಿತು ಹೊರಗಡೆ ;
ಆಹ ! ಸೊಬಗಲ್ಲೆಂತು ಮೆರೆವುದೊ !—ಕಲ್ಪನೆಗೆ ಚಣ ಬಿಡುಗಡೆ.
ಒಂದೆ ಚಣ, ಮನ ಮತ್ತೆ ಎಲ್ಲೋ ಕತ್ತಲಲಿ ಬಂದಡಗಿತು ;
ಪುನಃ ಚೇತನವಿದನು ಯಾವುದೊ ವಿಸ್ಮೃತಿಯ ಪರೆ ಕವಿಯಿತು !

ಅಯ್ಯೊ, ಓಡಿದೆನಿಲ್ಲ, ನೋಡಿದೆನಿಲ್ಲ ಹೊರಗಿನ ಸಿರಿಯನು ;
ಕಳೆದುಕೊಂಡೆನು ಮೂಢ, ಭಾಗ್ಯವಿಹೀನ—ನೋಟದ ಪರಿಯನು !
ಚಳಿಗೆ ಅಳುಕುತ ಮುದುಡಿ ಮೈ, ಕಣ್ ಮುಚ್ಚಿ ಎಲ್ಲವ ಮರೆಯುತ
ಮತ್ತೆ ಕನವರಿಸುತ್ತ ಮಲಗಿದೆ ಹೊದಿಕೆಚಿಪ್ಪೊಳು ಹುದುಗುತ !

ಸಿ. ಪಿ. ಕೆ.

ಶ್ರವಣಾತೀತ ಶಬ್ದಗಳು (Ultrasonics)

ಶಬ್ದ ಪ್ರಪಂಚ

ನಾವು ವಾಸವಾಗಿರುವ ಪ್ರಪಂಚವು ಶಬ್ದಮಯುವಾದುದು. ಶಬ್ದವಿಲ್ಲದ ಪ್ರಪಂಚ ನೀರಸವಾಗುವುದು. ಪ್ರಕೃತಿಯ ಸೊಬಗು ಶಬ್ದದೊಡಗೂಡಿ ನಮಗೆ ಉಲ್ಲಾಸವನ್ನು ಕೊಡುತ್ತದೆ. ಪಕ್ಷಿಗಳ ಮಧುರಗಾನ, ಗಾಳಿ ಮರಗಳನ್ನು ಅಲುಗಾಡಿಸುವಾಗ ಬರುವ ಶಬ್ದ, ಸಾಗರದ ಅಲೆಗಳು ಭೋರ್ಗರೆಯುವ ಗಾಂಭೀರ್ಯ—ಇವುಗಳೆಲ್ಲ ನಮ್ಮನ್ನು ಮುಗ್ಧಗೊಳಿಸುತ್ತವೆ. ಇಂದಿನ ನಾಗರಿಕ ಪ್ರಪಂಚದಲ್ಲಿ ಪಟ್ಟಣಗಳಲ್ಲಿ ಕೇಳಬರುವ ಒಂದು ವಿಧವಾದ ಶಬ್ದದ ಅನುಭವೂ ನಮಗೆ ಉಂಟಾಗಿದೆ. ರೈಲ್, ಮೋಟಾರ್ ಗಾಡಿಗಳ ಹೂಟ್ (Hooting) ಗಳು, ಟ್ರಾಂ ಗಾಡಿಗಳ ಗಂಟೆಗಳು, ಯಂತ್ರಾಲಯಗಳಲ್ಲಿ ಯಂತ್ರಗಳ ಚಲನೆಯ ಶಬ್ದ, ಜನಸಮೂಹದ ಗದ್ದಲ—ಇವೆಲ್ಲವೂ ಒಟ್ಟುಗೂಡಿ ನಮಗೆ ಒಂದು ಬಗೆಯ ಬೇಸರದ ಪರಿಣಾಮವನ್ನೇ ಉಂಟುಮಾಡುತ್ತವೆ.

ಶಬ್ದ—ಸಂಗೀತ

ಶಬ್ದದಲ್ಲಿ ಎರಡು ವಿಧ. ಒಂದು ಕಿವಿಗೆ ಇಂಪಾಗಿದ್ದು ಮನಸ್ಸಿಗೆ ಹರ್ಷವನ್ನು ಉಂಟುಮಾಡಿ, ಆತ್ಮಕ್ಕೆ ತೃಪ್ತಿಯನ್ನು ಕೊಡುವ ಮಧುರಗಾನ. ಸಂಗೀತದ ಪ್ರಭಾವವನ್ನು ತಿಳಿಯದವರಿಲ್ಲ. ಕಾಡುಮೃಗಗಳನ್ನು ಪಳಗಿಸುವ, ಪರ್ವತಗಳನ್ನು ಕದಲಿಸುವ, ಪ್ರವಾಹಗಳನ್ನು ತಡೆಗಟ್ಟುವ, ಪ್ರಕೃತಿಯ ಘೋರಸ್ವರೂಪಗಳನ್ನು ಶಾಂತಮಾಡುವ, ಎಲ್ಲಕ್ಕಿಂತಲೂ ಮೇಲಾಗಿ, ಮಾನವನಿಗೂ ಪರಮಾತ್ಮನಿಗೂ ಸಂಬಂಧವನ್ನು ಕಲ್ಪಿಸುವ ಶಕ್ತಿಯನ್ನು ಸಹ ಸಂಗೀತವು ಪ್ರಭಾವ ಹೊಂದಿದೆ ಯೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಪ್ರತಿಯಾಗಿ ನಾವು ಶಬ್ದದ ಎರಡನೆಯ ರೂಪವಾದ ಗದ್ದಲವು ಹೇಗೆ ನಮಗೆ ಬೇಸರಕೊಡಬಹುದು. ಅಸಹ್ಯವಾಗಿ ತೋರಬಹುದು ಎಂಬುದನ್ನು ಅರಿತಿದ್ದೇವೆ.

ಶಬ್ದದ ಉತ್ಪತ್ತಿಸ್ಪಂದನಗಳು

ಶಬ್ದಶಾಸ್ತ್ರವು ಭೌತವಿಜ್ಞಾನದ ಒಂದು ಪ್ರಮುಖ ಅಂಗ—ಈಗ ನಮಗೆ ತಿಳಿದಿರುವ ಪ್ರಕಾರ ಶಬ್ದದ ಉತ್ಪತ್ತಿಗೆ ವಸ್ತುವಿನ ಸ್ಪಂದನವೇ ಮೂಲ ಕಾರಣ. ಸ್ಪಂದನ

ಮಾಡುವ ವಸ್ತುವು ಘನ, ದ್ರವ, ಅಥವಾ ಅನಿಲರೂಪದಲ್ಲಿಯಾದರೂ ಇರಬಹುದು. ಶಬ್ದವು ಪ್ರಸಾರವಾಗಬೇಕಾದರೆ, ಒಂದು ಮಧ್ಯವರ್ತಿ (Medium) ಯು ಇದ್ದೇ ಇರಬೇಕು. ಶೂನ್ಯಪ್ರದೇಶ (Vacuum) ದಲ್ಲಿ ಶಬ್ದವು ಪ್ರವಹಿಸಲಾರದು. ಸಾಮಾನ್ಯವಾಗಿ ನಮ್ಮ ವಾತಾವರಣದಲ್ಲಿರುವ ಗಾಳಿಯ ಮೂಲಕ ಶಬ್ದವು ಪ್ರಸರಿಸುವುದರಿಂದ ನಮಗೆ ಕೇಳಲು ಸಾಧ್ಯವಾಗುತ್ತದೆ. ಸೂರ್ಯ, ನಕ್ಷತ್ರಗಳು ಇರುವ ಪ್ರದೇಶಕ್ಕೂ ನಮಗೂ ಮಧ್ಯದಲ್ಲಿ ಅನೇಕವಾಗಿ ಶೂನ್ಯಪ್ರದೇಶವಿರುವುದರಿಂದ, ವಿಶ್ವದಲ್ಲಿ ಯಾವ ವಿಧವಾದ ಶಬ್ದಗಳು ಉತ್ಪತ್ತಿಯಾಗುವುವೋ ಅವು ನಮಗೆ ಕೇಳುವ ಹಾಗಿಲ್ಲ.

ಶಬ್ದದ ಪ್ರಸಾರ—ಅಲೆಗಳು

ಪ್ರಸಾರ ಮಾರ್ಗದಲ್ಲಿರುವ ಮಧ್ಯವರ್ತಿಯಲ್ಲಿ ಶಬ್ದವು ಅಲೆಗಳ ರೂಪದಲ್ಲಿ ಪ್ರಸಾರವಾಗುತ್ತದೆ. ಮಧ್ಯವರ್ತಿಯ ಕಣಗಳು ಸ್ಥಾನಪಲ್ಲಟ (Displacement) ಹೊಂದುವುದರಿಂದ ಸಂಕೋಚವಿಕಾಸ ಸ್ಥಿತಿಗಳು (Compressions and rarefactions) ಅನುಕ್ರಮವಾಗಿ ಏರ್ಪಡುತ್ತವೆ. ಮಧ್ಯವರ್ತಿ ವಸ್ತುವಿನ ರಚನೆಗೆ ಅನುಗುಣವಾಗಿ ಒಂದು ಗೊತ್ತಾದ ವೇಗದಿಂದ, ಶಬ್ದವು ಅಲೆಗಳ ರೂಪದಲ್ಲಿ ಸಾಗುತ್ತದೆ. ಹೀಗೆ ಪ್ರಸಾರವಾದ ಶಬ್ದವು ನಮ್ಮ ಕಿವಿಯ ಮೂಲಕ ಹಾಯ್ದು, ಒಳಕಿವಿಯಲ್ಲಿ ಅಡಗಿರುವ ನರವಿಶೇಷಗಳಲ್ಲಿ ಸ್ಪಂದನವನ್ನು ಉಂಟುಮಾಡುತ್ತದೆ. ಕಿವಿಗೂ ಮೆದುಳಿಗೂ ಇರುವ ಸಂಪರ್ಕದಿಂದ, ಕಿವಿಯಲ್ಲಿ ಉಂಟಾದ ಸ್ಪಂದನಗಳು ನಮಗೆ ಒಂದು ಅನುಭವವನ್ನು ಕೊಡುತ್ತವೆ. ಇದನ್ನು ನಾವು "ಶ್ರವಣ ಅಥವಾ ಕೇಳುವುದು" ಎಂದು ಹೇಳುತ್ತೇವೆ. ಇದೇ ಶಬ್ದವಿಜ್ಞಾನದಿಂದ ತಿಳಿದುಬಂದಿರುವ ಮುಖ್ಯ ಅಂಶಗಳ ಸ್ಥೂಲಪರಿಚಯ.

ಶ್ರವಣ ಶಬ್ದಗಳ ಸ್ಪಂದನಗಳ ಮಿತಿ

ಇನ್ನು ಶಬ್ದಕ್ಕೆ ಮೂಲಕಾರಣವಾದ ಸ್ಪಂದನಗಳ ಸ್ವರೂಪವನ್ನು ತಿಳಿಯುವ ಅವಶ್ಯಕತೆ ಇದೆ. ಸ್ಪಂದನಗಳು ಒಂದು ನಿಯಮಿತ ರೀತಿಯಲ್ಲಿ ಗೊತ್ತಾದ ಆವರ್ತ ಸಂಖ್ಯೆ (Frequency) ಯನ್ನು ಹೊಂದಿದ್ದರೆ, ಸಂಗೀತವಾಗಿ ಪರಿಣಮಿಸುತ್ತದೆ. ನಿಯಮಬದ್ಧವಿಲ್ಲದೆ ಕ್ರಮವಿಲ್ಲದ ಸ್ಪಂದನಗಳಿಂದ ಬರುವ ಶಬ್ದ ಗದ್ದಲವಾಗುತ್ತದೆ. ಇಷ್ಟೇ ಅಲ್ಲ. ಎಲ್ಲ ಸ್ಪಂದನಗಳೂ ನಮ್ಮ ಶ್ರವಣೇಂದ್ರಿಯಕ್ಕೆ ಗೋಚರವಾಗುವುದಿಲ್ಲ. ಕಿವಿಯಲ್ಲಿ ಗ್ರಹಣವಾಗಬೇಕಾದರೆ, ಶಬ್ದದ ಆವರ್ತ ಸಂಖ್ಯೆಗೆ ಒಂದು

ಮಿತಿ ಅಥವಾ ಅವಧಿ (Limit) ಇರಬೇಕು. ಸಾಮಾನ್ಯವಾಗಿ ಆವರ್ತ ಸಂಖ್ಯೆಯು ಸುಮಾರು ಇಪ್ಪತ್ತರಿಂದ ಹಿಡಿದು, ೧೬,೦೦೦ ವರೆಗೆ ಇದ್ದರೆ, ಆ ಶಬ್ದವು ನಮ್ಮ ಕಿವಿಗೆ ಕೇಳಬರುತ್ತದೆ. ಅಂದರೆ ಯಾವುದಾದರೂ ಒಂದು ವಸ್ತುವು ಒಂದು ಸೆಕೆಂಡಿಗೆ ೧೬—೨೦ ಸಲಕ್ಕಿಂತ ಕಡಮೆ ಸ್ಪಂದನಗಳನ್ನು ಮಾಡಿದರೆ, ಅದನ್ನು ಗ್ರಹಣ ಮಾಡುವ ಶಕ್ತಿ ಕಿವಿಗೆ ಇಲ್ಲ. ಹಾಗೆಯೇ, ೧೬,೦೦೦ ಕ್ಕಿಂತ ಹೆಚ್ಚು ಆವರ್ತ ಸಂಖ್ಯೆಯುಳ್ಳ ಸ್ಪಂದನಗಳಿಂದ ಹೊರಟ ಶಬ್ದವು ನಮ್ಮ ಕಿವಿಗೆ ಕೇಳಿಸುವುದಿಲ್ಲ. ಇಂಥ ಸ್ಪಂದನಗಳನ್ನು ಒಳಗೊಂಡ ಶಬ್ದಕ್ಕೆ ಶ್ರವಣಾತೀತ ಶಬ್ದ (Inaudible sound) ಎಂದು ಹೆಸರು. ಇದರ ವಿಚಾರವನ್ನು ತಿಳಿಸುವ ಶಾಸ್ತ್ರಕ್ಕೆ "*Ultrasonics*" "ಶ್ರವಣಾತೀತ ಶಬ್ದಶಾಸ್ತ್ರ" ಎಂದು ಹೆಸರಿಡಬಹುದು.

ಬೆಳಕು—ಶಬ್ದ—ಹೋಲಿಕೆ

ಸ್ಪಂದನಗಳ ಆವರ್ತ ಸಂಖ್ಯೆಯು ೧೬,೦೦೦ ಕ್ಕಿಂತ ಹೆಚ್ಚಾಗಿದ್ದರೆ, ಅದು ಕಿವಿಗೆ ಕೇಳಿಸದ ಶಬ್ದವಾಗುತ್ತದೆ. ಇದೇ ರೀತಿಯಲ್ಲಿ ಬೆಳಕಿನ ಅಲೆಗಳ ಆವರ್ತ ಸಂಖ್ಯೆಯೂ ಕೂಡ ಒಂದು ಗೊತ್ತಾದ ಅವಧಿಯಲ್ಲಿರದೆ ಇದ್ದರೆ ಆ "ಬೆಳಕನ್ನು" ನಾವು ಕಣ್ಣಿನಿಂದ ನೋಡಲಾರೆವು. ದೃಶ್ಯರೋಹಿತದ (Visible spectrum) ಕೆಂಪು ಅಂಚಿನ ಆಚೆ ಇರುವ (Infra-red) ರಕ್ತಾತೀತ ಅಲೆಗಳೂ, ನೀಲಿ ಅಂಚಿನಿಂದ ಆಚೆ ಅತಿ ನೀಲ (Ultra-violet) ಅಲೆಗಳೂ, ನಮ್ಮ ಕಣ್ಣಿಗೆ ಗೋಚರವಾಗದೆ ಇರುವ ಬೆಳಕಿನ ಗುಂಪಿಗೆ ಸೇರುತ್ತವೆ. ಬೆಳಕಿನ ಅಲೆಗಳ ತರಂಗ ದೂರ ಅತ್ಯಲ್ಪವಾಗಿರುವುದರಿಂದ, ಅವುಗಳಿಗೆ ಅನುಗುಣವಾದ ಆವರ್ತಸಂಖ್ಯೆಯೂ ಶಬ್ದದ ಆವರ್ತಸಂಖ್ಯೆಗೆ ಹೋಲಿಸಿದರೆ, ಬಹಳ ಹೆಚ್ಚು ಪ್ರಮಾಣದಲ್ಲಿರುತ್ತದೆ.

ಶ್ರವಣಾತೀತ ಶಬ್ದಗಳ ಉತ್ಪಾದನೆ

ಬಹಳ ಹಿಂದಿನ ಕಾಲದಿಂದಲೂ ನಮ್ಮ ಕಿವಿಗೆ ಕೇಳಿಸಲಾರದ ಶಬ್ದಗಳನ್ನು ಗ್ರಹಣಮಾಡುವ ಶಕ್ತಿ ನಾಯಿಗಳಿಗೆ ಇತ್ತೆಂಬ ವಿಷಯ ತಿಳಿದಿತ್ತು. ಕಾಡುಗಳಲ್ಲಿ ತಿರುಗುವ ಕಳ್ಳ ಬೇಟೆಗಾರರು ಒಂದು ಬಗೆಯ ಶಿಳ್ಳಿ (Whistle) ಯನ್ನು ಉಪಯೋಗಿಸುತ್ತಿದ್ದರಂತೆ. ಅದರಿಂದ ಹೊರಟ ಶಬ್ದವು ಮನುಷ್ಯರಿಗೆ ಕೇಳಿಸದಿದ್ದರೂ ನಾಯಿಗಳಿಗೆ ಚೆನ್ನಾಗಿ ಕೇಳಿಸುತ್ತಿದ್ದದ್ದರಿಂದ ಅವುಗಳ ಸಹಾಯವನ್ನು ಪಡೆಯುತ್ತಿದ್ದರಂತೆ. ಶ್ರವಣಾತೀತ ಶಬ್ದಗಳ ವಿಚಾರ ಅಷ್ಟಕ್ಕೆ ನಿಂತಿದ್ದು ಈ ಶತಮಾನದ ಆದಿಭಾಗದಲ್ಲಿ ಭೌತಶಾಸ್ತ್ರದ ಬಹಳ ಮುಖ್ಯವಾದ ಅಂಗವಾಗಿ ಆರಂಭವಾಯಿತು.

ಪರಮಾಣುಗಳರಚನೆ, ರೇಡಿಯೋ, X-ಕಿರಣಗಳು ಮೊದಲಾದ ಕಣ್ಣಿಗೆ ಗೋಚರವಾಗದ ಕಿರಣಗಳ ವಿಷಯವಾಗಿ ನಡೆಯಲಾಗಿರುವ ಮುಖ್ಯ ಸಂಶೋಧನೆಗಳು, ಶ್ರವಣಾತೀತ ಶಬ್ದಗಳ ಪ್ರಪಂಚದ ವಿಷಯದ ಅಧ್ಯಯನಕ್ಕೆ ಉತ್ತೇಜನಕೊಟ್ಟವು. ಕೆಲವು ಮಿ.ಮೀ.ಗಳ ಮಾತ್ರವಿರುವ ಉದ್ದವಾದ ಶ್ರುತಿಕವೆ (Tuning fork) ಗಳ ಸ್ಪಂದನದಿಂದ ಹೊರಡುವ ಶಬ್ದ ಕಿವಿಯ ಗ್ರಹಣಕ್ಕೆ ಮೀರಿದ್ದಾಗಿದೆ. ಈ ರೀತಿ ಸುಮಾರು ೯೦,೦೦೦ ಆವರ್ತ ಸಂಖ್ಯೆಗಳ ಸ್ಪಂದನವನ್ನು ಉತ್ಪಾದನೆ ಮಾಡಲು ಸಾಧ್ಯವಿದೆ. ಈ ವಿಧವಾದ ಶಬ್ದಗಳ ಉಪಯೋಗ ಅಷ್ಟಾಗಿ ಗೊತ್ತಿಲ್ಲದ್ದರಿಂದ, ಮೊದಲನೇ ಮಹಾಯುದ್ಧದವರೆವಿಗೂ ಹೆಚ್ಚು ಪ್ರಗತಿಗೆ ಅವಕಾಶವಿರಲಿಲ್ಲ.

ಸಮುದ್ರದಲ್ಲಿ ಮುಳುಗಿಹೋದ ಹಡಗುಗಳನ್ನು ಪತ್ತೆ ಹಚ್ಚುವುದು

೧೯೧೪-೧೮ ರಲ್ಲಿ ನಡೆದ ಮಹಾಯುದ್ಧದಲ್ಲಿ ಫ್ರೆಂಚ್ ನೌಕಾದಳವು ಜರ್ಮನ್ ಜಲಾಂತರ್ಗಾಮಿಗಳ (Submarine) ಹೊಡೆತಕ್ಕೆ ಸಿಕ್ಕಿ ಅಪಾರವಾದ ನಷ್ಟವನ್ನು ಅನುಭವಿಸಬೇಕಾಯಿತು. ಈ ನಷ್ಟವನ್ನು ತಡೆಗಟ್ಟಲು ಯಾವ ಉಪಾಯವೂ ಹೊಳೆಯದಿದ್ದ ಸಮಯದಲ್ಲಿ ಲಾಂಗಿವಿನ್ ಎಂಬ ಪ್ರಸಿದ್ಧ ಫ್ರೆಂಚ್ ವಿಜ್ಞಾನಿಯು ಒಂದು ವಿಧಾನವನ್ನು ಸೂಚಿಸಿದನು. ಇದರಿಂದ ಮೊಟ್ಟಮೊದಲು ಶ್ರವಣಾತೀತ ಶಬ್ದಗಳ ಸಹಾಯವು ಬಹಳ ಉಪಯುಕ್ತವಾದ ರೀತಿಯಲ್ಲಿ ದೊರಕಿದಂತಾಯಿತು. ಈ ಪ್ರಯೋಗದ ತತ್ತ್ವವಾದರೂ ಇಷ್ಟೇ, ವಿಶೇಷ ರೀತಿಯ ಸಾಧನದಿಂದ ಒಂದು ಸಣ್ಣ (ಪ್ರಮಾಣದ) ಶ್ರವಣಾತೀತ ಶಬ್ದವನ್ನು ಮೊದಲು ಹೊರಡಿಸಬೇಕು ಮತ್ತು ಈ ಶಬ್ದವು ನೀರಿನೊಳಗೆ ಒಂದು ಗೊತ್ತಾದ ಮಾರ್ಗದಲ್ಲಿಯೇ ಪ್ರಸಾರವಾಗುವ ಹಾಗೆ ಮಾಡಬೇಕು. ಈ ನೇರದಲ್ಲಿ ಹೊರಟ ಶಬ್ದಕ್ಕೆ ಯಾವ ಪ್ರತಿಬಂಧಕವೂ ಇಲ್ಲದಿದ್ದರೆ, ಹಾಗೆಯೇ ಸಮುದ್ರದೊಳಗೆ ಹೊರಟುಹೋಗುವುದು. ಹಾಗಲ್ಲದೆ, ಮಾರ್ಗದಲ್ಲಿ ಯಾವುದಾದರೂ ಬೇರೆ ಸಾಂದ್ರತೆಯುಳ್ಳವಸ್ತುವು ನೀರಿನಲ್ಲಿ ಸಿಕ್ಕಿದರೆ, 'ಶಬ್ದ'ವು ಆ ವಸ್ತುವಿನಿಂದ ಪ್ರತಿಫಲಿತವಾಗಿ, ಮತ್ತೆ ತಾನು ಹೊರಟ ಜಾಗಕ್ಕೆ ತಿರುಗಿ ಬಂದು ಪ್ರತಿಧ್ವನಿಯಂತೆ ಕಂಡುಬರುತ್ತದೆ. ಈ ಪ್ರತಿಧ್ವನಿಯನ್ನು ಕೆಲವು ಸಾಧನೆಗಳಿಂದ ಗ್ರಹಣಮಾಡಿ, ಶಬ್ದವು ಹೊರಟ ಕಾಲದಿಂದ ಮತ್ತೆ ಪ್ರತಿಧ್ವನಿಯಂತೆ ಗ್ರಹಣ ಮಾಡಲ್ಪಟ್ಟ ಕಾಲಕ್ಕೂ ಇರುವ ಅಂತರವನ್ನು ಪ್ರಯೋಗಗಳಿಂದ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ಕಾಲವನ್ನು ತಿಳಿಯುವುದರಿಂದ, ಪ್ರತಿಬಂಧಕವಸ್ತುವು ಎಷ್ಟು ಆಳದಲ್ಲಿ ಇದ್ದಿರಬೇಕು ಎಂಬುದನ್ನು ಸುಲಭವಾಗಿ ಗೊತ್ತುಮಾಡಬಹುದು. ಇದನ್ನು ಒಂದು ಸಣ್ಣ ಉದಾಹರಣೆಯಿಂದ ವಿಶದಪಡಿಸಬಹುದು. ಮೇಲೆ ಹೇಳಿದಂತೆ,

ಕಾಲದ ಅಂತರವು ೩ ಸೆಕೆಂಡುಗಳಾಗಿದ್ದರೆ, ನೀರಿನಲ್ಲಿ ಶಬ್ದದವೇಗವು ಸೆಕೆಂಡಿಗೆ ಸುಮಾರು ೪೯೦೦ ಅಡಿಗಳಿರುವುದರಿಂದ, ಶಬ್ದದ ಒಟ್ಟು ಪ್ರಮಾಣದೂರ ೪೯೦೦×೩ ಅಥವಾ ೧೪,೭೦೦ ಅಡಿಗಳಾಗುತ್ತದೆ. ಇದು ಶಬ್ದವು ವಸ್ತುವಿನ ವರೆವಿಗೂ ಹೋಗಿ ಹಿಂತಿರುಗಿ ಬರುವ ಒಟ್ಟುದೂರವಾಗಿರುವುದರಿಂದ, ವಸ್ತುವಿನ ಆಳವು $\frac{೧೪,೭೦೦}{೨}$ = ೭೩೫೦ ಅಡಿಗಳಾಗಿರಬೇಕು ಅಂದರೆ, ಸುಮಾರು ೧$\frac{೧}{೩}$ ಮೈಲಿಗಳಾಗುತ್ತದೆ. ೧೯೧೨ ರಲ್ಲಿ ಅಮೆರಿಕಾ ತೀರದಲ್ಲಿ 'Titanic' ಎಂಬ ದೊಡ್ಡ ಬ್ರಿಟಿಷ್ ಹಡಗು ಅಗಾಧವಾದ ಮಂಜುಗಡ್ಡೆಗೆ ತಗಲಿ, ತಕ್ಷಣ ಮುಳುಗಿಹೋಗಿ, ಅಪಾರ ನಷ್ಟ ಸಂಭವಿಸಿತು. ಇಂಥ ಸಂಭವಗಳನ್ನು ನಿವಾರಣೆಮಾಡಲು ಯಾವ ವಿಧಾನಗಳಿವೆ ಎಂಬುದನ್ನು ಎಲ್ಲರೂ ಯೋಚಿಸುತ್ತಿದ್ದರು. ಅದಕ್ಕೆ ಸರಿಯಾಗಿ, ಶ್ರವಣಾತೀತ ಶಬ್ದಗಳ ಉಪಯೋಗ ಮನವರಿಕೆಯಾಯಿತು.

ಶಬ್ದ ಅಲೆಗಳ ನಮನ (Diffraction)

ಮೇಲೆ ಹೇಳಿದ ಪ್ರಯೋಗಗಳಲ್ಲಿ ಶ್ರವಣಾತೀತ ಶಬ್ದಗಳಿಗೆ ಬದಲಾಗಿ ಕಿವಿಗೆ ಕೇಳುವ ಶಬ್ದಗಳು ಉಪಯೋಗವಾಗಲಾರವೇ ಎಂಬ ಪ್ರಶ್ನೆ ಉದ್ಭವಿಸಿತು. ಇದಕ್ಕೆ ಉತ್ತರವು ಅಲೆಗಳ ಲಕ್ಷಣಗಳ ಜ್ಞಾನದಿಂದ ಬರುತ್ತದೆ. ಬೆಳಕಿನ ಅಲೆಗಳಿಗೂ ಶಬ್ದದ ಅಲೆಗಳಿಗೂ ಒಂದು ಮುಖ್ಯ ವ್ಯತ್ಯಾಸ ಅವುಗಳ ತರಂಗದೂರ (Wave-length) ದಲ್ಲಿ. ಬೆಳಕಿನ ಅಲೆಗಳಿಗಿಂತ ಶಬ್ದದ ಅಲೆಗಳು ಬಹಳ ಹೆಚ್ಚಾದ ತರಂಗ ದೂರವುಳ್ಳವುಗಳಾದ್ದರಿಂದ, ಅವುಗಳು ಸಾಮಾನ್ಯವಾಗಿ ಪ್ರಸಾರವಾಗುವಾಗ ಒಂದು ಗೊತ್ತಾದ ನೇರದಲ್ಲಿ ಮಾತ್ರ ಹೋಗದೆ, ಪ್ರತಿಬಂಧಕಗಳ ಸುತ್ತಲೂ ನಮನ ವಾಗಿ ವ್ಯಾಪಿಸುವುವು. ಬೆಳಕು ಮಾತ್ರ ಒಂದು ನಿರ್ದಿಷ್ಟ ನೇರದಲ್ಲಿ ಪ್ರಸಾರವಾಗು ತ್ತದೆ. ಅಲೆಗಳ ಪ್ರಸಾರವಾಗುವಾಗ ಮಾರ್ಗದಲ್ಲಿರುವ ಪ್ರತಿಬಂಧಕವಸ್ತುವಿನ ಗಾತ್ರ ಪ್ರಮಾಣವು ಅಲೆಗಳ ತರಂಗ ದೂರದ ಪ್ರಮಾಣಕ್ಕೆ ಅನುಗುಣವಾಗಿದ್ದರೆ, ನೇರ ವಾಗಿ ಹೋಗದೆ, ಅಲೆಗಳುಂಟಾಗಿ ನಮನ (Diffraction) ವಾಗುವ ಸಂಭವವಿರು ತ್ತದೆ. ಬೆಳಕಿನ ಅಲೆಗಳ ತರಂಗ ದೂರ ಅತ್ಯಲ್ಪವಾಗಿರುವುದರಿಂದ ಸುಮಾರು $\frac{೧}{೨೦೦೦}$ ಮಿ.ಮೀ. ಪ್ರತಿಬಂಧಕ ವಸ್ತುವಿನ ಪ್ರಮಾಣವು ಇದಕ್ಕೆ ಸಮನಾಗಿದ್ದರೆ ಮಾತ್ರ ನಮನವಾಗುವುದು. ಸಾಮಾನ್ಯವಾಗಿ ಮಾರ್ಗದಲ್ಲಿರುವ ವಸ್ತುಗಳ ಪ್ರಮಾಣ ಇಷ್ಟು ಕಡಮೆಯಿಲ್ಲದಿರುವುದರಿಂದ ಬೆಳಕು ಒಂದೇ ನೇರದಲ್ಲಿ ನೆಟ್ಟಗೆ ಪ್ರಸಾರವಾಗುತ್ತದೆಂದು ಹೇಳುವುದು ವಾಡಿಕೆಯಾಗಿದೆ. ಶಬ್ದದ ಅಲೆಗಳ ತರಂಗ ದೂರವು ಬಹಳ ಹೆಚ್ಚಾಗಿರುವುದರಿಂದ, ದೊಡ್ಡ ಕಿಟಿಕಿಗಳು ಕೂಡ ಅವುಗಳಿಗೆ

ಪ್ರತಿಬಂಧಕವಾಗಲಾರವು. ಆದರೆ, ಶ್ರವಣಾತೀತ ಶಬ್ದಗಳ ಆವರ್ತ ಸಂಖ್ಯೆಯು ಹೆಚ್ಚಾಗಿರುವುದರಿಂದ, ಅವುಗಳ ತರಂಗದೂರ ಕಡಮೆಯಾಗಿದ್ದು, ಸುಮಾರಾಗಿ ಒಂದು ಗೊತ್ತಾದ ನೇರದಲ್ಲಿಯೇ (ಹೆಚ್ಚು ಬಾಗದೆ) ಪ್ರಸಾರವಾಗುವಂತೆ ಮಾಡುವುದು ಸಾಧ್ಯವಿರುತ್ತದೆ. ಈ ತತ್ತ್ವಕ್ಕೆ ಅನುಗುಣವಾಗಿಯೇ ಶ್ರವಣಾತೀತ ಶಬ್ದಗಳನ್ನು ಸಮುದ್ರದ ತಲದಲ್ಲಿ ಮುಳುಗಿಹೋಗಿರುವ ಹಡಗುಗಳ ಸ್ಥಾನವನ್ನು ನಿರ್ದೇಶಿಸಲು ಉಪಯೋಗಿಸಲಾಗುತ್ತದೆ. ಇನ್ನು ಮುಂದೆ, ಶ್ರವಣಾತೀತ ಶಬ್ದಗಳನ್ನು ಉತ್ಪಾದನೆ ಮಾಡುವ ವಿಧಾನಗಳಲ್ಲಿ ಹೆಚ್ಚು ಪ್ರಗತಿಯಾಗಲು ಕಾರಣವಾಯಿತು.

ಶ್ರವಣಾತೀತ ಶಬ್ದಗಳನ್ನು ಉತ್ಪನ್ನ ಮಾಡುವ ವಿಧಾನಗಳು

ಹರಳು ರೂಪದಲ್ಲಿ (Crystals) ಸುಂದರವಾದ ವಸ್ತುವಂತೆ ಕಾಣುವ ಬೆಣಚು ಕಲ್ಲನ್ನು (Quartz) ಎಲ್ಲರೂ ನೋಡಿಯೇ ಇರುತ್ತಾರೆ. ಇದಕ್ಕೆ ಒಂದು ಬಹಳ ಆಶ್ಚರ್ಯಕರವಾದ ಲಕ್ಷಣವಿರುತ್ತದೆ. ಈ ಹರಳಿನ ಒಂದು ಸಣ್ಣ ತುಂಡನ್ನು ತೆಗೆದುಕೊಂಡು ಅದನ್ನು ಅತಿ ಹೆಚ್ಚಾದ ಒತ್ತಡಕ್ಕೆ ಒಳಗಾಗುವಂತೆ ಮಾಡಿದರೆ ಈ ಮರ್ದನ (Compression) ದಿಂದ, ತುಂಡಿನ ಇಕ್ಕಡೆಗಳಲ್ಲಿಯೂ, ವ್ಯತ್ಯಸ್ತ ವಿದ್ಯುಚ್ಛಕ್ತಿ (Unlike electric charges) ಗಳು ಉತ್ಪನ್ನವಾಗುತ್ತವೆ. ಇದಕ್ಕೆ ಒತ್ತಡ—ವಿದ್ಯುಚ್ಛಕ್ತಿ ಕ್ರಿಯೆ (Piezo—electric effect) ಎಂದು ಹೆಸರಿಡಬಹುದು. ಮರ್ದನಕ್ಕೆ ಬದಲಾಗಿ, ಸೆಳೆತದ ಬಲ (Tension) ವನ್ನು ಪ್ರಯೋಗಿಸಿದರೂ, ವಿದ್ಯುಚ್ಛಕ್ತಿಯು ಉತ್ಪನ್ನವಾಗುತ್ತದೆ. ಹೀಗೆಯೇ ಬೆಣಚು ಶಿಲೆಯ ತಟ್ಟೆ (Plate) ಯನ್ನು ಬಿಗಿತ—ಸೆಳೆತಗಳಿಗೆ (Compression tension) ಪರ್ಯಾಯರೂಪದಲ್ಲಿ ಒಂದು ಗೊತ್ತಾದ ಆವರ್ತ ಸಂಖ್ಯೆಯಲ್ಲಿ (Frequency) ಒಳಪಡಿಸಿದರೆ, ಅದೇ ಆವರ್ತಸಂಖ್ಯೆಯುಳ್ಳ ಪರ್ಯಾಯ ರೀತಿಯ ವಿದ್ಯುಚ್ಛಕ್ತಿಯು (Alternating currents) ಉದ್ಭವವಾಗುತ್ತದೆ. ಇದೇ ಪ್ರಯೋಗವನ್ನು ಹಿಂದಕ್ಕೆ ತಿರುಗಿಸಿದಲ್ಲಿ ಬೆಣಚುಶಿಲೆಯ ತಟ್ಟೆಯ ಎರಡು ಕಡೆಗಳಿಗೂ, ಒಂದು ಗೊತ್ತಾದ ಆವರ್ತ ಸಂಖ್ಯೆಯ ಪರ್ಯಾಯ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಅದೇ ರೀತಿಯಲ್ಲಿ ಆ ವಸ್ತುವು ಬಿಗಿತಸೆಳೆತಗಳಿಗೆ ಒಳಗಾಗಿ, ಅದರ ಗಾತ್ರವು ಹೆಚ್ಚುಕಡಮೆ ಪ್ರಮಾಣಗಳನ್ನು ಹೊಂದುತ್ತಾ ಹೋಗುತ್ತದೆ. ಹೀಗೆ ಗಾತ್ರ ಬದಲಾವಣೆಗಳಾಗುವ ವಸ್ತುವನ್ನು ಒಂದು ದ್ರವದೊಳಗಾಗಲಿ, ಅನಿಲದಲ್ಲಿಯಾಗಲಿ ಇಟ್ಟರೆ, ವಸ್ತುವಿನ ಗಾತ್ರ ಪ್ರಮಾಣಗಳ ಬದಲಾವಣೆಗಳು ದ್ರವ ಅಥವಾ, ಅನಿಲದ ಮೂಲಕ ಅಲೆಯು

ರೂಪದಲ್ಲಿ ಪ್ರಸಾರವಾಗಲು ಸಾಧ್ಯವಾಗುತ್ತದೆ. ಇದೇ ಶ್ರವಣಾತೀತ ಶಬ್ದೋತ್ಪಾದಕ ಸಾಧನಗಳ ಮುಖ್ಯತತ್ತ್ವ.

ಮೇಲೆ ಹೇಳಿದ ಗಾತ್ರ ಪ್ರಮಾಣಗಳು ಬಹಳ ಅಲ್ಪವಾಗಿರುತ್ತವೆ. ಸುಮಾರು ೧೦೦೦ ವೋಲ್ಟ್‌ಗಳ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿದರೆ, ಗಾತ್ರಪ್ರಮಾಣದ ಬದಲಾವಣೆಗಳು ಕೇವಲ $\frac{೧}{೧,೦೦,೦೦,೦೦೦}$ ಮಿ.ಮೀ.ಗಳಷ್ಟು ಇರುತ್ತವೆ—ವಸ್ತುವಿನ ಮೂಲಗಾತ್ರವು ಕಡಮೆಯಾದಂತೆಲ್ಲ ಅದರ ಸ್ವಾಭಾವಿಕಸ್ಪಂದನ ಸಂಖ್ಯೆಯು ಹೆಚ್ಚಾಗುತ್ತದೆ. ೧ ಮಿ.ಮೀ. ದಪ್ಪದ ತಟ್ಟೆಯ ಸ್ವಾಭಾವಿಕ ಸ್ಪಂದನ ಸಂಖ್ಯೆ ಸುಮಾರು ೨೯ ಲಕ್ಷದಷ್ಟು ಇರುತ್ತದೆ. ಸಿಗರೇಟ್ ಕಾಗದಕ್ಕಿಂತ ತೆಳುವಾದ ತಟ್ಟೆಗಳನ್ನು ಉಪಯೋಗಿಸಿದರೆ, ಸ್ಪಂದನ ಸಂಖ್ಯೆ ಇನ್ನೂ ಹೆಚ್ಚಾಗಿರುತ್ತದೆ. ಹೆಚ್ಚು ಶಕ್ತಿಯುಳ್ಳ ಶ್ರವಣಾತೀತ ಸ್ಪಂದನಗಳನ್ನು ಉತ್ಪನ್ನಮಾಡಬೇಕಾದರೆ ಬಹಳ ತೆಳುವಾದ ಬೆಣಚುಶಿಲೆಯ ತಟ್ಟೆಯನ್ನು ಉಪಯೋಗಿಸಿ, ಅದರ ಸ್ವಾಭಾವಿಕಸ್ಪಂದನ ಸಂಖ್ಯೆಯಷ್ಟೇ ಆವರ್ತಸಂಖ್ಯೆಯುಳ್ಳ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿದರೆ, ಸಹಸ್ಪಂದನ (Resonance) ತತ್ತ್ವದಿಂದ, ಗಾತ್ರದ ಬದಲಾವಣೆಗಳು ಹೆಚ್ಚು ಪ್ರಮಾಣದಲ್ಲಿದ್ದು, ಉತ್ಪನ್ನವಾದ ಸ್ಪಂದನಗಳ ಶಕ್ತಿಯೂ ಹೆಚ್ಚಾಗಿರುತ್ತದೆ.

ಬೆಣಚುಕಲ್ಲಿನಲ್ಲಿ ಕಾಣಬರುವ ಮೇಲೆ ಹೇಳಿದ ಗುಣವನ್ನು ಮತ್ತೆ ಕೆಲವು ವಸ್ತುಗಳಲ್ಲಿ ಕೃತಕವಾಗಿ (Artificial) ಉತ್ಪನ್ನಮಾಡಲು ಇತ್ತೀಚಿನ ಪ್ರಯೋಗಗಳಿಂದ ಕಂಡುಬಂದಿದೆ—ಬೆಣಚುಗಾಜು (Quartz-glass) ರಾಷಿಲಿ ಲವಣ, (Rochelle salt) ಬೇರಿಯಂಟೈಟನೇಟ್ (Bariumtitanates) ಮೊದಲಾದ ವಸ್ತುಗಳು ಆಧುನಿಕಸಾಧನಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ರೇಡಿಯೋ ಪ್ರಸಾರದಲ್ಲಿ ಉಪಯೋಗಿಸಲಾಗುವ ಎಲೆಕ್ಟ್ರಾನಿಕ್ ಆಸಿಲೇಟರ್ (Electronic oscillator) ಗಳ ದೆಸೆಯಿಂದ ೫ ಲಕ್ಷ, ಅಥವಾ ೧೦ ಲಕ್ಷ ಆವರ್ತ ಸಂಖ್ಯೆಯುಳ್ಳ ವಿದ್ಯುಚ್ಛಕ್ತಿಯನ್ನು ಪ್ರಯೋಗಮಾಡಲು ಅವಕಾಶವಿದೆ.

ಶ್ರವಣಾತೀತ ಶಬ್ದಗಳ ಗ್ರಹಣ

ಇದುವರೆವಿಗೂ, ಅತಿ ಹೆಚ್ಚು ಆವರ್ತ ಸಂಖ್ಯೆಯುಳ್ಳ ಸ್ಪಂದನಗಳನ್ನು ಉತ್ಪಾದನೆಮಾಡುವ ಸಾಧನಗಳ ವಿಷಯವನ್ನು ತಿಳಿಸಿದ್ದಾಯಿತು. ಈ ಸ್ಪಂದನಗಳನ್ನು ಗ್ರಹಣಮಾಡುವುದಕ್ಕೂ ಸಹ ಶ್ರವಣಾತೀತ ಶಬ್ದಗಳನ್ನು "ಕೇಳಿಸುವ" ಸೂಕ್ಷ್ಮ ಯಂತ್ರಸಾಧನಗಳು ನಿರ್ಮಿತವಾಗಿವೆ. ಇದಕ್ಕೆ ಶ್ರವಣಾತೀತ ಶಬ್ದಗ್ರಾಹಕ (Supersonic Radiometer) ಎಂದು ಹೆಸರು. ಈ ಸ್ಪಂದನೆಗಳು ತೆಳುವಾದ ಒಂದು

ಕಾಗೆ ಬಂಗಾರದ (Mica) ಮೇಲೆ ಬಿದ್ದರೆ, ಅದರ ಒತ್ತಡದಿಂದ ಅದು ಸ್ವಲ್ಪ ಅಲುಗಾಡುತ್ತದೆ. ಇದರಿಂದ ಆ ಕಾಗೆ ಬಂಗಾರಕ್ಕೆ ಹೊಂದಿಕೊಂಡಿರುವ ಸಣ್ಣ ತಂತಿಯು ತಿರುಗಿ, ಈ ತಿರುಗುವಿಕೆಯನ್ನು ತಂತಿಗೆ ಸೇರಿರುವಂತೆ ಇರುವ ಒಂದು ಸಣ್ಣ ಕನ್ನಡಿಯಿಂದ ಪ್ರತಿಫಲಿತವಾಗುವ ಬೆಳಕಿನ ಕಿರಣದ ಮಾರ್ಗವು ಬದಲಾಗಿ ಈ ಬದಲಾವಣೆಯನ್ನು ನಾವು ಅಳೆಯಬಹುದು. ಈ ರೀತಿಯಾಗಿ, ಶ್ರವಣಾತೀತ ಶಬ್ದಗಳ ಪ್ರಭಾವವನ್ನು ಕಣ್ಣಿಗೆ ಕಾಣುವಂತೆ ಮಾಡಬಹುದು.

ಮೇಲೆ ಹೇಳಿದಂತೆ ಶ್ರವಣಾತೀತ ಶಬ್ದಗಳನ್ನು ಉತ್ಪಾದನೆ ಮಾಡಿ, ಅವುಗಳನ್ನು ಗ್ರಹಣ ಮಾಡುವ ಸಾಧನಗಳನ್ನು ಸಮುದ್ರದಲ್ಲಿ ಯಾನಮಾಡುವ ಹಡಗುಗಳಲ್ಲೆಲ್ಲ ಸಜ್ಜುಗೊಳಿಸಿರುತ್ತಾರೆ. ಇವುಗಳಿಗೆ ಹೈಡ್ರೋಫೋನ್ (Hydrophone) ಗಳೆಂದು ಹೆಸರು. ಇವುಗಳ ಉಪಯೋಗ ಎಷ್ಟುದೂರ ಹೋಗಿದೆಯೆಂದರೆ, ಹಡಗುಗಳು ಯಾನಮಾಡುವಾಗ ಮಾರ್ಗದಲ್ಲಿ ಸಮುದ್ರದ ಒಂದೊಂದು ಪ್ರದೇಶದಲ್ಲಿ ಎಷ್ಟೆಷ್ಟು ಆಳವಿದೆ, ಯಾವ ಯಾವ ಘನವಸ್ತುಗಳು ಎಷ್ಟು ಆಳದಲ್ಲಿರುತ್ತವೆಯೆಂಬ ಎಲ್ಲ ವಿಷಯಗಳನ್ನೂ ಅತಿಸರಳ ರೀತಿಯಲ್ಲಿ ಹಡಗುಗಳಲ್ಲಿ ಇಟ್ಟಿರುವ ಗಡಿಯಾರಗಳಂತಿರುವ ಸೂಚಿಗಳಿಂದ ಕಂಡುಹಿಡಿಯಬಹುದು. ಇದರ ಉಪಕಾರ, ಜಲಾಂತರ್ಗಾಮಿಗಳನ್ನು ಪತ್ತೆಹಚ್ಚುವುದರಲ್ಲಿಯೂ, ಮತ್ತು ಹಲವಾರು ರೀತಿಗಳಲ್ಲಿ ಯುದ್ಧಕಾಲದಲ್ಲಿ ಎಷ್ಟು ಇರುತ್ತದೆ ಎಂಬುದು ವ್ಯಕ್ತವಾಗುತ್ತದೆ.

ಶ್ರವಣಾತೀತ ' ಶಬ್ದ 'ಗಳ ಕೆಲವು ಮುಖ್ಯ ಉಪಯೋಗಗಳು

೧. ಈಗಾಗಲೇ ತಿಳಿಸಿರುವಂತೆ, ಶ್ರವಣಾತೀತ ಶಬ್ದಗಳ ಪ್ರಯೋಗಗಳು ಯುದ್ಧಕಾಲದಲ್ಲಿ ಜಲಾಂತರ್ಗಾಮಿಗಳ ಹಾವಳಿಯನ್ನು ತಡೆಗಟ್ಟಲು ಮತ್ತು ಸಮುದ್ರದಲ್ಲಿ ಮುಳುಗಿಹೋಗಿರುವ ಹಡಗುಗಳ ಸ್ಥಾನಗಳನ್ನು ಕಂಡುಹಿಡಿಯುವುದರಲ್ಲಿಯೂ ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುತ್ತವೆ. ವಿವಿಧ ಪ್ರದೇಶಗಳಲ್ಲಿ ಸಮುದ್ರದ ಆಳವನ್ನು ನಿರ್ದೇಶಿಸಲೂ ಸಹ ಸುಲಭವಾದ ಸಾಧನಗಳು ತಯಾರಾಗಿವೆ.

೨. ಸಾರ್ವಜನಿಕ ಭಾಷಣ ಶಾಲೆಗಳನ್ನೂ ರಂಗಮಂದಿರಗಳನ್ನೂ ಕಟ್ಟುವಾಗ, ಶಬ್ದಗ್ರಹಣದ ದೃಷ್ಟಿಯಿಂದ ವೈಜ್ಞಾನಿಕವಾಗಿ ಪರಿಶೋಧಿಸಿ, ಅದಕ್ಕೆ ಅನುಗುಣವಾಗಿ ನಿರ್ಮಾಣಮಾಡುವ ಅವಶ್ಯಕತೆಯಿದೆ. ಇದಕ್ಕೆ ಸಹಾಯಕವಾಗಿ, ಯಾವ ಯಾವ ವಸ್ತುಗಳನ್ನು ಕಟ್ಟಡಗಳಲ್ಲಿ ಅಳವಡಿಸಬೇಕು ಎಂಬುದನ್ನು ನಿರ್ಧರಿಸಲು, ಶ್ರವಣಾತೀತ ಸ್ಪಂದನಗಳ ಪ್ರಯೋಗಗಳು ಬಹಳ ಫಲಕಾರಿಯಾಗಿವೆ.

೩. ಶ್ರವಣಾತೀತ ಸ್ಪಂದನಗಳ ಮೂಲಕ ಬೆಳಕಿನ ಪ್ರಕಾಶಗಳನ್ನು ಮಾರ್ಪಡಿಸಲು ಸಹ ಸಾಧ್ಯವಾಗುತ್ತದೆ. ಹೀಗೆ ಬದಲಾಗುವ ಪ್ರಕಾಶ ವ್ಯತ್ಯಾಸಗಳನ್ನು ಒಂದು ಫೋಟೋ ಎಲೆಕ್ಟ್ರಿಕ್ (Photo-electric cell) ಸೆಲ್‌ನ ಸಹಾಯದಿಂದ ವಿದ್ಯುಚ್ಛಕ್ತಿಯ ಬದಲಾವಣೆಗಳನ್ನಾಗಿ ಪರಿವರ್ತಿಸಿ, ಇವುಗಳ ಮೂಲಕ ಸಂಕೇತ (Signals) ಗಳನ್ನು ಕಳುಹಿಸಲೂ ಪ್ರಯೋಗಗಳು ನಡೆದಿವೆ. ಈ ವಿಧವಾದ ಪ್ರಯೋಗಗಳು ಟೆಲಿವಿಷನ್ (Television) ನಲ್ಲಿಯೂ ಉಪಯೋಗವಾಗುತ್ತವೆ.

೪. ಶ್ರವಣಾತೀತಗಳಿಗೂ ಕೆಲವು ಪ್ರಾಣಿಗಳಿಗೂ ಇರುವ ಸಂಬಂಧದಲ್ಲಿಯೂ ಸ್ವಾರಸ್ಯವಾದ ಪ್ರಯೋಗಗಳು ನಡೆದಿವೆ. ಮನುಷ್ಯನಿಗೆ ಕೇಳಿಸಲಾಗದ ಕೆಲವು ಶಬ್ದಗಳನ್ನು ಬೆಕ್ಕುಗಳು ಗ್ರಹಣಮಾಡುತ್ತವೆ. ಕೆಲವು ಜಾತಿಯ ಪಕ್ಷಿಗಳಿಗೂ ಇಂತಹ ಶಕ್ತಿ ಇರುತ್ತದೆ. ಬಾವಲಿಗಳ (Bats) ವಿಚಾರವಾಗಿ ಒಬ್ಬ ಇಟಲಿ ದೇಶದ ಶಾಸ್ತ್ರಜ್ಞನು ಸಂಶೋಧನೆಗಳನ್ನು ನಡೆಸಿದ್ದಾನೆ. ಇದರಿಂದ ನಮಗೆ ತಿಳಿದು ಬಂದಿರುವುದು ಬಹಳ ಆಶ್ಚರ್ಯಕರವಾದ ಸಂಗತಿ. ಗಾಢಾಂಧಕಾರದಲ್ಲಿ ಹಾರಾಡಿ, ಮಾರ್ಗದಲ್ಲಿರುವ ವಸ್ತುಗಳನ್ನು ಕಂಡುಹಿಡಿಯುವ ಶಕ್ತಿಯು ಕಣ್ಣಿನಿಂದಲ್ಲ ಅದರ ಕಿವಿಗಳಿಂದ ಎಂದು ತಿಳಿದುಬರುತ್ತದೆ. ಬಾವಲಿಯು ಹಾರುವಾಗ, ಅದರ ಬಾಯಿನಿಂದ ಹೊರಡುವ ಶಬ್ದಗಳು ಶ್ರವಣಾತೀತವಾದುವು. ಈ ಶಬ್ದಗಳು ಪ್ರಸಾರವಾಗಿ ಮಾರ್ಗದಲ್ಲಿ ಪ್ರತಿಬಂಧಕ ವಸ್ತುಗಳಿಂದ ಪ್ರತಿಫಲಿತವಾಗಿ, ಮತ್ತೆ ಒಂದು ಗೊತ್ತಾದ ಕಾಲದ ನಂತರ ಬಾವಲಿಯ ಕಿವಿಗಳಿಗೆ ಕೇಳಿಬರುತ್ತದೆ. ಇದಕ್ಕೆ ಅನುಗುಣವಾಗಿ ಅದರ ಕಿವಿಗಳನ್ನು ನಿರ್ದೇಶಿಸಿಕೊಳ್ಳುವ ಶಕ್ತಿಯಿದೆಯಂತೆ. ಹೀಗೆ ತನ್ನ ಬಾಯಿಂದ ಹೊರಟ ಶಬ್ದಸಂಕೇತದ ಪ್ರತಿಫಲಿತ ಧ್ವನಿಯನ್ನು ತನ್ನ ದೊಡ್ಡ ಕಿವಿಗಳಿಂದ ಕೇಳಿ, ಮತ್ತೆ ಇನ್ನೊಂದು ಸಂಕೇತವನ್ನು ಹೊರಡಿಸುತ್ತದೆಯಂತೆ. ಈ ರೀತಿ, ಸುಮಾರು ೨೦—೩೦ ಸಂಕೇತಗಳನ್ನು ಒಂದೊಂದು ಸೆಕೆಂಡಿನಲ್ಲಿಯೂ ಹೊರಗೆಡಹುವುದರ ಮೂಲಕ, ಮಾರ್ಗದರ್ಶನ ಮಾಡಿಕೊಳ್ಳುತ್ತದೆ. ದೈವಸೃಷ್ಟಿಯಲ್ಲಿ ಈ ವಿಧವಾಗಿ "ಕಿವಿಗಳಿಂದ ನೋಡುವ" ಶಕ್ತಿಯನ್ನು ಬಾವಲಿಗೆ ಕೊಟ್ಟಿರುವುದು ಸೋಜಿಗದ ವಿಷಯವೇ ಸರಿ!

೫. ಪ್ರಯೋಗಗಳಿಂದ ಸಮರ್ಥನೆ ಹೊಂದಿರುವ ಮೇಲಿನ ವಿಚಿತ್ರ ಸಂಗತಿಯನ್ನು ಉಪಯೋಗಿಸಿ ಮನುಷ್ಯರ ಅಂಧತ್ವದ ಕಷ್ಟವನ್ನು ನಿವಾರಿಸಲು ಸಾಧನಗಳು ಇತ್ತೀಚೆಗೆ ನಿರ್ಮಿತವಾಗಿವೆ. ಇವುಗಳ ಸಹಾಯದಿಂದ ಕುರುಡರು ಮಾರ್ಗ

ದಲ್ಲಿರುವ ವಸ್ತುಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ. ವಸ್ತುಗಳಿಂದ ಪ್ರತಿಫಲಿತವಾದ ಶ್ರವಣಾತೀತ ಶಬ್ದಗಳನ್ನು ಕಿವಿಗೆ ಕೇಳಿಸುವ ಶಬ್ದಗಳನ್ನಾಗಿ ಪರಿವರ್ತಿಸಲು ಸಾಧನಗಳನ್ನು ಉಪಯೋಗಿಸಬೇಕಾಗಿದೆ.

೬. ಬಹಳ ಶಕ್ತಿಯುತವಾದ ಶ್ರವಣಾತೀತ ಸ್ಪಂದನಗಳನ್ನು ಆರೋಗ್ಯಕ್ಕೆ ಅಪಾಯಕರವಾದ ಕ್ರಿಮಿ ವಿಶೇಷಗಳನ್ನು (Bacteria) ನಾಶಮಾಡಲು ಉಪಯೋಗಿಸಬಹುದು. ಇದರಿಂದ ನೀರು, ಹಾಲು, ಆಹಾರಪದಾರ್ಥಗಳು—ಇವುಗಳನ್ನು ಪರಿಶುದ್ಧಮಾಡಲು ಅವಕಾಶವಿದೆ.

೭. ಶ್ರವಣಾತೀತಸ್ಪಂದನಗಳಿಂದ ಮನುಷ್ಯನ ಚರ್ಮದ ಮೇಲೆ ಯಾವ ಪರಿಣಾಮಗಳು ಉಂಟಾಗುತ್ತವೆ ಎಂಬ ವಿಷಯವಾಗಿ ಪರಿಶೋಧನೆಗಳು ನಡೆಯುತ್ತಿವೆ. ಇದರಿಂದ ವೈದ್ಯಶಾಸ್ತ್ರದಲ್ಲಿಯೂ, ಬಹಳಮುಖ್ಯವಾದ ಉಪಯೋಗಗಳು ಕಂಡುಬರುವುದರಲ್ಲಿ ಸಂದೇಹವಿಲ್ಲ.

೮. ರಾಸಾಯನಿಕವಸ್ತು, ಕ್ರಿಯೆಗಳಲ್ಲಿಯೂ ಕೂಡ, ಶ್ರವಣಾತೀತಸ್ಪಂದನಗಳಿಂದ ಬಹಳ ಬದಲಾವಣೆಗಳು ನಡೆಯುತ್ತವೆ. ಈ ಸಂಶೋಧನೆಗಳಿಂದಲೂ ಕೂಡ ಉಪಯುಕ್ತಾಂಶಗಳು ಹೊರಬೀಳುತ್ತಿವೆ.

೯. ಕೈಗಾರಿಕೆಗಳಲ್ಲಿಯೂ ಶ್ರವಣಾತೀತ ಸ್ಪಂದನಗಳ ಉಪಯೋಗ ಕಂಡುಬಂದಿದೆ. ಬಟ್ಟೆಗಳಿಗೆ ಅಂಟಿಕೊಂಡಿರುವ ಕೊಳೆಗಳನ್ನು ತೆಗೆದುಹಾಕಲು ಕೆಲವು ಸಾಧನಗಳು ನಿರ್ಮಿತವಾಗಿವೆ. ಲೋಹಗಳ ರಚನೆಗಳಲ್ಲಿ ಕಂಡುಬರುವ ಲೋಪದೋಷಗಳನ್ನು ಪತ್ತೆಹಚ್ಚಲು X-ಕಿರಣಗಳನ್ನು ಹೇಗೆ ಉಪಯೋಗಿಸುತ್ತಾರೆಯೋ ಅದೇ ರೀತಿಯಲ್ಲಿಯೇ ಶ್ರವಣಾತೀತ ಸ್ಪಂದನಗಳ ಶಕ್ತಿಯನ್ನೂ ಸಹ ಉಪಯೋಗಿಸಬಹುದು.

ಶ್ರವಣಾತೀತ ಶಬ್ದಗಳ ವಿಜ್ಞಾನವು ಈಗ ಕೆಲವು ವರ್ಷಗಳ ಹಿಂದೆ ಆರಂಭವಾಗಿ ಬೆಳೆಯುತ್ತಿರುವ ಒಂದು ಶಾಸ್ತ್ರೀಯ ಅಂಗ. ಈಗಾಗಲೇ, ಹಲವಾರು ಮುಖ್ಯ ಸಂಶೋಧನೆಗಳು ನಡೆದಿವೆ—ಕಣ್ಣಿಗೆ ಕಾಣದೆ ಇರುವ ಬೆಳಕು ಅಂದರೆ ಅಲ್‌ಟ್ರಾವಯಲೆಟ್, X-ಕಿರಣಗಳು—ಇತ್ಯಾದಿ ಯಾವ ರೀತಿಯಾಗಿ ಪ್ರವರ್ಧಮಾನವಾಗಿವೆಯೋ, ಅದೇ ರೀತಿಯಲ್ಲಿಯೇ ಶ್ರವಣಾತೀತ ಶಬ್ದಗಳ ಶಾಸ್ತ್ರಕ್ಕೂ ಬಹಳ ಪರಿಣಾಮಕಾರಿಯಾದ ಭವಿಷ್ಯವಿದೆ. ಇದರಿಂದ ನಮ್ಮ ನಿತ್ಯ ಜೀವನದ ದೃಷ್ಟಿಯಿಂದಲೂ, ಕೇವಲ ಶುದ್ಧ ಶಾಸ್ತ್ರ ಜ್ಞಾನದ ದೃಷ್ಟಿಯಿಂದಲೂ, ಅತಿ ಮುಖ್ಯವಾದ ಸಂಶೋಧನೆಗಳಿಗೆ ಅವಕಾಶವಿದೆಯೆಂದು ಹೇಳಬಹುದು.

ಮಿಕ್ಕ ಎಲ್ಲ ವೈಜ್ಞಾನಿಕ ಸಂಶೋಧನೆಗಳಂತೆಯೇ, ಶ್ರವಣಾತೀತ ಶಬ್ದಶಾಸ್ತ್ರದ ವಿಷಯಗಳನ್ನು ತಿಳಿದು ಮಾನವನು ತನ್ನ ನಿತ್ಯ ಜೀವನದಲ್ಲಿ ಉಪಯೋಗಿಸಿಕೊಳ್ಳುವಾಗ, ಒಳ್ಳೆಯ ಅಥವಾ ಕೆಟ್ಟಪರಿಣಾಮಗಳು ಉಂಟಾಗಲು ಸಾಧ್ಯವಿದೆ. ತನ್ನ ಬುದ್ಧಿ ವಿವೇಚನಾ ಶಕ್ತಿಯಿಂದಲೂ, ಮಾನವನ ಕಲ್ಯಾಣದ ದೃಷ್ಟಿಯಿಂದಲೂ, ಜಗತ್ತಿನ ಸಂಸ್ಕೃತಿಯನ್ನು ಉಳಿಸುವ ದೃಷ್ಟಿಯಿಂದಲೂ ಸಹ, ಮನುಷ್ಯನು ವೈಜ್ಞಾನಿಕ ಸಂಶೋಧನೆಗಳನ್ನು ವಿನಾಶಕಾರಕವಾದ ಮಾರ್ಗಗಳಲ್ಲಿ ಪ್ರವರ್ತಿಸದೆ, ಕೇವಲ ಶಾಂತಿ ಸುಖಗಳ ಮಾರ್ಗಗಳಲ್ಲಿ ಉಪಯೋಗಿಸುತ್ತಾನೆಂದು ಹಾರೈಸೋಣ.

ಕೆ. ಶೇಷಾದ್ರಿ ಅಯ್ಯಂಗಾರ್

ಕುಮಾರ ವ್ಯಾಸಃ*

ಕುಮಾರವ್ಯಾಸೇ ಸತಿ ಘೋಷಯತಿ
ಕಲಿಭೂರ್ದ್ವಾಪರತಾಮೇತಿ !
ನೃತ್ಯತಿ ಪುರತೋ ಭಾರತಸಮರೋ
ದೇಹೇ ವಿದ್ಯುತ್ ಪರಿವಹತಿ !
ಸಾಕ್ಷಾದ್ ಭವತಿ ಚ ಸಾ ಕುರುಭೂಮಿಃ
ತದ್ ರಣರಂಗೇ,
ತತ್ ಸಂಗ್ರಾಮೇ,
ಭಟಘೋಷಃ ಶ್ರುತಿಪಥಮಾಗಚ್ಛತಿ !
ರೋಹತಿ ರೋಮಾಂಚಃ !
ಪ್ರೋಲ್ಲಸದಾಯುಧ ಸಮ್ಮರ್ದೇ,
ಯೋದ್ಧೃಜನಾನಾಮಭಿಮರ್ದೇ,
ಘರ್ಷಿತ ಗದಯೋರ್ಧಕ್ಕಾರೇ,
ರಥಚಕ್ರಧ್ವನಿ ಚೀತ್ಕಾರೇ,
ಪ್ರಣಶ್ಯಜ್ಜನಶಾಪೇ,
ಪತತಾಂ ಪರಿತಾಪೇ,
ಈಷಜ್ಜಿತಭಟ ಸಂಕೋಪೇ,
ಸಂಜೇತ್ರೃಣಾಮಾಟೋಪೇ,

---

* ಶ್ರೀ ಕುವೆಂಪು ಅವರ ಕುಮಾರವ್ಯಾಸ ಎಂಬ ಸುಪ್ರಸಿದ್ಧ ಕವಿತೆಯನ್ನು ಶ್ರೀ ಪುರುಷೋತ್ತಮ ಅವರು ಸಂಸ್ಕೃತ ಭಾಷೆಗೆ ಅನುವಾದ ಮಾಡಿದ್ದಾರೆ. ಮೂಲದ ಛಂದಸ್ಸಿನ ಕಟ್ಟಡದಲ್ಲಿ ಕಾಣುವ ಲಯಗತಿಗಳ ಸೊಗಸನ್ನು ಉಳಿಸಿಕೊಂಡು ಅನುವಾದ ಮಾಡಿರುವ ಈ ನವ್ಯಪ್ರಯತ್ನ ಸ್ತುತ್ಯವಾಗಿದೆ. ಒಂದು ಭಾಷೆಯ ಅತ್ಯುತ್ತಮವಾದ ಕೃತಿ ಇನ್ನೊಂದು ಭಾಷೆಗೆ ಅನುವಾದಗೊಳ್ಳುವುದರ ಆವಶ್ಯಕತೆ ಪ್ರಯೋಜನಾದಿಗಳನ್ನು ಈಗಿನ ದಿನಗಳಲ್ಲಿ ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಹೊಸಗನ್ನಡದಲ್ಲಿ ಬರೆದ ಹೊಸ ಛಂದಸ್ಸಿನ ಕೃತಿಯೊಂದನ್ನು ಹೀಗೆ ಸಂಸ್ಕೃತಕ್ಕೆ ಅನುವಾದ ಮಾಡುತ್ತಿರುವುದರಲ್ಲಿ ಮೊದಲಿಗರಾಗಿರುವ ಶ್ರೇಯಸ್ಸು ಶ್ರೀ ಪುರುಷೋತ್ತಮರಿಗೆ ಸಲ್ಲುತ್ತದೆ. ಇಂತಹ ಪ್ರಯತ್ನದಿಂದ ಕನ್ನಡೇತರ ಭಾರತೀಯ ವಿದ್ವಜ್ಜನರು ನಮ್ಮ ಆಧುನಿಕ ಕಾವ್ಯ ಪ್ರಪಂಚದ ಸೊಬಗು ಸ್ವಾರಸ್ಯಗಳನ್ನು ಆಸ್ವಾದಿಸಲು ಸುಲಭವಾಗುತ್ತದೆ ಎಂದು ನಾವು ಭಾವಿಸುತ್ತೇವೆ.—ಸಂ.

ಅಭಿಯಾಸ್ಯದ್ ಬಲ ಹಾಹಾರಾವೇ,
ಸ್ವನದಶ್ವಾನಾಂ ಹೇಷಾ ರಾವೇ,
ಶ್ರೋತ್ರಂ ಭಿನ್ನಂ!
ವಕ್ಷಶ್ ಛಿನ್ನಂ!
ಮಜ್ಜಾಪೂರಂ ಪಂಕಂ ಸ್ಪೃಷ್ಟ್ವಾ,
ರುಧಿರೋದ್ಗಾರಿಣಮುತ್ಸಂ ದೃಷ್ಟ್ವಾ,
ದೀರ್ಣಂ ನೇತ್ರಂ!
ಚೂರ್ಣಂ ಗಾತ್ರಂ!
ಶ್ರುಣುತಾತ್, ಫಲ್ಗುಣಸಾರಥಿಃ
ರಣ ಗೀತಾಂ ಚ
ರಣ ನೀತಿಂ ಚ
ತಂ ಬೋಧಯತಿ ಸ ನಿರ್ಭಯತಾಂ ಚ!
ಕೌರವ ಭೂಮೇಶ್ವರಶಯನೀಯಂ
ಗಚ್ಛತಿ ಭೀಷ್ಮಶ್ಚ
ಪರೇತ ರಾಶೇಃ ಪರ್ಯಂಕಂ!
ಪಿಬತಿ ಚ ರುಧಿರಂ ಸಃ ಕಲಿಭೀಮಃ
ಪಶ್ಯತ, ಹಾ! ತತ್ರ!
ಸ್ಯಂದನ ಪೀಠಾನ್ನಿ ಪತತಿ ಕರ್ಣಃ
ಪಶ್ಯತ, ಭೋ, ಅತ್ರ!
ರಣಚಂಡೀ ಸಾ ದಾಹಕದುಹಿತಾ!
ಯೋಷಿದ್‌ವೇಷಃ ಪ್ರಖರೋ ವಜ್ರಃ
ಹಸತೀಂ ಮಂದಂ ತಾಂ ಪಶ್ಯ
ತಿಷ್ಠತಿ ತದ್ರಣರಂಗೇ ಸಾ
ಕೃಷ್ಣಾ ಶ್ಲಥವೇಣೀ!
ವೈಶಂಪಾಯನ ಸರಸೀತೀರೇ
ದೃಶ್ಯಃ ಕಸ್ತತ್ರ!
ವಜ್ರಕ್ರೋಧಃ ಕೌರವದೇವಃ
ಪುರತೋ ಭೀಮಸ್ಯ!
ರಿಪುಜನ ವಕ್ಷೋ-
—ದಾರಣ ದಕ್ಷಂ

ಉತ್ಥಿತಗದಿನಂ ತಂ ಪಶ್ಯ!
ಭೀಮೋ ನಷ್ಟಃ!
ಕುರುಪೋ ಹೃಷ್ಟಃ!
ಪ್ರೇಕ್ಷಸ್ವ ತ್ವಂ ಭವಿತವ್ಯಂ!
ಕ ಏಷ ಧರ್ಮಃ?
ಅನೀತ್ಯಧರ್ಮಃ!
ಕೃಷ್ಣಕುಟಿಲತಾಂ ಪಶ್ಯ ತ್ವಂ!
ಪಶ್ಯಸಿ ಕಿಂ ತ್ವಂ? ವಿರಮಸಿ ಭೋಃ ಕಿಂ?
ಕೌರವ ದೇವೋ ಮರ್ತವ್ಯಃ ಕಿಂ?
ತರುಣ, ತ್ವಂ ಧರತಾತ್ ಖಡ್ಗಂ!
ತಾಡಯ ರಣಭೇರೀಂ!
ತ್ವರ, ಕುರು, ಘೋಷಂ ತೂರ್ಯಸಮುತ್ಥಂ!
ಆಹ್ವಯ ರಣಮಾರೀಂ!
ಕುಮಾರವ್ಯಾಸೇ ಸತಿ ಘೋಷಯತಿ
ಕಲಿಭೂದ್ವಾಪರತಾಮೇತಿ!
ನೃತ್ಯತಿ ಪುರತೋ ಭಾರತಸಮರೋ
ದೇಹೇ ವಿದ್ಯುತ್‌ಪರಿವಹತಿ!
ವೀರ್ಯೋದ್ರಿಕ್ತಃ ಕಲಿಃ!
ಭಾವೋನ್ಮತ್ತಃ ಕವಿಃ!

ಮೂಲ: ಶ್ರೀ ಕುವೆಂಪು ಅನುವಾದ—ಸಿ. ಜಿ. ಪುರುಷೋತ್ತಮ

ನಾಳಿನ ನವೋದಯ

೧

ಬೆಳಗಾಯಿತು—
ಕಾಶ್ಮೀರದಿಂದ ಕನ್ಯಾಕುಮಾರಿಯುವರೆಗೆ
ಹೊಂಬಿಸಿಲು ಸೂಸಿ ಹೂಗಾಳಿ ಹರಿದಾಡಿತು.
ನೀಲಿಯಾಗಸದ ತೊಳೆದ ಪಾಟಿಯು ಮೇಲೆ
ಹಕ್ಕಿಧ್ವನಿ ಮೂಡಿ ತೀಡಿತು ಹೊಸದೊಂದು ವರ್ಣಮಾಲೆ !

ಕೆಂಪುಕೋಟೆಯ ಭುಜಕೆ ಧರ್ಮಚಕ್ರಧ್ವಜವನಿರಿಸಿ
ತಾಜಮಹಲಿನ ಹಾಲುಗಲ್ಲಿನಲಿ ಪ್ರೀತಿ ಪ್ರತಿಬಿಂಬಿಸಿ
ಸದಾಸಿದ್ಧ ಗೊಮ್ಮಟೇಶ್ವರನ ಮಂದಸ್ಮಿತವ ಬಳಸಿ
ಗಂಗೆ ಗೋದಾವರಿ ಕೃಷ್ಣೆ ತುಂಗಭದ್ರೆ ಕಾವೇರಿಯರ
ತೆರೆಪರಂಪರೆಯಲ್ಲಿ ತಂಗಾಳಿ ಸೂಸಿ—
ಹಳ್ಳಿಹಳ್ಳಿಯ ಬದುಕ ಬೆಳ್ಳಿಚಿಕ್ಕೆಗೆ ಉಜ್ಜಿ
ದನಕರದ ಕೊರಳಿನಲಿ ಕಟ್ಟಿ ಹುರಿಗೆಜ್ಜೆ,
ಗುಡಿಸಲಿನ ಗೂಡಿಂದ ಹೊರಬಂದ ಹುಂಜ ಕೊರಳೆತ್ತಿ ಕೂಗಿ
ಬೆಳಗಾಯಿತು.

ಗಿರಣಿ ಬಂಬಿನ ಹುತ್ತದಿಂದ ಹೊಗೆಯೆದ್ದು
ಹಾವು ಹೆಡೆಬಿಚ್ಚಿತು !
ಬೀದಿಯೀ ತುದಿಯಿಂದ ಆ ತುದಿಯುವರೆಗೆ
ರಬ್ಬರು ಗಾಲಿಯುರುಳಿ, ಎಬ್ಬಿಸಿತು ಧೂಳಿ.
ನಳದಲ್ಲಿ ನೀರು ಗೊರಗೊರ ಸದ್ದುಮಾಡಿ
ಹಂಡೆಕೊಡಗಳ ಜೊತೆಗೆ ತೋಡಿಕೊಂಡಿತು ತನ್ನ ಸುಖದುಃಖ.
ಆಕಾಶವಾಣಿಯಲಿ ತಕ್ಕ ದೇವರನಾಮ.
ಹೊರಬಾಗಿಲಿಗೆ ಬಂದು ಹಾಲು ಅಳೆದನು ಗೌಳಿ ;
ಸುದ್ದಿಯಲಿ ಅದ್ದಿ ತೆಗೆದಿರುವ ಪತ್ರಿಕೆ ಬಂದು ಬಿತ್ತು
ಜೊತೆಗೆ ಚಹವೂ ಬಂತು—
ಮತ್ತೇನು ಸುದ್ದಿ ?

೨

ನಿನ್ನೆ ಮೊನ್ನೆಯದು ತಿಂಗಳು ವರುಷದಾಚೆಯದು
ಇಂದಿಹುದೆ? ಇಹುದು-ಇಲ್ಲ;
ನಾಳೆ ನಾಡಿದ್ದು ದೇವರೇ ಬಲ್ಲ.
ಯುಗಯುಗಗಳನು ಸೆಳೆದು ತುಳಿದು ತಳಹದಿ ಮಾಡಿ ಮೇಲೆ ನಿಂತು
ಮುಗಿಯ ಬಂದಿಹುದೇನೊ ಮೊದಲ ಹಂತ—
ನಡೆದಷ್ಟು ದೂರ ಸಾರುವದು ದೂರದ ದಿಗಂತ.
"ಅಡಿಯ ಮುಂದಿಡೆ ಸ್ವರ್ಗ
ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲ"—ಸಾಗಿಹುದು ಪಾದಯಾತ್ರೆ
ಯಾರು ಬಲ್ಲರು, ನಾಳೆ ಈ ಗುಡಿಯ ಮುಂದೆಯೇ
ನೆರೆದೀತು ದೊಡ್ಡ ಜಾತ್ರೆ.

ಕಣ್ಣೆದುರು ಬಣ್ಣದಲಿ ಹೊಳಹುಗೊಂಡೇಳುತಿಹ
ದೇಶದುದ್ದೇಶಗಳ ಹೊಸತು ನಕ್ಷೆ,
ಲಕ್ಷಲಕ್ಷದ ಜನದ ಆಶೆಯಾಕಾಂಕ್ಷೆಗಳ ಭರವಸೆಯ ಬೆಳ್ಳಿರೇಖೆ!
ಒಂದೊಂದೆ ಇಟ್ಟಂಗಿ ಒಂದು ಕಬ್ಬಿಣಬುಟ್ಟಿ ಗಚ್ಚುಗಾರೆ
ಕೋಟಿಕೈಗಳ ದಾಟಿ ಕೋಟಿ ಹೃದಯವ ಮೀಟಿ
ಜಾತಿ ಕುಲ ಪಂಥ, ಊರು ತಾಲೂಕು ಜಿಲ್ಲೆ ಪ್ರಾಂತ—
ಮೀರಿ ಅಂಥಿಂಥ ಸಂಕುಚಿತ ಮೇರೆ
ಸಮರ್ಪಿಸಿದೆ ಕೋಟಿ ತಾರೆಯ ಬೆಳಕಿನೆಲ್ಲ ಧಾರೆ.

ನಿಲ್ಲಿ ನದಿಗಳೆ ಇಲ್ಲಿ ನಿಮಗೆಲ್ಲಿ ವಿಶ್ರಾಂತಿ, ನಿಂತು
ಸಾಗರವಾಗಿ ವಿದ್ಯುದಾಗರವಾಗಿ ಮುಂದೆ ಸಾಗಿ;
ನೂರು ಯೋಜನ ನೆಲವನೆಲ್ಲ ಹಚ್ಚಗೆ ನಗಿಸಿ
ತೆನೆತೆನೆಯ ತಲೆದೂಗಿಸಿ
ನಿಮ್ಮ ಹೊನಲಿನ ಶಕ್ತಿ ಯುಕ್ತಿಯಲಿ ಆಗಸಕೆ ತಂತಿಬೀಸಿ,
ಮನೆ ಮಹಡಿ ಗುಡಿ ಜೋಪಡಿ ಬೀದಿಯಿಕ್ಕಟ್ಟಿನಲಿ ಬೆಳಕುಸೂಸಿ.
ಹಳ್ಳಿ ಪಟ್ಟಣ ನಗರ, ಗುಡ್ಡ ಕೊರಕಲು ಕಂಟಿ
ಎಲ್ಲೆಂದರಲ್ಲಿ ಶ್ರಮದಾನಕ್ಕೆ ಶುಭದ ಹಾದಿ.

'ಮೆಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ'
ತುಂಬಿತೂಗಿ,
'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್ಗಾಗರಮಾಗಿ'
ಹೊಸರೂಪರಚನೆಯಲಿ ಕಂಗೊಳಿಸಿ ಕಸುವಾಗಲಿದೆ ನಾಡು
ಅದಕಿದೇ ಮೊದಲ ನಾಂದಿ.
ಬರಿಯ ಹಾರೈಕೆಗಳನುಂಡು ಸೊರಗಿದದೇಹದಲ್ಲಿ ಬಿಸಿನೆತ್ತರಿನ ಸಂಚಾರ—
ನೀರು ಗೊಬ್ಬರವುಂಡು ಭೂಮಿಯಾಳಕೆ ನೂರು ನಾಲಗೆಯ ಚಾಚಿ
ಹೊಸಬಾಳ ಚಿಗುರು ಹೂಹಣ್ಣುಗಳ ಬಸಿರಲ್ಲಿ ಹೊತ್ತಿರುವ ಜೀವಯಜ್ಞ.

೩

ವರುಷ ವರುಷಕೆ ನಮಗು ನಿಮಗೂ ಬೇವು-ಬೆಲ್ಲದ ಯುಗಾದಿ
ಬಿಡುಗಡೆಯ ಪಡೆದ ಈ ನಾಡು ಹುಡುಕುತಿದೆ ಸರ್ವೋದಯದ
ಸುಖದ ಹಾದಿ.
ಐದೈದು ವರುಷಗಳ ಸೋಪಾನವನ್ನೇರಿ ಆಪಾದಮಸ್ತಕವ
ನೋಡಿಕೊಂಡು
ನವಯುಗಾರಂಭದಲಿ ಅಂಬೆಗಾಲಿಟ್ಟ ಶಿಸು ಆಗಲೇ ಬೆಳೆದು ನಿಂತು,
ಹಾಲಿನ ಬಾಟ್ಲಿ ಬಿಟ್ಟು, ಬಟ್ಟಲನ್ನವ ತೊರೆದು, ತನ್ನಿಚ್ಛೆಯಲಿ ತಾನೆ
ಉಣ್ಣುತಿದೆ ಐದೈದು ಬೆರಳ ತುತ್ತು. . . .
'ಸರ್ವೇಜನಾಃ ಸುಖಿನೋಭವಂತು'.
ಕೆಡುಗಾಳಿ ಬಿಟ್ಟಾಗ ಈ ಮಗುವಿಗೊಂದಿಷ್ಟು ನೆಗಡಿ ಕೆಮ್ಮು;
ಜ್ವರದಲ್ಲಿ ಬಡಬಡಿಸಿ ಒಮ್ಮೊಮ್ಮೆ ಹೆದರಿಸಿಬಿಡುವುದೂ ಉಂಟು.
ಆದರೂ ನೆರೆಹೊರೆಯು ಬೆರಗುಬಡುವಂತಿಹುದು ಇದರ ಬೆಳವಣಿಗೆ—
ವರ್ಣಮಾಲೆಯ ಕಲಿತು, ಗುಣಿತಾಕ್ಷರವ ತೀಡಿ, ಅಂಕಿ ಮಗ್ಗಿಯ ಮುಗಿಸಿ
ವರ್ಗದಲಿ ಎಲ್ಲರಿಗು ಮುಂದಾಯಿತು.
ಮುಂದಿನದು ಬರೆದಂತೆ ಹಿಂದಿನದು ಮರೆಯುತ್ತ ಹೊರಟರೇ ಸ್ವಲ್ಪಕಷ್ಟ
ಅದಕಾಗಿ ಆಗೀಗ ಆಗಬೇಕಿವಗೆ 'ಅಜ್ಜಯ್ಯನಭ್ಯಂಜನ'.
ಗಾಂಧಿ ಗಾಂಧಿ ಗಾಂಧಿ
ಹೆಜ್ಜೆಹೆಜ್ಜೆಗೆ ಮನಸಿನಲ್ಲಿ ಕಟೆಯುತ್ತಿಹುದು
ಅವನ ಮನದಲಿ ಮೂಡಿ, ಕೈಮೇಲೆ ಆಡಿ
ಹೆಗಲೇರಿ ಬೆಳೆದಂಥ ದಿವ್ಯಕನಸು.

ಹೊತ್ತು ಮುಳುಗಿತು ಎಂದು ಮತ್ತೆ ಹರಿದಾಡುತಿವೆ
ಸಿಕ್ಕಸಿಕ್ಕೆಡೆಗಳಲಿ ಹಾವು, ಚೇಳು ;
ಕಾಡಿನಲಿ ಬೀಡುಬಿಟ್ಟಿದ್ದ ಹುಲಿ, ಕರಡಿ, ಚಿರತೆ ನರಿ ತೋಳ
ನಾಡನಾಕ್ರಮಿಸಿ ಜಪ್ಪಿಸಿ ಕುಳಿತು ಜಪಮಾಲೆ ಎಣಿಸುತಿವೆ
ಗುಂಡಾಡಿಸುತ್ತ ಬಾಲ.
ಅತ್ತ ಕತ್ತಲೆಯಲ್ಲ, ಇತ್ತ ಬೆಳಕೂ ಅಲ್ಲ
ವೋಟುಮರ ದೆವ್ವದಾಕಾರ ತಾಳಿರುವ ಸಂಧಿಕಾಲ.
ಎಂಥ ಕತ್ತಲೆಯಲ್ಲು ಸ್ವಂತ ತೇಜವ ಬಿಡದ
ಚಿಕ್ಕೆ ಬೆಳಕಿನ ಧೈರ್ಯ ಶಾಂತಿ ಔದಾರ್ಯ
ಈ ನಾಡಿನೆದೆಯಲ್ಲಿ ಮೂಡಬಹುದು ;
ಇಂದಿನೀ ಕಂಬ ತೊಲೆ ಜಂತಿ ತಂತಿಯ ಮೇಲೆ
ಇದರ ಬದುಕಿನ ಹಂತವೇರಲಿಹುದು ;
ಮುಖಮುಖದ ನಡುವಿರುವ ಮಂಜುಪರದೆಯು ಸರಿದು
ನಾಳಿನ ನವೋದಯುವ ತೋರಲಿಹುದು

—ಚೆನ್ನವೀರ ಕಣವಿ

(ಧಾರವಾಡದ ಆಕಾಶವಾಣಿಯ ಕೃಪೆಯಿಂದ)

ಶಿವಾದ್ವೈತ*

ಕನ್ನಡದಲ್ಲಿ ದರ್ಶನಗ್ರಂಥಗಳು ಅತ್ಯಂತ ವಿರಳ. ಇರುವ ಕೆಲವು ಕೇವಲ ಮತೀಯ ಅಭಿನಿವೇಶದಿಂದ ಪ್ರೇರಿತವಾಗಿರುವುದರಿಂದ ಶುದ್ಧವಾದ ದರ್ಶನ ಸಂಪ್ರದಾಯಕ್ಕೆ ಸೇರದೆ ವಿಚಾರಾತ್ಮಕವಾದ ತತ್ವಶೋಧನೆಗೆ ಸಾಕಾದಷ್ಟು ಸಹಾಯಕವಾಗಿಲ್ಲ. ಹೊಸಗನ್ನಡದಲ್ಲಿ ವಿಚಾರದ ಮಾರ್ಗ ಪ್ರಬುದ್ಧವಾಗಿ, ಪೂರ್ಣವಾಗಿ ದರ್ಶನ ಮರ್ಯಾದೆಗೆ ಒಳಪಟ್ಟು, ಬರೆವಣಿಗೆ ಹೇರಳವಾಗಿ ಬರಬೇಕು ಎಂದು ಆಶಿಸಬೇಕಾಗಿದೆ. ಈ ಆಕಾಂಕ್ಷೆಯನ್ನು ತಕ್ಕಮಟ್ಟಿಗೆ ಈಡೇರಿಸುವಂತೆ ಶ್ರೀಮಾನ್ ಜಿ. ರುದ್ರಪ್ಪನವರ "ಶಿವಸೂತ್ರಗಳು" ಮತ್ತು "ಪ್ರತ್ಯಭಿಜ್ಞಾ ಹೃದಯ" ಎಂಬ ಎರಡು ಗ್ರಂಥಗಳು ಹೊರಬಿದ್ದಿವೆ. ಇವೆರಡೂ ಕಾಶ್ಮೀರದಲ್ಲಿ ಕ್ರಿಸ್ತ ಶಕ ೯-೧೦ ನೆಯ ಶತಮಾನಗಳಲ್ಲಿ ಅತ್ಯಂತ ಪ್ರಚುರವಾಗಿದ್ದ "ಈಶ್ವರ ಪ್ರತ್ಯಭಿಜ್ಞಾ" ದರ್ಶನದ ಗ್ರಂಥಗಳು. ಇವು ಆ ದರ್ಶನವನ್ನು ಸಮಗ್ರವಾಗಿ ಪ್ರತಿಪಾದಿಸುವ ಬಹುಮುಖ್ಯ ಗ್ರಂಥಗಳಲ್ಲದಿದ್ದರೂ, ಅದರ ಸಾರವನ್ನು ಕ್ರೋಡೀಕರಿಸಿ ವಿಶೇಷ ಮಾನ್ಯತೆಯನ್ನು ಹೊಂದಿರುವ ಗ್ರಂಥಗಳು. ಶ್ರೀಮಾನ್ ರುದ್ರಪ್ಪನವರು ಮೂಲಸೂತ್ರಗಳನ್ನು ಸಂಸ್ಕೃತದಲ್ಲಿ ಕೊಟ್ಟು ಆ ಮೂಲದ ಸಂಸ್ಕೃತ ವ್ಯಾಖ್ಯಾನಗಳ "ಭಾವಾನುವಾದ"ವನ್ನು ಕನ್ನಡದಲ್ಲಿ ಕೊಟ್ಟಿರುತ್ತಾರೆ. ಸಂಸ್ಕೃತ ವ್ಯಾಖ್ಯಾನಗಳನ್ನೂ ಕೊಟ್ಟಿದ್ದರೆ ದರ್ಶನದ ಅಧ್ಯಯನಕ್ಕೆ ಇನ್ನೂ ಹೆಚ್ಚು ಅನುಕೂಲವಾಗುತ್ತಿತ್ತು. ದೀರ್ಘವಾದ ಪೀಠಿಕೆಗಳು ಮತ್ತು ಬಹು ಉಪಯುಕ್ತವಾದ ಟಿಪ್ಪಣಿಗಳು ಈ ಪ್ರಕಟಣೆಯನ್ನು ಹೆಚ್ಚು ಪ್ರಯೋಜನಯುತವನ್ನಾಗಿ ಮಾಡಿವೆ. ಈ ಶಾಸ್ತ್ರೀಯ ಗ್ರಂಥಗಳ ಪರಿಚಯವನ್ನು ಕನ್ನಡ ಜನಕ್ಕೆ ಮೊದಲು ಮಾಡಿಕೊಟ್ಟು ಶ್ರೀಯುತರು ಸರ್ವರ ಅಭಿನಂದನೆಗೂ ಪಾತ್ರರಾಗಿದ್ದಾರೆ.

ಕಾಶ್ಮೀರ ಶೈವದರ್ಶನವು ಕನ್ನಡಿಗರಿಗೆ ಸ್ವಲ್ಪ ಹೊಸದಾಗಿರುವುದರಿಂದ ಅದರ ಸ್ಥೂಲ ಪರಿಚಯವನ್ನು ಮಾಡಿಕೊಡುವುದು ಆವಶ್ಯಕವೆನಿಸುತ್ತದೆ. ಅದರ ವೈಶಿಷ್ಟ್ಯ

---

* ಶ್ರೀ ಜಿ. ರುದ್ರಪ್ಪ, ಎಂ.ಎ., ಎಲ್‌ಎಲ್.ಬಿ. ಅವರ ಈ ಎರಡು ಕೃತಿಗಳನ್ನು ಕುರಿತು :

೧ ಶಿವಸೂತ್ರಗಳು (ಕಾಶ್ಮೀರ ಶೈವದರ್ಶನ ಮತ್ತು ಸಾಧನಾಭ್ಯಾಸಗಳು,) ಪು. ೨೨+೮೨. ಬೆಲೆ, ರೂ. ೩.೦೦.

೨ ಪ್ರತ್ಯಭಿಜ್ಞಾಹೃದಯ. ಪು. lxxi+೭೯+೧೬. ಬೆಲೆ, ರೂ. ೨.೫೦. ನಂ, ೧೧೨, ಗಾಂಧೀ ನಗರ, ಬೆಂಗಳೂರು ೯.

ವನ್ನು ತಿಳಿಯಲು ಶೈವ ಸಂಪ್ರದಾಯದ ಪ್ರಾಚೀನತೆ, ವ್ಯಾಪ್ತಿ ಮತ್ತು ವೈವಿಧ್ಯ ಇವುಗಳ ಅರಿವು ಅತ್ಯಂತ ಸಹಾಯಕವಾಗುತ್ತದೆ. ನಮ್ಮ ದೇಶದ ಧಾರ್ಮಿಕ ಜೀವನದಲ್ಲಿ ಪರದೇವತೆಯನ್ನು "ಶಿವ"ನೆಂದು ಪರಿಗಣಿಸುವುದು ಅತ್ಯಂತ ಪ್ರಾಚೀನವಾಗಿದೆ. ಸಿಂಧೂ ಬಯಲಿನ ಸಂಸ್ಕೃತಿಯಲ್ಲಿ "ಪಶುಪತಿ"ಯ ಕಲ್ಪನೆ ಇತ್ತೆನ್ನುವುದಕ್ಕೆ ಆಧಾರವಿದೆಯೆಂಬುದು ಕೆಲವು ಇತಿಹಾಸ ಸಂಶೋಧಕರ ನಿರ್ಣಯ. ಋಗ್ವೇದದಲ್ಲಿ "ರುದ್ರ" ದೇವತೆಯನ್ನು ಕುರಿತ ಮಂತ್ರಗಳಿವೆ. "ರುದ್ರ" ಮತ್ತು "ಶಿವ" ಬೇರೆಯಲ್ಲವೆಂದು ಮುಂದಿನ ವೈದಿಕ ಸಾಹಿತ್ಯದಲ್ಲಿ ಸ್ಪಷ್ಟಗೊಂಡಿದೆ. ಶ್ವೇತಾಶ್ವತರ ಮತ್ತು ಮಹಾನಾರಾಯಣೀಯ ಉಪನಿಷತ್ತುಗಳಲ್ಲಿ ಪರಬ್ರಹ್ಮನನ್ನು "ಶಿವ"ನೆಂದು ಕರೆದಿದೆ. ಹೀಗೆ ಶೈವ ಪಂಥದ ಅತ್ಯಂತ ಪ್ರಾಚೀನತೆ ನಿಸ್ಸಂಶಯವಾಗಿದೆ. ಹಾಗೆಯೇ ಶಿವೋಪಾಸನೆಯ ವ್ಯಾಪ್ತಿಯೂ ಬಹಳ ವಿಸ್ತಾರವಾಗಿದೆ. ಇತಿಹಾಸಗಳು, ಪುರಾಣಗಳು ಮತ್ತು ಆಗಮಗಳು ಶಿವಭಕ್ತಿಯನ್ನು ಬೋಧಿಸುವುದಲ್ಲದೆ, ಭಾರತ ಸಂಸ್ಕೃತಿಯ ವಿವಿಧ ಪ್ರಧಾನ ಶಾಖೆಗಳಲ್ಲಿ ಅನೇಕ ಪ್ರಭಾವಶಾಲಿ ವ್ಯಕ್ತಿಗಳು ಶೈವರಾಗಿದ್ದರು. ಪಾಣಿನಿಯ ವ್ಯಾಕರಣದ ಮೂಲಸ್ಫೂರ್ತಿ ಮಹೇಶ್ವರನಿಂದ ಬಂದಿತೆಂದು ಪ್ರತೀತಿ. ಕಾಳಿದಾಸ, ಭವಭೂತಿ, ಬಾಣ ಮೊದಲಾದ ಮಹಾಕವಿಗಳೂ, ಮೀಮಾಂಸಕ ಮತ್ತು ನ್ಯಾಯ ಮೊದಲಾದ ದರ್ಶನಗಳ ಗ್ರಂಥಕಾರರಾದ ಕುಮಾರಿಲ, ಉದಯನ ಮುಂತಾದವರೂ, ಸಂಗೀತ ರತ್ನಾಕರವನ್ನು ಬರೆದ ಶಾರಂಗದೇವನೂ, ಮುಖ್ಯರಾದ ಅನೇಕ ಆಲಂಕಾರಿಕರೂ ಶಿವಭಕ್ತರಾಗಿದ್ದಂತೆ ತೋರುತ್ತದೆ.

ಹೀಗೆ ಶಿವೋಪಾಸನೆಗೆ ಪ್ರಾಚೀನತೆ ಮತ್ತು ಪ್ರಭಾವವ್ಯಾಪ್ತಿಯಿರುವಂತೆಯೇ ದರ್ಶನ ಪ್ರಪಂಚದಲ್ಲಿ ಶೈವಮಾರ್ಗವು ಅನೇಕ ಸಂಪ್ರದಾಯಗಳನ್ನು ಕಟ್ಟಿದೆ. ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ "ಮಾಹೇಶ್ವರ" ದರ್ಶನದ ಪ್ರಕ್ರಿಯೆಯನ್ನು ಅನುವಾದಮಾಡಿ ವಿಮರ್ಶಿಸಿದ್ದಾರೆ. ಈ ಶೈವದರ್ಶನವು ದ್ವೈತವಾಗಿದ್ದಂತೆಯೂ, ತರ್ಕಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟಂತೆಯೂ ಭಾಸವಾಗುವುದು. ಕೇವಲ ನಿಮಿತ್ತಕಾರಣನಾದ ಈಶ್ವರನನ್ನು ಮಾಹೇಶ್ವರರು ಅನುಮಾನದಿಂದ ಸಾಧಿಸುತ್ತಿದ್ದಂತೆ ಸೂಚಿತವಾಗಿದೆ. ರಾಮಾನುಜಾಚಾರ್ಯರು ಕಾಲಾಮುಖ, ಕಾಪಾಲಿಕ, ಪಾಶುಪತ ಮತ್ತು ಶೈವ ಎಂಬ ನಾಲ್ಕು ಶೈವಪಂಥಗಳನ್ನು ಉದಹರಿಸಿದ್ದಾರೆ. ಮಾಧವಾಚಾರ್ಯರ ಸರ್ವದರ್ಶನ ಸಂಗ್ರಹದಲ್ಲಿ ಪಾಶುಪತ, ಶೈವ, ಪ್ರತ್ಯಭಿಜ್ಞಾ ಮತ್ತು ರಸೇಶ್ವರ ಸಿದ್ಧಾಂತವೆಂಬ ನಾಲ್ಕು ಮಾರ್ಗದ ಪ್ರತಿಪಾದನೆಯಿದೆ. ಇವಷ್ಟಲ್ಲದೆ ಶ್ರೀಕಂಠ ಶಿವಾಚಾರ್ಯರೆಂಬುವರು ಬ್ರಹ್ಮಸೂತ್ರಕ್ಕೆ ಬರೆದ ಒಂದು ಸುಂದರ ಭಾಷ್ಯವೂ, ಅದರ ಮೇಲಿನ ಅಪ್ಪಯ್ಯ ದೀಕ್ಷಿತರ ವಿಪುಲವಾದ

ವ್ಯಾಖ್ಯಾನವೂ ಉಪಲಬ್ಧವಾಗಿವೆ. ತಮಿಳು ದೇಶದ "ಶೈವ ಸಿದ್ಧಾಂತ"ವು ಒಂದು ಸ್ವತಂತ್ರವಾದ, ಸಮಗ್ರವಾದ ದರ್ಶನ. ಹೀಗೆ ದರ್ಶನ ಪ್ರಪಂಚದಲ್ಲಿ ಶೈವ ಪ್ರಸ್ಥಾನದ ಬಹುಮುಖವಾದ ಬೆಳವಣಿಗೆಯನ್ನು ಕಾಣಬಹುದು. ಶೈವದರ್ಶನ ದಲ್ಲಿಯೇ ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಗಳನ್ನು ಬೇರೆ ಬೇರೆ ಪಂಥವಾಗಿ ನಿರೂಪಿಸಿದೆ. ಪಾಶುಪತರು "ನಿರಪೇಕ್ಷ ಈಶ್ವರವಾದಿ"ಗಳಾಗಿದ್ದರು. ಅಂದರೆ, ಈಶ್ವರನ ನಿರಂಕುಶ ಸ್ವಾತಂತ್ರ್ಯವನ್ನು ಉಪಪಾದಿಸುವುದಕ್ಕೋಸ್ಕರ ಅವರು "ಕರ್ಮವಾದ"ವನ್ನು ಬಿಟ್ಟಂತೆ ಸರ್ವದರ್ಶನ ಸಂಗ್ರಹದಲ್ಲಿ ನಿರೂಪಿತವಾಗಿದೆ. "ಶೈವ"ವೆಂದು ಸರ್ವದರ್ಶನ ಸಂಗ್ರಹದಲ್ಲಿ ಹೇಳಿರುವ ದರ್ಶನವು ಕರ್ಮವಾದ ವನ್ನೊಳಗೊಂಡ ಸಮಂಜಸ "ಈಶ್ವರವಾದ" (Theism). ಇಲ್ಲಿ ತತ್ವತ್ರಯಗಳ—ಜೀವ, ಜಗತ್ತು, ಶಿವ—ನಿರೂಪಣೆಯಿದೆ. ಭೋಜದೇವನ "ತತ್ವ ಪ್ರಕಾಶ"ವು ಈ ಶೈವಪಂಥವನ್ನು ಸಕ್ರಮವಾಗಿ, ಭವ್ಯವಾಗಿ ಪ್ರತಿಪಾದನೆ ಮಾಡಿದೆ. ಸರ್ವದರ್ಶನ ಸಂಗ್ರಹದಲ್ಲಿ ಮತ್ತು ವೇದಾಂತದೇಶಿಕರ "ನ್ಯಾಯಸಿದ್ಧಾಂಜನ"ದಲ್ಲಿ ಈ ಗ್ರಂಥದ ಕಾರಿಕೆಗಳ ಆಧಾರವನ್ನು ಉಪಯೋಗಿಸಿಕೊಂಡು ಶೈವ ದರ್ಶನದ ಸಂಗ್ರಹವನ್ನು ಮಾಡಲಾಗಿದೆ. ಇದು "ಶೈವ ದ್ವೈತ"ವಾದರೆ ಶ್ರೀಕಂಠರದು "ಶೈವ ವಿಶಿಷ್ಟಾ ದ್ವೈತ". ಇತಿಹಾಸದೃಷ್ಟಿಯಿಂದ ಇವರ ಬ್ರಹ್ಮಸೂತ್ರ ಭಾಷ್ಯವು ಅನೇಕ ಚರ್ಚೆ ಗಳಿಗೆ ಆಸ್ಪದ ಕೊಟ್ಟಿದೆ. ಶಂಕರ, ರಾಮಾನುಜ, ಮಧ್ವ ಯಾರೂ ಈ ಸಿದ್ಧಾಂತವನ್ನು ವಿಚಾರ ಮಾಡಿಲ್ಲ. ಅಪ್ಪಯ್ಯ ದೀಕ್ಷಿತರು ಇದನ್ನು ಬಹಳ ಪುರಸ್ಕರಿಸಿ ವ್ಯಾಖ್ಯಾನ ಮಾಡಿದ್ದಾರೆ. ಇಲ್ಲಿ ತತ್ವತ್ರಯಗಳ ನಿರೂಪಣೆಯಿದೆ. ಆದರೆ, ಜೀವ ಮತ್ತು ಜಗತ್ತು ಈಶ್ವರನಿಂದ ಭಿನ್ನವಾಗಿದ್ದರೂ ಅವೆರಡೂ ಅವನ ವಿಶೇಷಣ, ಪ್ರಕಾರ, ಶರೀರ ಎಂದು ಪರಿಗಣಿತವಾಗಿ ವಸ್ತುತಃ ದರ್ಶನವು ರಾಮಾನುಜ ಮತದಂತೆ ಸರ್ವ ವಿಶೇಷಣ ವಿಶಿಷ್ಟವಾದ ತತ್ವವೊಂದೇ ಎನ್ನುವ ಏಕತ್ವವಾದದಲ್ಲಿ ಪರಿಸಮಾಪ್ತವಾಗುತ್ತದೆ.

ಕಾಶ್ಮೀರ ಶೈವದರ್ಶನವು ಒಂದು ರೀತಿಯ ಅದ್ವೈತವಾಗಿದೆ. ಇದು ಬೆಳೆದ ಕಾಲ ಸುಮಾರು ೯ ರಿಂದ ೧೦ ನೆಯ ಶತಮಾನದೊಳಗೆ. ಇದರ ಆಚಾರ್ಯ ಪರಂಪರೆಯಲ್ಲಿ ಪ್ರಸಿದ್ಧರೆಂದರೆ ಕ್ರಮವಾಗಿ ವಸುಗುಪ್ತ, ಸೋಮಾನಂದ, ಉತ್ಪಲ, ಅಭಿನವಗುಪ್ತ, ಕ್ಷೇಮರಾಜ, ಯೋಗರಾಜ—ಇವರು. ವಸುಗುಪ್ತನು "ಶಿವಸೂತ್ರ" ಮತ್ತು "ಸ್ಪಂದ ಕಾರಿಕೆ" ಇವಕ್ಕೆ ಕಾರಣನಾದನು. ಸೋಮಾನಂದನು "ಶಿವ ದೃಷ್ಟಿ" ಎಂಬ ಗ್ರಂಥದ ಕರ್ತೃ. ಉತ್ಪಲಾಚಾರ್ಯರು "ಈಶ್ವರ ಪ್ರತ್ಯಭಿಜ್ಞಾ" ಎಂಬ ವಿಸ್ತಾರವಾದ ಗ್ರಂಥವನ್ನು ರಚಿಸಿದರು. ಅಭಿನವಗುಪ್ತಾಚಾರ್ಯರು ಓಜ ಸ್ವಿಯೂ, ಗಂಭೀರವೂ, ಸರ್ವಾರ್ಥಪರಿಪೂರ್ಣವೂ ಆದ ಅನೇಕ ಗ್ರಂಥಗಳನ್ನು

ಬರೆದರು. ಅವುಗಳಲ್ಲಿ "ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನಿ", "ತಂತ್ರಸಾರ" "ತಂತ್ರಾಲೋಕ", "ಪರಮಾರ್ಥಸಾರ"—ಇವು ಮುಖ್ಯವಾದುವು. ಕ್ಷೇಮ ರಾಜನು "ಪ್ರತ್ಯಭಿಜ್ಞಾಹೃದಯ" ಎಂಬ ಗ್ರಂಥವನ್ನು ರಚಿಸಿದನು. ಯೋಗ ರಾಜನು ಅಭಿನವಗುಪ್ತರ ಗ್ರಂಥಗಳಿಗೆ ರಸಭರಿತವಾಗಿ ವ್ಯಾಖ್ಯಾನ ಮಾಡಿದ್ದಾನೆ.

ಈ ದರ್ಶನದ ಸಾಮಾನ್ಯ ಸ್ವರೂಪವನ್ನು ಹೀಗೆ ತಿಳಿಸಬಹುದು. "ತತ್ತ್ವ ಒಂದೇ; ಅದೇ ಪರಶಿವ. ಜೀವನು ಬೇರೆಯಲ್ಲ, ವಸ್ತುತಃ ಈಶ್ವರ ಜೀವರಿಗೆ ಭೇದವಿಲ್ಲ. ಈ ಅಭೇದ-ಜ್ಞಾನಕ್ಕೆ 'ಪ್ರತ್ಯಭಿಜ್ಞಾ' ಎಂದು ಹೆಸರು. ಪ್ರತ್ಯಭಿಜ್ಞೆ ಯಿಂದಲೇ ಪರಮ ಪುರುಷಾರ್ಥವಾದ ಮೋಕ್ಷದ ಪ್ರಾಪ್ತಿ."

ಇಷ್ಟು ಮಾತ್ರ ಹೇಳಿದರೆ ಈ ದರ್ಶನವು ಶಂಕರರ ಅದ್ವೈತವೇ ಎಂದು ಪ್ರತಿ ಭಾಸವಾಗುವುದು. ಆದರೆ ಶಂಕರಾದ್ವೈತಕ್ಕೂ ಈ ದರ್ಶನಕ್ಕೂ ವೈಲಕ್ಷಣ್ಯವಿದೆ. ಆ ವೈಲಕ್ಷಣ್ಯವನ್ನು ಈ ದರ್ಶನದ ಅನುಯಾಯಿಗಳಾದ ಅಭಿನವಗುಪ್ತನೇ ಮೊದ ಲಾದವರು ಎತ್ತಿಹಿಡಿಯುತ್ತಾ ಶಾಂಕರ ಅದ್ವೈತವನ್ನು ಖಂಡಿಸಿರುವುದೂ ಕಂಡು ಬರುತ್ತದೆ.[1] ಈ ವೈಲಕ್ಷಣ್ಯವನ್ನು ಸ್ಥೂಲವಾಗಿ ಹೀಗೆ ನಿರ್ದೇಶಿಸಬಹುದು:

(*a*) ಶಾಂಕರ ಅದ್ವೈತ ವೇದಾಂತವು ಭ್ರಾಂತಿನಿರೂಪಣೆಯಲ್ಲಿ "ಅನಿರ್ವಚ ನೀಯ ಖ್ಯಾತಿ" ವಾದವನ್ನು ಸಮರ್ಥಿಸುತ್ತದೆ. ಈ ಶಿವಾದ್ವೈತವು "ಅಪೂರ್ಣ ಖ್ಯಾತಿ" ವಾದವನ್ನು ಸಮರ್ಥಿಸುತ್ತದೆ.[2]

(*b*) ಈ ದರ್ಶನದ ಪ್ರಕಾರ ಪರತತ್ತ್ವವು ನಿರ್ಗುಣವೂ ನಿಷ್ಕ್ರಿಯವೂ ಶಕ್ತ್ಯಾದಿ ವಿಕಲ್ಪರಹಿತವೂ ಅಲ್ಲ. ಅದು ನೈಸರ್ಗಿಕವಾಗಿ ಶಕ್ತಿಭರಿತ. ಚಿತ್, ಆನಂದ, ಇಚ್ಛಾ,

---

1 ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನೀ, Vol. 2. Pages 179-180.

2 ,, ,, ,, Pages 113-114.

ಶುಕ್ತಿಯನ್ನು ರಜತವೆಂದು ಅರಿಯುವುದು ಭ್ರಾಂತಿ. ಭ್ರಾಂತಿಗೆ ವಿಷಯವಾದ ರಜತವು ಭ್ರಾಂತಿ ಸಮಯದಲ್ಲಿ ಕಾಣುವುದರಿಂದ ಅತ್ಯಂತ 'ಅಸತ್' ಅಲ್ಲ. ವಿವೇಕೋದಯವಾದಮೇಲೆ ಕಾಣದೆ ಹೋಗುವುದರಿಂದ ಅತ್ಯಂತ 'ಸತ್' ಅಲ್ಲ. ಹೀಗೆ ಭ್ರಾಂತಿಯಲ್ಲಿ ಪ್ರತೀತವಾಗುವ ವಿಷಯವು ಸತ್ತೆಂದಾಗಲೀ ಅಸತ್ತೆಂದಾಗಲೀ ನಿರ್ವಚನಮಾಡಲು ಅಶಕ್ಯವಾದುದರಿಂದ, ಭ್ರಾಂತಿಯು 'ಅನಿರ್ವಚನೀಯ ಖ್ಯಾತಿ' ಎಂದು ಶಾಂಕರ ಸಂಪ್ರದಾಯ. ಭ್ರಾಂತಿಯು ಮುಂದೆ ಇರುವ ಶುಕ್ತಿಯನ್ನು ಸಮಗ್ರವಾಗಿ ತಿಳಿಯದಿರುವುದರಿಂದ ಉಂಟಾಗಿದೆ. ಅದನ್ನು ಪೂರ್ಣವಾಗಿ ತಿಳಿದಿದ್ದರೆ ಅದು ರಜತಕ್ಕಿಂತ ಭಿನ್ನವೆಂದೂ ತಿಳಿಯುತ್ತಿತ್ತು. ಈ ಅಪೂರ್ಣ ಗ್ರಹಣವೇ ಭ್ರಾಂತಿ. ಶುಕ್ತಿಯಲ್ಲಿ ರುವ ರಜತವೈಲಕ್ಷಣ್ಯದ ಅಗ್ರಹಣವೇ 'ಇದು ರಜತ'ವೆಂಬ ಪ್ರತೀತಿಯಾಗಿದೆ. ಇದು ಅಭಿನವ ಗುಪ್ತನ ಪ್ರಕ್ರಿಯೆ.

ಜ್ಞಾನ, ಕ್ರಿಯಾ, ಇವು ಶಿವನ ಮೂಲ ಶಕ್ತಿಗಳು. ಈ ಶಕ್ತಿಗಳ ಸ್ಫುರಣದಿಂದಲೇ ಅವನು ಸೃಷ್ಟಿ, ಸ್ಥಿತಿ, ಪ್ರಲಯ, ತಿರೋಧಾನ, ಅನುಗ್ರಹ ಎಂಬ ಪಂಚ ಕೃತ್ಯಗಳನ್ನು ನೆರವೇರಿಸುತ್ತಾನೆ. ಇವುಗಳ ಅಭಿವ್ಯಕ್ತಿಯಿಂದಲೇ ಅವನಲ್ಲಿ ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯಾ ಎಂಬ ಐದು ಶುದ್ಧ ತತ್ವಗಳ ಪ್ರಾದುರ್ಭಾವ ವಾಗುವುದು.

(*c*) ಜೀವ-ಜಡಾತ್ಮಕವಾದ ಕಾರ್ಯಪ್ರಪಂಚಕ್ಕೆ ಶಿವನು ಸರ್ವವಿಧ ಕಾರಣ. ಅದು ಅವನ ಶಕ್ತಿಯ ಆವಿರ್ಭಾವ ಅಂದರೆ ಕೇವಲ ಅವಿದ್ಯಾಕಲ್ಪಿತವಾದ ಮಿಥ್ಯಾ ರಚನೆಯಲ್ಲ. ಶಿವನೆಂಬ ಕನ್ನಡಿಯಲ್ಲಿ ಭಾಸವಾಗುವ ಪ್ರತಿಬಿಂಬ ಈ ಭೇದ ಪ್ರಪಂಚ. ಕನ್ನಡಿಗೂ ಆ ಪ್ರತಿಬಿಂಬಕ್ಕೂ ಭೇದವೂ ಉಂಟು, ಅಭೇದವೂ ಉಂಟು. ಕನ್ನಡಿ ಯಿಲ್ಲದೆ ಅದಿಲ್ಲ; ಆದರೆ ಬರಿ ಕನ್ನಡಿಯೇ ಅಲ್ಲ ಅದು. ಹೀಗೆ ಇರುವ ಭಿನ್ನಾಭಿನ್ನ ಸ್ವರೂಪಕ್ಕೆ "ಆಭಾಸ"ವೆಂದು ಹೆಸರು. ಈ ಸ್ವಗತ ಭೇದಾಭೇದವೇ ಜಡಕ್ಕಿಂತ ವಿಲಕ್ಷಣವಾದ ಚೈತನ್ಯದ ಸ್ವರೂಪ. ಪ್ರತಿಬಿಂಬದ ಸ್ಫುರಣಕ್ಕೆ ಕನ್ನಡಿಯ ಯಾವ ದೋಷವೂ ಕಾರಣವಲ್ಲ; ಅದರ ನೈರ್ಮಲ್ಯವೇ ಕಾರಣ. ಶಿವನ ಅವಿದ್ಯೆಯಿಂದಲ್ಲ ಜಗತ್ಸೃಷ್ಟಿ, ಅವನ ಶುದ್ಧಶಕ್ತಿಯ ಉದ್ರೇಕದಿಂದ. ಇದೊಂದು ರೀತಿಯ ಪರಿಣಾಮ ವಾದ, ಭೇದಾಭೇದವಾದ, ಸಪ್ರಪಂಚ ಸಗುಣ ಬ್ರಹ್ಮವಾದ.

ಒಟ್ಟಿನಲ್ಲಿ "ವಿವರ್ತ"ವಾದದ ಸಮ್ಮಿಶ್ರಣವಿಲ್ಲದ ಅದ್ವೈತವಾದ ಇದು. ಅಭಿನವಗುಪ್ತನೇ ಮೊದಲಾದ ಗ್ರಂಥಕಾರರು ಈ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ನಿರ್ದೇಶಮಾಡಿದ್ದಾರೆ. ಪರತತ್ವ ನಿರೂಪಣೆಯಲ್ಲಿ ಈ ಭೇದಾಭೇದ ತತ್ವವನ್ನು ಪ್ರತಿ ಪಾದಿಸುವ ಭರ್ತೃಪ್ರಪಂಚ, ಭಾಸ್ಕರ, ಯಾದವ ಪ್ರಕಾಶ ಮೊದಲಾದ ವೇದಾಂತಿ ಗಳ ಮತವನ್ನು ಈ ದರ್ಶನವು ಹೋಲುವುದಲ್ಲದೆ ಪಾಶ್ಚಾತ್ಯ ದರ್ಶನಗಳಲ್ಲಿ ಹೆಗೆಲ್ ಮತ್ತು ಟಿ. ಎಚ್. ಗ್ರೀನ್ ಇವರ ಪಂಥಕ್ಕೆ ಸಮೀಪವಾಗಿದೆ. ಶ್ರೀ ಅರವಿಂದ ಘೋಷರಂತೂ ಇದರ ಸ್ಫೂರ್ತಿಗೆ ಒಳಗಾಗಿಯೇ ತಮ್ಮ ಆಧ್ಯಾತ್ಮಿಕ ಸಂಪ್ರದಾಯ ವನ್ನು ರೂಪಿಸಿರುವುದು ನಿರ್ವಿವಾದವಾಗಿದೆ.

ಈ ದರ್ಶನದಲ್ಲಿ ಅನೇಕ ಸಂಪ್ರದಾಯಗಳ ಮಿಳನವಾಗಿದೆ. ಉಪನಿಷತ್ತು ಗಳು, ಭಗವದ್ಗೀತೆ, ವ್ಯಾಕರಣದರ್ಶನ, ಸಾಂಖ್ಯ, ಯೋಗ, ನ್ಯಾಯ, ತಂತ್ರ, ಅಲಂಕಾರ ಶಾಸ್ತ್ರ, ಬೌದ್ಧರ ವಿಜ್ಞಾನವಾದ ಮತ್ತು ಭಕ್ತಿ ಪಂಥ—ಇವುಗಳೆಲ್ಲವುಗಳ ಸಂಗಮದಿಂದ ನಿಷ್ಪನ್ನವಾಗಿದೆ ಈ ಬೃಹತ್ಪ್ರವಾಹ.

ಶೈವಾಗಮಗಳಲ್ಲಿ ಮತ್ತು ಇತರ ಶೈವ ಮತಗಳಲ್ಲಿ ವಿವೃತವಾಗಿರುವಂತೆ ಇಲ್ಲಿಯೂ ಮೂವತ್ತಾರು ತತ್ವಗಳ ಪ್ರತಿಪಾದನೆಯಿದೆ.

೧. ಪರಮ ಶಿವನು ಮೂಲವಸ್ತು. ಅವನಲ್ಲಿ ಪಂಚಶಕ್ತಿಗಳು "ಖಚಿತ" ವಾಗಿವೆ. ಅವುಗಳ ಸ್ಫುರಣದಲ್ಲಿ ಹೊರಬಿದ್ದು ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯಾ ಎಂಬ ಐದು ತತ್ವಗಳು ವಿಭಕ್ತವಾಗುವುವು. ಇದು ಶಕ್ತ್ಯಂಡ.

೨. ಶಿವನ ಸ್ವಾತಂತ್ರ್ಯವೇ ಅಘಟಿತಘಟನಾರೂಪವಾದ ಮಾಯೆಯಾಗುವುದು. ಮಾಯೆಯಿಂದ ಕಾಲ, ಕಲಾ, ನಿಯತಿ, ರಾಗ ಅವಿದ್ಯಾ ಎಂಬ ತತ್ವಗಳು ಹುಟ್ಟುವುವು. ಇದಕ್ಕೆ ಮಾಯಾಂಡವೆಂದು ಹೆಸರು. ಮಾಯೆಯೊಡನೆ ಸೇರಿದ ಈ ಐದಕ್ಕೂ ಷಟ್ಕಂಚುಕವೆಂದು ಹೆಸರು.

೩. ಗುಣತ್ರಯಾತ್ಮಕವಾದ ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಪಂಚತನ್ಮಾತ್ರ ಇವುಗಳು ಸೇರಿ ಪ್ರಕೃತ್ಯಂಡವೆನಿಸಿಕೊಳ್ಳುವುದು. ಪಂಚತನ್ಮಾತ್ರಗಳೂ ಅಂತಃಕರಣ ಮತ್ತು ಎರಡು ವಿಧ ಇಂದ್ರಿಯಗಳು ಸೇರಿ ಪುರ್ಯಷ್ಟಕವಾಗುವುದು.

೪. ತನ್ಮಾತ್ರಗಳಿಂದ ಉಂಟಾಗುವ ಮಹಾ ಭೂತಗಳು, ಅವುಗಳ ಸ್ಥೂಲ ಕಾರ್ಯವರ್ಗ ಇವೆಲ್ಲಾ ಸೇರಿ ಪೃಥಿವ್ಯಂಡವೆನಿಸಿಕೊಳ್ಳುವುದು.

೫. ಇವುಗಳೆಲ್ಲದರಿಂದ ಮುಚ್ಚಲ್ಪಟ್ಟು ಸಂಕುಚಿತನಾದ ಪರಶಿವನೇ ಜೀವನಾಗುವನು. ಜೀವತ್ವಕ್ಕೆ ಕಾರಣ ಮೂರು ಕೋಶಗಳು. ಇವಕ್ಕೆ ಆಣವ, ಮಾಯಾ ಮತ್ತು ಕಾರ್ಮಕೋಶಗಳೆಂದು ಹೆಸರು. ಆಣವಕೋಶ ಶಿವನ ಮಹತ್ವವನ್ನು ಮರೆಸಿ ಅಲ್ಪತ್ವವನ್ನು ಉಂಟುಮಾಡುವುದು. ಮಾಯಾಕೋಶವು ಅವಿದ್ಯಾ, ರಾಗ ಇವುಗಳಿಂದ ಅವನನ್ನು ಇನ್ನಿಷ್ಟು ಸಂಕುಚಿತಗೊಳಿಸುವುದು. ಕಾರ್ಮಕೋಶ ಅವನನ್ನು ಬಂಧಕ ಪ್ರವೃತ್ತಿಯಲ್ಲಿ ಉದ್ಯುಕ್ತನನ್ನಾಗಿ ಮಾಡುವುದು.

ಜೀವನು ಪ್ರತ್ಯಭಿಜ್ಞಾ ಮಾರ್ಗದಲ್ಲಿ ಪ್ರವೃತ್ತನಾಗಿ ಪರಿಣತನಾದರೆ "ಶಿವಶಕ್ತಿ ಪಾತ"ದಿಂದ ಅಂದರೆ ಶಿವನ ಅನುಗ್ರಹದಿಂದ ಕೋಶಮುಕ್ತನಾಗಿ ಶಿವತ್ವವನ್ನು ಪಡೆಯುವನು. ಈ ಆತ್ಮವಿಸ್ಮರಣ-ನಿರ್ಮುಕ್ತಿಯೇ ಕೈವಲ್ಯ.

ಕರ್ಮಮಾರ್ಗಕ್ಕೆ ಅಂತರ್ಮುಖತೆಯನ್ನು ಕೊಟ್ಟು, ಭಕ್ತಿಗೆ ವಿಚಾರದ ಬೆಂಬಲವನ್ನು ಒದಗಿಸಿ, ವಿಚಾರವು ಶುಷ್ಕವಾಗದಂತೆ ಅದನ್ನು ಆಧ್ಯಾತ್ಮಿಕ ಅಂತರಂಗ ಜೀವನಕ್ಕೆ ಸಾಧನವಾಗಿ ಅಳವಡಿಸಿಕೊಂಡು, ಸಂಪ್ರದಾಯ ಮತ್ತು ವ್ಯಕ್ತಿ ಪ್ರತಿಭೆಗಳನ್ನು ಸಮನ್ವಯಗೊಳಿಸಿ, ಜಗತ್ತಿನ ನಿರಾಕರಣೆಯಿಲ್ಲದೆ ಪರವಸ್ತುವಿನ ಪಾರಮ್ಯವನ್ನು ರಮ್ಯ—ಭವ್ಯ ರೀತಿಯಲ್ಲಿ ಸಾಧಿಸುವ ಮಾರ್ಗ ಕಾಶ್ಮೀರ ಶೈವ ದರ್ಶನಕಾರರದು. ಇಂತಹ ಸಂಪೂರ್ಣ ದರ್ಶನ ಯಾವಾಗಲೂ ಅತ್ಯಗತ್ಯ ; ಜನಚಿತ್ತ ವಿಪ್ಲವಗೊಂಡಿರುವ ಈಗಲಂತೂ ವಿಶೇಷವಾಗಿ ಅಪೇಕ್ಷಣೀಯ. ಕನ್ನಡನಾಡಿನ ವೀರಶೈವ

ಪಂಥಕ್ಕೂ ಇದಕ್ಕೂ ನಿಕಟವಾದ ಸಂಬಂಧವಿದೆ. ಎರಡೂ ಶಿವತತ್ವದ ಅದ್ವಿತೀಯತೆಯನ್ನು ಸಾಧಿಸಿದರೂ ಜಗನ್ಮಿಥ್ಯಾತ್ವವನ್ನು ಮುಂದಿಟ್ಟಿಲ್ಲ. ಆದರೆ ವೀರಶೈವದಲ್ಲಿ ದರ್ಶನಾಂಶಕ್ಕಿಂತಲೂ ಅನುಭವಾಂಶ, ಭಕ್ತಿಪಂಥ, ವಿಶೇಷವಾಗಿದ್ದಂತೆ ಕಾಣುತ್ತದೆ. ಅದರ ಮಹದ್ಗ್ರಂಥಗಳೆಲ್ಲಾ ಶಿವಾನುಭಾವಿಗಳ ವಚನ. ತಾರ್ಕಿಕ ರೀತಿಯ ಪ್ರೌಢ ಸಿದ್ಧಾಂತ ಸಮರ್ಥನೆ ಇಲ್ಲವೆನ್ನಬಹುದು. ಎರಡು ಮಾರ್ಗಕ್ಕೂ ಭಾವಸಮನ್ವಯವಿದ್ದರೂ ರೀತಿಸಾಮ್ಯವಿಲ್ಲ.

ನೂತನ ಮಾರ್ಗದಲ್ಲಿ ಆತ್ಮ ಪೋಷಣೆಯನ್ನು ಒದಗಿಸುವ ಈ ಕಾಶ್ಮೀರ ದರ್ಶನವು ಇನ್ನೂ ಹೆಚ್ಚು ಹೆಚ್ಚಾಗಿ ನಮಗೆ ಮಾತೃಭಾಷೆಯಲ್ಲಿ ಲಭಿಸಬೇಕು. ಈ ಉದ್ಯಮವನ್ನು ಪ್ರಾರಂಭಿಸಿರುವ ಶ್ರೀ ರುದ್ರಪ್ಪನವರು ಇನ್ನೂ ಹೆಚ್ಚು ಕೃತಕಾರ್ಯರಾಗಲಿ.

ಎಸ್. ಎಸ್. ರಾಘವಾಚಾರ್

ಇತಿಹಾಸದ ಪುನರಾವೃತ್ತಿ

"ಅಸಿತ ಋಷಿಯ ಮುಂದೆ ಶಿಶು ಸಿದ್ಧಾರ್ಥನನ್ನು ತಂದಿಟ್ಟರು. ಅಸಿತ ಹರ್ಷಾಶ್ರುಗಳನ್ನು ಸುರಿಸಿದ. 'ಏಕೆ, ಮಗುವಿಗೆ ಏನಾದರೂ ಅಮಂಗಳವೇ ?' ಎಂದು ಅಲ್ಲಿದ್ದವರು ಕೇಳಿದರು. 'ಇಲ್ಲ, ಇಲ್ಲ' ಎಂದ ಋಷಿ ಅಸಿತ—'ಈತ ಮುಂದೆ ಮಹಾಪುರುಷನಾಗುತ್ತಾನೆ, ಸಂಬುದ್ಧನಾಗುತ್ತಾನೆ. ಆದರೆ ನಾನೋ ವೃದ್ಧ. ಬುದ್ಧನಾದ ಇವನನ್ನು ನೋಡುವುದಕ್ಕೆ, ಇವನ ಧರ್ಮ ಶ್ರವಣವನ್ನು ಕೇಳುವುದಕ್ಕೆ ನನಗೆ ಆಯುಷ್ಯ ಉಳಿದಿಲ್ಲ.' ಎಂದು ಹೇಳುತ್ತಾ ಅವರನ್ನು ಆನಂದದಲ್ಲಿರಿಸಿ ಅಸಿತ ಅಲ್ಲಿಂದ ಹೊರಟ."

—ಸುತ್ತನಿಪಾತದ ನಾಲಕಸುತ್ತದ ಪ್ರಸ್ತಾವನೆ

"ಗದಾಧರನು (ಶ್ರೀ ರಾಮಕೃಷ್ಣ ಪರಮಹಂಸರು) ದೇವರ ಅವತಾರವೆಂದು ನಿಶ್ಚಯಿಸಿ ಶ್ರೀನಿವಾಸ (ಶಾಂಖಾರಿ) ನು ಯಾರಿಗೂ ತಿಳಿಯದಂತೆ ಪೂಜೆಗೆ ಅಣಿ ಮಾಡಿದನು. ಒಂದು ದಿನ ವೃಕ್ಷ ಪರಿವೃತವಾಗಿದ್ದ ನಿರ್ಜನ ಪ್ರದೇಶಕ್ಕೆ ಬಾಲಕನನ್ನು ಕರೆದೊಯ್ದು, ದರ್ಭೆಯ ಪೀಠದ ಮೇಲೆ ಕುಳ್ಳಿರಿಸಿ, ಮಿಠಾಯಿ ಮೊದಲಾದ ಮಧುರ ನೈವೇದ್ಯಗಳನ್ನು ಮುಂದಿಟ್ಟು, ಆತನನ್ನು ಹೂಮಾಲೆಗಳಿಂದ ಅಲಂಕರಿಸಿ, ಸುಗಂಧ ದ್ರವ್ಯಗಳನ್ನು ಹಚ್ಚಿ ಪೂಜಿಸಿದನು. ತರುವಾಯ ಧ್ಯಾನಮೂರ್ತಿ ತರುಣ ಗದಾಧರನ ಮುಂದೆ ಭಕ್ತಿಮೂರ್ತಿ ವೃದ್ಧ ಶ್ರೀನಿವಾಸನು ಕೈಮುಗಿದು ನಿಂತುಕೊಂಡು ಕಂಬನಿಗರೆಯುತ್ತ 'ಹೇ ದೇವದೇವ, ನಾನು ಮುದುಕನಾದೆ. ನನ್ನ ಅಂತ್ಯವು ಸಮೀಪಿಸುತ್ತಿದೆ. ನೀನು ಜಗತ್ತಿನಲ್ಲಿ ಮುಂದೆ ಮಾಡುವ ಮಹಾ ಕಾರ್ಯಗಳನ್ನು ಕಣ್ಣಾರೆ ನೋಡುವ ಪುಣ್ಯ ನನಗಿಲ್ಲ. ಆದರೆ ನನ್ನದು ಇದೊಂದೇ ಪ್ರಾರ್ಥನೆ—ಈ ನಿನ್ನ ದರಿದ್ರ ಕಿಂಕರನ ಮೇಲೆ ನಿನ್ನ ಕೃಪಾಕಟಾಕ್ಷವು ಯಾವಾಗಲೂ ತಪ್ಪದಿರಲಿ!' ಎಂದು ಪ್ರಾರ್ಥಿಸಿದನು. ಸತ್ಯ ಮಿಥ್ಯೆಗಳೇನೆ ಇರಲಿ, ಎಂತಹ ದೃಶ್ಯ!"

—ಶ್ರೀ ಕುವೆಂಪು—ರಾಮಕೃಷ್ಣ ಪರಮಹಂಸ, ಪು. ೩೦

ಮಾತು

೧

ಮಾತಿನ ಮಹಿಮೆ ನಮಗರಿವಾಗಿದ್ದುದರ ಕಾರಣವೇ ಇರಬೇಕು—ಮಾತನ್ನು ಮಾತಾಗಿಯೇ ಉಳಿಸಲಿಲ್ಲ ನಾವು. ಮಾತನ್ನೊಂದು ಶಕ್ತಿಮಾಡಿ ಒಂದೊಂದು ಶಕ್ತಿಗೂ ಒಂದೊಂದು ಅಧಿದೈವದಂತೆ ಇದಕ್ಕೂ ಒಂದು ದೈವವನ್ನು ಸೃಷ್ಟಿಸಿದೆವು. 'ಮಾತಿನ ತಾಯಿ,' ವಾಣಿ, ವೀಣಾಪಾಣಿ, ಶಾರದೆ, ವರದೆ, ಸರಸ್ವತಿ ಎಂದೆಲ್ಲ ವರ್ಣಿಸಿದೆವು.

'ಪರಮ ಸ್ವರೂಪಾ ಜ್ಯೋತಿರೂಪಾ **ಸನಾತನೀ**'ಎಂದು ಕವಿವಾಣಿ ನರ್ತಿಸಿತು.

'ಕುಂದೇಂದು ತುಷಾರಹಾರ ಧವಲಾ, ಶುಭ್ರವಸ್ತ್ರಾನ್ವಿತಾ, ವೀಣಾ ವರದಂಡ ಮಂಡಿತಕರಾ' . . . ಎನ್ನುತ್ತ ವಾಣಿಯ ಧಾವಳ್ಯವನ್ನು ದರ್ಶಿಸಿದೆವು.

'ಪರಮ ಜಿನೇಂದ್ರವಾಣಿಯೆ ಸರಸ್ವತಿ . . .' ಎನ್ನುತ್ತ ದೇವರ ಮಾತೇ ಸರಸ್ವತಿ, 'ಬೇರದು ಪೆಣ್ಣಾ ರೂಪಮಂ ಧರಿಯಿಸಿ ನಿಂದುದಲ್ಲ' ಎಂದೆವು.

ಮಾತು ನಿಜವಾಗಿಯೂ ಮಾತೆಯೇ !

೨

ಚುಟಿಕಿ ಹೊಡೆದು, ಮಾತು ಬರಲಿಲ್ಲ. 'ಛೂ ಮಂತ್ರಂಕಾಳಿ' ಮಂತ್ರಕ್ಕೆ ಉದುರಿದ ಮಾವಿನಕಾಯಿ ಅಲ್ಲ ಅದು. ಬಹು ಕಷ್ಟ. ಬಹು ಕಷ್ಟ. ಅನಂತ ಯಾತನೆ. ಯುಗ ಯುಗಗಳ ಯಾತನೆ. ಅದೊಂದು ಪ್ರಸವ ವೇದನೆ.

ಭೂಮಿ ತನ್ನ ಅಪ್ಪಾಳೆ ತಿಪ್ಪಾಳೆ ಮುಗಿಸಿ ಸೂರ್ಯನಿಂದ ಚಿಮ್ಮಿ ಬುಗುರಿಯಂತೆ ತಿರುತಿರುಗಿ ಸುಂದರ-ವಸುಂಧರೆಯಾಯಿತು.

ಆಗೊಮ್ಮೆ ಸಾಗರದ ಒಳಗೆ, ನೆಲದ ಮೇಲೆ ಸಸ್ಯ ಮೂಡಿತು. ಗಿಡಗಿಡ, ಮರಮರ ಹಸುರುಟ್ಟು ಹೂನಕ್ಕು ಮಾತಾಡಲಾಶಿಸಿತು. ಎಲೆ ಎಲೆಯೆಲ್ಲ ಪಿಸುಗುಟ್ಟಲೆಳಸಿತು.

ಆದರೆ ?—'ಮೂಕಮುನ್ಮತ್ತವತ್.'

ಮಾತಾಡುವ ಬಯಕೆ ಮರ್ಮರಗುಟ್ಟಿತು. ಹರಿದಾಡುವ ಹೊಳೆಯಲ್ಲೆಲ್ಲ ಓಡಾಡಿತು. ದಡವಪ್ಪುವ ಅಲೆತೆರೆಗಳಲ್ಲೆಲ್ಲ ತೇಲಾಡಿತು. ಗಾಳಿಯಲ್ಲೆಲ್ಲ ಅದರ ಸಿಟ್ಟುಸಿರೇ ನರ್ತಿಸಿತು.

ಸಸ್ಯ ಸಾಲದೆ ಜೀವ ನಿಂತು, ನಡೆದು ಪ್ರಾಣಿಯಾಗೆಚ್ಚತ್ತಿತು. ಅನಂತತೆಯೆ ಮಾತಾಡಲಿಚ್ಛಿಸಿತೇನೊ ?

ಪ್ರಾಣಿಪ್ರಾಣಿಗಳು ನರನರದ ಮಾಂಸಖಂಡಖಂಡದ, ಶರೀರದ ಕಣಕಣದ ಶಕ್ತಿಯೆಲ್ಲವನ್ನು ಕೂಡಿಸಿ ಮಾತಾಡಲೆಂದು ಕೊರಳೆತ್ತಿದುವು.

ನೂರಾರು ಕೊರಳು. ನೂರಾರು ಸ್ವರ; ಆದರೂ ಮೂಡಿಬರಲಿಲ್ಲ ಮಾತು. ಕೋಟಿ ಪ್ರಾಣಿಗಳಲ್ಲಿ ಕೋಟಿ ಹಕ್ಕಿಗಳಲ್ಲಿ ಎಚ್ಚತ್ತ ಬಯಕೆ ಪೂರ್ಣವಾಗಲಿಲ್ಲ.

"ಅಂಬ್ಯಾ . . . ಬ್ಯಾ . . ." ದಿಕ್ಕುದಿಕ್ಕುಗಳೆಲ್ಲ ಮರುದನಿಗೊಡುವ ಕೇವಲ ತೊದಲು. . . .

ಅನಂತತೆಯ ತೊದಲು. . . .!

ನರನರಗಳಲ್ಲಿ ರಕ್ತದ ಕಣಕಣಗಳಲ್ಲಿ ತುಳುಕಿ ಬಂದ ಆನಂದವಿದೆ. ಮಾಂಸದ ತಂತುತಂತುಗಳಲ್ಲಿ ಹೊರೆಯೇರಿ ಬಂದ ಉತ್ಸಾಹವಿದೆ. ಏನಾದರೊಂದು ಮಾತು. ಒಂದಾದರೂ ಮಾತು. ಮಾತಾಡಬೇಕು. ಮಾತಾಡಬೇಕು. ಮಾತಾಡಲೇ ಬೇಕು.

ತಪಿಸಿ ತಪಿಸಿ, ಬಯಸಿ ಬಯಸಿ, ಗರ್ಭ ತುಂಬುತ್ತ ಇತ್ತು.
ಸುರುಳಿ ಸುರುಳಿಯಾಗಿ ಬಯಕೆ ಅರಳುತ್ತ ಇತ್ತು.
ಒಳಗಿನ್ನಿರದು ಆ ತುಂಬಿರುವ ಶಕ್ತಿ. ಹೊರಬರಬೇಕು.
ತೊದಲಿ ತೊದಲಿ ಹೊರವಲ್ಮೀಕವೊಡೆದು ಓಹೋಹೋ ಬಂತು.
ಮಳೆಗಾಲದ ಪ್ರವಾಹದಂತೆ ಅಂತು ಬಂತು ಮಾತು.
ಕೊನೆಗೊಮ್ಮೆ ಬಂತು ಮಾತು !

೩

ಎಷ್ಟೊಂದು ಮಾತು !

ವೀಣೆಯೆದೆಯ ನರನರಕ್ಕು ಸ್ವರದ ಪುಲಕ; ಭಾವದ ಕರಗ !

ಅತ್ತ ಆಂಗ್ಲ—ಕುಡಿಯಿಟ್ಟಿತು—ಷೇಕ್ಸ್‌ಪಿಯರ್, ಬ್ಲೇಕ್. . . . ಎಷ್ಟೊಂದು ಪುಲಕ, ರಸಸರಸ್ವತಿಗಳನ್ನೆ ಹಡೆಯಿತು.

ಇತ್ತ ಸಂಸ್ಕೃತ—ಹೂವಿಟ್ಟಿತು—ವಾಲ್ಮೀಕಿ, ವ್ಯಾಸ, ಕಾಳಿದಾಸ. . . .
ಕಾವ್ಯರತ್ನಾಕರ ! ಎಷ್ಟೊಂದು ಸುಡಿಯುಬಳ್ಳಿ ! ಬಳ್ಳಿಬಳ್ಳಿಗರಳು. ಚಿಗುರು.
ಓ ಮಾತೇ. .! . . .

೪

ಕೋಗಿಲೆಯಲಿ, ವೀಣೆಯಲ್ಲಿ ಸ್ವರಸ್ವರವು ಸ್ವರ್ಗ.
ಗಾರ್ದಭದಲಿ, ಮತ್ತೊಂದರಲ್ಲಿ ?—
ಅಯ್ಯೋ ಮಾನವ! ಎಂಥ ಹೊಲಸು ನಿನ್ನ ನಾಲಗೆಯ ರತ್ನಸಿಂಹಾಸನದಲ್ಲಿ ?
ತಿಲಕ ತಿದ್ದುವ ಒಲವಿನ ಬೆರಳುಗುರಿನಲ್ಲಿ ವೈಪರಚಬಹುದೆ ?
ಒಲವನ್ನಾಲಂಗಿಸುವ ತೋಳಿನಲ್ಲಿ ತಲೆ ಕತ್ತರಿಸಬಹುದೆ ?
ಜೇನಿಳಿವ ಬಾಯಲ್ಲಿ ಅಭಿಶಾಪವೆ ? ಅಯ್ಯೋ ಮಂಕುತನವೇ !
ಅದಲ್ಲ ಮಾತು !

೫

ಒಂದು ಕ್ಷಣ ನಾಲಗೆ ಅತ್ತಿತ್ತ ಆಡಲಿ. ಸಾಕು. ಆಗಲೇ ನಾಲ್ಕು ಮಾತು. ಮುಗಿಯಿತು, ಆಡುವವರೆಗೆ ಒಂದು. ಆಡಿದ ಮೇಲೆ ?—

'ಮರಿಗೆ ಮರಿ. ಮರಿಗೆ ಮರಿ. ಮರಿಗೆ ಮರಿ !' ಸಾವಿರ ಮೈಲಿ ವೇಗದ ಸಾರೋಟು ಸಾವಿರ ಓಡಿಸಿದರೂ ಆಡಿದ ಮಾತು ಮತ್ತೆ ಹಿಂದಿರುಗಿ ಬರುವಂತಿಲ್ಲ.

ಒಮ್ಮೆ ಆಡಿದರೇ ಸಾಕು. ಮರಿಗೆ ಮರಿ. . . .

ಮಾತು. ಇದಿರುಮಾತು. ನಲಿವು ಇಲ್ಲ ದ್ವೇಷ. ಕತ್ತಿಯೇಟಿನ ಗಾಯ ಮಾಯಬಹುದು. ಮಾತಿನ ಗಾಯ ಮಾಯಲಾರದು.

ಇದಿನ್ನೆಂಥ ರೀತಿ ? ಮಾತಾಡುವುದು ಎಷ್ಟು ಸುಲಭ, ಎಷ್ಟೊಂದು ಕಷ್ಟ ! ಅಷ್ಟಲ್ಲದೆ ಇನ್ನೇನು ? ಅದಕ್ಕೇ ಅಲ್ಲವೆ—"ಮಾತುಬಲ್ಲವನಿಗೆ ಜಗಳವಿಲ್ಲ."

೬

"ಒದೆಯುತ್ತೇನೆ."
"ಕಡಿಯುತ್ತೇನೆ."

ಒದೆಯಲಿಲ್ಲ. ಕಡಿಯಲಿಲ್ಲ. ಆದರೂ ಒದ್ದಂತೆ ಕಡಿದಂತೆ ಅನಿಸಿತು. ಮಾತಂತೂ ಶಕ್ತಿಯಾಗಿಬಿಟ್ಟಿತು. ಸಾವಿರ ಭಟರು, ಸಾವಿರ ಬಂದೂಕುಗಳು, ಸಾವಿರ ಫಿರಂಗಿಗಳು, ಸಾವಿರಾರು ಅಣುಬಾಂಬು—ಎಷ್ಟಿದ್ದರೂ ಸುಮ್ಮನಿರಬಹುದು. 'ಒದೆಯುತ್ತೇನೆ'— ಸಾಕು, ಸಿಡಿಮದ್ದಿನ ಈ ಒಂದು ಮಾತು ! ಎಷ್ಟೊಂದು ವಿನಾಶಕಾರಿ !

'ಮಾತು ಆಡಿದರೆ ಹೋಯಿತು. ಮುತ್ತು ಒಡೆದರೆ ಹೋಯಿತು.' ಏನಾಡಿದರೆ ಏನೋ ? ಎಂದು ಜೀವ ತತ್ತರಿಸುವಾಗ 'ಮಾತು ಬೆಳ್ಳಿಯಾದರೆ ಮೌನ ಭಂಗಾರವಯ್ಯ' ಎನ್ನಿಸಿಬಿಡುತ್ತದೆ. ಮೌನವೇ ಮಾತಾಡಲಿ ಎನಿಸುತ್ತದೆ.

ಆದರೂ . . . . ಮಾತಾಡಲೇ ಬೇಕಾದರೆ, ನುಡಿಯಲೇ ಬೇಕಾದರೆ, ನುಡಿದರೆ— ? ಹೌದು ; ದಾರಿತೋರುವ ಗುರುವಾಕ್ಯವೊಂದಿದೆ.

" ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದು ಎನಬೇಕು."

ನಿಜ. ಮಾತಾಡಿದರೆ ಕೇಳಿದವನ ಕಿವಿ ಪುಲಕಗೊಂಡು ಮುತ್ತಿನ ಹಾರ ಧರಿಸಿದ ಆನಂದವಾಗಬೇಕು—ಜೇನಿನಂತೆ ಮಧುರವಾಗಬೇಕು—ಜನ್ನ ಹೇಳುತ್ತಾ ನಲ್ಲ—'ಮಾತಾಡುವ ಬಾಯ್ಗಳ ರಸಾಯನಂ'—ಹಾಗೆ! ಅಧರಕ್ಕೆ ಸಿಹಿಯಾಗಿ ಉದರಕ್ಕೆ ಕಹಿಯಾಗಬಾರದಲ್ಲವೆ? ಸ್ಫಟಿಕದ ಶುಭ್ರತೆ, ನಿರ್ಲಿಪ್ತ, ಪಾರದರ್ಶಕತೆ ಇರಬೇಕು. ಹೃದಯದ ಎಲ್ಲ ಭಾವಗಳನ್ನು ಪ್ರಾಮಾಣಿಕವಾಗಿ, ಆತ್ಮೀಯವಾಗಿ, ಸ್ಫಟಿಕ ಸ್ಫುಟವಾಗಿ, ಶುಭ್ರವಾಗಿ ತಿಳಿಸುವುದಾಗಬೇಕು. ಅಷ್ಟೇ ಅಲ್ಲ—ಹೃದಯ ದಿಂದೆದ್ದು ಬಂದ ಆ ಮಾತನ್ನು ಕೇಳಿ 'ಲಿಂಗವೂ ಮೆಚ್ಚಿ ಅಹುದಹುದು ಎನ್ದು ಹುಬ್ಬು ಹಾರಿಸಿ ಕಣ್ಣನ್ನೆಯೀಯಬೇಕು.' ಆಗಲೇ ಮಾತು ಆಡಲಿಕ್ಕೆ ಯೋಗ್ಯ ವಾದುದು. ಅಂಥದ್ದನ್ನೆ ಅನುಭಾವದ ಹೃದಯದಲ್ಲಿ ಅರಳಿದ ಮುತ್ತು ಎಂದದ್ದು.

ಇಂಥ ಮಾತನ್ನೆ, ಇಂಥ ನಾದವನ್ನೆ ಪ್ರಣವ, ಓಂಕಾರ ಎಂದು ಋಷಿಗಳು ಹಾಡಿದ್ದು. ಇದನ್ನೇ ಅನುಭಾವಿ ಜ್ಞಾನ್—

" In the beginning was the Word. The Word was with God. And the Word was God " ಎಂದು ಗುರುತಿಸಿದ್ದು.

ಇಂತದ್ದನ್ನೇ ವಚನ, 'ಮಾತು ಜ್ಯೋತಿರ್ಲಿಂಗ' ಎಂದು ಕೀರ್ತಿಸಿದ್ದು. ಪರಾಜ್ಯೋತಿ—ಪರಂಜ್ಯೋತಿ ಎಂದೆಲ್ಲ ಅಂದದ್ದು.

ಎದೆ ತುಂಬುವವರೆಗೆ ಮಾತು.
ಎದೆ ತುಂಬಲಿಕ್ಕೆ ಮಾತು.
ಆಗಲೇ ಎದೆತುಂಬಿ ಬಂದಿದೆಯೆ?
ಹಾಗಾದರೆ ಮಾತೇಕೆ? ಮಾತೆಲ್ಲಿ? ಎಲ್ಲಿದೆ?

" ಮಹಾ ಬೆಳಗು, ಬೆಳಗಿನೊಳಗಣ ಮಹಾ ಬೆಳಗಿನೊಳಗಿದ್ದೇನೆಂಬ ಶಬ್ದ ಮುಗ್ಧ ವಾದುದೇನೆಂಬೆನಯ್ಯ!" ಬಸವಣ್ಣ ಹೇಳಿದ್ದು ನಿಜ. ಮಾತು ಮುಗ್ಧವೇ! ಅದು ನಾಚುತ್ತದೆ; ಹಿಂಜರಿಯುತ್ತದೆ.

ಅಷ್ಟಲ್ಲದೆ ಸರ್ವಜ್ಞ ಹೇಳಿದನೆ—
'ಬೊಮ್ಮವನು ಅರಿತಿಹಿರೆ—
ಸುಮ್ಮನಿರಬೇಕು'

ಜಿ. ಎಸ್. ಸಿದ್ಧಲಿಂಗಯ್ಯ

ಪ್ರಭುದೇವರ ವಚೋಲಹರಿ

೧

ತಮ್ಮ ಅನುಭಾವದ ಘನ ಚೆಲುವಿನಿಂದ ನಾಡು ನುಡಿಗೆ ಧವಳ ಕೀರ್ತಿಯನ್ನು ತಂದ ವಚನಯುಗದ ಪ್ರಮುಖಶರಣರಲ್ಲಿ ಪ್ರಭುವಿನದು ಮೇಲ್ಮಟ್ಟದ ಗದ್ದುಗೆ. ಭಕ್ತಿಭಂಡಾರಿಯಾಗಿ ಶರಣರ ಶರಣರಾಗಿ ದಂಡನಾಥ ಚೂಡಾಮಣಿಯಾಗಿ ಶ್ರೀ ಬಸವೇಶ್ವರರು ಕಾಣಿಸಿಕೊಂಡಿದ್ದರೆ, ಶೂನ್ಯ ಸಿಂಹಾಸನವನ್ನೇರಿ ಮಾಯಾ ಕೋಲಾಹಲನೆನಿಸಿ ವಿರಾಗವಿಭುವಾಗಿ ಪ್ರಭುದೇವರು ವಿರಾಜಿಸಿದ್ದಾರೆ.

ವ್ಯಕ್ತಿವೈಶಿಷ್ಟ್ಯದಿಂದ ಇಂತು ಕಾಣುವ ಪ್ರಭುವಿನ ವಚನಗಳಿಗೆ ಸ್ವಾನುಭವವೇ ನೆಲೆಗಟ್ಟಾಗಿದೆ. ಹರಿಹರನ 'ಪ್ರಭುದೇವರ ರಗಳೆ,' ಚಾಮರಸನ 'ಪ್ರಭುಲಿಂಗಲೀಲೆ,' ಎಳಂದೂರು ಹರೀಶ್ವರ ಕೃತ 'ಪ್ರಭುದೇವರ ಪುರಾಣ'—ಮುಂತಾದ ಪ್ರಮುಖ ಕೃತಿಗಳು ಇವರನ್ನು ಕುರಿತು ಹೊರಬಂದಿವೆ. ಆದರೂ ಪ್ರಭುವಿನ ಸಂಪದ್ಭರಿತ ಜೀವನದ ದರ್ಶನಾನುಭವವನ್ನು ಪಡೆಯಲು ಅವರ ವಚನಗಳೇ ಮೂಲಾಧಾರ. ಇತರ ವಚನಕಾರರಂತಲ್ಲ ಇವರ ರಚನೆ. ಬಸವಣ್ಣ, ಮಹಾದೇವಿಯಕ್ಕ—ಇಂಥ ಕೆಲವರನ್ನು ಬಿಟ್ಟರೆ ಉಳಿದೆಲ್ಲರ ವಚನಗಳು ತತ್ತ್ವ ಪ್ರತಿಪಾದನೆಗಾಗಿ ಜನ್ಮತಾಳಿದುದಾಗಿವೆ. ಹೀಗೆ ಹೇಳಿದುದರಿಂದ ತತ್ತ್ವಾತ್ಮಕ ಪ್ರಧಾನವಾದ ವಚನಗಳನ್ನು ಅಣ್ಣ, ಅಕ್ಕ ರಚಿಸಿಲ್ಲವೆಂದು ಅರ್ಥವಲ್ಲ. ಅಣ್ಣನ ಬದುಕು ಮತ್ತು ಸಾಹಿತ್ಯ ಸಾಧನೆ ಜನಸಾಮಾನ್ಯರಲ್ಲಿ ಅರಿವನ್ನುಂಟುಮಾಡುವ ಮೂಲೋದ್ದೇಶದಿಂದ ಪ್ರಕಾಶಗೊಂಡದ್ದು.

ಪ್ರಭುದೇವರ ವಚನಗಳು ಒಗಟಿನಂತಿವೆ ಎಂಬುದು ಪ್ರಸಿದ್ಧ. ಅವರ ವಚನಗಳನ್ನು ವಿಮರ್ಶದೃಷ್ಟಿಯಿಂದ ಅವಲೋಕಿಸುವುದಂತೂ ಕಷ್ಟತರವಾದ ಕೆಲಸ. ಶರಣಸ್ಥಲದ ಒಂದೆರಡು ವಚನಗಳನ್ನು ತೆಗೆದುಕೊಂಡು ಅವುಗಳಲ್ಲಿ ತುಂಬಿರುವ ಅಮೃತ ಭಾವಗಳನ್ನು ಸೆರೆಹಿಡಿಯಲು ಯತ್ನಿಸಿದೆ ಈ ಬರಹದಲ್ಲಿ.

> "ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ ! ಶಿವನೇ ಚೈತನ್ಯಾತ್ಮನು,
> ಶಕ್ತಿಯೇ ಚಿತ್ತು. ಇಂತು ಚೈತನ್ಯಾತ್ಮನೆ ಚಿತ್ಸ್ವರೂಪನೆಂದರಿಯ
> ಬಲ್ಲರೆ ಆತನೆ ಶರಣ ಗುಹೇಶ್ವರಾ"

ಚೈತನ್ಯನೇ ಶಿವ, ಚಿತ್ ಎಂಬುದೇ ಶಕ್ತಿ. ಚಿತ್ ಶಕ್ತಿ ಚೈತನ್ಯನಲ್ಲಿ ಐಕ್ಯ

ವಾಗಿದೆ. ಇದೇ ಶಿವಶಕ್ತಿ ಸಂಪುಟ. ಚೈತನ್ಯವೆ ಚಿತ್ ಸ್ವರೂಪವಾಗಿ ವ್ಯಕ್ತವಾಗಿದೆ. ಚಿತ್‌ಸ್ವರೂಪವಾಗಿ ಬಂದದ್ದು ಬೇರೆಯಲ್ಲ. ಅವ್ಯಕ್ತವಾಗಿದ್ದದ್ದು ಸ್ವಲ್ಪಮಟ್ಟಿಗೆ ವ್ಯಕ್ತವಾಯಿತು. ಹಾಗೆ ವ್ಯಕ್ತವಾಗುವಾಗ ಚೈತನ್ಯಸೂ ಬಂದ. ಚೈತನ್ಯವನ್ನು ಬಿಟ್ಟು ಚಿತ್ ಕೆಲಸ ಮಾಡುವುದಿಲ್ಲ. ಚೈತನ್ಯವು ಚಿತ್ ಆಗಿ ಆ ಚಿತ್‌ನಲ್ಲಿ ಚೈತನ್ಯವು ಕೂಡಿಕೊಂಡಿದೆ. ಪ್ರಭುವಿನ ಈ ವಚನವು ಶಕ್ತಿವಿಶಿಷ್ಟಾದ್ವೈತ ನಿರೂಪಣೆಗೆ ಸುಂದರವಾಗಿದೆ.

ಬೇಡುವ ಮನೋಧರ್ಮವು ಶರಣರ ಜೀವನದಲ್ಲಿಲ್ಲ. ಬೇಡುವವರೆಲ್ಲರೂ ಈ ಲೋಕಜೀವಿಗಳೆ. ಏನೊಂದನ್ನೂ ಬೇಡಬಾರದು, ಆತನೆ ಹಿರಿಯದಾನಿ ಎಂದು ಬಲ್ಲವರು ಹೇಳುತ್ತಾರೆ. ಬೇಡಿ ಬದುಕುವುದು ಕ್ಷುದ್ರಜೀವನ. ಅಂತಹ ಹೀನ ಬದುಕು ಎಂದಿಗೂ ಬೇಡ.

> "ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ
> ಬರಿದೆ ಧೃತಿಗೆಡಬೇಡ ಮನವೇ . . ."
> "ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ"
>
> —ಬಸವಣ್ಣ

ಶರಣನು ಲಿಂಗರೂಪಿ. ಬೇಡದೆ ಇರುವುದೆ ಆತನ ಲಕ್ಷಣ. ಲೌಕಿಕತೆಗೆ ಬದ ನಾಗದೆ ಲಿಂಗಾಣತಿಯಿಂದ ಶರಣ ನಡೆಯಬೇಕು. ಬೇಡಿ ಪಡೆದದ್ದು ಅಂಗಗುಣ. ಬೇಡದೆ ಬರುವುದು ಲಿಂಗಗುಣ. ಇದರ ಬಗೆಗೆ ಪ್ರಭುವಿನ ತೇಜೋವಾಣಿ ಯನ್ನಾಲಿಸಿರಿ:

> "ಹಸಿವಿಲ್ಲದೆ ಉಣಬಲ್ಲಡೆ ಉಪಾಧಿಯಿಲ್ಲದೆ ಬೇಡಬಲ್ಲಡೆ ಅದು
> ಮರ್ಮ. ಅದು ಸಂಬಂಧ. ಗಮನವಿಲ್ಲದೆ ಸುಳಿಯಬಲ್ಲಡೆ
> ನಿರ್ಗಮನಿಯಾಗಿ ನಿಲಬಲ್ಲಡೆ ಅದು ಮರ್ಮ. ಅದು ಸಂಬಂಧ.
> ಅವರ ನಡೆ ಪಾವನ. ಅವರ ನುಡಿ ತತ್ತ್ವ. ಅವರು ಜಗ
> ದಾರಾಧ್ಯರೆಂಬೆ ಗುಹೇಶ್ವರಾ"

ಹಸಿವು ಜೀವನಿಗೆ ಬರುತ್ತದೆ. ಶರಣರು ಹಸಿವಾಗಿದೆ ಎಂದು ಉಣ್ಣುವುದಿಲ್ಲ. ಹಸಿವಿಲ್ಲದೆ ಪ್ರಸಾದವನ್ನು ಅವರು ಗುರುಲಿಂಗ ಜಂಗಮರ ಪೂಜೆಮಾಡಿ ಅವರಿಗೆ ಅರ್ಪಣವಾದುದನ್ನು ಉಣ್ಣುತ್ತಾರೆ. ಇಂಥ ಶರಣರೇ ನಿತ್ಯ ತೃಪ್ತರು. ಈ ಪದವು ಈ ಹೊತ್ತಿನದಲ್ಲ; ಬಹು ಕಾಲದಿಂದ ಇದು ಪ್ರಯೋಗಗೊಂಡಿದೆ. ಅಣ್ಣನವರೂ ಭಾವಪೂರ್ಣವಾಗಿ ಬಳಸಿದ್ದಾರೆ ತಮ್ಮ ವಚನದಲ್ಲಿ:

"ನಿತ್ಯತೃಪ್ತ ಮಹಿಮಾ, ನಿನಗೆಂದಳವಡಿಸಿದ ಪದಾರ್ಥವ
ಸುಚಿತ್ತದಿಂದಳವಡಿಸಯ್ಯಾ ಪ್ರಭುವೇ,
ಕೂಡಲ ಸಂಗಮದೇವಾ"

ಶರಣನಿಗೆ 'ನಿತ್ಯತೃಪ್ತ'ನೆಂಬುದು ನಿಜವಾಗಿ ಒಪ್ಪುವಂಥದಾಗಿದೆ. ಹಸಿವಿನ ಕಾರ್ಯವೆ ಹಸಿವೆನ್ನದೆ ಪ್ರಸಾದವಾಗಿ ಬಂದು ಸಂತೃಪ್ತಿಯನ್ನು ತರುತ್ತದೆ. ಅಂಗಗುಣದಲ್ಲಿ ಬರುವುದೇ ಅಲ್ಲಿ ಲಿಂಗಗುಣವಾಗಿ ಬರುತ್ತದೆ. ಅಂಗದವರು ಬೇಡುವಂತೆ ಲಿಂಗ ಗುಣವುಳ್ಳವರು ಬೇಡಬಾರದು ಎಂಬುದೇ ಮರ್ಮ. ಈ ಮರ್ಮದಂತೆ ಬೇಡದೆ ಇದ್ದರೆ ತನಗೆ ತಾನೆ ಸಂಬಂಧವಾಗುತ್ತದೆ; ಹೊಂದಿಕೆಯಾಗುತ್ತದೆ. ಲೋಕಾಚಾರ ವಿಲ್ಲದೆ ನಿರ್ಗಮನಿಯಾಗಿ ನಡೆಯಬೇಕು. ಅಂಥವರ ನಡೆ ಪಾವನ. ನುಡಿ ಶಿವತತ್ತ್ವ. ಇದನ್ನೆ ಅಣ್ಣನವರು:

'ಶರಣರ ಸಂಗದಲ್ಲಿದ್ದು, ಶಿವನ ಬೇಡುವ ಹಂಗೇತಕಯ್ಯಾ'

ಎಂದು ಸ್ವಾರಸ್ಯವಾಗಿ ನುಡಿದಿದ್ದಾರೆ. ವಚನಗಳನ್ನು ಎಳೆಎಳೆಯಾಗಿ ಬಿಡಿಸಿದಷ್ಟೂ ಒಳಗಿನ ತತ್ತ್ವವೂ ಭಾವದ ಕಾಣ್ಕೆಯೂ ಅತಿಶಯವಾಗಿ ಕಂಡುಬರುತ್ತದೆ ಎಂಬು ದಕ್ಕೆ ಇಂಥ ವಚನಗಳು ನಿದರ್ಶನವಾಗಿವೆ.

ಪ್ರಭುವಿನ ರಚನೆಯಲ್ಲಿ ಬೆಡಗಿನ ವಚನಗಳೇ ಹೆಚ್ಚು. ಅವು ಮಿಕ್ಕ ವಚನಕಾರ ರಲ್ಲಿ ಕಾಣದ ಹೊಸಭಾವ, ದರ್ಶನದ ತೀವ್ರತೆಯನ್ನು ಕಾಣಿಸಿವೆ. ನಿಜವಾದ ಸಂಗತಿಯನ್ನು ಮರೆಸಿ ತೋರಿಸುವ ಸ್ಥಿತಿಗೆ ಬೆಡಗು ಎಂದು ಹೆಸರು. ಅವಗಾಹನೆಗೆ:—

"ಕಿಚ್ಚಿನ ದೇವನು, ಕೆಂಡದ ದೇವನು, ಮಾರಿಯ ದೇವನು, ಮಸಣದ
ದೇವನು, ತಿರಕ, ಗೊರವನೆಂದು ಅಲ್ಲಲ್ಲಿ ಒಂದೊಂದನಾಡು
ತಿಪ್ಪರಯ್ಯಾ! ನಾ ನಿಮ್ಮ ಪೂಜಿಸಿ ನಷ್ಟ ಸಂತಾನನಾಗಿ
ಬಟ್ಟ ಬಯಲಲ್ಲಿ ಬಿದ್ದು ಕೆಟ್ಟೆನು ಗುಹೇಶ್ವರಾ"

ಶಿವನ ವರ್ಣನೆ ಈ ವಚನದಲ್ಲಿದೆ. ಯಜ್ಞದ ಅಧಿಪತಿ, ಅಗ್ನಿಗಣ್ಣಿನ ದೇವ, ಮಾರಿಯ ಅಧಿಪತಿ, ಸ್ಮಶಾನದ ದೇವ, ಬ್ರಹ್ಮಕಪಾಲ ಹಿಡಿದು ಬೇಡುವವ, ಸಂನ್ಯಾಸಿ—ಹೀಗೆ ಒಬ್ಬೊಬ್ಬರು ಒಂದೊಂದು ತೆರನಾಗಿ ಮಾತನಾಡುತ್ತಿದ್ದಾರೆ. ನಾನು ಮಾತ್ರ ನಿರಾಕಾರ ಸ್ವರೂಪನಾದ ನಿಮ್ಮನ್ನು ನಂಬಿ ಮಕ್ಕಳಿಲ್ಲದವನಾಗಿ ಬಟ್ಟಬಯಲು ಎಂದರೆ ಕೇವಲ ಬಯಲಿನಲ್ಲಿ ಬಿದ್ದು ಕೆಟ್ಟುಹೋದೆ ಎಂದು ಹೃದಯಕ್ಕೆ ಮಾತ್ರ ವೇದ್ಯವಾದ ಆ ಪರಮೋಚ್ಚ ಅನುಭವವನ್ನು ವಚನದ ಮೂಲಕ ಅಭಿವ್ಯಕ್ತ ಪಡಿಸಿದ್ದಾರೆ. 'ಬಟ್ಟ ಬಯಲಲ್ಲಿ ಬಿದ್ದು ಕೆಟ್ಟೆನು' ಎಂಬಲ್ಲಿ ಮನುಷ್ಯತ್ವವನ್ನು ಕೆಡಿಸಿ

ಕೊಂಡೆ ; ನಿಬ್ಬೆರಗಿನಲ್ಲಿ ನಿರಾಕಾರ ರೂಪನಾದೆ ಎಂಬ ಭಾವ ಅಡಕವಾಗಿದೆ. ಇದನ್ನೇ ನಾವು ಇಲ್ಲಿ ಮುಖ್ಯವಾಗಿ ತಿಳಿಯಬೇಕಾದದ್ದು. ಹೀಗೆ ಶುಭವಾದುದನ್ನು 'ಬಿದ್ದ ಕೆಟ್ಟೆನು' ಎಂದು ತೋರಿಸುವುದರಲ್ಲಿಯೆ ಬೆಡಗಿರುವುದು.

ಅತ್ಯುತ್ಕೃಷ್ಟವಾದ ತಿಳಿವಳಿಕೆಯನ್ನು ಕೊಡುವ ಪ್ರಭುವಿನ ವಚನಗಳ ರೀತಿ ವಿಶಿಷ್ಟವಾದುದೆ ಆಗಿದೆ. ಚಿಂತನೆ ಮಾಡಿದಷ್ಟೂ ಹೆಚ್ಚು ಹೆಚ್ಚು ಬೋಧವುಂಟಾಗುತ್ತದೆ.

"ಕಾಮುನ ಕೈಮರೆದರೆ ಮೋಹ ಮುಂದುಗೆಟ್ಟಿತ್ತು. ಅವಿಷ
ತಾಮುಸ ಧಾರಿಗಳೆಲ್ಲ ಎಳತಟವಾದರು ಅಕ್ಕಟಾ! ಅಯ್ಯಾ!
ನಿಮ್ಮ ಕಂಡವರಾರು? ಅಳವಿಲ್ಲದ ಸ್ನೇಹಕ್ಕೆ ಮರಣವೇ
ಮಹಾನವಮಿ. ಗುಹೇಶ್ವರನ ಮರೆಯದೆ ರಣಭೂಮಿಗಳು—
ಉಲಿದವು."

ಕಾಮವನ್ನು ಹಿಡಿದುಕೊಂಡರೆ ಮೋಹ ಬರುತ್ತದೆ. ಕಾಮ ಕಾಣದ ಹಾಗಾದರೆ ಮೋಹ ತಾನಾಗಿಯೇ ಗತಿಗೆಡುತ್ತದೆ. ರಾಕ್ಷಸರೆಲ್ಲ ತಾಮಸಗುಣವುಳ್ಳವರು. ಮನುಷ್ಯವರ್ಗದಲ್ಲಿಯೂ ಅಪಕಾರ ಮಾಡುವ ತಾಮಸ ಗುಣವುಳ್ಳವರು ಬಹಳ ಮಂದಿ ಇದ್ದಾರೆ. ಶಿವನನ್ನು ಕಂಡವರಾರು! ಆತನ ಅನುಸಂಧಾನ, ದರ್ಶನದ ಬಗೆಗೆ ಚಿಂತನೆವುಳ್ಳವರು ಯಾರಿದ್ದಾರೆ? ಅತ್ಯಾಸೆ ಮೋಸ ಕಾಮವುಳ್ಳವರೇ ಈ ಲೋಕ ದಲ್ಲಿ ತುಂಬಿರುವರಲ್ಲಾ ಎಂದು ಪ್ರಭುದೇವರು ಕೊರಗಿದ್ದಾರೆ.

". . . ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ. ಅತ್ತಿತ್ತ
ಹರಿಯದೆ ನಿನಗಾಗಿ ಸತ್ತವರನಾರನೂ ಕಾಣೆ ಗುಹೇಶ್ವರಾ"

ಈ ವಚನವೂ ಮೇಲಣ ಭಾವನೆಯನ್ನೆ ವಿಶದಪಡಿಸಿದೆ. ಪ್ರಮಾಣವಿಲ್ಲದ ಸ್ನೇಹಕ್ಕೆ ಕೊನೆಯೇ ಇಲ್ಲ. ಮರಣದವರೆಗೂ ಮುಗಿಯದ ಸ್ನೇಹ ಹೋಗುತ್ತದೆ. ಮರಣ ವೊದಗಿದಾಗಲೇ ಸ್ನೇಹದ ಕೊನೆ. ಅದುವೇ ಮಹಾನವಮಿ. ಮರಣವೊದಗುವ ವರೆಗೂ ಈ ಅರಿಷಡ್ವರ್ಗಗಳ ಕಾಟ ತಪ್ಪಿದ್ದಲ್ಲ. ಅವು ಒಂದಲ್ಲ ಒಂದು ಬಗೆಯಲ್ಲಿ ಕಾಡಿಸುತ್ತವೆ. ಪೀಡಿಸುತ್ತವೆ.

"ಕೇಳು, ಕೂಡಲಸಂಗಮದೇವಾ
ಮರಣವೇ ಮಹಾನವಮಿ!"

ಎಂಬ ಬಸವಣ್ಣನವರ ಮಾತು ಇಲ್ಲಿ ನೆನಪಿಗೆ ಬರದಿರದು.

ಪ್ರಭುದೇವರ ಜೀವನ ದೃಷ್ಟಿ, ಭಾವಕ್ರಿಯೆಗಳ ಎತ್ತರವು ಸೂಕ್ಷ್ಮವಾದ ಆಕಾಶ ತತ್ತ್ವವನ್ನೂ ಮೀರಿದೆ. ಮಹಾಜ್ಞಾನ ಬಂದರೂ ತಾನು ತಾನಾಗಬೇಕು ಎಂದೆನ್ನು

ತ್ತಾರೆ ಪ್ರಭು. ತಾನು ಎಂದರೆ ಶಿವ. ಈ ಶಿವ ಕೇವಲ ಶಿವನಾಗಬೇಕು ಎಂಬುದೇ ಇಲ್ಲಿನ ಭಾವ.

" ಕಾಯದ ಕಳವಳವ ಗೆಲಿದರೇನು,
ಮಾಯದ ತಲೆಯನರಿಯದನ್ನಕ್ಕರ ?
ಮಾಯದ ತಲೆಯನರಿದರೇನು,
ಜ್ಞಾನದ ನೆಲೆಯನರಿಯದನ್ನಕ್ಕರ ?
ಜ್ಞಾನದ ನೆಲೆಯನರಿದರೇನು,
ತಾನು ತಾನಾಗದನ್ನಕ್ಕರ ?
ತಾನು ತಾನಾದ ಶರಣಂಗೆ ಒಂದು
ದಾರಿ ಮೇರೆಯುಂಟೇ ಗುಹೇಶ್ವರಾ "

ವಜ್ರಕಾಯುವಾದರೇನು ಬಂತು ! ಯೋಗಮಾಡಿ ಪ್ರಾಪಂಚಿಕಜ್ಞಾನ ತಿಳಿಯು ಬೇಕು. ಈ ಜ್ಞಾನ ಬಂದಿತು ಎಂದು ಭಾವಿಸಿ ನಾನು ಬ್ರಹ್ಮನಾದೆ, ಮಾಯೆ ಕಳೆದೆ ಎಂದರೆ ಆಗದು. ಜ್ಞಾನದ ನೆಲೆ ಎಂದರೆ ಮೂಲವನ್ನು ತಿಳಿಯಬೇಕು. ತಾನು ತಾನಾಗಬೇಕು. ತಾನು ತಾನಾದ ಶರಣನು ಕಾಲ ದೇಶ ಚಿಂತೆಗಳನ್ನು ಮೀರಿನಿಂತವ. ನಿರಂತರವೂ ಅಂತರಂಗದ ಸುಪ್ರಭೆಯನ್ನು ಚೆಲ್ಲಲು ಸಮರ್ಥ. ನಡೆ ಯಲ್ಲಿ ಎಚ್ಚತ್ತು ಜ್ಞಾನಿಗಳನ್ನು ನಿರ್ಮಿಸಬಲ್ಲನವನು. ಜ್ಞಾನದಲ್ಲೂ ಸುಜ್ಞಾನ, ಸಮ್ಯಕ್‌ಜ್ಞಾನ, ಮಹಾಜ್ಞಾನ—ಎಂದು ಮುಂತಾದುವಿವೆ. ಪ್ರಭುದೇವರಂತೂ ಮಹಾಜ್ಞಾನದ ಆಚೆಗಿನ ಜ್ಞಾನವನ್ನೂ ತಿಳಿಸುತ್ತಾರೆ. ಅವರ ಮಟ್ಟದಲ್ಲಿ ಅನು ಭಾವವನ್ನು ಅಳವಡಿಸಿಕೊಂಡವರು ಶರಣ ವೃಂದದಲ್ಲಿಯೆ ತೀರ ಕಡಿಮೆ ಎಂದೇ ಹೇಳಿದರೂ ತಪ್ಪೆನಿಸುವುದಿಲ್ಲ.

ನಮ್ಮ ಒಳಗೆ ಚಿದ್ರೂಪವಿದೆ. ಚಿತ್ಪ್ರಕಾಶವಿದೆ. ಹೊರಗಿನ ಸಿಂಗಾರಕ್ಕೆ ಮನಸೋತು ಒಳಗಿನ ಸಚ್ಚಿದಾನಂದವನ್ನು ನಾವು ಕಾಣದಾಗಿದ್ದೇವೆ. ಇದೇನು ಕಾರಣ ? ಮಾಯೆಯ ಮುಸುಕೇ ! ಶರೀರವನ್ನು ಬಿಟ್ಟೆ, ಹೆಂಡತಿ ಮಕ್ಕಳನ್ನು ಬಿಟ್ಟೆ, ರಾಜ್ಯಕೋಶವನ್ನು ಬಿಟ್ಟೆ ಎಂದರೇನಾಯಿತು ! ಮನದ ಮುಂದಣ ಆಸೆ ಯನ್ನು ಬಿಡಬೇಕು ಎಂದೆನ್ನುತ್ತಾರೆ ಅಲ್ಲಮಪ್ರಭು.

" ಉಳಿ ಮುಟ್ಟದ ಲಿಂಗವ ಮನ ಮುಟ್ಟ ಬಲ್ಲುದೆ ಗುಹೇಶ್ವರಾ "
" ಒಳಗೆ ತೊಳೆಯಲರಿಯದೆ ಹೊರಗೆ ತೊಳೆದು ಕುಡಿವುತಿಪ್ಪರಯ್ಯ "
" ದೇಹವೆ ದೇಗುಲವಾಗಿರಲು ಬೇರೆ ಮತ್ತೆ ದೇಗುಲವೇಕಯ್ಯ "
" ಎನ್ನ ಒಳಹೊರಗೆ ಬೆಳಗುವ ಪರಮ ಪ್ರಕಾಶವ ಕಂಡೆನಯ್ಯ ಗುಹೇಶ್ವರಾ "

"ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವಿರಯ್ಯ"
"ರಂಭೆಯ ನುಡಿ ಶುಂಭಗೆ ಶೃಂಗಾರವೆ?"
"ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ"

ಒಳಬಾಳು ಬಾಳಲು ಬೇಕಾದ ಎಲ್ಲ ಸಂಪತ್ತಿಯನ್ನೂ ಅವರ ವಿಚಾರ ಪ್ರಣಾಲಿ ಅಧಿಕವಾಗಿ ಒದಗಿಸುತ್ತಿದೆ.

"ಜಗದಗಲದ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟಿನಲ್ಲಿ ಚಿತ್ರ ವಿಚಿತ್ರವ ನೋಡುತ್ತ ಧ್ಯಾನ ವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರ್ಶನವ ನೋಡುತ್ತ ನೋಡುತ್ತ ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ ಗುಹೇಶ್ವರನೆಂಬ ಲಿಂಗ ತಾನಾಗಿ"

ಪ್ರಭುವನ್ನು ಕುರಿತ ಲೇಖನದಲ್ಲಿ ಈ ವಚನವನ್ನು ಉದಾಹರಿಸದೆ ನನ್ನ ಮನಕ್ಕೆ ತೃಪ್ತಿಯಾಗದು. ಸ್ವಾನುಭವದ ಸೆಲೆಯಾಗಿ ಚಿಮ್ಮಿರುವ ಇಂಥ ನುಡಿಗಳಲ್ಲಿ ಕಾವ್ಯ ಮಯವಾಗಿ ಬೆಳೆದು ಬಂದ ಭಾವವಿದೆ. ತುಂಬಿ ಬಂದ ರೂಪಸಾದೃಶ್ಯವಿದೆ. ಇದನ್ನು ಕಾಣಲೆತ್ನಿಸೋಣ:

ಜಗದಗಲದ ಮಂಟಪಕ್ಕೆ ಆಕಾಶವೆ ಮೇಲ್ಕಟ್ಟು. ಅದರಲ್ಲಿ ಕಾಣುವ ಚಿತ್ರ ರೂಪಗಳ ಎಂದರೆ ಚಂದ್ರ, ತಾರೆ, ಮುಗಿಲು, ಬಣ್ಣಬಣ್ಣಗಳ ಸೌಂದರ್ಯಕ್ಕೆ ಎಲ್ಲೆಯಿರುವುದೇ! ನೋಡುತ್ತ, ನೋಡುತ್ತ ಅಚ್ಚರಿಯಲ್ಲೆ ನಿಲ್ಲುವಂತಾಗುತ್ತದೆ. ಮುಗಿಲು ಚಂದ್ರ ತಾರಾಗ್ರಹಮಂಡಲವನ್ನೆಲ್ಲ ಮರೆತು ಧ್ಯಾನದ ನಿಬ್ಬೆರಗಿನಲ್ಲಿ ವಿಶ್ರಾಂತಿ ಹೊಂದಿ ಆ ಚಿತ್ರ ವಿಚಿತ್ರಗಳೆಲ್ಲವೂ ನಿಶ್ಚಯವಾಗಿ ಕೂಡಿರುವ ಗಗನದಂತೆ ಸೂಕ್ಷ್ಮರೂಪದಲ್ಲಿ ನಿಷ್ಕಳಲಿಂಗವು ಉದಯವಾದುದನ್ನು ಕಂಡೆ ಎಂದು ತಿಳಿಸುವ ಈ ವಚನದ ಸುವರ್ಣಗೆರೆಗೆ ಸಾಟಿಯಾದುದೆಲ್ಲಿದೆ! ಅನುಭಾವವೆ ಚಿತ್ರವಾಗಿ ಮೂಡಿ ನಿಂದಿದೆ ಇಲ್ಲಿ. ಕಲ್ಪನೆಯ ಗರಿಗಳನ್ನು ಬಿಚ್ಚಿ, ಕವಿದರ್ಶನವನ್ನೂ ಅನುಭಾವದ ಪೂರ್ಣದರ್ಶನವನ್ನೂ ಅಭಿವ್ಯಕ್ತ ಪಡಿಸಿರುವ ರೀತಿ ಆದರ್ಶಮಟ್ಟದ್ದಾಗಿದೆ. ತತ್ತ್ವವನ್ನು ವಿವೇಚಿಸಿರುವ ರೀತಿಯಲ್ಲಿಯೂ ಕಾವ್ಯದ ಸೌಂದರ್ಯ ರೇಖೆಗಳು ಮಿಂಚಿರುವುದನ್ನು ಅವರ ವಚನಗಳಲ್ಲಿ ಕಾಣಬಹುದು.

ಅಲ್ಲಮಪ್ರಭುವು ಆತ್ಮಜ್ಞಾನಿ; ವೈರಾಗ್ಯಸಾಮ್ರಾಟ. ಅತ್ಯುನ್ನತ ಮಟ್ಟದ ಆಲೋಚನೆಗಳು ಅವರ ಸೂಳ್ನುಡಿಗಳಲ್ಲಿ ಅರಳಿವೆ. ಕಟುತರ ನುಡಿಗಳನ್ನೂ ನಿರ್ಭಯ ದಿಂದ ಒಳಿತಿಗಾಗಿ ಆಡುವ ಮನೋಧರ್ಮ ಹೇಗೆ ಪ್ರಭುವಿಗೆ ಸಹಜವಾಗಿದೆಯೋ ಹಾಗೆ ಸಾರ ಸತ್ವವಿದ್ದಲ್ಲಿ ಗ್ರಹಿಸಿ ಮೆಚ್ಚಿ ಬಿಚ್ಚುಮನಸ್ಸಿನಿಂದ ಹಾರೈಸಿ ಗೌರವಿಸು ವಷ್ಟು ಹೃದಯ ವೈಶಾಲ್ಯ ಪ್ರಭುವಿಗಿದೆ ಎಂಬುದನ್ನು ನಾವು ಮನಗಾಣಬೇಕು.

ನಿದರ್ಶನ ರೂಪವಾಗಿ ಅಕ್ಕನ ಮತ್ತು ಅಣ್ಣನ ಬಗೆಗೆ ಪ್ರಭುವಿನ ವಚನಗಳು ಇಂತಿವೆ:

"ಅಂತರಂಗದ ಪ್ರಭೆ ಬಹಿರಂಗವೆಲ್ಲ ತಾನೆಯಾಗಿ
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾ—
ದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ
ಎಂಬೆನು ಕಾಣಾ ಚನ್ನಬಸವಣ್ಣಾ"

"ಗುಹೇಶ್ವರ ಲಿಂಗದಲ್ಲಿ ಬಸವಣ್ಣನೊಬ್ಬನೆ ಅಚ್ಚಪ್ರಸಾದಿ"

"....ನಮ್ಮ ಗುಹೇಶ್ವರಲಿಂಗದಲ್ಲಿ ಸಂಗನ
ಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಧನ್ಯ
ರಾಗಬೇಕು ನಡೆ ಸಿದ್ಧರಾಮಯ್ಯ"

ಒಳಗೆ ಜ್ಞಾನವಿದೆಯೆಂದರೆ ಏನುಬಂತು! ಅದು ಕ್ರಿಯಾರೂಪದಲ್ಲಿ ವ್ಯಕ್ತವಾಗಬೇಕು. ಶಿವಮಯ ಜೀವನ ಎಲ್ಲರದಾಗಬೇಕು ಎಂಬುದೇ ಪ್ರಭುವಿನ ನಲ್ವರಕೆ. ಕರ್ಮಯೋಗಿ ಸಿದ್ಧರಾಮನಿಗೇ ಬೋಧಿಸಿ ಲಿಂಗದೀಕ್ಷೆಯನ್ನು ಪ್ರಭುದೇವರು ಮಾಡಿಸಿದರೆಂದರೆ ಇವರ ಲಿಂಗದ ಕಲ್ಪನೆಯ ಹಿರಿಮೆ ವೇದ್ಯವಾಗದಿರದು. ಪ್ರಭುವಿನ ಘನ ನಿಲವನ್ನು ಹರಿಹರ ಕವಿಯು ಉಲ್ಲೇಖಿಸಿರುವಂತೆ:

"ನಿರುಪಾಧಿಕ ಜ್ಯೋತಿಯಾಗಿರ್ದನಲ್ಲಮಂ
ಪರಮ ತತ್ತ್ವಾಕಾರನಾಗಿರ್ದನಲ್ಲಮಂ"

ಎಂದು ನಾವೂ ತಿಳಿಯುವುದು ಯಥಾರ್ಥವಾಗಿದೆ. ಪ್ರಭುವಿನ ವಚನಗಳು ಆತ್ಮಶೋಧನೆ ನಡಸಿ ನೀಡಿರುವ ಬೋಧನೆ. ಶಿವಾನುಭವದ ಸಾರಸರ್ವಸ್ವ. ನಾನು ಜ್ಞಾನಿ ಎಂದು ತಿಳಿದು ವಾದಿಸುವವನಿಗೆ ಅವು ಬರಸಿಡಿಲಿನಂತೆ ಬಂದೆರಗುತ್ತವೆ. ಮುಕ್ತಿಕಾಮಿಯಾದ ಶರಣನಿಗೆ ಪರಮ ಪೂಜ್ಯವೂ ಪರಮೋತ್ಕೃಷ್ಟವೂ ಆಗಿವೆ.

ಪ್ರಭುದೇವರ ವಚೋಲಹರಿಯಲ್ಲಿ ಏನು ವಿಲಾಸ! ಎಂಥ ವೈಖರಿ!! ಸೂತ್ರ ಶೈಲಿಯಿಂದ ತಾತ್ವಿಕ ಅನುಭೂತಿಯನ್ನು ಅಚ್ಚುಕಟ್ಟಾಗಿ ಕಾಣಿಸಿರುವ ವಚನಗಳು ನಿತ್ಯನೂತನವಾಗಿವೆ. ಪ್ರಭುನಿರ್ಮಿತ ವಚನ ಮಂದಿರವು ಜ್ಯೋತಿರ್ಲಿಂಗದ ದಿವ್ಯ ಪ್ರಭೆಯಿಂದ ಪ್ರಸ್ಫುರಿತಗೊಂಡಿದೆ. ಇಂಥ ಪುಣ್ಯಮಯ ಮೂರ್ತಿಗಳನ್ನು ಕಂಡ ಅನಂತರವೆ—

"ಕೂಡಲ ಸಂಗನ ಶರಣರು ಮನತೆರೆದು ಮಾತನಾಡಿದರೆ
ಲಿಂಗವೆ ಕಾಣಬಹುದು!"

ಎಂದು ಬಸವಣ್ಣನವರು ನುಡಿದಿರಬೇಕು. ಪ್ರಭುವಿನ ಬಗೆಗಂತೂ ಈ ಮಾತು ಸಾವಿರ ಪಾಲಿಗೂ ಸತ್ಯ.

ಚ. ಸುಂದರೇಶನ್

ದಕ್ಷಿಣೇಶ್ವರದಲ್ಲಿ

ಕಡಲ ಕುರಿತು ನಡೆವ ಗಂಗೆ : ಇಲ್ಲೆ ತಾಯ ದೇಗುಲ
ನಿನ್ನ ಪಾದ ಸ್ಪರ್ಶದಿಂದ ಪುಲಕಗೊಂಡ ಅಂಗಳ
ಅಂದಿನಂತೆ ಇಂದು ಕೂಡ ಪೂಜೆಗೊಳ್ವ ಮೂರುತಿ
ನಿನ್ನ ವಿಮಲ ನೆನಹಿಗಿದೋ ಸದಾ ಮಂಗಳಾರತಿ.

ಮಾಕಾಳಿಯ ಮಲ್ಲಸಾಲೆ : ಇಲ್ಲೆ ನಿನ್ನ ಸಾಧನೆ
ಅದೋ ಅಲ್ಲೆ ನಿನ್ನ ಕೊಠಡಿ : ಅಲ್ಲಿ ನಿನ್ನ ಬೋಧನೆ.
ಅಮರ ಮಧುರ ಗೀತಗಳಿಗೆ ನಿರ್ವಿಕಲ್ಪ ಮೌನಕೆ
ನಮಿಸುತಿರುವೆ ಅಂದು ಬಂದ ಭಕ್ತ ಜನರ ಪುಣ್ಯಕೆ.

ನಿಂದುದಿಲ್ಲಿ, ಬಂದುದಿಲ್ಲಿ, ನಡೆದುದಿಲ್ಲಿ ಈ ಕಡೆ
ನುಡಿದುದಿಲ್ಲಿ, ಕಂಡುದಿಲ್ಲಿ, ಪಡೆದುದಿಲ್ಲಿ ಬಿಡುಗಡೆ
ಮುಟ್ಟಿದೆಲ್ಲ ತೀರ್ಥವಾಯ್ತು, ಮೆಟ್ಟಿದಲ್ಲೆ ದೇಗುಲ
ಇಂದು ಬಂದು ಕಂಡ ನಮಗೆ ಪುಲಕ ಬಾಷ್ಪ ವ್ಯಾಕುಲ.

ನೂರು ತಾರೆಯೊಡನೆ ಚಂದ್ರ ಬಿಜಯಗೈದ ನಭದೊಲು
ನಿನ್ನ ಲೀಲೆ ರಮ್ಯವಾಯ್ತು ಅಂದು ಇದೇ ನೆಲದೊಳು.
ಬಂದವರನು ಕರೆದುಕೊಂಡು ಬೆಳ್ಳಿಹಡಗು ನಡೆಯಲು
ಮಬ್ಬು ಕವಿದ ಬಂದರಿನೊಳು ಅರಸುತಿಹೆವು ಬೆಳಕನು !

ಜಿ. ಎಸ್. ಶಿವರುದ್ರಪ್ಪ

ರೆವೆರೆಂಡ್ ಎಫ್ ಕಿಟ್ಟೆಲ್*

ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದು ಯಾವ ಭಾಷೆಯನ್ನೋ ಆಡುತ್ತಿದ್ದು ಬೇರೆ ದೇಶಕ್ಕೆ ಹೋಗಿ ಅಲ್ಲಿನ ಭಾಷೆಯನ್ನು ಅಭ್ಯಾಸ ಮಾಡಿ ಅದರಲ್ಲಿ ಪ್ರವೀಣತೆಯನ್ನು ಸಂಪಾದಿಸಿ ಶಾಶ್ವತವಾಗಿ ನಿಲ್ಲುವ ಕೃತಿಗಳನ್ನು ರಚಿಸಿ ಕೀರ್ತಿಭಾಜನನಾಗುವುದು ತುಂಬ ಕಷ್ಟವೂ, ಅಪೂರ್ವವೂ ಆದ ಕೆಲಸ. ಇದನ್ನು ಒಂದು ಪವಾಡವೆಂದು ಬೇಕಾದರೂ ಕರೆಯಬಹುದು. ಭರತಖಂಡದ ಹಲವು ಭಾಷೆಗಳಿಗೆ ಈ ಸೇವೆಯನ್ನು ಮಾಡಿರುವ ಮಹನೀಯರು ಕೆಲವರಿದ್ದಾರೆ. ೧೮೫೭ನೆಯ ಇಸವಿಯಲ್ಲಿ ಕಂಪೆನಿ ಸರ್ಕಾರ ಹೋಗಿ ಬ್ರಿಟಿಷ್ ಸರ್ಕಾರ ಇಲ್ಲಿ ಸ್ಥಿರವಾಗಿ ನೆಲೆಗೊಂಡಮೇಲೆ ಭರತ ಖಂಡಕ್ಕೆ ಹಲವು ಜನ ಮೇಧಾವಿಗಳು ಯೂರೋಪಿನ ದೇಶಗಳಿಂದ ಬರುವುದು ಹೆಚ್ಚಾಯಿತು. ಕೆಲವರು ವ್ಯಾಪಾರಕ್ಕಾಗಿ ಬಂದರು; ಕೆಲವರು ಕ್ರಿಸ್ತಧರ್ಮವನ್ನು ಈ ದೇಶದಲ್ಲಿ ಪ್ರಚಾರಮಾಡುವ ಸಂಕಲ್ಪದಿಂದ ಬಂದರು; ಮತ್ತೆ ಕೆಲವರು ಇಲ್ಲಿನ ರಾಜಕೀಯ ಆಡಳಿತಗಾರರಾಗಿ ಆಗಮಿಸಿದರು. ಇವರಲ್ಲಿ ಧರ್ಮ ಪ್ರಚಾರಕರಾದ ಪಾದ್ರಿಗಳೂ, ಅಲ್ಲಲ್ಲಿ ಅಧಿಕಾರಿಗಳಾಗಿದ್ದು ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದವರೂ ಮುಖ್ಯರಾದವರು. ಇವರು ಈ ದೇಶಕ್ಕೆ ಬರುವಾಗಲೇ ಭರತಖಂಡದ ಯಾವುದಾದರೂ ಭಾಷೆಯನ್ನು ಸ್ವಲ್ಪಮಟ್ಟಿಗೆ ಕಲಿತುಕೊಂಡೇ ಬರುತ್ತಿದ್ದರು. ಇಲ್ಲಿಗೆ ಬಂದಮೇಲೆ ಆ ಭಾಷೆಯನ್ನು ಪೂರ್ಣವಾಗಿ ವ್ಯಾಸಂಗಮಾಡಿ ಅದರಲ್ಲಿ ಪ್ರಭುತ್ವವನ್ನು ಪಡೆದರು. ಇಂಥವರಲ್ಲಿ ಫಾದರ್ ಬೆಸ್ಕಿ, ಬಿಷಪ್ ಕಾಲ್ಡ್‌ವೆಲ್ ಮುಂತಾದವರು ತಮಿಳು ಭಾಷೆಗೆ ಮಿಗಿಲಾದ ಸೇವೆ ಮಾಡಿದ್ದಾರೆ; ಡಾ|| ಗುಂಡರ್ಟ್ ಮಲೆಯಾಳ ಭಾಷೆಗೆ ಸೇವೆ ಸಲ್ಲಿಸಿದನು; ಬ್ರೌನ್ ಎಂಬಾತ ತೆಲುಗು ನುಡಿಯನ್ನು ಕೈಹಿಡಿದನು; ರೀವ್ಸ್, ಸ್ಯಾಂಡರ್ಸನ್, ಮೊಗ್ಲಿಂಗ್, ಫ್ಲೀಟ್, ರೈಸ್ ಮುಂತಾದವರು ಕನ್ನಡ ನಾಡಿನ ಚರಿತ್ರೆ ಸಾಹಿತ್ಯ ಸಂಸ್ಕೃತಿಗಳ ಕ್ಷೇತ್ರದಲ್ಲಿ ಮಿಗಿಲಾಗಿ ದುಡಿದು ಹಲವು ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಇವರಲ್ಲೆಲ್ಲಾ ರೆವೆರೆಂಡ್ ಫರ್ಡಿನೆಂಡ್ ಕಿಟ್ಟೆಲ್ ಮಾಡಿರುವ ಸೇವೆ ಅಮೋಘವಾದದ್ದು. ಕನ್ನಡ ವಿದ್ವತ್ತಿನ ಪ್ರಪಂಚದಲ್ಲಿ ಮಾರ್ಗದರ್ಶಕನಾಗಿ ನಿಂತಿರುವ ಪುಣ್ಯ ಆತನಿಗೆ ಲಭಿಸಿದೆ. ಆತನ ಜೀವನದ ಕಥೆಯನ್ನು ಇಲ್ಲಿ ಸ್ಮರಿಸಿಕೊಂಡು, ಆತನ ಗ್ರಂಥಗಳ ವಿಷಯವಾಗಿ ಕೆಲವು

---

*ಬೆಂಗಳೂರಿನ ಎ. ಐ. ಆರ್. ಅವರ ಕೃಪೆಯಿಂದ.

ಸಂಗತಿಗಳನ್ನು ಹೇಳಲು ಇಲ್ಲಿ ಪ್ರಯತ್ನಿಸಿದೆ. ಆತನು ನಿಜವಾಗಿಯೂ ಹೊಸಗನ್ನಡದ ಪಿತಾಮಹರಲ್ಲಿ ಅಗ್ರಗಣ್ಯ.

ಅವರ ಜೀವನ ಚರಿತ್ರೆಯ ಬಗ್ಗೆ ಹೆಚ್ಚು ವಿವರಗಳು ತಿಳಿದಿಲ್ಲ. ಅವರ ತಂದೆ ಕ್ರೈಸ್ತ ಮತದ ಪ್ರಾಟೆಸ್ಟೆಂಟ್ ಪಂಗಡಕ್ಕೆ ಸೇರಿದ ಧರ್ಮಾಧಿಕಾರಿಯಾಗಿದ್ದನು. ಕಿಟ್ಟೆಲ್ ಅವರು ೧೮೩೨ ನೆಯ ಇಸವಿ ಏಪ್ರಿಲ್ ತಿಂಗಳು ೭ ನೆಯ ತಾರೀಖಿನಲ್ಲಿ ಜನ್ಮಧಾರಣೆ ಮಾಡಿದರು. ಜರ್ಮನಿಯ ವಾಯುವ್ಯ ಪ್ರದೇಶದಲ್ಲಿರುವ ರೊಸ್ಟರ್ ಹಾಫೆ (Roster-hafe) ಎಂಬುದು ಅವರ ಜನ್ಮಭೂಮಿ. ಔರಿಕ್ (Aurich) ನಗರದ ಹೈಸ್ಕೂಲಿನಲ್ಲಿ ಇವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ೧೮೪೦ ರಲ್ಲಿ ಸ್ವಿಟ್ಜರ್‌ಲೆಂಡಿನ ಬಾಸೆಲ್ ನಗರದ ಮಿಷನ್ ಕಾಲೇಜಿಗೆ ಪ್ರೌಢವಿದ್ಯಾಭ್ಯಾಸಕ್ಕಾಗಿ ತೆರಳಿದರು. ಅಲ್ಲಿ ಮೂರು ವರ್ಷಗಳ ಕಾಲ ಅಭ್ಯಾಸಮಾಡಿ ಅಲ್ಲಿಂದ ಹಡಗು ಹತ್ತಿ ನೇರವಾಗಿ ಅವರು ಮಂಗಳೂರಿಗೆ ಬಂದು ನೆಲಸಿದರು. ಆಗ ಅವರಿಗೆ ಸುಮಾರು ೨೨ ವರ್ಷಗಳ ಪ್ರಾಯ. ಮಂಗಳೂರಿಗೆ ಬಂದ ಮೇಲೆ ಕನ್ನಡವನ್ನು ಕಲಿಯಲು ಆರಂಭಿಸಿದರು. ೧೮೭೧ ರ ಹೊತ್ತಿಗೆ ಅವರು ಕನ್ನಡದಲ್ಲಿ ಪೂರ್ಣ ಪಾಂಡಿತ್ಯವನ್ನು ಗಳಿಸಿಕೊಂಡರು. ಅವರು ಹೇಗೆ ಕನ್ನಡವನ್ನು ಕಲಿತರು, ಅವರಿಗೆ ಪಾಠ ಹೇಳಿದವರು ಯಾರು ಎಂಬ ವಿಷಯಗಳಾವುವೂ ತಿಳಿದಿಲ್ಲ. ೧೮೭೧ ರಲ್ಲಿ ಅವರು ಮಡಿಕೇರಿಯಲ್ಲಿ ವಾಸಿಸುತ್ತಿದ್ದರು. ಮಂಗಳೂರನ್ನು ಯಾವಾಗ ಬಿಟ್ಟು ಇಲ್ಲಿಗೆ ಬಂದರೋ ಗೊತ್ತಾಗಿಲ್ಲ. ಅವರು ಪರಿಷ್ಕರಿಸಿ ಅಚ್ಚು ಹಾಕಿಸಿದ "ಶಬ್ದಮಣಿದರ್ಪಣ"ದ ಪೀಠಿಕೆ ೧೮೭೧ ರಲ್ಲಿ ಮಡಿಕೇರಿಯಲ್ಲಿ ರಚಿತವಾಯಿತು. ೧೮೭೪ ರಲ್ಲಿ ಅವರು ನಾಗವರ್ಮನ ಛಂದೋಂಬುಧಿಯನ್ನು ಪರಿಷ್ಕರಿಸಿ ಮುದ್ರಿಸಿದರು; ಅದಕ್ಕೆ ವಿಸ್ತಾರವಾದ ಮುನ್ನುಡಿಯನ್ನೂ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ಪ್ರಬಂಧವನ್ನೂ ಬರೆದರು. ಆಗಲೂ ಅವರು ಮಡಿಕೇರಿಯಲ್ಲಿಯೇ ಇದ್ದರು. ಆಗಾಗ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ೧೮೭೭ ರಲ್ಲಿ ಅವರು ಭರತಖಂಡವನ್ನು ಬಿಟ್ಟು ತಮ್ಮ ತಾಯ್ನಾಡಾದ ಜರ್ಮನಿ ದೇಶದ ವುರ್ಟೆಂಬರ್ಗ್ ಜಿಲ್ಲೆಯ ಟುಬಿಂಗನ್ ಎಂಬ ಊರಿನಲ್ಲಿ ನೆಲಸಿದರು. ತಮ್ಮ ದೀರ್ಘಕಾಲದ ವ್ಯಾಸಂಗದಲ್ಲಿ ಕನ್ನಡದ ಬಗ್ಗೆ ಅವರು ಸಂಪಾದಿಸಿದ ಸಾಮಗ್ರಿಯನ್ನೆಲ್ಲಾ ಟುಬಿಂಗನ್ನಿನಲ್ಲಿ ಕುಳಿತು ಪರಿಷ್ಕಾರ ಮಾಡಿ ೧೮೯೩-೪ ರಲ್ಲಿ ಅವರು ತಮ್ಮ ಜೀವನಾಭ್ಯಾಸದ ಸಾರಸರ್ವಸ್ವವಾದ ಕನ್ನಡ—ಇಂಗ್ಲಿಷ್ ಡಿಕ್ಷನರಿಯನ್ನು ಪ್ರಕಟಿಸಿದರು. ಈ ಮಹಾಕೋಶದ ರಚನೆಯನ್ನು ಕಂಡು ಮೆಚ್ಚಿದ ಟುಬಿಂಗನ್ ವಿಶ್ವವಿದ್ಯಾನಿಲಯವು ೧೮೯೭ ರಲ್ಲಿ ಕಿಟ್ಟೆಲ್ ಅವರಿಗೆ ಡಾಕ್ಟರ್ ಆಫ್ ಫಿಲಾಸಫಿ ಎಂಬ ಪ್ರಶಸ್ತಿಯನ್ನು ದಯಪಾಲಿಸಿತು.

ಕಿಟ್ಟೆಲ್ಲರು ತಮ್ಮ ಜೊತೆಯಲ್ಲಿ ಇಲ್ಲಿಂದ ತೆಗೆದುಕೊಂಡು ಹೋದ ಓಲೆಯ ಗ್ರಂಥಗಳನ್ನೂ ಅವರು ಬರೆದ ಟಿಪ್ಪಣಿಗಳು ಮುಂತಾದುವನ್ನೂ ಇಂದಿಗೂ ಆ ವಿಶ್ವವಿದ್ಯಾನಿಲಯದವರು ಸುರಕ್ಷಿತವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ತಮ್ಮ ಜೀವಮಾನದ ಕೊನೆಯ ವರ್ಷದವರೆಗೂ ಹೆಂಡತಿ ಮಕ್ಕಳೊಡನೆ ಸಂತೋಷವಾಗಿ ಕಾಲವನ್ನು ಕಳೆಯುತ್ತಾ, ೧೯೦೩ ನೆಯ ಇಸವಿಯ ಡಿಸೆಂಬರ್ ತಿಂಗಳು ೧೯ ನೆಯ ತಾರೀಖಿನಂದು, ತಮ್ಮ ೭೯ ನೆಯ ವಯಸ್ಸಿನಲ್ಲಿ, ಅವರು ಇದ್ದಕ್ಕಿದ್ದ ಹಾಗೆ ಶಾಂತಚಿತ್ತರಾಗಿ ಕಣ್ಮುಚ್ಚಿದರು. ತಮ್ಮ ಕನ್ನಡ ವ್ಯಾಕರಣದ ಅಚ್ಚಾದ ಪ್ರತಿಯನ್ನು ಕೈಮುಟ್ಟಿ ಕಣ್ಣಿನಿಂದ ನೋಡುವ ಅವಕಾಶ ತಮಗೆ ಲಭ್ಯವಾಯಿತೆಂಬುದಾಗಿ ಸಾಯುವ ದಿನ ಬೆಳಗ್ಗೆ ಅವರು ಮಂಗಳೂರಿನ ಬಾಸೆಲ್ ಕಮಿಟಿಗೆ ಒಂದು ಪತ್ರವನ್ನು ಬರೆದು ಹಾಕಿದರು. ಈ ವ್ಯಾಕರಣ ಕಿಟ್ಟೆಲ್ ಅವರ ಕೊನೆಯ ಮಹಾಕೃತಿ. ಹೀಗೆ ಅವರು ತಮ್ಮ ಜೀವಮಾನದ ಕೊನೆಯ ದಿವಸದವರೆಗೂ ಕನ್ನಡಕ್ಕಾಗಿ ದುಡಿದು ಕನ್ನಡದ ವಿದ್ವತ್ತಿಗೆ ಭದ್ರವಾದ ತಳಹದಿಯನ್ನು ಹಾಕಿದರು.

ಅವರು ಸಂಪಾದಿಸಿದ "ಶಬ್ದಮಣಿದರ್ಪಣ" ೧೮೭೨ ರಲ್ಲಿ ಪ್ರಕಟವಾಯಿತು. ಗ್ರಂಥದ ಪಾಠ ಪರಿಶೋಧನೆಗಾಗಿ ಕಿಟ್ಟೆಲ್ ಅವರು ೯ ಕೈಬರಹದ ಪ್ರತಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಇಷ್ಟು ಪ್ರತಿಗಳನ್ನು ಕೂಡಿಹಾಕುವುದೇ ಒಂದು ಕಷ್ಟವಾದ ಕೆಲಸ; ಆಮೇಲೆ ಅವುಗಳ ಪಾಠ ವ್ಯತ್ಯಾಸಗಳನ್ನು ಗಮನಿಸಿ ಯಾವುದು ಗ್ರಾಹ್ಯವೆಂಬ ನಿರ್ಣಯಕ್ಕೆ ಬರುವುದಂತೂ ಮತ್ತೂ ಕಷ್ಟವಾದದ್ದು. ಯಾವ ಬಗೆಯಾದ ಸಹಾಯ ಸಂಪತ್ತಿಯೂ ಸಲಕರಣೆಗಳೂ ಇಲ್ಲದ ಆ ಕಾಲದಲ್ಲಿ ತಾವು ಹೋಗಬೇಕಾದ ಮಾರ್ಗವನ್ನು ತಾವೇ ಕಂಡುಕೊಂಡು ತಪ್ಪುಗಳನ್ನು ಮಾಡುತ್ತ, ತಿದ್ದಿಕೊಳ್ಳುತ್ತ ವೈಜ್ಞಾನಿಕ ದೃಷ್ಟಿಯಿಂದ ಮುಂದುವರಿದು ಕನ್ನಡದ ಶ್ರೇಷ್ಠ ವ್ಯಾಕರಣವಾದ "ಶಬ್ದಮಣಿದರ್ಪಣ"ದ ಪರಿಷ್ಕೃತಪಾಠವೊಂದನ್ನು ಅವರು ಸ್ಥಾಪಿಸಿದರು. ಅಲ್ಲಿಂದೀಚೆಗೆ ಆ ವ್ಯಾಕರಣವು ಎರಡು ಮೂರು ಸಲ ಮುದ್ರಿತವಾಗಿದೆ. ಇತರ ಮುದ್ರಣಗಳು ಕಿಟ್ಟೆಲ್ ಅವರ ಪರಿಷ್ಕರಣದ ಪ್ರಯೋಜನವನ್ನು ಪಡೆದುಕೊಂಡಿವೆ. ಅವರ ಪರಿಷ್ಕರಣ ನಿರ್ದುಷ್ಟವೆಂದಾಗಲಿ, ಅದೇ ಸರ್ವಕಾಲಕ್ಕೂ ಪ್ರಮಾಣಭೂತವಾಗಿದೆಯೆಂದಾಗಲಿ ಹೇಳಲಾಗದಿದ್ದರೂ ಇದುವರೆಗೂ ಅವರು ಮುದ್ರಿಸಿರುವ ಪಾಠವನ್ನೇ ಕನ್ನಡ ಕಲಿಯುವವರೆಲ್ಲರೂ ಓದುತ್ತಾ ಬಂದಿದ್ದಾರೆ. ಅವರು ಮಾಡಿ ನಿಲ್ಲಿಸಿರುವ ಕೆಲಸವನ್ನು ಅಷ್ಟೇ ಸಾಮರ್ಥ್ಯದಿಂದ ಮುಂದುವರಿಸಿ ಅದನ್ನು ಇನ್ನೂ ಉತ್ತಮಗೊಳಿಸುವ ಕೆಲಸ ಇನ್ನು ಮುಂದಕ್ಕೆ ನಡೆಯಬೇಕಾಗಿದೆ.

ಕನ್ನಡವ್ಯಾಸಂಗಕ್ಕೆ ಅತ್ಯವಶ್ಯಕವಾದ ಈ ವ್ಯಾಕರಣ ಗ್ರಂಥವನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಅವರು ಕೊಟ್ಟು ಹೋಗಿದ್ದಾರೆ.

ಇವರು ಪರಿಷ್ಕರಿಸಿ ಅಚ್ಚುಹಾಕಿಸಿದ ಎರಡನೆಯ ಗ್ರಂಥ ನಾಗವರ್ಮನ ಕನ್ನಡ ಛಂದಸ್ಸು. ಇದು "ಶಬ್ದಮಣಿದರ್ಪಣ"ಕ್ಕಿಂತಲೂ ಪ್ರಾಚೀನವಾದ ಗ್ರಂಥ. ಪ್ರಮಾಣಭೂತವಾದ ಈ ಗ್ರಂಥದ ಕೈಬರೆಹದ ಪ್ರತಿಗಳು ಸಿಕ್ಕುವುದು ತುಂಬ ಅಪರೂಪ. ಹೆಚ್ಚು ಕಡಿಮೆ ದೊರೆತಿರುವ ಎಲ್ಲ ಪ್ರತಿಗಳಲ್ಲೂ ಈಚಿನವರು ಬಿಟ್ಟಿರುವ ಮತ್ತು ಸೇರಿಸಿರುವ ಅನೇಕ ವಿಷಯಗಳಿವೆ. ಇವುಗಳನ್ನೆಲ್ಲಾ ವಿಮರ್ಶೆ ಮಾಡಿ ಗ್ರಾಹ್ಯವಾದ ಒಂದು ಪಾಠಕ್ರಮವನ್ನು ಕಂಡುಹಿಡಿಯುವುದು ದೀರ್ಘ ಪರಿಶ್ರಮದಿಂದ ಮಾತ್ರ ಸಾಧ್ಯ. ಕಿಟ್ಟಲ್ ಅವರು ಈ ಗ್ರಂಥದ ೧೪ ಕೈಬರಹದ ಪ್ರತಿಗಳನ್ನು ಪರಿಶೀಲಿಸಿದ್ದಾರೆ; ಬಗೆ ಬಗೆಯ ಪಾಠಾಂತರಗಳನ್ನು ಗುರುತಿಸಿಕೊಂಡಿದ್ದಾರೆ; ತಮ್ಮ ದೃಷ್ಟಿಗೆ ಯಾವುದು ಸಮರ್ಪಕವೆಂದು ತೋರಿತೋ ಆ ಪಾಠವನ್ನು ಅವರು ಪರಿಗ್ರಹಿಸಿ ಮುದ್ರಿಸಿದ್ದಾರೆ. ಇದಕ್ಕೆ ಬರೆದಿರುವ ಮುನ್ನುಡಿಯಲ್ಲಿ ಗ್ರಂಥ ಕರ್ತನ ವಿಚಾರವನ್ನು ತಮಗೆ ತಿಳಿದಮಟ್ಟಿಗೆ ಹೇಳಿರುವರಲ್ಲದೆ ತಮ್ಮ ಪರಿಷ್ಕರಣ ಕಾರ್ಯ ಎಷ್ಟು ತೊಡಕಾದುದೆಂಬುದನ್ನೂ ತಿಳಿಸಿದ್ದಾರೆ. ಎಲ್ಲಕ್ಕಿಂತ ಉಪಯೋಗ ಕರವಾದದ್ದು ಅವರು ಈ ಗ್ರಂಥದ ಮುನ್ನಡಿ ಆದಮೇಲೆ ಕೊಟ್ಟಿರುವ ಕನ್ನಡ ಸಾಹಿತ್ಯ ಚರಿತ್ರೆ. ತಾವು ಸಂಗ್ರಹಿಸಿದ ಮತ್ತು ತಮ್ಮ ದೃಷ್ಟಿಗೆ ಬಿದ್ದ ಕೈಬರಹದ ಗ್ರಂಥಗಳನ್ನು ಅವಲೋಕಿಸಿ ಈ ಚರಿತ್ರೆಯನ್ನು ಅವರು ಸಿದ್ಧಗೊಳಿಸಿದ್ದಾರೆ. ಆಗಿನ ಕಾಲಕ್ಕೆ ಇದು ಮಹತ್ವ ಪೂರ್ಣವಾದ ಕಾರ್ಯವೆಂದು ಹೇಳಬೇಕಾಗಿದೆ. ತಮಿಳು ಸಾಹಿತ್ಯದೊಡನೆ ಹೋಲಿಸುತ್ತಾ ಕನ್ನಡ ಸಾಹಿತ್ಯದ ವಿಷಯವಾಗಿ ಅವರು ಬರೆದಿರುವ "But my own impression is that the more Canarese Vernacular literature is known, the more evident it becomes that it will fully bear comparison with any other Vernacular literature of the South" ಎಂಬ ವಾಕ್ಯ ಅವರಿಗೆ ಕನ್ನಡದ ಮೇಲಿದ್ದ ಅಭಿಮಾನವನ್ನು ವ್ಯಕ್ತಪಡಿಸುತ್ತದೆ.

ಕಿಟ್ಟಲ್ ಅವರ ಕೀರ್ತಿ ಶಾಶ್ವತವಾಗಿ ನೆಲಸಿರುವುದಕ್ಕೆ ಕಾರಣ ಅವರು ರಚಿಸಿದ "ಕನ್ನಡ—ಇಂಗ್ಲಿಷ್ ನಿಘಂಟು" ಎಂಬ ಬೃಹತ್‌ಕೋಶ. ಈ ಮಹಾ ಕೋಶವನ್ನು ಸಿದ್ಧಗೊಳಿಸುವುದಕ್ಕೆ ಸುಮಾರು ೧೫ ವರ್ಷಗಳ ಕಾಲ ಹಿಡಿಯಿತು. ಇದಕ್ಕಿಂತ ಹಿಂದೆ ರೀವ್ಸ್ ಎಂಬಾತನು ಕನ್ನಡ—ಇಂಗ್ಲಿಷ್ ಕೋಶವೊಂದನ್ನು ತಯಾರಿಸಿದ್ದನು; ಅವನು ೧೮೧೭ ರಲ್ಲೇ ಈ ಕೆಲಸವನ್ನು ಆರಂಭಿಸಿ ೧೮೩೨ ರಲ್ಲಿ ಎಂದರೆ ೧೫ ವರ್ಷಗಳ

ಅನಂತರ ಅದನ್ನು ಮುಗಿಸಿ ಅಚ್ಚು ಹಾಕಿಸಿ ಪ್ರಕಟಿಸಿದ್ದನು. ಕಿಟ್ಟೆಲ್ ಅವರು ಇದರಿಂದ ತಮಗಾದ ಸಹಾಯವನ್ನು ಮುಕ್ತಕಂಠದಿಂದ ಒಪ್ಪಿಕೊಂಡಿದ್ದಾರೆ. ಆದರೆ ಈ ನಿಘಂಟು ಪ್ರಮಾಣಭೂತವಲ್ಲ, ಶಾಸ್ತ್ರೀಯವಾದುದಲ್ಲ. ಕೈಗೆ ಸಿಕ್ಕಿದ ಶಬ್ದಗಳೆಲ್ಲ ಇಲ್ಲಿ ಸೇರಿಕೊಂಡುಬಿಟ್ಟಿವೆ. ಈ ವಿಷಯಗಳನ್ನೆಲ್ಲ ಕಿಟ್ಟೆಲ್ ಅವರು ಪರಿಶೀಲಿಸಿ ಗ್ರಾಹ್ಯವಾದ ಅಂಶಗಳನ್ನು ಮಾತ್ರ ಸ್ವೀಕರಿಸಿದ್ದಾರೆ. ಅವರ ಪರಿಪಕ್ವವಾದ ಕನ್ನಡ ಪಾಂಡಿತ್ಯದ ಪ್ರತೀಕವಾಗಿದೆ ಅವರ ಈ ನಿಘಂಟು. ಇಂದಿಗೂ ಅದನ್ನು ಮೀರಿಸಲು ಕನ್ನಡಿಗರಿಗೆ ಸಾಧ್ಯವಾಗಿಲ್ಲ. ೧೮೯೪ ರಲ್ಲಿ ಪ್ರಕಟವಾದ ಈ ನಿಘಂಟು ಇವತ್ತಿಗೂ ಕನ್ನಡ ಭಾಷೆಯ ನಿಷ್ಕೃಷ್ಟವಾದ, ಪ್ರಮಾಣಭೂತವಾದ ಮಹಾ ಶಬ್ದಕೋಶವಾಗಿದೆ. ಇಷ್ಟು ಖಚಿತವೂ ಶಾಸ್ತ್ರೀಯವೂ ನಿಯಮ ಬದ್ಧವೂ ಆದ ನಿಘಂಟು ಭರತಖಂಡದ ಯಾವ ದೇಶಭಾಷೆಗೂ ಇಲ್ಲವೆಂದು ಬಲ್ಲವರು ಹೇಳುತ್ತಾರೆ. ಈ ಕೋಶದ ಪ್ರಶಂಸೆಯನ್ನು ಮಾಡುತ್ತಾ ಹುಲ್ಷ್ ಎಂಬ ಮಹಾ ಪಂಡಿತನು "His greatest scientific achievement" ಎಂದೂ "Will remain a *monumentum oer pernnium* of a noble life devoted to incessant earnest labour" ಎಂದೂ ಬರೆದಿದ್ದಾನೆ. ಆತನೇ ಇನ್ನೊಂದು ಸಂದರ್ಭದಲ್ಲಿ, ಕಿಟ್ಟೆಲ್ಲರ ಮರಣ ಆದ ಹೊಸದರಲ್ಲಿ, ಗ್ರೀಕ್ ನಾಟಕದಲ್ಲಿ ಕನ್ನಡ ಮಾತುಗಳನ್ನು ಕುರಿತು ಬರೆಯುತ್ತ "ಅಯ್ಯೋ, ಕಿಟ್ಟೆಲ್ ಅವರು ಇದ್ದಿದ್ದರೆ ಅವರನ್ನು ಕೇಳಬಹುದಾಗಿತ್ತು" ಎಂಬರ್ಥ ಬರುವಂತೆ "A high authority, to whom I would have gladly appealed is no more among us" ಎಂದು ಪರಿತಪಿಸಿದ್ದಾನೆ.

ಕಿಟ್ಟೆಲ್ ಅವರ ಕೊನೆಯ ಕೃತಿ ಇಂಗ್ಲೀಷಿನಲ್ಲಿ ಬರೆದ ಕನ್ನಡ ವ್ಯಾಕರಣ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಕನ್ನಡ ಭಾಷೆಯ ಅವಸ್ಥಾತ್ರಯಗಳ ವ್ಯಾವರ್ಣನೆ ಇಲ್ಲಿದೆ. ಇದು ಪ್ರಮಾಣವೂ ಅಧಿಕಾರಯುತವೂ ಆಗಿರುವ ಗ್ರಂಥ. ಇದಕ್ಕೆ ಪೀಠಿಕೆಯನ್ನು ೧೯೦೩ ನೆಯ ಇಸವಿ ಫೆಬ್ರವರಿಯಲ್ಲಿ ಅವರು ಬರೆದರು; ಅದೇ ವರ್ಷ ಡಿಸೆಂಬರಿನಲ್ಲಿ ಅವರು ದೈವಾಧೀನರಾದರು. ಈ ಗ್ರಂಥವನ್ನು ವಿಮರ್ಶೆ ಮಾಡುತ್ತ ಡಾ|| ಹುಲ್ಷ್ ಅವರು "Throughout the book we feel the master-hand of a mature scholar, whose deep erudition and love of his subject is blended with amiable modesty" ಎಂದು ಮೆಚ್ಚಿ ಬರೆದಿದ್ದಾನೆ. ಈ ಮಾತು ಹೊಗಳಿಕೆಯಲ್ಲ. ಕಿಟ್ಟೆಲ್ ಅವರ ಯೋಗ್ಯತೆಯನ್ನೂ, ವ್ಯಕ್ತಿಗುಣವನ್ನೂ, ಪಾಂಡಿತ್ಯವನ್ನೂ ಇದು ಸತ್ಯವಾಗಿ ಪ್ರತಿಬಿಂಬಿಸುತ್ತದೆ. ಅವರ

ಕನ್ನಡ ವ್ಯಾಕರಣ ಇಂದಿಗೂ ಅಭ್ಯಾಸಯೋಗ್ಯವಾದ ಪ್ರಮಾಣ ಗ್ರಂಥವಾಗಿ ಪ್ರಕಾಶಿಸುತ್ತಿದೆ.

ಕಿಟ್ಟೆಲ್ ಅವರು ಕನ್ನಡಕ್ಕೆ ಮಾಡಿದ ಮಹಾಸೇವೆ ಈ ಮೇಲೆ ಹೇಳಿದ ಗ್ರಂಥಗಳಲ್ಲಿ ಮೂರ್ತೀಭವಿಸಿ ಬೆಳಗುತ್ತಿದೆ. ಇಷ್ಟೇ ಅಲ್ಲದೆ ಸಂಶೋಧನಾತ್ಮಕವಾದ ಹಲವು ಲೇಖನಗಳು ದೊರೆಯುತ್ತವೆ. ೧೮೭೨-೧೮೯೯ ರವರೆಗೆ ಅವರು ಇಂಗ್ಲಿಷಿನಲ್ಲಿ ಬರೆದಿರುವ ೧೯ ಲೇಖನಗಳು ಇಂಡಿಯನ್ ಆಂಟಿಕ್ವರಿ ಎಂಬ ಪತ್ರಿಕೆಯಲ್ಲಿ ಸಿಕ್ಕುತ್ತವೆ. ಅವುಗಳನ್ನು ಓದಿದರೆ ಕಿಟ್ಟೆಲ್ ಅವರು ಎಂತಹ ಸಮಸ್ಯೆಗಳನ್ನು ಎತ್ತಿಕೊಳ್ಳುತ್ತಿದ್ದರು, ಅವನ್ನು ಹೇಗೆ ಬಿಡಿಸುತ್ತಿದ್ದರು, ಅವರ ಮಾರ್ಗ ಯಾವುದು—ಎಂಬಂಶಗಳು ಖಚಿತವಾಗಿ ತಿಳಿಯುತ್ತವೆ. ಅವುಗಳಲ್ಲಿ ಒಂದು ಲೇಖನ ದ್ರಾವಿಡ ಸಂಖ್ಯಾವಾಚಕಗಳನ್ನು ಕುರಿತದ್ದು; ಇನ್ನೊಂದು ಕರ್ಣಾಟಕದ ವೈಷ್ಣವ ದಾಸರನ್ನು ಪರಿಚಯ ಮಾಡಿಕೊಡುತ್ತದೆ; ಮತ್ತೊಂದು ಸಂಸ್ಕೃತ ಭಾಷೆಗೆ ಪ್ರವೇಶಿಸಿರುವ ದ್ರಾವಿಡ ಶಬ್ದಗಳನ್ನು ವಿವೇಚಿಸಿ ತೋರಿಸುತ್ತದೆ. ಹೀಗೆ ಕಿಟ್ಟೆಲ್ ಅವರಿಗೆ ಹಲವು ವಿಷಯಗಳಲ್ಲಿ ಇದ್ದ ಆಸಕ್ತಿಯನ್ನು ಈ ಲೇಖನಗಳು ತೋರಿಸಿಕೊಡುತ್ತವೆ. ಕರ್ಣಾಟಕ ಸಂಗೀತವನ್ನು ಕುರಿತು ನಿಜಗುಣಶಿವಯೋಗಿಗಳು ಹೇಳಿರುವ ಅಭಿಪ್ರಾಯಗಳನ್ನು ಬೇರೊಂದು ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ಕನ್ನಡದ ವಿಷಯದ ಮೇಲೆ ಜರ್ಮನ್ ಭಾಷೆಯಲ್ಲಿ ಅವರು ಲೇಖನಗಳನ್ನು ಬರೆದಿದ್ದರೂ ಬರೆದಿರಬಹುದು. ಆದರೆ ಅವು ಯಾವುವೆಂಬುದೂ ಎಲ್ಲಿ ಲಭ್ಯವೆಂಬುದೂ ತಿಳಿದಿಲ್ಲ. 'ಪರಮಾತ್ಮಜ್ಞಾನ' ಎಂಬೊಂದು ಪುಸ್ತಕವನ್ನು ಅವರು ಕನ್ನಡದಲ್ಲಿ ಬರೆದಿರುವಂತೆ ಪ್ರತೀತಿ ಇದೆ.

ಇಷ್ಟು ದೊಡ್ಡ ಸೇವೆಯನ್ನು ಕನ್ನಡಕ್ಕೆ ಮಾಡಿರುವ ಮಹನೀಯರು ಫರ್ಡಿನೆಂಡ್ ಕಿಟ್ಟೆಲ್ ಅವರು. ಶಾಸ್ತ್ರೀಯವಾದ ಮಾರ್ಗದಲ್ಲಿ ಕನ್ನಡ ವಿದ್ವತ್ತು ಬೆಳೆಯುವುದಕ್ಕೆ ಅವರು ಶ್ರಮಿಸಿದರು. ಆ ಶ್ರಮದ ಫಲವಾಗಿ ಇಂದು ಕನ್ನಡನಾಡು ನುಡಿ ಸಾಹಿತ್ಯಗಳನ್ನು ಹಲವು ದೃಷ್ಟಿಗಳಿಂದ ನೋಡಿ ವಿಮರ್ಶೆ ಮಾಡುವ ವಿದ್ವಾಂಸರ ಪರಂಪರೆಯೇ ಸೃಷ್ಟವಾಗಿದೆ. ಅವರ ಕಾಲಕ್ಕಿಂತ ಈಗ ಕನ್ನಡದ ವಿಷಯದಲ್ಲಿ ಹೆಚ್ಚು ಪರಿಜ್ಞಾನ ಉಂಟಾಗಿದೆ. ಇಂದಿನ ಪರಿಸ್ಥಿತಿಗೆ ಕಾರಣಭೂತರಾದವರಲ್ಲಿ ಕಿಟ್ಟೆಲ್ ಅವರು ಅಗ್ರಗಣ್ಯರಾದ ಪ್ರಾಚೀನರು; ಕನ್ನಡದ ಋಷಿಗಳಲ್ಲಿ ಅವರು ಒಬ್ಬರು. ಜರ್ಮನಿಯಲ್ಲಿ ಹುಟ್ಟಿದ ಅವರು ಕನ್ನಡಿಗರಾಗಿ ಮೆರೆದರು. ಅವರನ್ನು ಸ್ಮರಿಸಿಕೊಳ್ಳುವುದು ಪವಿತ್ರವಸ್ತುವೊಂದನ್ನು ಧ್ಯಾನಿಸಿದಂತೆ ಪುಣ್ಯಕರವಾದದ್ದು.

ಡಿ. ಎಲ್. ಎನ್.

ನಾಡ ಹಿರಿಯಕ್ಕರೆ

ದಿನದಿನಕೂ ಕಳೆಗೊಳ್ಳುವ ಜನದಿಂ ಕಳಕಳಿಸುತ್ತಿಹ ನಾಡೇ, ನಿನ್ನ
ಮನೆಯುವರೆಲ್ಲರ ಮಣಿಗೆಯು ಕೊಳ್ಳುತ ನುತಿನುಡಿಯರಳನು ಸೂಡೇ || ಪ ||

ಬಿಡುಗಡೆಯೊಳು ಸಂದ ಪೌರುಷತೇಜ ನೆರೆಯುವರೆಲ್ಲರ ಕಣ್ಸೆಳೆಯೆ,
ಕೊಡುಗೈಯಲ್ಲದೆ ಕೊಳುಗೈ ಇರದಂದ ಸಿರಿಗರೆವುದ್ಯಮ ಕೈವಿಡಿಯೆ,
ಪಡುವಣರಿವಿನ, ದೃಶ್ಯಾಂಜನವಿಟ್ಟ ದಿಟ್ಟಿಗೆ ನಿಧಿಗಳ ನೆಲ ತೆರೆಯೆ,
ಕಡಲ ಕಾಮಿನಿಯರು ನಾಡತಾಯಿದಿರಾಗಿನಿಂತು ಕರೆದೆಡೆ ಸರಿಯೆ,
ಬಡವನಿಲ್ಲದ ಬಲ್ಲಿದ ಮಹಿಮೆಯನಳಿಯದ ತೆರದೊಳು ನಡೆವ ನಾಡೇ, ನಿನ್ನ
ಕುಡಿಯುವರೆಲ್ಲರ ಮಣಿಗೆಯು ಕೊಳ್ಳುತ ನುತಿನುಡಿಯರಳನು ಸೂಡೇ. || ದಿನದಿನಕೂ ||

ನೆಲದಿ ಸಸ್ಯಾವಳಿ ಮನದಿ ದೇವಾವಳಿ ಇರವಿರವೊಳು ಪ್ರೇಮದೀಪಾವಳಿ ;
ಹೊಲಬುದಪ್ಪದ, ನಡೆನುಡಿ ನಮ್ಮದು ; ನೆರೆಹೊರೆ ಜನಕೆಮ್ಮ ನೇಹದಾಳಿ ;
ಅಳಲ ತಾರದ ಗೆಲವಿದು ನಮ್ಮದು ; ಕರುಕಿಡದಾಸೆಯು ಸೊಡರೆಮ್ಮದು ;
ಬಲುಹಿಂದಣ ನಾಡು, ಇಂದೆ ಹುಟ್ಟಿದ ನಾಡು, ಹೊಚ್ಚ ಹೊಸಹಾಡು
ದೈವಕಿದು ;
ಎಂದಚ್ಚರಿಯೊಳು ಬಲ್ಲವರೊಸಗೆಯು ನುಡಿಗಳ ನುಡಿವಂಥ ನಲ್ಮೆ ನಾಡೆ, ನಿನ್ನ
ಚಂದಕೆ ಮರುಳಾದೆಲ್ಲರ ಮಣಿಗೆಯು ಕೊಳ್ಳುತ ನುತಿನುಡಿಯರಳನು ಸೂಡೇ.
|| ದಿನದಿನಕೂ ||

ರಸದಾಕಾಶದಿ ಹೃತ್ತೇಜದ ಗೋಲ ಉಜ್ವಲಿಸುವಪರಿ ತೇಲಿಸುವ,
ಪಶುಪಕ್ಷಿ ಜನ ಮಲೆ ಹೊಳೆ ನೆಲಗಳ ಬೇರೊಂದು ಹೊಳಹೊಳು ಚಾಳಿಸುವ,
ಹುಸಿಯಲ್ಲಾನಂದ ವಿಷಯುವಿದೆನ್ನುವೊಲೇಳು ಲೋಕಂಗಳ ಬಾಳಿಸುವ,
ಕುಶಲವಾಣಿಯೊಳಮೃತಭಾವಂಗಳ ಪಸದನವನು ಲೋಕ ನಲಿಯಲೀವ
ಋಷಿ ಮಾಮುನಿ ಧೀರ ಕವಿಭಕ್ತ, ಕಣಸಿಗರವಿರತವುದಿಸುವ ತಾಯಿನಾಡೇ, ನಿನ್ನ
ಬಸಿರ ಪಸಿಮೆಯೊಳಿಳೆಯೇ ಹಸನಂದ ಜಗವುಲಿವೊಳ್ನುಡಿಯರಳ ಸೂಡೇ.
|| ದಿನದಿನಕೂ ||

ವಿಷಮ ಸಮಯದೊಳಸಮ ಶಮವಾಂತು ಅಸವಳಿಯದೆ ನಿಂತ ನೀನೆ ಸ್ಥಿರೆ,
ವಿಷವ ತಳೆವುದರೊಳು ನೀನೆಧಾರಿಣೆ, ಕೆಡುಕಗು ಕರುಣಿಸುವಂಥ ಕ್ಷಮೆ,
ವಿಷಯ ಭೋಗಕು ಮಿಗಿಲಿನ ಭೋಗದ ಸೆಲೆಯರಿತಿಂದ್ರಿಯ ಜಯದೊಳಾತ್ಮ
ಕೃಷಿಯೊಳು ನಿಂತರ ಅಗ್ರಪೀಠದೊಳಿಟ್ಟು ಉತ್ಸವಗೊಳ್ಳುವ ನೀನೆ ಮಹೀ
ಎದೆಯೊಳಾನಂದ ಕೊರೆಯಾಗದೊಲು ಪೊರೆದೆಂದುಮುಚ್ಚಳಿಸುವ ಮೇಲ್ಮೆ
ನಾಡೇ, ನಿನ್ನ
ಹದವರಿತೊರೆಯಲು ಬಲ್ಲೆನೆ, ಮಣಿಮಣಿದುಲಿವೀ ನಲ್‌ನುತಿಯರಳ ಸೂಡೇ,
ದಿನದಿನಕೂ ಕಳೆಗೊಳ್ಳುವ ಜನದಿಂ ಕಳಕಳಿಸುತ್ತಿಹ ನಾಡೇ, ನಿನ್ನ
ಮನೆಯುವನೊಲಿದಿಂತು ಹಿರಿಯಕ್ಕರೆಯೊಳು ಮಣಿದುಲಿವೀ ನುತಿನುಡಿಯ
ಸೂಡೇ. ‖ ದಿನದಿನಕೂ ‖

ಪು. ತಿ. ನ.

---

* ಆಕಾಶವಾಣಿಯ ಕೃಪೆಯಿಂದ

ಕಾವ್ಯಾವಲೋಕನ

ಕನ್ನಡ ಕುಲದೀಪ ಬಸವಣ್ಣನವರ ಜೀವನ—ಲೇಖಕರು : ಶ್ರೀ ಸಿಂಪಿ ಲಿಂಗಣ್ಣ ; ಪ್ರಕಾಶಕರು : ಮಿಂಚಿನ ಬಳ್ಳಿ ಚಾವಡಿ, ಧಾರವಾಡ; ಪುಟಗಳು ಕ್ರೌ. ಅ. ಪು. ೧೩೬ ; ಬೆಲೆ, ರೂ. ೧-೦-೦.

ಬಸವಣ್ಣನವರ ದಿವ್ಯ ಜೀವನ ಮತ್ತು ವಚನಗಳು ರತ್ನದಗಣಿಯಿದ್ದಂತೆ. ಎಂದಿಗೂ ಕುಂದದ, ನಿತ್ಯನೂತನವಾದ ಅದರ ಕಾಂತಿಯನ್ನು ಅಷ್ಟೋ ಇಷ್ಟೋ ಪ್ರತಿಫಲಿಸುವಕೃತಿಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ; ಆದರೂ ಅವು ಸಾಲವು: ಬಸವಣ್ಣನವರಿಗೆ ಒಂದಲ್ಲ, ಎರಡಲ್ಲ, ನೂರು ಮುಖಗಳುಂಟು. ಅವರವರ ಮನೋಸಂಸ್ಕಾರಕ್ಕೆ, ಅನುಭವಕ್ಕೆ ತಕ್ಕಂತೆ ಬಸವಣ್ಣನವರ ಬದುಕು ಅರ್ಥವಾಗುತ್ತದೆ. ಸಿಂಪಿ ಲಿಂಗಣ್ಣನವರು ತಮ್ಮದೇ ಆದ ದೃಷ್ಟಿಯಿಂದ ಬಸವೇಶ್ವರರ ವಿವಿಧ ಮುಖಗಳನ್ನು ಅರ್ಥಮಾಡಿಕೊಳ್ಳಲೆಳಸಿ ಸಫಲರಾಗಿದ್ದಾರೆ. ಬಸವಣ್ಣನವರನ್ನು ಕುರಿತ ಕನ್ನಡ ಗ್ರಂಥಗಳಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ.

ಇಲ್ಲಿ ಚಿತ್ರಿತವಾಗಿರುವುದು ಬಸವಣ್ಣನವರ ಬಾಹ್ಯ ಜೀವನವಲ್ಲ; ಅಂತರಂಗದ ಪುಣ್ಯಜೀವನ, ಅದು ಅವರ ನಡೆನುಡಿಗಳಲ್ಲಿ ಅರಳಿ ನಿಂತು ಕಂಪು ಬೀರಿದ ಪರಿ. ಲೇಖಕರು ಬಸವಣ್ಣನವರ ಅಸಾಧಾರಣ ವ್ಯಕ್ತಿತ್ವ ಮತ್ತು ಅಮೃತ ಸಂದೇಶದ ಸಾಂದ್ರ ಪರಿಚಯವನ್ನು ಅವರ ವಚನಗಳ ಮೂಲಕವೇ ಮನಮುಟ್ಟುವಂತೆ ಮಾಡಿ ಕೊಡುವ 'ರಸೈಕ ಸಾಹಸ'ದಲ್ಲಿ ಯಶಸ್ವಿಯಾಗಿದ್ದಾರೆ. 'ಮುನ್ನುಡಿ'ಯಲ್ಲಿ ಬೇಂದ್ರೆಯವರಾಡಿರುವಂತೆ "ಬಸವಣ್ಣನವರ ಜೀವನ ಸತ್ವವನ್ನು ಕುರಿತು ಬರೆದೀ ಕೃತಿ ಲೇಖಕರ ಹೃದಯದಲ್ಲಿ ಬಹು ಕಾಲ ಬೆಳೆದು ಬಂದ ಅನುಸಂಧಾನದ ಫಲ" ಗ್ರಂಥಕರ್ತರ ವಿಶಾಲ ಮನೋಭಾವ, ಸಂಸ್ಕಾರ, ವಿಚಾರಪಕ್ವತೆ, ಬರವಣಿಗೆಯ ಹದ—ಎಲ್ಲವೂ ಇಲ್ಲಿ ಸುವ್ಯಕ್ತವಾಗಿವೆ. ಶೈಲಿ ಸರಳಸುಂದರವಾಗಿದೆ.

"ಮಾಮೇಕಂ ಶರಣಂ ವ್ರಜ—ಎಂಬ ಅಂತರಾತ್ಮನ ವಾಣಿಯೊಂದನ್ನೇ ಆಲಿಸಿದನಲ್ಲದೆ ಕುಲ, ಶೀಲ, ಸಮಾಜ ಅಥವ ಮಾನವನ್ನೆಲ್ಲ ಆತ್ಮಯಜ್ಞದಲ್ಲಿ ಹವನ ಮಾಡಿದನು," "ಬಸವಣ್ಣನಿಗೆ ಮುಕ್ತಿ ಬೇಕಿದ್ದಿಲ್ಲ, ಮುಕ್ತ ಜೀವನ ಬೇಕಿತ್ತು," "ಬಸವಣ್ಣನಲ್ಲಿ ನಮಗೆ ಬೇಕಾದ ಮಾನವ ಬಾಂಧವ್ಯವು ಬೇಕಾದಷ್ಟಿದೆ"—ಮುಂತಾದ ಅದೆಷ್ಟೋ ಮಾತುಗಳ ಔಚಿತ್ಯ, ಸೊಗಸು ಪರಿಭಾವಿಸಿದಷ್ಟೂ ಹೆಚ್ಚುತ್ತದೆ. "ಎತ್ತಿನ ಮೂರ್ತಿಯಾಗಿ ಗೇಣುಗುಡಿಯಲ್ಲಿ ಕುಳಿತ ಬಸವಣ್ಣನು ಎಂದು ಬಯಲಿಗೆ

ಬಂದನೋ, ವಿಭೂತಿಯು ರಥಗಳೊಳಗಿನಿಂದ ಎಂದು ಆತನ ವಚನಗಳಿಗೆ ಬಿಡುಗಡೆ ಆಯಿತೋ ಅಂದೇ ಬಸವಣ್ಣನು ಕನ್ನಡಿಗರ ಸ್ವತ್ತು ಆದನು," "ಆತನನ್ನು ಕಟ್ಟಿ ನಿಲ್ಲಿಸುವ ಸಂಕುಚಿತ ಭಾವನೆಯು ಬಂಧನಗಳು ಇಲ್ಲವಾದರೆ ಮಾತ್ರ ದೇವನೊಲಿದ ಜಾತಿಯ ಬಸವಣ್ಣನು ವಿಶ್ವವ್ಯಾಪಿಯಾಗಬಲ್ಲನು"—ಮೊದಲಾದ ಮನನ ಯೋಗ್ಯ ವಾದ ವಾಕ್ಯಗಳು ಈ ಕೃತಿಯ ತೂಕವನ್ನು ಏರಿಸಿವೆ. ಒಟ್ಟಿನಲ್ಲಿ, ಪ್ರತಿಯೊಬ್ಬ ಕನ್ನಡಿಗನೂ ಓದಿ ಲಾಭ ಪಡೆಯಬಹುದಾದ ಒಂದು ಅಮೂಲ್ಯ ಪುಸ್ತಕವಿದು.

—ಸಿ. ಪಿ. ಕೆ.

* * *

"ಶ್ರೀಶೈಲ ಪಂಡಿತಾರಾಧ್ಯಚರಿತ್ರಮು"—(ತೆಲುಗು)—ಗ್ರಂಥಕರ್ತ: ಪುಲ್ಲಕವಿ; ಸಂಪಾದಕರು: ೧ ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು, (ಮೈಸೂರು), ೨ ಶ್ರೀ ಜ. ಟಿ. ಅಕ್ಕುಲಯ್ಯದೀಕ್ಷಿತರು (ಮದನಪಲ್ಲಿ); ಪ್ರಕಾಶಕರು: ಶ್ರೀ. ಜ. ನಿ. ಪುಸ್ತಕ ಭಂಡಾರ, ನಂ. ೪೯, ಹೆಚ್. ಬಿ. ಸಮಾಜಾ ರೋಡ್, ಬೆಂಗಳೂರು ೪; ಪುಟಗಳು ೩೭೬; ಬೆಲೆ, ರೂ. ೫-೦-೦.

ಇದು ೧೮ ನೇ ಶತಮಾನದಲ್ಲಿದ್ದ ಪುಲ್ಲಕವಿ (ಪುಲ್ಲಯ್ಯ) ಎಂಬ ಕವಿ ತೆಲುಗಿನಲ್ಲಿ ಪ್ರಾಚೀನ ಕಾವ್ಯಗಳ ಪರಂಪರೆಯಲ್ಲಿ ರಚಿಸಿರುವ ತೆಲುಗು ಚಂಪೂಕಾವ್ಯ. ಎಲ್ಲಾ ವೀರಶೈವ ಕಾವ್ಯಗಳ ಹಾಗೆ ಇದು ಕೂಡಾ ಶಿವಭಕ್ತರ ಮಾಹಾತ್ಮ್ಯವನ್ನೂ, ಪವಾಡಗಳನ್ನೂ ಚಿತ್ರಿಸುತ್ತದೆ.

ಸಂಪಾದಕರಾದ ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು, ಕೀ॥ಶೇ॥ ಜಿ. ಟಿ. ಅಕ್ಕುಲಯ್ಯದೀಕ್ಷಿತರು ಶ್ರಮಪಟ್ಟು ಅನೇಕ ಓಲೆಯಗರಿಯ ಪ್ರತಿಗಳನ್ನೂ ಇತರ ಸಂಬಂಧಪಟ್ಟ ಅನೇಕ ಗ್ರಂಥಗಳನ್ನೂ ಸಂಪಾದಿಸಿ ಸಂಶೋಧನೆ ಮಾಡಿ ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ವಿಪುಲವಾದ ಪೀಠಿಕೆಗಳನ್ನು ತೆಲುಗಿನಲ್ಲಿಯೂ ಕನ್ನಡದಲ್ಲಿಯೂ ಕೊಟ್ಟಿರುತ್ತಾರೆ.

ಕಾವ್ಯವು ಪ್ರೌಢವಾದ ಚಂಪೂರಚನೆಯಲ್ಲಿದೆ. ಭಾಷೆ ಮೃದು ಮಧುರವಾದ ಶೈಲಿಯಿಂದಲೂ ಗಂಭೀರವಾದ ಅರ್ಥ ಸೌಂದರ್ಯದಿಂದಲೂ ಕಂಗೊಳಿಸುತ್ತದೆ. ಪ್ರಾಚೀನ ತೆಲುಗು ಕವಿಗಳ ಸಾಂಪ್ರದಾಯಕವಾದ ವೃತ್ತಗಳಲ್ಲಿ, ಕಂದ, ಸೀಸ ಪದ್ಯ ಮತ್ತು ಗದ್ಯಗಳಿಂದ ಕೂಡಿದೆ.

ಪಂಡಿತಾರಾಧ್ಯಚರಿತ್ರೆಯನ್ನು ಪಾಲ್ಕುರಿಕೆ ಸೋಮನಾಥನು (೧೨ ನೇ ಶತಮಾನ) ತೆಲುಗು ದ್ವಿಪದಿ ಛಂದಸ್ಸಿನಲ್ಲಿ ಬರೆದಿದ್ದಾನೆ. ಇದನ್ನೇ ಸಂಸ್ಕೃತದಲ್ಲಿ

ಗುರುರಾಜಕವಿ ಭಾಷಾಂತರಿಸಿದ್ದಾನೆ. ಇದರಿಂದ ಗುರುಭಕ್ತ ಆಂಡಾರು ಚರಿತ್ರೆಯನ್ನು ತೆಗೆದುಕೊಂಡು ೧೬೫೦ ರಲ್ಲಿ ಪ್ರಾಸಭೂಷಣ ಪೆಮ್ಮಿಶೆಟ್ಟಿ ಎಂಬ ಕವಿ ಷಟ್ಪದಿಗಳಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇದು ಇನ್ನೂ ಪ್ರಕಟವಾಗಿಲ್ಲ. ಓಲೆಯಗರಿ ಪ್ರತಿ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿದೆ. ಇದಲ್ಲದೆ ದೇವರ ದಾಸಿಮಯ್ಯನು ಒಂದು ಪಂಡಿತಾರಾಧ್ಯಚರಿತ್ರೆಯನ್ನು ಬರೆದಿರುವುದಾಗಿ ಸಂಪಾದಕರು ಹೇಳಿದ್ದಾರೆ. ತೆಲುಗಿನ ಕವಿಸಾರ್ವಭೌಮನಾದ ಶ್ರೀನಾಥ ಕವಿಯು ಪಂಡಿತಾರಾಧ್ಯ ಚರಿತ್ರೆಯನ್ನು ಬರದಿದ್ದನೆಂದು ಪ್ರತೀತಿ ಇದೆ. ಆದರೆ ಅದು ಸಿಕ್ಕಿಲ್ಲ. ಫುಲ್ಲಕವಿ ರಚಿಸಿರುವ ಕೃತಿಯಲ್ಲಿ ಹೆಚ್ಚಾಗಿ ಶ್ರೀಶೈಲ ಪೀಠಾಧಿಪತಿಗಳ ವಿಚಾರವಾಗಿರುವುದರಿಂದ ಇದಕ್ಕೆ "ಶ್ರೀಶೈಲ ಪಂಡಿತಾರಾಧ್ಯಚರಿತ್ರೆ" ಎಂಬ ಹೆಸರು ಉಚಿತವಾಗಿದೆ.

"ಅನುಬಂಧ"ದಲ್ಲಿ ಸಂಪಾದಕರು ಈ ಗ್ರಂಥದಲ್ಲಿ ಬರುವ ತೆಲುಗು ದೇಶದ ಊರುಗಳು, ಕರ್ನಾಟಕದ ಊರುಗಳು, ಪೀಠಾಧಿಪತಿಗಳಿಂದ ಶಿವದೀಕ್ಷೆಯನ್ನು ಸ್ವೀಕರಿಸಿದ ಜಾತಿಗಳ ಹೆಸರುಗಳು, ಲಿಂಗಧಾರಣೆ ಇಲ್ಲದೆ ಶಿಷ್ಯರಾದವರು, ಶ್ರೀಶೈಲ ಸೂರ್ಯಸಿಂಹಾಸನ ಪರಂಪರೆಗೆ ಸೇರಿದವರ ಹೆಸರುಗಳು ಮುಂತಾದ ಅನೇಕ ವಿಷಯಗಳನ್ನು ಕೊಟ್ಟಿದ್ದಾರೆ.

ಇದು ಬೆಂಗಳೂರಿನಲ್ಲಿ ಮೂರು ಮುದ್ರಣ ಶಾಲೆಗಳಲ್ಲಿ ಮುದ್ರಿತವಾದುದರಿಂದಲೂ ತೆಲುಗು ಪುಸ್ತಕದ ಮುದ್ರಣವು ಇವರಿಗೆ ವಾಡಿಕೆ ಇಲ್ಲವಾದುದರಿಂದಲೂ ಕೆಲವು ಮುದ್ರಣ ಸ್ಖಾಲಿತ್ಯಗಳುಂಟು. ಇವನ್ನು ಬಿಟ್ಟರೆ ಕಾವ್ಯವು ಚೆನ್ನಾಗಿದೆ. ವೀರಶೈವ ಮತದವರಲ್ಲದೆ ತೆಲುಗು ಸಾಹಿತ್ಯದ ಪರಿಚಯವಿರುವವರೆಲ್ಲರೂ ಓದಿ ಕಾವ್ಯನಂದನವನ್ನು ಪಡೆಯಬಹುದು.

ವಿದ್ವಾನ್ ಕೆ. ಸುಬ್ಬರಾಮಪ್ಪ

*
* *

ಸಾಮಾನ್ಯ ರೋಗಗಳು—ಲೇಖಕರು : ಡಾ|| ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್. ; ಪ್ರಕಾಶಕರು : ಉಡಪಿಯ ಕರ್ಣಾಟಕ ಸಂಘ ; ಕ್ರೌನ್ ಅಷ್ಟ ಪುಟಗಳು ೨೮+೬ ; ಬೆಲೆ, ಒಂದು ರೂಪಾಯಿ.

ಡಾ|| ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್. ಅವರ 'ಸಾಮಾನ್ಯ ರೋಗಗಳು' ಎಂಬ ಈ ಪುಸ್ತಕವು ಸ್ವಾರಸ್ಯವಾಗಿ ಬರೆಯಲ್ಪಟ್ಟಿದೆ. ಸಾಮಾನ್ಯ ಜನರಿಗೆ ಸಾಮಾನ್ಯ ರೋಗಗಳ ಅರಿವನ್ನು ಕೊಡುವ ಅವರ ಈ ಪ್ರಯತ್ನವು ಸ್ತುತ್ಯಾರ್ಹವಾದುದು. ಜನರು ಇದನ್ನು ಓದಿ ಸಾಮಾನ್ಯ ರೋಗಗಳ ವಿಚಾರವಾಗಿ ಮುನ್ನೆಚ್ಚರಿಕೆ

ಯನ್ನು ತೆಗೆದುಕೊಳ್ಳಲು ಅನುಕೂಲವಾಗಿದೆ. ಕನ್ನಡದಲ್ಲಿ ಇಂಥ ಪುಸ್ತಕಗಳ ಕೊರತೆಯನ್ನು ನೀಗಿಸಲು ಡಾ|| ಐತಾಳರು ಸಹಾಯಮಾಡಿದ್ದಾರೆ. ಇಂತಹ ಪುಸ್ತಕಗಳು ಕನ್ನಡದಲ್ಲಿ ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರುವಂತಾಗಲೆಂದು ಹಾರೈಸುತ್ತೇನೆ.

ಡಾ|| ಎ. ದಯಾಕರ

* * *

ಋಕ್ಸಂಹಿತೆ ಭಾಗ ೧—ವಿಶ್ವಸಾಮರಸ್ಯ—ಅದರ ಅನುಸಂಧಾನ ವಿಧಾನ (*Cosmic Harmony in the Rigveda*) ಜಿ. ಎನ್. ಚಕ್ರವರ್ತಿ, ಎಂ. ಎ. ; ಪ್ರಕಾಶಕರು : ತ. ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು ; ಪುಟಗಳು ಕ್ರೌನ್ ಅಷ್ಟಪತ್ರ x + ೧೮೮ ; ಬೆಲೆ, ರೂ. ೨-೦-೦.

' ಸಕಲ ದೇವತಾನಾಂ ಧರ್ಮಸ್ಯಾ ಪರಬ್ರಹ್ಮತತ್ತ್ವಸ್ಯ ಚ ಪ್ರತಿಪಾದಕಂ ವೇದಮನುಚ್ಚಾರ್ಯ ಪರನಿಂದಾನ್ಯತಕಲಹಹೇತು. ಲೌಕಿಕೀಂವಾರ್ತಾಂ ಸರ್ವತ್ರೋಚ್ಚಾರಯತಃ ಸ್ಪಷ್ಟ ಏವ ವಾಚಿ ಭಾಗ್ಯಾಭಾವ:' ಎಂಬ ಋಕ್ಸಂಹಿತಾ ಭಾಷ್ಯ ಭೂಮಿಕೆಯಲ್ಲಿನ ವಾಕ್ಯದಲ್ಲಿ ಸಾಯಣಾಚಾರ್ಯರು ವೇದದಲ್ಲಿ ಸಕಲ ದೇವತೆಗಳ, ಧರ್ಮದ ಮತ್ತು ಪರಬ್ರಹ್ಮದ ಎಂದರೆ ಅಧ್ಯಾತ್ಮ ವಿಷಯಕವಾದ ತತ್ತ್ವಗಳು ಪ್ರತಿಪಾದಿಸಲ್ಪಟ್ಟಿರುವುವೆಂದು ಹೇಳಿರುತ್ತಾರೆ. ವೇದವು ಮಂತ್ರ ಮತ್ತು ಬ್ರಾಹ್ಮಣ ಎಂದು ಇಬ್ಬಗೆಯಾಗಿರುವುದು. ಬ್ರಾಹ್ಮಣ ಭಾಗದಲ್ಲಿ ಆಧ್ಯಾತ್ಮಿಕ ತತ್ತ್ವಗಳು ನಿರೂಪಿಸಲ್ಪಟ್ಟಿರುವುವೆಂಬುದು ನಿಜವಾದಾಗ್ಯೂ ವೇದದ ಮಂತ್ರಭಾಗದಲ್ಲಿ, ತತ್ರಾಪಿ ಋಗ್ವೇದ ಸಂಹಿತೆಯಲ್ಲಿ ದೇವತಾತತ್ತ್ವವೇ ಪ್ರಾಯಿಕವಾಗಿ ನಿರೂಪಿಸಲ್ಪಟ್ಟಿರುವುದೆಂದೂ ಆಧ್ಯಾತ್ಮಿಕ ತತ್ತ್ವಗಳನ್ನು ನಿರೂಪಿಸುವ ಋಕ್ಕುಗಳು ಅತಿ ವಿರಳವೆಂದೂ ಅವು ಅರ್ವಾಚೀನವೆಂದೂ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯ. ಪ್ರಕೃತ ಗ್ರಂಥದ ಒಂದನೇ (ಪೀಠಿಕಾ) ಪ್ರಕರಣದಲ್ಲಿ ಶ್ರೀ ಚಕ್ರವರ್ತಿಗಳು ಈ ಅಭಿಪ್ರಾಯವು ಸಮಂಜಸವಾಗಿಲ್ಲವೆಂದೂ ಅನೇಕ ಸೂಕ್ತಗಳಲ್ಲಿ ದೇವತಾಸ್ತುತಿರೂಪವಾದ ಮಂತ್ರಗಳೊಡನೆ ಆಧ್ಯಾತ್ಮಿಕ ತತ್ತ್ವಗಳನ್ನು ನಿರೂಪಿಸುವ ಮಂತ್ರಗಳೂ ಬೆರತುಹೋಗಿರುವುವೆಂದೂ ಇಂತಹ ಮಂತ್ರಗಳು ಅರ್ವಾಚೀನವಾದ, ಈಚೆಗೆ ಸೇರಿಸಲ್ಪಟ್ಟ, ಮಂತ್ರಗಳೆಂದು ನಿರ್ಧರಿಸುವದಕ್ಕೆ ಸಾಧ್ಯವಿಲ್ಲವೆಂದೂ ಹೇಳಿದ್ದಾರೆ.

ಎರಡನೇ ಪ್ರಕರಣವು ಈಶ್ವರನನ್ನು, ಮೂರನೇದು ವಿಶ್ವ ನಿಯಮ ಎಂದರೆ (೧) ಋತ, ಮತ್ತು (೨) ಯಜ್ಞವನ್ನು ಕುರಿತು ಬರೆಯಲ್ಪಟ್ಟಿದೆ. " ಈ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಈಶ್ವರನೇ ಪ್ರಜಾಪತಿ. ಆದಿತ್ಯ ಮೊದಲಾದ

ಹೆಸರುಗಳಿಂದ ಮಂತ್ರಗಳಲ್ಲಿ ವ್ಯವಹರಿಸಲ್ಪಟ್ಟಿದ್ದಾನೆ. ಅಗ್ನಿ, ವಾಯು, ಇಂದ್ರ ಮೊದಲಾದ ದೇವತೆಗಳೆಲ್ಲರೂ ಈ ಪ್ರಜಾಪತಿಯ ವಿಭೂತಿಗಳು. ಪ್ರಜಾಪತಿಯ ನಿಯಮಕ್ಕನುಸಾರವಾಗಿ ಅವರು ಈ ವಿಶ್ವ ವ್ಯಾಪಾರವನ್ನು ನಡೆಸುತ್ತಾರೆ. ಪ್ರಜಾಪತಿಯು ಏರ್ಪಡಿಸಿರುವ ವಿಶ್ವ ನಿಯಮಕ್ಕೆ 'ಋತ' ಎಂದು ಹೆಸರು. ದೇವತೆಗಳೆಲ್ಲರೂ ಋತಪಾಲಕರು. ವಿಶ್ವ ವ್ಯಾಪಾರಕ್ಕೆ ಮನುಷ್ಯನ ಸಹಕಾರವೂ ಬೇಕಾಗಿರುವದರಿಂದ ಮನುಷ್ಯರೂ ವಿಶ್ವ ನಿಯಮವನ್ನು ಪಾಲಿಸುತ್ತಾರೆ. ಮನುಷ್ಯನು ಮಾಡಬೇಕಾದ ಕಾರ್ಯಕ್ಕೆ ಯಜ್ಞವೆಂದು ಹೆಸರು" ಎಂದು ಶ್ರೀ ಚಕ್ರವರ್ತಿಗಳು ಹೇಳಿ ನಿರೂಪಿಸಿ ಈ ನಿರೂಪಣೆಗೆ ಆಧಾರವಾಗಿ ಅನೇಕ ಋಕ್ಕುಗಳನ್ನೂ ಉಪನಿಷದ್ವಾಕ್ಯಗಳನ್ನೂ ಬೃಹದ್ದೇವತೆಯೇ ಮೊದಲಾದ ಇತರ ಗ್ರಂಥಗಳನ್ನೂ ಉದಾಹರಿಸಿದ್ದಾರೆ.

ನಾಲ್ಕನೇ ಪ್ರಕರಣದಲ್ಲಿ ಅವರು ಈಶ್ವರ ನಿಯಮಕ್ಕನುಸಾರವಾಗಿ ಮನುಷ್ಯನು ಯಜ್ಞವನ್ನು ಮಾಡುವುದರಿಂದ ಅವನಿಗೆ ಪುರುಷಾರ್ಥಗಳು—ಎಂದರೆ ಆರ್ಥಿಕ ಸಂಪತ್ತೂ—ಅಧ್ಯಾತ್ಮ ಸಂಪತ್ತೂ—ಸಿದ್ಧಿಸುವುವೆಂದು ಹೇಳಿ ಕೊನೆಯದಾದ ಐದನೇ ಪ್ರಕರಣದಲ್ಲಿ ಗಾಯತ್ರಿಯೇ ಪರಮ ಪುರುಷಾರ್ಥಸಾಧನವೆಂದು ನಿರೂಪಿಸಿದ್ದಾರೆ.

ಋಗ್ವೇದದಲ್ಲಿ ಆಧ್ಯಾತ್ಮಿಕ ಮಂತ್ರಗಳಿರುವುವೆಂಬುದು ಹೊಸದೇನು ಅಲ್ಲ. ಸಾವಿರಾರು ವರ್ಷಗಳ ಹಿಂದೆ ನಿರುಕ್ತವನ್ನು ಬರೆದ ಯಾಸ್ಕಮುನಿಯು ಆ ಗ್ರಂಥದ ಏಳನೇ ಅಧ್ಯಾಯದ ಆರಂಭದಲ್ಲಿ ಈ ವಿಷಯವನ್ನು ಹೇಳಿದ್ದಾನೆ.

ಋಗ್ವೇದ ಮಂತ್ರಗಳ ಒಳಗೆ ಹುದುಗಿರುವ ಆಧ್ಯಾತ್ಮಿಕ ತತ್ತ್ವಗಳನ್ನು ಹೊರಗೆಡಹಿ ಕನ್ನಡಿಗರಿಗೆ ತಿಳಿಯುವಂತೆ ಹೀಗೆ ಲೇಖಕರು ಮಾಡಿರುವ ಪ್ರಯತ್ನವು ಶ್ಲಾಘನೀಯವಾದದ್ದು. ಅವರು ಸಂಕಲ್ಪಿಸಿರುವ ಈ ಗ್ರಂಥದ ಇತರ ಸಂಪುಟಗಳು ಶೀಘ್ರದಲ್ಲಿ ಹೊರಬೀಳಲೆಂದು ನಾವು ಹಾರೈಸುತ್ತೇವೆ.

ಈ ಪುಸ್ತಕದಲ್ಲಿ ಉದಾಹೃತವಾಗಿರುವ ಕೆಲವು ಮಂತ್ರಗಳಲ್ಲಿ ತಪ್ಪಿವೆ. ೧೦,೮೫,೧ ನೇ ಮಂತ್ರವನ್ನು (ಪುಟ ೬೧) ಋತೇನಾದಿತ್ಯಾ **ಸ್ತಿಷ್ಠಂತಿ** ಎಂದೂ, ೧೦,೭೧,೭ ನೇ ಮಂತ್ರವನ್ನು (ಪುಟ ೧೧೩) 'ಆದ ಘ್ನಾಸ ಉಪಕಕ್ಷಾಸ ಉತ್ವೇ . . .' ಎಂದೂ ತೈ. ಆ. ೧, ೧೪. ೧ ರಲ್ಲಿ (ಪುಟ ೧೨೧) 'ಸಸರ್ವೇಷಾಂ **ಭೂತಾನಾಂ** ಪ್ರಾಣಾನಾದಾಯೋದೇತಿ' ಎಂದೂ. ೧೦,೧೨೫ ನೇ ಸೂಕ್ತದಲ್ಲಿ (ಪುಟ ೧) 'ಯಃಈಂಶೃಣವೋ**ತ್ಯುಕ್ಥಂ**' ಎಂದೂ ಓದಿಕೊಳ್ಳಬೇಕು.

ಅ. ವೆ.

ವಸ್ತುಕೋಶ*

ಕನ್ನಡದ ಪ್ರಸಿದ್ಧ ಸಾಹಿತಿಗಳೂ ವಿದ್ವಾಂಸರೂ ಆದ ಶ್ರೀ ಎಲ್. ಗುಂಡಪ್ಪ ನವರನ್ನು ಮದರಾಸಿನ ತಮಿಳು ಬರಹಗಾರರ ಸಂಘದವರು ಕಳೆದ ಮೇ ೩೧ ಮತ್ತು ಜೂನ್ ೧ ರಲ್ಲಿ ನಾಗರಕೋಯಿಲಿನಲ್ಲಿ ನಡೆದ ತಮ್ಮ ಸಂಘದ ವಾರ್ಷಿಕ ಸಮ್ಮೇಳನಕ್ಕೆ ಕರೆಸಿಕೊಂಡು ಸನ್ಮಾನಿಸಿದರು. ತಮಿಳಿನ ಉದ್ಗ್ರಂಥಗಳನ್ನು ನೇರವಾಗಿ ಕನ್ನಡಕ್ಕೆ ಭಾಷಾಂತರ ಮಾಡಿ ಸೇವೆ ಸಲ್ಲಿಸಿದ್ದಕ್ಕಾಗಿ ಶ್ರೀಯುತರಿಗೆ ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಅರ್ಪಿಸಿದರು. ಶ್ರೀ ಗುಂಡಪ್ಪನವರಿಗೆ ದೊರೆತ ಈ ಗೌರವ ಕನ್ನಡಿಗರೆಲ್ಲರಿಗೂ ಅಭಿಮಾನದ ವಿಷಯ. ಶ್ರೀಯುತರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಈ ಸಂದರ್ಭದಲ್ಲಿ ಶ್ರೀಮಾನ್ ಗುಂಡಪ್ಪ ನವರು ಮಾಡಿದ ಭಾಷಣವನ್ನು ಕೆಳಗೆ ಕೊಟ್ಟಿದ್ದೇವೆ.

ಮಹಾಸಭೆಗೆ ನಮಸ್ಕಾರ.

ಈ ಮಹಾಸಭೆಗೆ ನನ್ನನ್ನು ಕರೆಸಿ ಗೌರವಿಸಿರುವ ಸೋದರ ಸಾಹಿತಿಗಳಿಗೆ ನಮಸ್ಕಾರ.

'ತಮಿಳಿಗೆ ಸಲ್ಲಿಸಿರುವ ಸೇವೆಗಾಗಿ' ಎಂದು ನನಗೆ ಈ ಮರ್ಯಾದೆ ಮಾಡಿದ್ದೀರಿ. ನಾನು ತಮಿಳಿಗೆ ಸಲ್ಲಿಸಿರುವ ಸೇವೆಯಾದರೂ ಏನು? ನನ್ನ ಸ್ವಂತ ಮೇಲ್ಮೆಗಾಗಿ ಅಲ್ಪಸ್ವಲ್ಪ ತಮಿಳು ಕಲಿಯಲು ಪ್ರಯತ್ನಿಸಿದೆ. ಕಲಿತಷ್ಟರಿಂದಲೇ ಸಾಧ್ಯವಾದ ಮಟ್ಟಿಗೆ ತಿಳಿವು ಪಡೆಯಲು ಹೆಣಗಿದೆ. ತಿಳಿದಷ್ಟನ್ನು ನಾಲ್ವರಲ್ಲಿ ಹಂಚಿ ಅವರೊಡನೆ ಆನಂದಿಸಬಯಸಿದೆ. ನನ್ನ ಭಾಷಾಂತರ ಕಾರ್ಯ ಆರಂಭವಾದದ್ದು ಹೀಗೆ. ಇದನ್ನು ಸೇವೆಯೆನ್ನೋಣವೆ? ಎನ್ನುವುದಾದರೆ ಯಾರ ಸೇವೆ? 'ಸ್ವಸೇವೆ' ಎಂದೇ ಹೇಳಬೇಕಾಗುತ್ತದೆ. ಇಷ್ಟು ಸಂಕೋಚಪಡಿಸದೆ ವಿಶಾಲಾರ್ಥ ಕೊಟ್ಟು ನುಡಿ ಸೇವೆಯೆನ್ನುವುದಾದರೆ, ಆ ಸೇವೆ ನನ್ನ ತಾಯ್ನುಡಿಗೆ, ಕನ್ನಡಕ್ಕೆ ಎಂದು ಬೇಕಾದರೆ ಹೇಳಬಹುದು. ತಮಿಳಿಗೆ ಸೇವೆ ಸಲ್ಲಿಸುತ್ತಿದ್ದೇನೆಂಬ ಭಾವನೆಯೇ ನನಗಿಲ್ಲ. ನನ್ನ ತಮಿಳು ಬಾಂಧವರು ಈ ನನ್ನ 'ಸ್ವಸೇವೆ' ಅಥವಾ ಕನ್ನಡದ

---

* ೧೯೫೮ ಮೇ ೩೧ ಮತ್ತು ಜೂನ್ ೧ ನೇ ತಾ|| ಗಳಲ್ಲಿ ಕನ್ಯಾಕುಮಾರಿ ಡಿಸ್ಟ್ರಿಕ್ಟಿನ ನಾಗರ್‌ಕೋಯಿಲಿನಲ್ಲಿ ನಡೆದ ತಮಿಳು ಸಾಹಿತಿಗಳ ಸಂಘದ ವಾರ್ಷಿಕ ಮಹಾಸಭೆಯಲ್ಲಿ ೧-೬-೫೮ ರ ಸಂಜೆಯ ಸಭೆಯಲ್ಲಿ ಬಹುಮಾನವನ್ನು ಸ್ವೀಕರಿಸಿದಾಗ ಶ್ರೀ ಎಲ್. ಗುಂಡಪ್ಪ ನವರು ಮಾಡಿದ ಭಾಷಣ.

ಸೇವೆಯನ್ನು ತಮ್ಮ ತಾಯ್ನುಡಿ ತಮಿಳಿನ ಸೇವೆಯೆಂದು ಭಾವಿಸಿರುವುದು ಅವರ ಮನೋವೈಶಾಲ್ಯವನ್ನು ವ್ಯಕ್ತಪಡಿಸುತ್ತದೆ; ಯಾವ ಭಾಷೆಗೆ ಸೇವೆ ಸಲ್ಲಿಸಿದರೂ ಅದು ಎಲ್ಲ ಭಾಷೆಗಳಿಗೂ ಸಲ್ಲಿಸಿದಂತಾಗುತ್ತದೆಯೆಂಬ ಸಂಗತಿಯನ್ನು ದೃಢ ಪಡಿಸುತ್ತದೆ.

ಸರಸ್ವತಿಯ ವೀಣೆಯ ಯಾವ ಮೆಟ್ಟಲಿನಲ್ಲಿ ಯಾವ ತಂತಿಯನ್ನು ಮಿಡಿದರೂ ಹೊರಹೊಮ್ಮುವ ನಾದ ಎಲ್ಲ ಹೃದಯಗಳನ್ನೂ ತಣಿಸುವುದಲ್ಲವೆ?

ನನ್ನದು ಬಹುಮಟ್ಟಿಗೆ ಭಾಷಾಂತರ ಕಾರ್ಯ. ವೇದಸೂಕ್ತಗಳೋ, ಭಾಸ ನಾಟಕಗಳೋ, ಆಂಗ್ಲ ಕವಿತೆಗಳೋ, ಟಾಲ್‌ಸ್ಟಾಯವರ ಕಥೆಗಳೋ, ತಮಿಳಿನ ಮಹಾಕೃತಿಗಳೋ—ಎಲ್ಲವೂ ಭಾಷಾಂತರಗಳೇ. ಭಾಷಾಂತರ ಕಾರ್ಯ ಕೀಳ್ಮಟ್ಟ ದ್ದೆಂದು ಹಲವರು ಭಾವಿಸುತ್ತಾರೆ. ಸ್ವತಂತ್ರ ಕೃತಿ ರಚನೆಗಿಂತ ಇದು ಯಾವ ರೀತಿಯಲ್ಲೂ ಕೀಳಲ್ಲವೆಂದು ನನ್ನ ನಂಬಿಕೆ. ಒಂದು ರೀತಿಯಲ್ಲಿ ಈ ಕೆಲಸ ಹೆಚ್ಚು ಕಷ್ಟಕರವಾದದ್ದೇ ಸರಿ.

ಸ್ವಂತವಾಗಿ ಕೃತಿರಚನೆಮಾಡುವಾಗ ಕೃತಿಕಾರ ಪೂರ್ಣ ಸ್ವತಂತ್ರನಾಗಿರು ತ್ತಾನೆ. ಅವನ ಭಾವನಾಲಹರಿ ನಿರಂಕುಶವಾಗಿ ಹೊಮ್ಮಿ ಹರಿಯುತ್ತದೆ. ಬೇರೊಂದು ಕೃತಿಯನ್ನು ಭಾಷಾಂತರ ಮಾಡುವಾಗ ಭಾಷಾಂತರಕಾರನಿಗೆ ಆ ಸ್ವಾತಂತ್ರ್ಯವಿಲ್ಲ. ಅವನು ತನ್ನ ಭಾವನೆಗಳನ್ನು ಹಾಗೆ ಹರಿಯಬಿಡಲಾಗದು. ಮೂಲ ಗ್ರಂಥವನ್ನು ಸರಿ ಯಾಗಿ ಅರ್ಥಮಾಡಿಕೊಂಡು ಅದರ ಭಾವಪ್ರವಾಹವನ್ನು ತನ್ನ ಭಾಷೆಯ ಕಾಲುವೆ ಯಲ್ಲಿ ಅದೇ ವೇಗದಿಂದ ಹರಿಸಬೇಕು. ಹೆಚ್ಚೂ ಆಗದಂತೆ ಕಡಮೆಯೂ ಆಗದಂತೆ ಸದಾ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕು. ಒಟ್ಟಿನಲ್ಲಿ ಮೂಲ ಗ್ರಂಥದ ಪ್ರತಿ ಬಿಂಬವನ್ನು ಮೂಡಿಸಬೇಕು. ಉತ್ತಮ ಭಾಷಾಂತರ ಉತ್ತಮ ಸ್ವತಂತ್ರ ಕೃತಿಯಷ್ಟೇ ಮಹತ್ತ್ವವುಳ್ಳದ್ದೆಂದು ಧಾರಾಳವಾಗಿ ಹೇಳಬಹುದು.

ದೇವಾಲಯದಲ್ಲಿ ಅಭಿಷೇಕ ಮಂಗಳಾರತಿಗಳನ್ನು ಮಾಡುವ ಅರ್ಚಕನ ಸೇವೆ ಎಷ್ಟು ಪ್ರಧಾನವೋ ಬಾಗಿಲು ಕಾಯುವುದು, ಕಸ ಗುಡಿಸುವುದು, ಹೂವು ನೀರು ತಂದು ಕೊಡುವುದು ಮುಂತಾದ ಇತರ ಸೇವೆಗಳೂ ಅಷ್ಟೇ ಪ್ರಧಾನವಾದವು. ಈ ಕೈಂಕರ್ಯಗಳಲ್ಲಿ ಕೀಳು ಮೇಲೆಂಬುದಿಲ್ಲ. ಸರಸ್ವತೀ ಮಂದಿರದಲ್ಲಿ ನಾನು ಕೈಕೊಂಡಿರುವುದು ಕನ್ನಡಿ ಹಿಡಿಯುವ ಊಳಿಗ.

ಕನ್ನಡ ತಮಿಳುಗಳ ಪರಸ್ಪರ ಸಂಬಂಧವನ್ನು ಕುರಿತು ಒಂದೆರಡು ಮಾತು ಹೇಳುವುದು ಸೂಕ್ತವೆಂದು ತೋರುತ್ತದೆ. ದ್ರಾವಿಡ ಭಾಷೆಗಳಲ್ಲಿ ತಮಿಳು ಅತಿ ಪ್ರಾಚೀನವಾದ್ದೆಂದು ಪ್ರಸಿದ್ಧವಾಗಿದೆ. ತಮಿಳನ್ನು ಬಿಟ್ಟರೆ ಕನ್ನಡ ಉಳಿದೆಲ್ಲಕ್ಕಿಂತ

ಪ್ರಾಚೀನವಾದ್ದೆಂಬ ಸತ್ಯ ಹೆಚ್ಚು ಪ್ರಚುರವಾಗಿಲ್ಲ. ಕ್ರಿ. ಶ. ೫ ನೆಯ ಶತಮಾನದಿಂದ ಶಾಸನಗಳೂ, ೯ ನೆಯ ಶತಮಾನದಿಂದ ಪ್ರೌಢ ಗ್ರಂಥಗಳೂ ಕನ್ನಡದಲ್ಲಿ ದೊರೆಯುತ್ತವೆ. ಶಾಸನ ಮತ್ತು ಕವಿಕೃತಿಗಳಲ್ಲದ ಬೇರೆ ಆಧಾರಗಳಿಂದ ನೋಡುವುದಾದರೆ ಕನ್ನಡದ ಪ್ರಾಚೀನತೆ ಕ್ರಿ. ಪೂ. ೨—೩ ನೆಯ ಶತಮಾನಗಳವರೆಗೂ ಹೋಗುತ್ತದೆ. ತಮಿಳಿನಂತೆಯೇ ಕನ್ನಡದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಗ್ರಂಥ ವ್ಯಾಕರಣ ಅಲಂಕಾರ ಕಾವ್ಯವಿಮರ್ಶೆಗಳನ್ನು ಕುರಿತ ಲಕ್ಷಣಗ್ರಂಥ. ಅಂಥ ಗ್ರಂಥ ಹುಟ್ಟುವುದಕ್ಕೆ ತಕ್ಕಷ್ಟು ಮೊದಲೇ ಅದಕ್ಕೆ ಲಕ್ಷ್ಯವಾಗಿ ವಿಪುಲವಾದ ಸಾಹಿತ್ಯ ಸಾಮಗ್ರಿ ಸಿದ್ಧವಾಗಿರಬೇಕೆಂಬ ವಿಷಯವನ್ನು ಒತ್ತಿ ಹೇಳುವ ಅಗತ್ಯವಿಲ್ಲ.

ಶಬ್ದಭಂಡಾರ, ನುಡಿಗಟ್ಟು, ಭಾಷಾಮರ್ಯಾದೆ ಮೊದಲಾದ ವಿವರಗಳಲ್ಲಿ ತಮಿಳಿಗೂ ಕನ್ನಡಕ್ಕೂ ಹೆಚ್ಚು ಸಾದೃಶ್ಯವಿದೆ. 'ಅವನು ಬಂದನು' ಎಂಬ ಹೊಸಗನ್ನಡ ವಾಕ್ಯ ತಮಿಳಿನಲ್ಲಿ 'ಅವನ್ ವನ್ದಾನ್' ಎಂದಾಗುತ್ತದೆ. ಪ್ರಾಚೀನ ಕನ್ನಡ ಶಾಸನವೊಂದರಲ್ಲಿ ದೊರೆಯುವ "ಕಟ್ವಪ್ಪಿನಾ ವೆಟ್ಟದುಳ್ . . . ನೋನ್ತು . . . ಮುನಿವರನ್ ದೇವಲೋಕಕ್ಕೆ ಸಂದಾನ್" ಎಂಬ ಮಾತು ತಮಿಳೋ ಏನೋ ಎನ್ನುವಂತಿದೆ. "ಕಣ್ಣುಡೈಯರೆನ್ಬವರ್ ಕಟ್ರೋರ್ ಮುಗತ್ತಿರಣ್ಡು | ಪುಣ್ಣುಡೈಯರ್ ಕಲ್ಲಾದವರ್" ಎಂಬ ಕುಱಳನ್ನು "ಕಣ್ಣುಳ್ಳವರೆಂಬವರ್ ಕಲ್ತವರ್ ಮೊಗದೆರಡು | ಪುಣ್ಣುಳ್ಳವರ್ ಕಲಿಯದವರ್" ಎಂದು ಹಳಗನ್ನಡಕ್ಕೆ ಸುಲಭವಾಗಿ ಪರಿವರ್ತಿಸಬಹುದು.

ಇಂಥ ಕೆಲಕೆಲವು ಸಾದೃಶ್ಯಗಳನ್ನು ಮಾತ್ರ ನೋಡಿ, ಕನ್ನಡ ಭಾಷಾ ಸಾಹಿತ್ಯಗಳನ್ನು ಅಭ್ಯಾಸಮಾಡಿ ಅರಿಯುವ ಗೋಜಿಗೆ ಹೋಗದೆ ಕೆಲವು ತಮಿಳು ವಿದ್ವಾಂಸರು, "ಕನ್ನಡ ತಮಿಳಿನಿಂದ ಹುಟ್ಟಿತು" ಎಂದು ಘೋಷಿಸುತ್ತಾರೆ. ಸಾಮಾನ್ಯ ಜನ ಅದನ್ನು ನಂಬಿಯೂಬಿಡುತ್ತಾರೆ. ಕನ್ನಡದಲ್ಲಿಲ್ಲದ ಪ್ರಾಚೀನ ಶಬ್ದರೂಪಗಳು ತಮಿಳಿನಲ್ಲಿ ಉಳಿದಿರುವಂತೆಯೇ ತಮಿಳಿನಲ್ಲಿಲ್ಲದ ಪ್ರಾಚೀನ ದ್ರಾವಿಡ ಶಬ್ದಗಳು ಕನ್ನಡದಲ್ಲಿಯೂ ದೊರೆಯುತ್ತವೆ. 'ತಮ್ಮದೇ ಹೆಚ್ಚು' ಎಂಬ ಪೂರ್ವಭಾವನೆಯನ್ನು ಇಟ್ಟುಕೊಳ್ಳದೆ ಎರಡು ಭಾಷೆಗಳನ್ನೂ ಅಭ್ಯಾಸ ಮಾಡಿದರೆ, ಎರಡೂ ಮೂಲದ್ರಾವಿಡದಿಂದ ಹುಟ್ಟಿಬಂದ ಸೋದರ ಭಾಷೆಗಳೆಂಬ ಸತ್ಯ ಚೆನ್ನಾಗಿ ಮಂದಟ್ಟಾಗುತ್ತದೆ.

ಭಾಷೆಯ ಬಡಿದಾಟ ಮಿತಿಮಿರುತ್ತಿರುವ ಈ ಕಾಲದಲ್ಲಿ ಈ ಸತ್ಯದರ್ಶನ ನಮಗೆ ಅತ್ಯಗತ್ಯವಾಗಿದೆ. ಒಳ್ಳೆಯ ನೆರೆಯಾಗಿ ನೆಮ್ಮದಿಯಿಂದ ಬಾಳುವುದಕ್ಕೆ ಒಬ್ಬರನ್ನೊಬ್ಬರು ಅರಿಯುವುದೂ ಅರಿತು ಸೌಹಾರ್ದವನ್ನು ಹೆಚ್ಚಿಸಿಕೊಳ್ಳುವುದೂ

ಅತ್ಯಾವಶ್ಯಕ. ತಮಿಳು ಬರಹಗಾರರ ಸಂಘದ ಸದಸ್ಯರಾದ ತಾವುಗಳು ಈ ದೃಷ್ಟಿಯಿಟ್ಟುಕೊಂಡಿರುವುದು ಶುಭ ಸೂಚನೆಯಾಗಿದೆ.

ನಮ್ಮ ಹಿರಿಯರು ಸಂಕುಚಿತ ದೃಷ್ಟಿಯುವರಾಗಿರಲಿಲ್ಲ. ಸ್ವಭಾಷಾಭಿಮಾನವುಳ್ಳವರಾದರೂ ಅನ್ಯಭಾಷೆಗಳನ್ನು ಅನಾದರದಿಂದ ಕಾಣುತ್ತಿರಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಇದಕ್ಕೆ ಅನೇಕ ನಿದರ್ಶನಗಳು ಸಿಕ್ಕುತ್ತವೆ. ತಮಿಳಿಗೆ ಸಂಬಂಧಿಸಿದ ಒಂದು ಸಂಗತಿಯನ್ನು ಹೇಳಬಯಸುತ್ತೇನೆ. ನಮ್ಮ ಪ್ರಾಚೀನ ಕವಿಗಳಲ್ಲಿ ಅತ್ಯಂತ ಶ್ರೇಷ್ಠರೆಂದು ಪ್ರಸಿದ್ಧರಾದ ಮೂವರು ಕವಿಗಳಲ್ಲಿ ೧೨ ನೆಯ ಶತಮಾನದಲ್ಲಿ ಬಾಳಿದ 'ಹರಿಹರ'ನು ಒಬ್ಬ. ಅವನು ತನ್ನ "ಪುರಾತನರ ರಗಳೆ"ಗಳಲ್ಲಿ ತಮಿಳು ನಾಡಿನ ಶಿವಭಕ್ತರ ಕಥೆಗಳನ್ನು ನಿರೂಪಿಸಿದ್ದಾನೆ. 'ಪೆರಿಯ ಪುರಾಣ'ದ ಕಥೆಗಳೇ ಇಲ್ಲಿ ಕಂಡುಬಂದರೂ ಕನ್ನಡ ಕಾವ್ಯ ತಮಿಳಿನ ಭಾಷಾಂತರವಲ್ಲ; ಅದನ್ನವಲಂಬಿಸಿದ ಅನುವಾದವೂ ಅಲ್ಲ. ಹರಿಹರನು ತಮಿಳು ನಾಡಿನ ಕ್ಷೇತ್ರಗಳಲ್ಲಿ ಸಂಚಾರ ಮಾಡಿದ್ದನೆಂದು ಕಾಣುತ್ತದೆ. ಅಲ್ಲಲ್ಲಿನ ಐತಿಹ್ಯಗಳನ್ನು ಸಂಗ್ರಹಿಸಿಕೊಂಡು ತೇವಾರಗಳನ್ನು ಕೇಳಿ ತಿಳಿದುಕೊಂಡು ತನ್ನ ಅನುಭವದ ಆಧಾರದ ಮೇಲೆ ಸ್ವತಂತ್ರವಾಗಿ ಕಾವ್ಯರಚನೆ ಮಾಡಿದ್ದಾನೆ. ತಮಿಳು ವಿದ್ವಾಂಸರು ಕನ್ನಡವನ್ನು ಕಲಿತು ಹರಿಹರನ ರಗಳೆಗಳನ್ನು ಓದಿ ತಿಳಿದು ತಮಿಳು ಮೂಲಗಳೊಡನೆ ಹೋಲಿಸಿ ವಿಮರ್ಶಿಸಿದರೆ, ಉಭಯ ಭಾಷಾ ಸಾಹಿತ್ಯಗಳಿಗೂ ಅಪಾರ ಪ್ರಯೋಜನವಾಗುವುದೆಂಬುದರಲ್ಲಿ ಸಂಶಯವಿಲ್ಲ.

"ಪ್ರಭುಲಿಂಗಲೀಲೆ"ಯೆಂಬ ಕನ್ನಡ ಕಾವ್ಯ ತಮಿಳಿಗೆ ಪರಿವರ್ತನೆ ಹೊಂದಿದೆಯೆಂಬುದು ತಮಗೆಲ್ಲ ತಿಳಿದಿರುವ ಸಂಗತಿಯೇ. ಇದೇ ರೀತಿ ನಮ್ಮೆರಡು ಭಾಷೆಗಳಲ್ಲಿ ಮತ್ತೆ ಯಾವ ಬಗೆಯ ಕೊಳುಕೊಡೆಗಳು ನಡೆದಿವೆಯೋ ಹುಡುಕಿ ನೋಡಬೇಕು.

ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆಯಬೇಕಾದರೆ ತಮಿಳು ಅಥವಾ ತೆಲುಗನ್ನು ಕಲಿಯಬೇಕೆಂದು ಕಡ್ಡಾಯ ಮಾಡಿದ್ದಾರೆ. ತಮಿಳು ತೆಲುಗು ಎಂ.ಎ. ಪದವಿಗಳಿಗೂ ಇದೇ ರೀತಿ ನಿಯಮ ಮಾಡಿದರೆ, ಕಡ್ಡಾಯವಾಗಿ ಮತ್ತೊಂದು ದ್ರಾವಿಡ ಭಾಷೆಯನ್ನು ಕಲಿಯುವಂತೆ ನಿರ್ಬಂಧ ಪಡಿಸಿದರೆ ಪರಸ್ಪರ ಪರಿಚಯಕ್ಕೆ ಬಹಳ ಸಹಕಾರಿಯಾಗುತ್ತದೆ.

ಸರ್ಕಾರ ಮತ್ತು ವಿಶ್ವವಿದ್ಯಾನಿಲಯಗಳ ವಿಧಿ ಏನೇ ಆಗಿರಲಿ, ನಾಡಿನ ವಿದ್ವಾಂಸರು ಮಾತ್ರ ಉದಾಸೀನ ಮಾಡದೆ ಎರಡು ಭಾಷೆಗಳನ್ನೂ ಕಲಿಯುವುದು, ಎರಡು ಸಾಹಿತ್ಯಗಳನ್ನೂ ಅರಿಯುವುದು ಅವಶ್ಯ ಕರ್ತವ್ಯವೆಂಬ ನನ್ನ ನಂಬಿಕೆಯನ್ನು

ತಮ್ಮಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಜ್ಞಾನದೀಪವನ್ನು ಬೆಳಗುವ ಬರಹಗಾರರು ಸೋದರ ಭಾಷಾ ಸಾಹಿತ್ಯಗಳ ಸಾರವನ್ನು ಸಂಗ್ರಹಿಸಿದರೆ, ಅವರ ಗ್ರಂಥಗಳ ಮೂಲಕ ನಾಡಿನಲ್ಲೆಲ್ಲ ಸೌಹಾರ್ದ ಪ್ರವಾಹ ಹರಿದು ನೆಮ್ಮದಿ ನೆಲಸುವುದರಲ್ಲಿ ಸಂಶಯವಿಲ್ಲ.

ಈ ನಂಬಿಕೆಯಿಂದ ಕೈಲಾದಮಟ್ಟಿಗೆ ಕೆಲಸ ಮಾಡುತ್ತಿರುವ ನನಗೆ ಈ ರೀತಿ ಸನ್ಮಾನಮಾಡಿ ಪ್ರೋತ್ಸಾಹಿಸಿರುವುದಕ್ಕಾಗಿ "ತಮಿಳು ಬರಹಗಾರರ ಸಂಘ"ದ ನನ್ನ ಸಾಹಿತ್ಯ ಬಂಧುಗಳೆಲ್ಲರಿಗೂ ಋಣಿಯಾಗಿದ್ದೇನೆ.

ಮತ್ತೊಮ್ಮೆ ತಮ್ಮೆಲ್ಲರಿಗೂ ವಂದನೆಗಳನ್ನರ್ಪಿಸುತ್ತೇನೆ.

ಎಲ್. ಗುಂಡಪ್ಪ

೨

ತಾ|| ೧೩-೬-೧೯೫೮ ರಂದು ನಾಗಮಂಗಲದಲ್ಲಿ ನಡೆದ ಪ್ರಚಾರೋಪನ್ಯಾಸ ಸಪ್ತಾಹದ ಉದ್ಘಾಟನಾ ಮಹೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪದ್ಮಭೂಷಣ ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್. ರವರು ಮಾಡಿದ ಭಾಷಣ :—

ಭಗವಾನ್ ಸೌಮ್ಯಕೇಶವನಿಗೆ ಅನಂತಾನಂತ ನಮಸ್ಕಾರಗಳನ್ನು ಅರ್ಪಿಸಿ, ನಾಗಮಂಗಲದ ಮತ್ತು ಅದರ ಸುತ್ತುಮುತ್ತಲಿಂದ ಬಂದಿರುವ ಎಲ್ಲ ಸಹೃದಯರಿಗೂ ನನ್ನ ವಂದನೆಗಳನ್ನು ನಿವೇದಿಸುತ್ತೇನೆ.

ಮಹನೀಯರೇ, ವಿಶ್ವವಿದ್ಯಾನಿಲಯವು ಕೈಕೊಂಡಿರುವ ಒಂದು ಮಹತ್ ಕಾರ್ಯದಲ್ಲಿ ಭಾಗಿಯಾಗುವುದಕ್ಕಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ಇದೇ ಅವಕಾಶವನ್ನು ಉಪಯೋಗಿಸಿಕೊಂಡು ನಾಗಮಂಗಲದ ಪುರಜನರು ನನಗೆ ಸನ್ಮಾನ ಪತ್ರವನ್ನು ಅರ್ಪಿಸಲು ಬಯಸಿದುದರಿಂದ, ಇಷ್ಟೊಂದು ವಿಶ್ವಾಸದ ಕೋರಿಕೆಗೆ 'ಇಲ್ಲ' ಎನ್ನಲಾರದೆ ಅದಕ್ಕೂ ಒಪ್ಪಿದ್ದೇನೆ.

ನಾನು ಇಂದು ಮೈಸೂರಿನಿಂದ ಹೊರಟು ಇಲ್ಲಿಗೆ ಬರುವಾಗ, ದಾರಿಯಲ್ಲಿ ಮೇಲುಕೋಟೆಯ ದೇವಾಲಯದ ಗೋಪುರ ಆಕಾಶಕ್ಕೆದುರಾಗಿ ದಿಗಂತಭವ್ಯವಾಗಿ ಗೋಚರಿಸಿತು. ಅದನ್ನು ಕಂಡ ನಾನು ಅಂತಹ ದಿವ್ಯ ಸಾನ್ನಿಧ್ಯದ ಆಶ್ರಯ ದಲ್ಲಿರುವ ಎಲ್ಲ ನಗರಗಳೂ ಆ ದಿವ್ಯ ಸಾನ್ನಿಧ್ಯವನ್ನು ಪಡೆದಿರಬೇಕೆಂದುಕೊಂಡೆ. ಇಲ್ಲಿ ನನ್ನನ್ನು ಮತ್ತು ತಮ್ಮೆಲ್ಲರನ್ನು ಸ್ವಾಗತಿಸಿದವರು ಹೇಳಿದ ವಿಚಾರಗಳಿಂದ ಆ

ಭಾವನೆಗೆ ಮತ್ತಷ್ಟು ಪೋಷಣೆ ದೊರೆತಂತಾಯಿತು. ನಾಗಮಂಗಲವೆಂಬುದು ನನಗೆ ಯಾವುದೋ ಒಂದು ಯಃಕಶ್ಚಿತ ಊರಾಗಿ ಮಾತ್ರ ಗೋಚರಿಸದೆ, ಭವ್ಯ ಇತಿಹಾಸದ ಒಂದು ಪವಿತ್ರ ಕೋಶವನ್ನೊಳಗೊಂಡ ನಗರ ಎಂದು ಗೋಚರಿಸಿತು. ಇಲ್ಲಿ ಮಂಟಪಕ್ಕೆ ಬಂದೊಡನೆಯೆ ನನ್ನನ್ನು ಮೊದಲು ಇದಿರುಗೊಂಡುದು ಈ ಜಗತ್ಪೂಜ್ಯವಾದ ಜಗನ್ನೇತ್ರಾದ್ಭುತಕರವಾದ ನಟರಾಜ ವಿಗ್ರಹ. ಈ ನಾಗಮಂಗಲದ ಊರಿನಲ್ಲಿಯೆ ಈ ಮಹತ್ತ್ವದ ಶಿಲ್ಪಕಲೆ ಇತ್ತು, ಇದೆ ಮತ್ತು ಮುಂದೆಯೂ ಮುಂದುವರಿಯುತ್ತದೆ—ಎಂಬ ಸೂಚನೆಯನ್ನು ಕೇಳಿದೊಡನೆಯೆ, ನಾಗಮಂಗಲದ ರೂಪವೆ ಬದಲಾಯಿಸಿತು ನನ್ನ ಕಣ್ಣಿಗೆ. ಮುರುಕು ಮನೆಗಳೂ ಓಡು ಹೆಂಚಿನ ಮನೆಗಳೂ ಕಲ್ಲು ಕಟ್ಟಣೆಗಳೂ ಕೊರಕಲು ದಾರಿಗಳೂ ಕಿರುಗಲ್ಲಿಗಳೂ ಇರುವ ಅಸಹ್ಯವಾಗಿ ಹೇಸಿಗೆಯಿಂದ ತುಂಬಿದವುಗಳಾಗಿರುವ ಊರುಗಳು ನಮ್ಮಲ್ಲಿ ಎಲ್ಲೆಲ್ಲಿ ಹೋದರೂ ಗೋಚರಿಸುತ್ತವೆ. ಇವೆಲ್ಲ ಹೊರಗಣ್ಣಿಗೆ ಕಾಣುವ ಊರುಗಳು. ಒಳಗಣ್ಣಿಗೆ ಕಾಣುವ ಊರುಗಳನ್ನು ಆ ಊರಿನ ಜನರ ಕಲ್ಪನೆ, ಆಶೆ, ಪ್ರಾರ್ಥನೆ—ಇವು ಸೂಚಿಸುತ್ತವೆ. ಅವರ ಆದರ್ಶವೇನು? ಅವರು ಏನನ್ನು ಅಪೇಕ್ಷಿಸುತ್ತಾರೆ? ಏನನ್ನು ಪ್ರೀತಿಸುತ್ತಾರೆ? ಏನನ್ನು ಬಯಸುತ್ತಾರೆ? ಅವರ ಆತ್ಮ, ಚೇತನ ಯಾವುದರ ಕಡೆ ಹೋಗುತ್ತದೆ? ಇವುಗಳಿಂದ ಆ ಪುರವನಿತೆಯ ಅಂತರಂಗರೂಪ ಗೋಚರಿಸುತ್ತದೆ. ನನಗೆ ಈಗ ಗೋಚರಿಸುತ್ತಿರುವುದು ನಾಗಮಂಗಲದ ಬಹಿರಂಗದ ಮೃಣ್ಮಯರೂಪವಲ್ಲ; ಇಲ್ಲಿನ ಜನ ಶತಶತಮಾನಗಳಿಂದ ಬಾಳಿದ, ಆಶಿಸಿದ, ಸಾಧಿಸಿದ, ಸಿದ್ಧಿಪಡೆದ, ಸಿದ್ಧಿಪಡೆಯಲು ಆಶಿಸುತ್ತಿರುವ—ಈ ಸಂಕಲ್ಪಕೋಟಿಗಳಿಂದ ಉತ್ಪನ್ನವಾದ ಚಿನ್ಮಯ ಶ್ರೀನಗರ. ಇಲ್ಲಿಗೆ ಸಮೀಪದ ಬೆಳ್ಳೂರಿನಲ್ಲಿದ್ದವರು ಶ್ರೀ ಬಿ. ಎಂ. ಶ್ರೀಯವರು; ಇಲ್ಲಿಗೆ ಸಮೀಪದ ಬಿಂಡಿಗನವಲೆಯವರು ಕಾದಂಬರಿಕಾರರಾದ ಶ್ರೀ ಬಿ. ವೆಂಕಟಾಚಾರ್ಯರು. ಈ ಮಾತುಗಳನ್ನು ಹೇಳುತ್ತಿರುವಾಗ ನಾಗಮಂಗಲವು ಇತರ ಅನೇಕ ನಗರಗಳಂತೆ, ಊರುಗಳಂತೆ ಒಂದಲ್ಲ; ನಮ್ಮ ಕನ್ನಡನಾಡಿನ ಸಾಹಿತ್ಯದ ಜೀವಕೇಂದ್ರಗಳಲ್ಲಿ ಇದೂ ಒಂದು—ಎಂದು ನಾನು ಭಾವಿಸುತ್ತೇನೆ.

ನನ್ನನ್ನು ಸ್ವಾಗತಿಸುತ್ತಾ ಮತ್ತು ನನಗೆ ಮಾನಪತ್ರವನ್ನು ಅರ್ಪಿಸುತ್ತಾ ಇಬ್ಬರು ಮಹನೀಯರು ಕೆಲವು ಸೌಹಾರ್ದದ, ಪ್ರಶಂಸೆಯ ಮಾತುಗಳನ್ನು ಆಡಿದ್ದಾರೆ. ಆ ಒಂದೊಂದು ಶ್ಲಾಘನೆಯ ಮಾತಿನ ಗೌರವ ಭಾರದಿಂದ ನಾನು ಕುಗ್ಗಿ ಕುಸಿದು ಹೋಗಿದ್ದೇನೆ, ನನ್ನ ಮಿತ್ರರು ಹಾಕಿದ ಈ ದೊಡ್ಡ ಹೂವಿನ ಹಾರದಿಂದ ಎಂತೊ ಅಂತೆ. ಆದರೆ ನೀರಿನಲ್ಲಿ ಮುಳುಗಿದ ಕಲ್ಲು ಹೇಗೆ ಭಾರವಾಗುವುದಿಲ್ಲವೊ, ಹಾಗೆಯೆ ಅಹಂಕಾರವನ್ನು ಭಗವಂತನ ಪದತಲದಲ್ಲಿ ಅರ್ಪಿಸಿದ ಚೇತನಕ್ಕೆ

ಹೊಗಳಿಕೆಯು ಚಪ್ಪಡಿ ಭಾರವಾಗಲಾರದು. ನಾನು ಇಲ್ಲಿ ನಿಂತಾಗ ಹೂವಿನ ಹಾರಗಳನ್ನು ತಂದು ತಂದು ಹಾಕುತ್ತಿದ್ದರು. ಇದನ್ನೆಲ್ಲ ನಾನೆಲ್ಲಿಯಾದರೂ ಈ ಸಣ್ಣ ಅಹಂಕಾರದ 'ನಾನಾ'ಗಿ ಸ್ವೀಕರಿಸಿದರೆ, ಒಂದೊಂದು ಹಾರವೂ ನನ್ನ ಕತ್ತನ್ನು ಕೊಯ್ದೀತು. ಈ ಒಂದೊಂದು ಹಾರವೂ ಭಗವಂತನ ಪಾದಾರವಿಂದಕ್ಕೆ ಈ ರೂಪ ದಿಂದ ಅರ್ಪಿತವಾಗಿದೆ—ಎಂಬುದನ್ನು ನಾನು ಮನಸ್ಸಿನಲ್ಲಿ ಆಲೋಚಿಸುವುದರಿಂದ ಈ ಭಾರವನ್ನು ನಾನು ಸ್ವಲ್ಪವೂ ಭಯವಿಲ್ಲದೆ ವಹಿಸಿದ್ದೇನೆ. ನಮ್ಮ ಎಲ್ಲರ ಚೇತನ ಗಳಲ್ಲಿಯೂ ಭಗವಂತನು ದೇವಸ್ಥಾನ ಕಟ್ಟಿಕೊಂಡಿದ್ದಾನೆ. ಒಂದೊಂದು ಚೇತನವೂ ಆ ಭಗವಂತನ ಪೂರ್ಣತ್ವವನ್ನು ಒಳಗೆ ಬೀಜರೂಪವಾಗಿ ಪಡೆದಿದೆ. 'ಈ ಪ್ರಪಂಚದಲ್ಲಿ ನಾವು ಹುಟ್ಟಿಬರುವುದು ಆ ಬೀಜರೂಪವಾದ ಭಗವಂತ ಅರಳಿ, ಬೆಳೆದು, ವೃಕ್ಷ ರೂಪವಾಗಿ ಗೋಚರಿಸಲಿ ಎಂದೇ'—ಎಂದು ತಿಳಿದವರು ಹೇಳುತ್ತಾರೆ. ಆದ್ದ ರಿಂದಲೆ ನಮಗೆ ದೊಡ್ಡದನ್ನು ಕಾಣುತ್ತಲೆ ಗೌರವ ಮೂಡುತ್ತದೆ; ಉತ್ತಮ ವಾದುದನ್ನು ಕಾಣುತ್ತಲೆ ಆಸೆ ಉದಿಸುತ್ತದೆ. ಅದರ ಅರ್ಥವೇನೆಂದರೆ—ಬಡವ ನಾದವನಿಗೆ ಐಶ್ವರ್ಯವಂತನಾದವನನ್ನು ಕಾಣುತ್ತಲೆ ಅವನ ಐಶ್ವರ್ಯದ ವಿಚಾರದಲ್ಲಿ ಹೇಗೆ ಆಸೆ ಉದಿಸುತ್ತದೆಯೊ ಹಾಗೆಯೆ ಉತ್ತಮರನ್ನೂ ಉತ್ತಮವಾದುದನ್ನೂ ಕಾಣುತ್ತಲೆ ನಮ್ಮಲ್ಲಿ ಅದರ ಪವಿತ್ರತೆಯ ವಿಚಾರವಾಗಿ ಆದರ ಹುಟ್ಟುತ್ತದೆ. ಇದರ ಅರ್ಥವೇನೆಂದರೆ—ಈ ಚೇತನ ಆಗಲೆ ತನ್ನ ನಾಲಗೆಯನ್ನು ಚಾಚಿದೆ, ಆ ಅಮೃತವನ್ನು ಸವಿಯುವುದಕ್ಕೆ ; ಆದ್ದರಿಂದ ಆ ಚೇತನದ ಉದ್ಧಾರದ ಬಾಗಿಲು ತೆರೆದಿದೆ ; ಅದು ಮುಂದೆ ಧನ್ಯವಾಗುತ್ತದೆ—ಇದು ಅದರ ಅರ್ಥ. ನನ್ನ ಮೂಲಕವಾಗಿ ಸರಸ್ವತೀ ದೇವಿ ಜನತೆಗೆ ಅರ್ಪಿಸಿರುವ ಕೃತಿಗಳನ್ನು ನೀವು ಓದಿ, ಸಂತೋಷಪಟ್ಟು ನನಗೆ ಗೌರವ ತೋರಿದ್ದೀರಿ. ವಾಸ್ತವವಾಗಿ ನೀವು ಈ ಗೌರವ ತೋರುತ್ತಿರುವುದು ಈ ಮನುಷ್ಯವ್ಯಕ್ತಿಗೆ ಅಲ್ಲ. ಸರಸ್ವತಿಯ ತತ್ವಕ್ಕೆ, ಚೇತನಕ್ಕೆ, ಆ ದಿವ್ಯತೆಗೆ ನಿಮ್ಮ ಗೌರವ ಸಲ್ಲುತ್ತಿದೆ. ಆದ್ದರಿಂದಲೆ ಆ ಶಕ್ತಿ ನಿಮ್ಮ ನಮಸ್ಕಾರದ, ಪೂಜೆಯ, ಪ್ರಾರ್ಥನೆಯ ಮುಖಾಂತರ ನಿಮ್ಮೆಲ್ಲರ ಹೃದಯಗಳಿಗೂ ಇಳಿಯುತ್ತದೆ. ಈ ಗೌರವ, ಸಂಭಾವನೆಯೆಲ್ಲವೂ ಅದರ ಪ್ರತೀಕ. ಹಿಂದಿನ ಮಹಾಕವಿಗಳೆಲ್ಲರೂ—ಅವರು ಯಾವ ದೇಶದವರಾದರೂ ಆಗಲಿ, ಯಾವ ಭಾಷೆಯಲ್ಲಿಯೆ ಬರೆದಿರಲಿ, ಯಾವ ಮತಕ್ಕೆ ಸೇರಿರಲಿ, ಯಾವ ದೇವರನ್ನೆ ಪೂಜಿಸುತ್ತಿರಲಿ—ತಮ್ಮ ಕೃತಿಗಳ ಪ್ರಾರಂಭದಲ್ಲಿಯೆ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ—'ನಾನು ಬರಿಯ ಲೇಖನಿ, ಬರೆಯು ವವನು ಭಗವಂತ.' ಇದು ಸರಿ. ಮಹತ್ ಕಾರ್ಯಗಳನ್ನು ಮಹತ್ ಪ್ರಮಾಣದಲ್ಲಿ ಸಾಧಿಸುವುದು ಅಲ್ಪ ಚೇತನಗಳಿಗೆ ಅಸಾಧ್ಯ. ಮಹಾಕಾರ್ಯವನ್ನು ಮಾಡಿದೊಡನೆಯೆ

ಗೊತ್ತಾಗುತ್ತದೆ—ಇದನ್ನು ಸಾಧಿಸಿರುವ ಶಕ್ತಿ ಮತ್ತೊಂದು, ನಾನಲ್ಲ, ಆ ಶಕ್ತಿ ಇದನ್ನು ಎತ್ತದಿದ್ದರೆ, ಯಾರುತಾನೆ ಈ ಭಾರವನ್ನು ಎತ್ತಲು ಸಾಧ್ಯವಾಗುತ್ತದೆ? ಎಂದು. ಆದ್ದರಿಂದ, ನನ್ನ ಕೃತಿಗಳಿಂದ ಜನತೆಯ ಜನಾರ್ದನನಿಗೆ ಏನಾದರೂ ಪುಷ್ಪಾಂಜಲಿ ಅರ್ಪಿತವಾಗಿದ್ದರೆ ಅದರಿಂದ ನಾನು ನಿಜವಾಗಿಯೂ ಧನ್ಯ. ನನ್ನ ಮೂಲಕವಾಗಿ ಹೊರಗೆ ಬಂದಿರುವ ಕೃತಿಗಳನ್ನು ಓದಿ, ಓದಿಸಿ ಕೇಳಿ—ನೀವು ಯಾರೇ ಆಗಲಿ, ಎಲ್ಲೇ ಆಗಲಿ—ಆನಂದ ಪಡುತ್ತಿದ್ದರೆ, ಆ ಆನಂದದ ಅಂಶ ಯಾವುದೋ ಒಂದು ರೀತಿಯಲ್ಲಿ ನನ್ನ ಚೇತನಕ್ಕೂ ತಾಕುತ್ತದೆ; ನನ್ನನ್ನು ಉದ್ಧಾರ ಮಾಡುತ್ತದೆ. ಅದು ಭಗವಂತನಿಗೆ ಸಮರ್ಪಿತವಾಗುತ್ತದೆ—ಎಂದು ನಾನು ಭಾವಿಸುತ್ತೇನೆ.

ನನ್ನನ್ನು ನಾನಾ ವಿಧವಾಗಿ ಪ್ರಶಂಸಿಸುತ್ತಾ, ಕೀರ್ತಿಯನ್ನು ಬೆನ್ನಟ್ಟಿದವನಲ್ಲ—ಎಂದು ಸೂಚಿಸಿದ್ದೀರಿ. ನನ್ನ ವಿದ್ಯಾಗುರುಗಳಲ್ಲಿ ಒಬ್ಬರಾದ ಶ್ರೀಮಾನ್ ಕೃಷ್ಣ ಶಾಸ್ತ್ರಿಗಳು ಒಮ್ಮೆ ಬೆಂಗಳೂರಿನಲ್ಲಿ ಮಾತನಾಡುತ್ತಾ 'ಇವರು ಕೀರ್ತಿಯನ್ನು "ಶನಿ" ಎಂತ ಕರೆದು ಅಟ್ಟಿದರು; ಈಗ ಆ ಶನಿ ಬೆನ್ನು ಹತ್ತಿದೆ'—ಎಂದು ವಿನೋದಕ್ಕಾಗಿ ಹೇಳಿದರು. ಆದರೆ ಸಾಮಾನ್ಯ ಕೀರ್ತಿಗೂ, ನಾನು ಯಾವುದನ್ನು ಯಶೋಲಕ್ಷ್ಮಿಯೆಂದು ಕರೆಯುತ್ತೇನೆಯೋ ಅದಕ್ಕೂ ಬಹಳ ವ್ಯತ್ಯಾಸವಿದೆ. ಸಾಮಾನ್ಯ ಕೀರ್ತಿ ನಮ್ಮ ಅಹಂಕಾರವನ್ನು ಪೋಷಿಸುತ್ತದೆ. ಈ ಅಹಂಕಾರವನ್ನು ಪೋಷಿಸುವುದಕ್ಕಾಗಿಯೇ ನಾವು ಅದನ್ನು ಪಡೆಯ ಯತ್ನಿಸಿದಲ್ಲಿ ಅದು ನಮ್ಮ ಅಹಂಕಾರವನ್ನು ಹೆಚ್ಚಿಸಿ, ನಮ್ಮನ್ನು ಮತ್ತೆ ಮತ್ತೆ ಅಧೋಗತಿಗೇ ಕರೆದೊಯ್ಯುತ್ತದೆ. ಆದರೆ ನಾವು ನಮ್ಮ ಅಹಂಕಾರವನ್ನು ಬಿಟ್ಟು, ಭಗವದರ್ಪಣ ಬುದ್ಧಿಯಿಂದ ಸಾಗುತ್ತಿದ್ದರೆ, ಆಗ ಬರುವುದು ಯಶೋಲಕ್ಷ್ಮಿ. ಅದರಿಂದ ನಮಗೂ ಕಲ್ಯಾಣವಾಗುತ್ತದೆ, ಲೋಕಕ್ಕೂ ಉಪಕಾರವಾಗುತ್ತದೆ. ನನಗೆ ಬಂದಿರುವ ಈ ಯಶೋಲಕ್ಷ್ಮಿ ಭಗವಂತನ ಆಶೀರ್ವಾದದಿಂದ ನನ್ನ ಉದ್ಧಾರಕ್ಕೂ ಕಾರಣವಾಗಲಿ, ಜನತೆಗೂ ಆ ಉದ್ಧಾರ ಸಿದ್ಧವಾಗಲಿ—ಎಂದು ನಾನು ಹಾರೈಸುತ್ತೇನೆ. ಮತ್ತೊಮ್ಮೆ ನಾಗಮಂಗಲದ ಪುರಜನರಿಗೂ ಸುತ್ತುಮುತ್ತಿನ ಊರುಗಳ ಮಾನ್ಯ ಮಹನೀಯರಿಗೂ, ಅವರು ತೋರಿರುವ ಈ ಗೌರವಕ್ಕಾಗಿ ನನ್ನ ಅನಂತ ವಂದನೆಗಳು.

ಇಂದು ನಾನಿಲ್ಲಿಗೆ ಬಂದಿರುವುದು ವಿಶ್ವವಿದ್ಯಾನಿಲಯದ ಈ ವರ್ಷದ ಪ್ರಚಾರೋಪನ್ಯಾಸ ಮಾಲೆಯನ್ನು ಪ್ರಾರಂಭಿಸಲೆಂದು. ಆ ವಿಚಾರವಾಗಿ ಒಂದೆರಡು ಮಾತುಗಳನ್ನು ನಿವೇದಿಸಿಕೊಳ್ಳಲು ನಾನು ಬಯಸುತ್ತೇನೆ. ಈ ಊರಿನಲ್ಲಿ ಒಂದು ಹೈಸ್ಕೂಲಿದೆ, ಇದರ ಸುತ್ತಮುತ್ತಲ ಇನ್ನು ಕೆಲವು ಊರುಗಳಲ್ಲಿ ಇನ್ನೂ ಎರಡು ಮೂರು ಹೈಸ್ಕೂಲುಗಳಿವೆ—ಎಂದು ನೀವು ಹೇಳಿದ್ದೀರಿ. ದೇಶದಲ್ಲಿ ಈಗ

ಪ್ರಾಥಮಿಕ ಶಾಲೆಗಳು ಮಾಧ್ಯಮಿಕ ಶಾಲೆಗಳು ಹೈಸ್ಕೂಲುಗಳೂ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಕೂಡ ಮೇಲೇಳುತ್ತಿವೆ. ಎಂದರೆ, ವಿದ್ಯೆಯನ್ನು ಆಶಿಸುವ, ಅಪೇಕ್ಷಿಸುವ ಜನ ಹೆಚ್ಚಾಗುತ್ತಿದ್ದಾರೆ. ನಮ್ಮ ಕಾಲೇಜುಗಳಲ್ಲಿ ಕೂಡ ಹಿಂದೆ ನೂರಿದ್ದ ಕಡೆ ಈಗ ಐನೂರು ವಿದ್ಯಾರ್ಥಿಗಳಿದ್ದಾರೆ. ಇಂಟರ್‌ಮೀಡಿಯಟ್ ಮತ್ತು ಫಸ್ಟ್‌ಗ್ರೇಡ್ ಕಾಲೇಜುಗಳೂ ಈಗ ದೇಶದ ಮೂಲೆ ಮೂಲೆಗಳಲ್ಲಿಯೂ ಪ್ರಾರಂಭವಾಗುತ್ತಿವೆ. ಬಹುಶಃ, ಬಹಳ ಮುಂದುವರಿದಿರುವ ದೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ ನಮ್ಮಲ್ಲಿನ ವಿದ್ಯಾಸಂಸ್ಥೆಗಳ, ವಿದ್ಯಾರ್ಥಿಗಳ ಸಂಖ್ಯೆ ಅತ್ಯಲ್ಪವೆಂದೇ ಹೇಳಬೇಕು. ಆ ದೇಶಗಳಲ್ಲಿ ಊರೂರಿಗೆ ಒಂದೊಂದು ಯೂನಿವರ್ಸಿಟಿ ಇದ್ದೀತು. ಈ ವಿಚಾರದಲ್ಲಿ ನಮ್ಮ ದೇಶ ಈಗ ತಾನೆ ಕಣ್ಣು ತೆರೆಯುತ್ತಿದೆ.

ನೀವು—ಎಂದರೆ ರೈತವರ್ಗದವರು—ಸರ್ಕಾರಕ್ಕೆ ಕಂದಾಯವನ್ನು ಕೊಡುತ್ತೀರಿ. ಅದಕ್ಕೆ ಪ್ರತಿಫಲವಾಗಿ ಸರ್ಕಾರ ರಸ್ತೆ, ಬಾವಿ ಮೊದಲಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡುತ್ತದೆ. ಇದಕ್ಕೂ ಹೆಚ್ಚಾಗಿ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿಕೊಡುತ್ತದೆ. ಜನರು ಈ ಅನುಕೂಲ್ಯಗಳನ್ನು ಉಪಯೋಗಿಸಿಕೊಂಡು ವಿದ್ಯಾವಂತರಾಗಬೇಕು. 'ವಿದ್ಯೆ' ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ ಒಂದು ವಿಧಾನ. ನಮಗೆ ಅಂತಹ ವಿದ್ಯೆ ಬೇಕು ಎಂದು ಹೇಳುವ ಕಾಲ ಈಗ ಬಂದಿದೆ. ನಮ್ಮಲ್ಲಿ ಎಷ್ಟೇ ಹೈಸ್ಕೂಲುಗಳಿರಲಿ, ಏನೇ ಮಾಡಲಿ, ಸದ್ಯಕ್ಕೆ ನಮ್ಮ ದೇಶದಲ್ಲಿ ಎಲ್ಲರಿಗೂ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ದೊರೆಯುವುದೆಂದು ನಾನು ಹೇಳಲಾರೆ. ಪ್ರವೇಶ ಸಿಕ್ಕುವುದಿರಲಿ; ನಮ್ಮಲ್ಲಿ ಶೇ. ೮೦ ರಷ್ಟು ಜನ ಪ್ರಾಥಮಿಕ ವಿದ್ಯಾಭ್ಯಾಸದ ಕೊನೆಯಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆ. ಉಳಿದಿಪ್ಪತ್ತರಲ್ಲಿ ಅಷ್ಟು ಜನ ಮಾಧ್ಯಮಿಕದ ಮಧ್ಯದಲ್ಲಿಯೋ ಕೊನೆಯಲ್ಲಿಯೋ ಕೈಬಿಡುತ್ತಾರೆ; ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿದೊಡನೆಯೇ ಮತ್ತಷ್ಟು ಜನ ಓದು ನಿಲ್ಲಿಸುತ್ತಾರೆ. ಹೀಗಾಗಿ ಕಾಲೇಜು ಮಟ್ಟಕ್ಕೆ ಬರಲು ಅರ್ಹತೆ ಪಡೆಯುವವರೇ ವಿರಳ. ಇವರಲ್ಲಿಯೂ ಎಷ್ಟೋ ಜನ ದೂರದ ಕಾರಣದಿಂದಲೋ, ಬಡತನದ ಕಾರಣದಿಂದಲೋ, ಮನೆಯ ಕ್ಲೇಶ ಸಂಕಟಗಳ ಕಾರಣದಿಂದಲೋ ವಿಶ್ವವಿದ್ಯಾನಿಲಯಕ್ಕೆ ಸೇರಲಾಗುವುದಿಲ್ಲ. ಹೀಗೆ ದೇಶದ ಬಹು ಜನ ವಿಶ್ವವಿದ್ಯಾನಿಲಯವನ್ನು ಪ್ರವೇಶಮಾಡಿ, ಸಂಸ್ಕೃತಿ ವಿಜ್ಞಾನಗಳಲ್ಲಿ ಪರಿಣತರಾಗಲು ಸಾಧ್ಯವಿಲ್ಲ. ಇಂತಹರಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ೧೯೩೩ ನೆ ಇಸವಿಯಲ್ಲಿ ಎಂದರೆ ಈಗ ಸುಮಾರು ೨೫ ವರ್ಷಗಳ ಕೆಳಗೆ ಪ್ರಚಾರೋಪನ್ಯಾಸಗಳನ್ನು ಪ್ರಾರಂಭಿಸಿತು.

ಏನು ಈ ಪ್ರಚಾರೋಪನ್ಯಾಸ? ದೇಶದಲ್ಲಿರುವ ಎಲ್ಲರೂ ವಿಶ್ವವಿದ್ಯಾನಿಲಯಕ್ಕೆ ಹೋಗಲಾರರಷ್ಟೆ! ಆದರೆ ವಿಶ್ವವಿದ್ಯಾನಿಲಯ ಎಲ್ಲರ ಮನೆಯ ಬಾಗಿಲಿಗೂ ಹೋಗ ಬಲ್ಲುದು. ದೇಶದಲ್ಲಿ ಎಲ್ಲೆಲ್ಲಿ ಈ ಅಪೇಕ್ಷೆ ಮೂಡುತ್ತದೆಯೋ ಅಲ್ಲಿಗೆ, ಯಾರು ಆಹ್ವಾನಿಸುತ್ತಾರೋ ಅವರಲ್ಲಿಗೆ, ವಿಶ್ವವಿದ್ಯಾನಿಲಯದ ಉಪಾಧ್ಯಾಯ ವರ್ಗದವರು ಮೂರು ನಾಲ್ಕು ಜನ ಬಂದು, ಒಂದೆರಡು ದಿನ ಅಲ್ಲಿಯೇ ತಂಗಿ ಉಪನ್ಯಾಸಗಳನ್ನು ಕೊಡುತ್ತಾರೆ. ಮಧ್ಯೆಮಧ್ಯೆ ಮನರಂಜನೆಯ ಕಾರ್ಯಕ್ರಮಗಳು—ಕಾವ್ಯವಾಚನ, ನಾಟಕ ವಾಚನ—ಇತ್ಯಾದಿಗಳಿಂದ ಜನತೆಯನ್ನು ಆಕರ್ಷಿಸಿ, ಉತ್ತಮವಾದ ಉಪನ್ಯಾಸಗಳನ್ನು ಕೊಡುತ್ತಾರೆ. ಮೊದಮೊದಲು ಜನರು ಅಪೇಕ್ಷಿಸಿ, ಕರೆದಲ್ಲಿಗೆ ಹೋಗುವ ಪದ್ಧತಿ ಇತ್ತು. ಬರಬರುತ್ತಾ ಈ ಕರೆ ಬರುವುದು ಹೆಚ್ಚಾಯಿತು. ಆದ್ದರಿಂದ ವಿಶ್ವವಿದ್ಯಾನಿಲಯ ಈ ಪ್ರಚಾರೋಪನ್ಯಾಸಗಳನ್ನು ಮುಂದುವರಿಸಲು ಸಾಕಷ್ಟು ಹಣವನ್ನು ಮೀಸಲಾಗಿರಿಸಬೇಕಾಯಿತು. ಇದರ ಜೊತೆಗೆ ಉಪನ್ಯಾಸ ಗಳನ್ನು ಸಣ್ಣಸಣ್ಣ ಪುಸ್ತಕಗಳ ರೂಪದಲ್ಲಿ ಪ್ರಕಟಿಸಿ, ಅತ್ಯಂತ ಅಲ್ಪ ಬೆಲೆಗೆ ಅವು ಗಳನ್ನು ಮಾರಲು ಏರ್ಪಡಿಸಲಾಯಿತು. ಮೊದಲು ಇವುಗಳ ಬೆಲೆ ಕೇವಲ ಎರಡಾಣೆ ಇತ್ತು. ಈಗ ಮೂರು ಅಥವಾ ನಾಲ್ಕು ಆಣೆ ಆಗಿರಬಹುದು. ಇವುಗಳ ಅಚ್ಚಿನ ವೆಚ್ಚ ಕೂಡ ಇವುಗಳ ವಿಕ್ರಯದಿಂದ ಹುಟ್ಟುವುದಿಲ್ಲ. ಇವುಗಳ ಉದ್ದೇಶ ದುಡ್ಡು ಮಾಡುವುದಲ್ಲ, ಜನತೆಯಲ್ಲಿ ಜ್ಞಾನ ಪ್ರಸಾರ ಮಾಡುವುದು. ಇನ್ನು ಮುಂದೆ ಇಲ್ಲಿ ನಡೆಯುವ ಉಪನ್ಯಾಸಗಳಿಗೆ ನೀವು ಹೋಗುತ್ತೀರಿ; ಆಗ ನಮ್ಮ ಕಾರ್ಯದರ್ಶಿ ಗಳು ಈ ವಿಚಾರದ ವಿವರಗಳನ್ನು—ಎಷ್ಟು ಲಕ್ಷಾಂತರ ಪುಸ್ತಕಗಳು ಬಿಕರಿಯಾಗಿವೆ, ಜನರಲ್ಲಿ ಇವು ಎಷ್ಟು ಪ್ರಿಯವಾಗಿವೆ—ಎಂಬುದನ್ನು ನಿಮಗೆ ತಿಳಿಸುತ್ತಾರೆ. ಎಷ್ಟು ವಿಚಾರಗಳನ್ನು ಈ ಪುಸ್ತಕಗಳು ಒಳಗೊಂಡಿವೆ—ಆಧುನಿಕ ವಿಜ್ಞಾನದ ವಿಷಯಗಳು, ಕೊನೆಗೆ ವೈದ್ಯಕೀಯ ವಿಷಯಗಳು, ಕಣ್ಣು ಮತ್ತು ಅದರ ರಕ್ಷಣೆ, ಹೆರಿಗೆ ಮತ್ತು ಶಿಶು ಸಂರಕ್ಷಣೆ, ರೇಡಾರ್!—ಹೀಗೆ ಅತ್ಯಂತ ಗಹನವಾದ ವಿಷಯಗಳನ್ನು ಎಲ್ಲರಿಗೂ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಉಪನ್ಯಾಸಮಾಡಿ, ಪುಸ್ತಕ ರೂಪದಲ್ಲಿ ಪ್ರಕಟಮಾಡಿ ಜ್ಞಾನಪ್ರಸಾರವನ್ನು ನಡೆಸುತ್ತಿದ್ದಾರೆ. ಹಿಂದಿನಿಂದ ಕನ್ನಡ ದಲ್ಲಿ ಬಂದಿರುವ ಕಾವ್ಯಗಳನ್ನು ಕುರಿತು ಮಾತ್ರವೇ ಅಲ್ಲದೆ ಬೇರೆ ಬೇರೆ ಭಾಷೆ ಗಳಲ್ಲಿ—ಅದು ಪರ್ಷಿಯನ್ ಭಾಷೆಯಾಗಿರಬಹುದು, ಇಂಗ್ಲಿಷ್ ಭಾಷೆಯಾಗಿರ ಬಹುದು, ಗ್ರೀಕ್ ಭಾಷೆಯಾಗಿರಬಹುದು—ಆಯಾ ಭಾಷೆಗಳಲ್ಲಿ ತಜ್ಞರಾದವರು ಆಯಾ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಇದರಿಂದ ನಮ್ಮ ಜನ ನಮ್ಮ ಸಾಹಿತ್ಯವನ್ನು ಮಾತ್ರವೇ ಅಲ್ಲದೆ ಇತರ ಸಾಹಿತ್ಯಗಳ ಪರಿಚಯವನ್ನೂ ಪಡೆದು

ಕೊಂಡಂತೆ ಆಗುತ್ತದೆ. ಇಂದು ಪ್ರಪಂಚ ಹತ್ತಿರಹತ್ತಿರವಾಗುತ್ತಿದೆ. ಕನ್ನಡಿಗನಾದ ವನು ಭರತಖಂಡದ ಇತರರನ್ನು ಅರಿಯಬೇಕು. ಇಷ್ಟೇ ಅಲ್ಲ, ಬೇರೆ ಬೇರೆ ಹೊರ ದೇಶಗಳವರನ್ನೂ ಅರಿತುಕೊಳ್ಳಬೇಕು. ಸಂಪರ್ಕಾನುಕೂಲ್ಯದಿಂದ ವಿಶಾಲ ಜಗತ್ತು ಇಂದು ಚಿಕ್ಕದಾಗಿಹೋಗಿದೆ. ಆದ್ದರಿಂದ ಇಡೀ ಪ್ರಪಂಚದ ವಿಸ್ತಾರವಾದ ಮತ್ತು ವಿವರವಾದ ಜ್ಞಾನವನ್ನು ಸಾಮಾನ್ಯ ಜನತೆಗೆ ಮಾಡಿಕೊಡಬೇಕಾದುದು ಅತ್ಯ ಗತ್ಯ. ಹಾಗೆ ಕೊಡುವುದಕ್ಕೋಸ್ಕರವೇ ವಿಶ್ವವಿದ್ಯಾನಿಲಯವು ಈ ಪ್ರಕಟನೆ ಮತ್ತು ಪ್ರಚಾರೋಪನ್ಯಾಸ ಶಾಖೆಯನ್ನು ತೆರೆದಿದೆ. ಈ ಶಾಖೆಯಲ್ಲಿ ಎರಡಾಣೆ ಮೂರಾಣೆ ಪುಸ್ತಕಗಳಿವೆ, ಹನ್ನೆರಡಾಣೆ ಒಂದು ರೂಪಾಯಿ ಮಟ್ಟದ ಪುಸ್ತಕಗಳಿವೆ; ಅದಕ್ಕೂ ಮೇಲಿನ ಮಟ್ಟದ ಪುಸ್ತಕಗಳೂ ಇವೆ. ಅವರವರ ಅರ್ಹತೆಗೆ, ಯೋಗ್ಯತೆಗೆ, ಆಢ್ಯತೆಗೆ ತಕ್ಕಹಾಗೆ ಅವುಗಳನ್ನು ತೆಗೆದುಕೊಂಡು ಓದಬಹುದು.

ನಮ್ಮ ವಿಶ್ವವಿದ್ಯಾನಿಲಯವನ್ನು ನಾನು ಈ ಮೂರು ಅಂಗಗಳಲ್ಲಿ ಆಲೋಚಿ ಸುತ್ತೇನೆ. ಅವುಗಳಲ್ಲಿ ಒಂದು ಸಂಶೋಧನೆ. ಅದು ಎಂ.ಎ., ಎಂ.ಎಸ್‌ಸಿ., ಮತ್ತು ಅವಕ್ಕೂ ಮುಂದಿನ ವ್ಯಾಸಂಗಕ್ಕೆ ಸಂಬಂಧಿಸಿದ ಕೆಲಸ. ಅದು ಮೇಲ್ಮಟ್ಟದ ಕೆಲಸ. ವಿಶ್ವವಿದ್ಯಾನಿಲಯದ ತಲೆಯಿದ್ದಂತೆ. ಇನ್ನೊಂದು, ವಿದ್ಯಾರ್ಥಿಗಳಿಗೆ ಬೋಧಿಸ ತಕ್ಕದ್ದು. ವಿಶ್ವವಿದ್ಯಾನಿಲಯದ ಕೈ ಇದ್ದಂತೆ. ಇಂದಿನ ಪೀಳಿಗೆಯವರು ಸುಸಂಸ್ಕೃತ ರಾಗಿ, ನಾಗರಿಕರಾಗಿ, ವಿದ್ಯಾವಂತರಾಗಿ, ಪ್ರಪಂಚದ ಇತರ ಜನರೊಡನೆ ಸಮಸ್ಪರ್ಧಿ ಗಳಾಗಿ ಹೇಗೆ ಬಾಳಬೇಕೆಂದು ಕಲಿಸುವುದು ಇದರ ಕೆಲಸ. ಇದರಲ್ಲಿ ಪೋಸ್ಟ್ ಗ್ರ್ಯಾಜುಯೇಟ್ ಸ್ಟಡೀಸ್ ಅಂಡ್ ಟೀಚಿಂಗ್ ಒಂದು ಭಾಗವಾದರೆ ಅಂಡರ್ ಗ್ರ್ಯಾಜುಯೇಟ್ ಸ್ಟಡೀಸ್ ಅಂಡ್ ಟೀಚಿಂಗ್ ಮತ್ತೊಂದು ಭಾಗ. ಈ ಸಂಶೋಧನೆ ಬೋಧನೆಗಳಿಗಿಂತಲೂ ನನ್ನ ಮನಸ್ಸಿಗೆ ಮುಖ್ಯವಾದ, ಮೂಲಭೂತವಾದ, ಅತ್ಯಂತ ಆವಶ್ಯಕವೆಂದು ತೋರುತ್ತಿರುವ ಅಂಗ ಈ ಪ್ರಚಾರೋಪನ್ಯಾಸ ಮತ್ತು ಪ್ರಕಟ ನೆಯ ಅಂಗ. ಪ್ರಸಾರಾಂಗ. ಇದೇ ವಿಶ್ವವಿದ್ಯಾನಿಲಯದ ಜೀವನಾಡಿ ಮಿಡಿಯು ತ್ತಿರುವ ಹೃದಯ. ಏಕೆಂದರೆ ನಮ್ಮ ಜನ ಬೆವರು ಸುರಿಸಿ ದುಡಿದು ಕೊಟ್ಟ ಹಣದಿಂದ ನಮ್ಮ ಸರ್ಕಾರ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದೆ. ಈ ವಿಶ್ವವಿದ್ಯಾ ನಿಲಯ ಮೇಲ್ಮಟ್ಟದ ಜನಕ್ಕೆ ಬೋಧಿಸುತ್ತಿದೆ. ಜನಸಾಮಾನ್ಯನಿಗೆ ಏನು ಬಂತು? ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಶಾಖೆ ಜನತೆಯ ಅಂಗ. ವಿಶ್ವವಿದ್ಯಾ ನಿಲಯ ಹಿಂದಿನಿಂದಲೂ ಇದಕ್ಕೆ ಮಾನ್ಯತೆಯನ್ನು ಕೊಡುತ್ತಾ ಬಂದಿದೆ. ಅದಕ್ಕೂ ಸಮಧಿಕವಾಗಿ ಜನತೆಯಲ್ಲಿ ಜ್ಞಾನ ಪ್ರಸಾರಮಾಡುವ ಕಾರ್ಯವನ್ನು ಈಗ ಮತ್ತೊಮ್ಮೆ ವಿಶ್ವವಿದ್ಯಾನಿಲಯ ಕೈಗೊಳ್ಳುತ್ತದೆ; ಕೈಗೊಂಡಿದೆ. ಅದಕ್ಕೆ ಜನತೆಯ ಬೆಂಬಲ ಬೇಕು.

ಉಪನ್ಯಾಸಗಳಿಗೆ ಜನರು ಬಂದು ಸೇರೆಯಬೇಕು. ನಿಮಗೆ ಬೇಕಾದ ವಿಷಯಗಳೇ ನೆಂಬುದನ್ನು ತಿಳಿಸಬೇಕು. ಕಾರ್ಯದರ್ಶಿಗಳಿಗೆ ಕಾಗದ ಬರೆಯಬೇಕು. ಅವರು ಏರ್ಪಡಿಸುವ ಉಪನ್ಯಾಸಗಳನ್ನು ಕೇಳಬೇಕು.

ನಮ್ಮ ವಿಶ್ವವಿದ್ಯಾನಿಲಯ ಕೈಕೊಂಡಿರುವ ಈ ಬಗೆಯ ಕಾರ್ಯ, ಈ ರೂಪದಲ್ಲಿ ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಕಂಡುಬಂದಿಲ್ಲ. ನಮ್ಮ ಮಹಿಮೆ, ಮಹತ್ತು ನಮಗೇ ಗೊತ್ತಿರಲಿಲ್ಲ. ಹೊರಗಿನಿಂದ ಇಲ್ಲಿಗೆ ಬಂದವರು—ಹೊರಗಿನ ದೊಡ್ಡ ಗವರ್ನರುಗಳು, ಗ್ರ್ಯಾಂಟ್ಸ್ ಕಮೀಷನ್ನಿನವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದು, ಕ್ರಾಫರ್ಡ್ ಹಾಲಿನ ಪ್ರಕಟನ ಶಾಖೆಯನ್ನು, ಅಲ್ಲಿನ ಪುಸ್ತಕಗಳನ್ನು, ನೋಡಿ, ಉಪನ್ಯಾಸಗಳ ವಿಚಾರವನ್ನು ಕೇಳಿ ತಿಳಿದುಕೊಂಡು, ಮೂಗಿನ ಮೇಲೆ ಬೆರಳಿಟ್ಟು 'ಇದೇನು ಅದ್ಭುತವಾದ ಕೆಲಸ ಮಾಡುತ್ತಿದ್ದೀರಿ! ನಿಮ್ಮ ಜನತೆಗೆ ಈ ವಿಶ್ವವಿದ್ಯಾನಿಲಯ ಇಷ್ಟೊಂದು ಉಪಕಾರವನ್ನು ಮಾಡುತ್ತಿದೆ! ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಈ ಪ್ರಚಾರೋಪನ್ಯಾಸದ ರೀತಿ, ಈ ಪ್ರಕಟನೆಯ ವಿಧಾನ—ಇವೆರಡೂ ಇಲ್ಲ'—ಎಂದು ಪ್ರಶಂಸಿಸಿ, ನಮಗೆ ಹೇಳಿ, ಬರೆದು ತಿಳಿಸಿದ್ದಾರೆ. ಹೀಗೆ ಅವರು ಹೇಳಿದಮೇಲೆ ನಮಗೆ ಗೊತ್ತಾಯಿತು—ಓಹೋ, ನಾವೂ ಬಹಳ ಕೆಲಸ ಮಾಡುತ್ತಿದ್ದೇವೆ—ಅಂತ. ಆದರೆ ಈ ಕೆಲಸ ಬರಿಯ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರಿಂದ ಮಾತ್ರ ಆಗತಕ್ಕದ್ದಲ್ಲ. ಜನತೆಯ ಸಹಕಾರದಿಂದ ಮಾತ್ರವೇ ಇದು ಸಾರ್ಥಕವಾಗಬೇಕಾದರೆ. ಆದ್ದರಿಂದ ನಾನು ಈ ವರ್ಷದ ಪ್ರಚಾರೋಪನ್ಯಾಸಮಾಲೆಯನ್ನು ಪ್ರಾರಂಭಿಸುತ್ತಾ ನಾಗಮಂಗಲದ ಜನತೆಯ ಮುಖಾಂತರವಾಗಿ ಕರ್ಣಾಟಕದ ಎಲ್ಲ ಜನತೆಯನ್ನೂ ಕೇಳಿಕೊಳ್ಳುತ್ತೇನೆ. ಈ ಪ್ರಚಾರೋಪನ್ಯಾಸಗಳನ್ನು ಅಲ್ಲಲ್ಲಿ ಏರ್ಪಡಿಸಿ, ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಯವರಿಗೆ ಬರೆದರೆ ಅವರು ನೀವು ಕೇಳಿದ ಕಡೆ ಸಂತೋಷದಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ನೀವು ತಿಳಿದುಕೊಳ್ಳಬೇಕೆಂದಿರುವ ವಿಷಯಗಳನ್ನು ಸೂಚಿಸಿದರೆ ಆಯಾ ವಿಷಯಗಳಲ್ಲಿ ತಜ್ಞರಾದವರನ್ನು ಕರೆದುಕೊಂಡು ಬಂದು ನಿಮಗೆ ಬೇಕಾದ ಮನರಂಜನೆಯ ವಿಷಯಗಳನ್ನೋ ವಿಜ್ಞಾನ ವಿಷಯಗಳನ್ನೋ ತಿಳಿಸಿಕೊಡುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಬೋಧಿಸುವುದು ಜನತೆಗೆ ಗೊತ್ತಾಗದ ಅನ್ಯಭಾಷೆಯಲ್ಲಿ. ಅದರಲ್ಲಿಯೋ ವಿಶೇಷ ಅಧ್ಯಯನ ಮಾಡಿದವರಿಗೆ ಮಾತ್ರ ಅದು ಅರ್ಥವಾಗುತ್ತದೆ. ಆದರೆ ಇಲ್ಲಿ ಬಂದು ನಿಮಗೆಲ್ಲರಿಗೂ ತಿಳಿಯುವ ಕನ್ನಡ ಭಾಷೆಯಲ್ಲಿ ಉಪನ್ಯಾಸ ಕೊಟ್ಟು, ನಿಮ್ಮೊಡನೆ ನಿಮ್ಮಂತೆಯೇ ಇದ್ದುಕೊಂಡು, ನೀವು ಕೇಳುವ ಪ್ರಶ್ನೆಗಳಿಗೆಲ್ಲಾ

ನೇರವಾಗಿ ಉತ್ತರ ಕೊಟ್ಟು ಸರಸ್ವತಿಯ ಸೇವೆಮಾಡಲು ಅವರು ಸಿದ್ಧರಾಗಿದ್ದಾರೆ, ಉತ್ಸುಕರಾಗಿದ್ದಾರೆ. ಆ ಪೂಜೆಯಲ್ಲಿ ತಾವೆಲ್ಲರೂ ಭಾಗಿಗಳಾಗಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಕಡೆಯದಾಗಿ ಮತ್ತೊಂದು ವಿಷಯ. ನಮ್ಮ ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳನ್ನೂ ಇತರ ಗ್ರಂಥಮಾಲೆಗಳನ್ನೂ ಹೊರಡಿಸುತ್ತಿರುವಂತೆಯೇ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರಡಿಸುತ್ತಿದೆ. ಅದು ಹಿಂದೆ ವಿಶ್ವವಿದ್ಯಾನಿಲಯದ ಪತ್ರಿಕೆ ಆಗುವುದಕ್ಕೆ ಮುನ್ನ ಜನತೆಯ ಮಾಸಪತ್ರಿಕೆಯೇ ಆಗಿತ್ತು. ಅದೇ ಪ್ರಬುದ್ಧ ಕರ್ಣಾಟಕ. ಅದು ವರ್ಷಕ್ಕೆ ನಾಲ್ಕು ಸಲ ಬರುತ್ತದೆ. ಒಂದೊಂದು ಸಾರಿಯೂ ಸುಮಾರು ಐನೂರು ಪುಟಗಳನ್ನು ಒಳಗೊಂಡಿರುತ್ತದೆ. ಅದರ ವಾರ್ಷಿಕ ಚಂದಾ ೩ ರೂಪಾಯಿ. ಸ್ವಲ್ಪ ಹೆಚ್ಚು ಕಡಮೆ ಅದರ ಕಾಗದದ ಬೆಲೆಯಾಯಿತು. ಅದರಲ್ಲಿ ಆಧುನಿಕ ಸಾಹಿತ್ಯ, ವಿಜ್ಞಾನಗಳ ಜ್ಞಾನಭಂಡಾರ ತುಂಬಿರುತ್ತದೆ. ನೀವು ಓದಿ ಬಿಸಾಡುವ ಇತರ ಪತ್ರಿಕೆಗಳಂತೆ ಅಲ್ಲ, ಅದು. ಶಾಶ್ವತವಾಗಿ ಗ್ರಂಥ ಭಂಡಾರದಲ್ಲಿ ಇಟ್ಟುಕೊಳ್ಳಬೇಕಾದ ಅಮೂಲ್ಯವಾದ ಪತ್ರಿಕೆ, ಅದು. ಒಮ್ಮೆ ಚಂದಾದಾರರಾಗಿ ಒಂದು ವರ್ಷ ತರಿಸಿ ನೋಡಿ. ಮುಂದೆ ನಿಮ್ಮ ಇಚ್ಛೆ ತಿಳಿದಂತೆ ನೀವು ಮಾಡಬಹುದು.

ಕೊನೆಯದಾಗಿ, ನನ್ನ ಮಿತ್ರರು ಅನೇಕರು ಇಲ್ಲಿ ನೆರೆದು, ನಾನು ನನ್ನ ಇತರ ಅನೇಕ ಮಿತ್ರರು ಕೈಕೊಂಡಿರುವಂತೆ ಕೈಕೊಂಡಿರುವ ಸರಸ್ವತಿಯ ಸೇವೆಯನ್ನು ವಿಶ್ವಾಸದಿಂದ ಸ್ವಲ್ಪ ಹೆಚ್ಚಾಗಿಯೇ ಶ್ಲಾಘನೆಮಾಡಿ, ನನಗೆ ಈ ಮಾನಪತ್ರವನ್ನು ಅರ್ಪಿಸಿ ಗೌರವಿಸಿದ್ದೀರಿ. ನಾನು ಇದಕ್ಕೆ ಎಷ್ಟರಮಟ್ಟಿಗೆ ಅರ್ಹನೋ ನಾನರಿಯೆ. ಆದರೆ ನನ್ನ ಅರ್ಹತೆಗಿಂತಲೂ ಹೆಚ್ಚಾಗಿ ತಮ್ಮ ಹೃದಯದ ವಿಶ್ವಾಸದ ಅರ್ಹತೆ ಅದಕ್ಕಿದೆ ಎಂದು ನಾನು ಬಲ್ಲೆ. ಅದು ನನಗೆ ಒಂದು ವಿಧವಾದ ಆಶೀರ್ವಾದವಾಗಿ ಪರಿಣಮಿಸಿ ನನ್ನ ಶ್ರೇಯಸ್ಸಿಗೆ ಕಾರಣವಾಗಲೆಂದು ಹಾರೈಸುತ್ತೇನೆ. ಅಲ್ಲದೆ, ನನ್ನ ಚೇತನದ ದೇವತೆಯೆ ಮೂರ್ತಿವೆತ್ತಂತೆ ಇರತಕ್ಕ ಈ ನಾಟ್ಯಸರಸ್ವತಿಯ ವಿಗ್ರಹವನ್ನು ನನಗೆ ಇಲ್ಲಿ ಕಾಣಿಕೆಯಾಗಿ ಅರ್ಪಿಸಿದ್ದೀರಿ. ಅದರ ಬೆಲೆ ಅನರ್ಘ್ಯವಾದುದು. ಮಾತನಾಡಿ ಅದರ ಬೆಲೆಯನ್ನು ಕಡಮೆ ಮಾಡಲು ನನಗೆ ಇಷ್ಟವಿಲ್ಲ. ಏಕೆಂದರೆ ಮಾತೆಲ್ಲ ಸೋತುಹೋಗುವಷ್ಟು ದೊಡ್ಡದು ಈ ಅರ್ಪಣೆ. ಇದು ನನಗೆ ಬರಿಯ ಕಲಾವಸ್ತು ಮಾತ್ರವಲ್ಲ, ಪೂಜಾ ವಸ್ತು. ಅಂದರೆ ಮನೆಯಲ್ಲಿ ಷೋಕಿಗಾಗಿ ಇಡುವ ಪದಾರ್ಥ ಮಾತ್ರವಲ್ಲ ; ಅದು ನಿಜವಾಗಿಯೂ ವಾಗ್ದೇವಿ, ಮಾತಿನ ದೇವತೆ, ಆ ದೇವತಾಶಕ್ತಿ, ಆ ದೇವತಾಶಕ್ತಿಯ ಪ್ರತೀಕ. ಅದನ್ನು ನಾನು ಮನೆಯಲ್ಲಿ

ನೋಡಿದಾಗಲೆಲ್ಲ ನಾಗಮಂಗಲವನ್ನೂ ನಾಗಮಂಗಲದ ಮಹಾಜನರನ್ನೂ, ಈ ಮಹಾ ಸೌಮ್ಯಕೇಶವನ ಬೃಹದ್ಗೋಪುರದ ದೇವಾಲಯವನ್ನೂ ನೆನೆನೆನೆದು ನನ್ನ ಅಂತಃಕರಣದ ಪೂಜೆಯನ್ನು ಈ ನಾಟ್ಯಸರಸ್ವತಿಗೆ ಅರ್ಪಿಸುತ್ತೇನೆ—ಎಂದು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ.

ಇಷ್ಟೊಂದು ಜನ ನೆರೆದು ಇಷ್ಟೊಂದು ಸಾವಧಾನವಾಗಿ ಎಲ್ಲವನ್ನೂ ಕೇಳಿ ನಿಜವಾಗಿಯೂ ತಮ್ಮ ಅಂತಃಕರಣಗಳನ್ನು ತೆರೆದುದಕ್ಕಾಗಿ ಮತ್ತೊಮ್ಮೆ ಆ ಸೌಮ್ಯಕೇಶವ ದೇವನಿಗೆ ನನ್ನ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಕುವೆಂಪು.

*
* *

ಇಂಗ್ಲಿಷನ್ನು ಬಹಿಷ್ಕರಿಸಿ *

ಸರ್ಕಾರದ ಸಮಗ್ರ ಆಡಳಿತ ಕಾರ್ಯ ಮತ್ತು ಅದರ ಬೌದ್ಧಿಕ ಚಟುವಟಿಕೆಗಳು ಅಲ್ಪಸಂಖ್ಯಾತರ ಭಾಷೆಯಲ್ಲೇ ನಡೆಯುವುದು ಮುಂದುವರಿದರೆ, ಅಂಥ ಸರ್ಕಾರ ಯಾರ ಹಿತರಕ್ಷಣೆ ಮಾಡುತ್ತದೆ? ಯಾವ ಪಕ್ಷದ ಕಡೆ ಅದು ವಾಲುತ್ತದೆ? ನಲವತ್ತುಕೋಟಿ ಭಾರತೀಯರಲ್ಲಿ ಕೇವಲ ನಲವತ್ತು ಲಕ್ಷ ಜನರಿಗೆ ಇಂಗ್ಲಿಷಿನ ಸಂಪರ್ಕವಿದೆ. ವಿಶೇಷ ಸೌಲಭ್ಯವನ್ನುಳ್ಳ ಈ ನಲವತ್ತು ಲಕ್ಷ ಜನತೆಯ ಮೇಲೆ ಸರ್ಕಾರದ ಕಣ್ಣು; ಉಳಿದವರಿಗೆ ಅದು ಬೆನ್ನು ತಿರುಗಿಸಿದೆ. ನಲವತ್ತುಕೋಟಿ ಕೆಳವರ್ಗದವರ ಸಮಸ್ಯೆಗಳನ್ನು ಅಲಕ್ಷಿಸಲಾಗಿದೆ; ಅವರ ಆವಶ್ಯಕತೆಗಳಿಗೆ ಉತ್ತರವಿಲ್ಲ. ಸರ್ಕಾರಕ್ಕೆ ಮುಖ್ಯವಾದುದು ನಲವತ್ತು ಲಕ್ಷದ ಹಿತರಕ್ಷಣೆ. ಈ ನಲವತ್ತು ಲಕ್ಷ ಜನತೆಗೆ ಮಾತ್ರವೇ ಅಖಿಲ ಭಾರತೀಯ ಸ್ವರೂಪವೂ, ರಾಷ್ಟ್ರೀಯ ಪ್ರಾಮುಖ್ಯತೆಯೂ ಇರುವಂತೆ ಕಾಣುತ್ತದೆ.

ಉದಾಹರಣೆಗೆ, ರಕ್ಷಣಾ ಇಲಾಖೆಯನ್ನೇ ತೆಗೆದುಕೊಳ್ಳಿ: ಒಬ್ಬ ಭಾರತೀಯ ಸೈನಿಕ ಕರ್ನಲ್ ಪದವಿಗೇರಬೇಕಾದರೆ ಅಗತ್ಯವಾದ ಅರ್ಹತೆಗಳೇನು? ಯುದ್ಧ ನೈಪುಣ್ಯವಲ್ಲ, ಇಂಗ್ಲಿಷ್ ಭಾಷಾ ಪ್ರಾವಿಣ್ಯತೆ—ಎಂಬುದರಲ್ಲಿ ಸಂದೇಹವಿಲ್ಲ. ಇಂಗ್ಲಿಷಿನಲ್ಲಿ ಟಿಪ್ಪಣಿಗಳನ್ನು ಬರೆಸುವ ಸಾಮರ್ಥ್ಯ, ಊಟದ ಟೇಬಲ್ ಬಳಿ ಇಂಗ್ಲಿಷಿನಲ್ಲಿ ಸಂಭಾಷಿಸುವ ಚಾತುರ್ಯ ಮತ್ತು ಮಾಂಸ ಹಾಗೂ ಚಾಕನ್ನು ಹಿಡಿದುಕೊಳ್ಳುವ ಕಲೆ—ಇವು ಅರ್ಹತೆಯನ್ನು ನಿರ್ಧರಿಸುವ ಅಂಶಗಳಲ್ಲಿ ಕೆಲವು.

[* ಡಾ|| ರಾಮಮನೋಹರ ಲೋಹಿಯಾರವರು ಕಲ್ಕತ್ತದಲ್ಲಿ ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದ ಸಂಗ್ರಹ—'ಮ್ಯಾನ್‌ಕೈಂಡ್' ಪತ್ರಿಕೆಯಿಂದ]

ಶೌರ್ಯವಲ್ಲ; ಯುದ್ಧ ಶಾಸ್ತ್ರದ ಜ್ಞಾನವಲ್ಲ—ಕೇವಲ ಇಂಗ್ಲಿಷ್ ಭಾಷೆಯ ಪರಿಚಯವಷ್ಟೆ ಅಳತೆಗೋಲು. ಒಬ್ಬ ಸಾಮಾನ್ಯ ಸೈನಿಕ ಕೇವಲ ಹವಾಲ್ದಾರನ ಮಟ್ಟಕ್ಕೆ ಮಾತ್ರ ಏರಬಲ್ಲ; ಇದಕ್ಕೆ ಮೀರಿದ ಅಧಿಕಾರಸ್ಥಾನಗಳು ಅವನ ಪಾಲಿಗೆ ಬರೀ ಕನಸು. ಈ ರೀತಿ ಬಡ್ತಿ ಕೊಡುವ ಪದ್ಧತಿಯನ್ನು ತಪ್ಪಿಸಿ, ಯುದ್ಧ ವಿದ್ಯಾ ಕೌಶಲದಿಂದ ಅರ್ಹತೆಯನ್ನಳೆದರೆ ಸಾಮಾನ್ಯ ಸೈನಿಕನಿಗೂ ನ್ಯಾಯ ಸಲ್ಲುತ್ತದೆ. ಈಗ ಇದೊಂದು ನೀತಿಯನ್ನು ಜೀವನದ ಉಳಿದೆಲ್ಲ ರಂಗಗಳಿಗೂ ಅನ್ವಯಿಸಿ ನೋಡಿ. ಅದರಿಂದ ಎಂಥ ವ್ಯಾಪಕವಾದ ಪರಿವರ್ತನೆಗಳಾಗುತ್ತವೆ! ಅದು ಭವಿಷ್ಯದ ವಸ್ತುಸ್ಥಿತಿಯನ್ನೇ ಬದಲಾಯಿಸಿ ಒಂದು ಹೊಸ ಯುಗದ ಉದಯಕ್ಕೆ ಕಾರಣವಾಗುತ್ತದೆ.

ಈ ವಿಚಾರದಲ್ಲಿ ಅನೇಕ ವಿಚಿತ್ರ ವಾದಗಳು ಕೇಳಿಬರುತ್ತಿವೆ. ಅವುಗಳಲ್ಲೊಂದು ಬಂಗಾಳಿ, ಹಿಂದಿ, ಮರಾಠಿ, ತಮಿಳು ಮತ್ತು ಇತರ ಪ್ರಾದೇಶಿಕ ಭಾಷೆಗಳು ಇನ್ನೂ ಬೆಳೆದಿಲ್ಲವೆಂಬುದು. ಆದುದರಿಂದ ಅವು ಅತ್ಯಂತ ಆಧುನಿಕ ಭಾವನೆಗಳು ಮತ್ತು ಜ್ಞಾನವನ್ನು ಒದಗಿಸಲಾರವು; ಪೂರ್ಣವಾಗಿ ಬೆಳೆದ ಒಂದು ವಿದೇಶೀಯ ಭಾಷೆ ಅನಿವಾರ್ಯ—ಇಂಥ ವಾದ ನಿಲ್ಲಲಾರದು. ಫ್ರೆಂಚ್ ಭಾಷೆಗೆ ಹೋಲಿಸಿದರೆ ಭಾರತೀಯ ಭಾಷೆಗಳು ಅದಕ್ಕಿಂತ ನಾಲ್ಕು ಅಥವ ಐದರಷ್ಟು ಸಂಪದ್ಯುಕ್ತವಾಗಿವೆ. ಹಿಂದಿ ಅಥವಾ ಬಂಗಾಳಿಯ ಶಬ್ದಕೋಶ ಇಂಗ್ಲಿಷಿನದಕ್ಕಿಂತ ಎರಡರಷ್ಟು ಶ್ರೀಮಂತವಾಗಿದೆ. ಸಂಸ್ಕೃತದ ಸಹಾಯವುಳ್ಳ ಈ ಭಾಷೆಗಳು ಹೊಸ ಶಬ್ದಗಳನ್ನು ಸೃಷ್ಟಿಸುವಲ್ಲಿ ಅನಂತವಾದ ಗಣಿಗಳಂತಿವೆ. ಒಂದು ವಿಶೇಷ ವ್ಯತ್ಯಾಸವಿದೆಯೆಂದು ಒಪ್ಪಬಹುದು: ಕಳೆದ ಒಂದೂವರೆ ಶತಮಾನದಲ್ಲಿ ಪಾಶ್ಚಿಮಾತ್ಯ ಭಾಷೆಗಳು ನಿಷ್ಕೃಷ್ಟವಾದ ಮತ್ತು ಬಹು ಸೂಕ್ಷ್ಮವಾಗಿ ವ್ಯತ್ಯಾಸ ಹೊಂದುವ ಅರ್ಥದ ಛಾಯೆಗಳನ್ನುಳ್ಳ ಶಬ್ದಕೋಶವನ್ನು ಪಡೆದುಕೊಂಡುವು. ಭಾರತೀಯ ಭಾಷೆಗಳಲ್ಲಿ ಇನ್ನೂ ಈ ಗುಣದ ಕೊರತೆಯಿದೆ. ಈ ಭಾಷೆಗಳಲ್ಲಿ ಹೊಸ ಶಬ್ದ ಸೃಷ್ಟಿಗಿರುವ ಆತಂಕವೇನೆಂದರೆ, ಸ್ಥಿರತೆ ಹಾಗೂ ನಿಷ್ಕೃಷ್ಟತೆಯ ಅಭಾವ. ಭಾರತೀಯ ಭಾಷೆಗಳ ಮೂಲಕ ಜ್ಞಾನಪ್ರಸಾರ ಸಾಧ್ಯವಿಲ್ಲವೆಂಬುದು ತಪ್ಪು. ರಷ್ಯದ ವಿಜ್ಞಾನಿಗಳು ಕಡ್ಡಾಯವಾಗಿ ಇಂಗ್ಲಿಷನ್ನು ಕಲಿಯಬೇಕಾಗಿದ್ದರೆ, ಬಹುಶಃ ಪ್ರಪಂಚ ಉಪಗ್ರಹದ (ಸ್ಪೂಟ್ನಿಕ್) ಸುದ್ದಿಯನ್ನು ಕೇಳುತ್ತಿರಲಿಲ್ಲ. ಮೂರು ಅಥವಾ ನಾಲ್ಕು ದಶಕಗಳ ಹಿಂದೆ ರಷ್ಯನ್ ಭಾಷೆಗೆ ಈಗಿನ ಹಿಂದಿ ಅಥವಾ ಬಂಗಾಳಿಗಿಂತ ಉತ್ತಮವಾದ ಸ್ಥಾನವೇನೂ ಇರಲಿಲ್ಲ; ಕೆಲವು ವಿಧಗಳಲ್ಲಿ ಅದು ಇವಕ್ಕಿಂತಲೂ ಹಿಂದುಳಿದಿತ್ತು. ರಷ್ಯನ್ ಭಾಷೆಗೆ ಒಂದು ಸಾವಿರ ವರ್ಷಗಳ ಇತಿಹಾಸವಿದೆ. ಸಂಸ್ಕೃತ, ಪ್ರಾಕೃತ ಮತ್ತು ಪಾಳಿಯಲ್ಲಿ ಮೂಲವನ್ನುಳ್ಳ ಮತ್ತು ಅವುಗಳಿಂದ ಪೋಷಿತವಾದ ಹಿಂದಿ,

ಬಂಗಾಳಿ, ಮರಾಠಿ ಮತ್ತಿತರ ಭಾರತೀಯ ಭಾಷೆಗಳಿಗಾದರೋ ಸುಲಭವಾಗಿ ಐದು ಅಥವಾ ಆರು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗಬಲ್ಲ ಪ್ರಾಚೀನತೆ ಇದೆ. ಜನತೆಯ ಸರ್ಕಾರ, ಫ್ಯಾಸಿಸ್ಟ್ ಆಗಿರಲಿ ಅಥವಾ ಕಮ್ಯುನಿಸ್ಟ್ ಆಗಿರಲಿ, ಜನತೆಯ ಭಾಷೆಯಲ್ಲೇ ಕೆಲಸ ಮಾಡುತ್ತದೆ. ಸೋವಿಯಟ್ ರಷ್ಯದ ಸರ್ಕಾರ ತನ್ನ ಧ್ಯೇಯ ಸಾಧನೆಗಾಗಿ ಅತ್ಯದ್ಭುತವಾದ ವಿಧಾನಗಳನ್ನು ಅನುಸರಿಸುತ್ತಿದ್ದರೂ ಕೂಡ, ಅದು ದೈನಂದಿನ ಆಡಳಿತಕ್ಕಾಗಿ ಜನತೆಯ ಭಾಷೆಯನ್ನೇ ಉಪಯೋಗಿಸುತ್ತದೆ. ಜಪಾನ್ ಮತ್ತು ರಷ್ಯ—ಎರಡೂ ಈ ಮಾರ್ಗವನ್ನು ಹಿಡಿದಿವೆ. ಸೋವಿಯಟ್ ರಷ್ಯದ ಸಾವಿರ ವಿಜ್ಞಾನಿಗಳಲ್ಲಿ ಒಬ್ಬನಿಗೆ ಇಂಗ್ಲಿಷ್ ಗೊತ್ತಿರುತ್ತದೆ. ಜರ್ಮನಿಯ ವಿಜ್ಞಾನಿಗಳಿಗೆ ಇಂಗ್ಲಿಷ್ ಅರ್ಥವಾಗುವುದಿಲ್ಲ. ನೂತನ ಅನ್ವೇಷಣೆಗಳು ಮತ್ತು ಸಂಶೋಧನೆಗಳನ್ನು ಕುರಿತು ವಿದೇಶೀಯ ಪತ್ರಿಕೆಗಳಿಂದ ಭಾಷಾಂತರಗಳು ಜರ್ಮನಿಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ.

ಜ್ಞಾನಾರ್ಜನೆಯೇ ನಿಮ್ಮ ಪರಮ ಗುರಿಯಾದರೆ, ನಿಮ್ಮ ಶಕ್ತಿಯನ್ನೂ ಕಾಲವನ್ನೂ ಒಂದು ವಿದೇಶೀಯ ಭಾಷೆಯನ್ನು ಕಲಿಯುವುದಕ್ಕಾಗಿ ವ್ಯರ್ಥಮಾಡಬೇಡಿ. ಅವುಗಳನ್ನು ವಿಷಯದ (Subject) ಆಳವಾದ ಜ್ಞಾನ ಪಡೆಯುವುದಕ್ಕಾಗಿ ಉಪಯೋಗಿಸಿ. ಭಾರತೀಯ ಬಾಲಕನಿಗೆ ತನ್ನ ಐದನೆಯ ವರ್ಷದ ವಯಸ್ಸಿನಿಂದಲೂ ಹುಚ್ಚು ಹಿಡಿದಂತಾಗುತ್ತದೆ; ಈ ದೌರ್ಬಲ್ಯ ಅವನನ್ನು ಜೀವಮಾನಪರ್ಯಂತವೂ ಕಾಡುತ್ತದೆ. ಒಂದು ವಿದೇಶೀಯ ಭಾಷೆಯ ಅತಿ ಭಾರದಿಂದ ಕುಗ್ಗಿದ ಅವನು ವಿಷಯದ ತಿರುಳನ್ನು ಗ್ರಹಿಸಿ, ಆಳವನ್ನು ಕಾಣುವುದೇ ಇಲ್ಲ. ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳದೂ ಇಂಥದೇ ದುರದೃಷ್ಟ, ಅವರು ಭಾರ ಹೊರುವ ಪ್ರಾಣಿಗಳ ಮಟ್ಟಕ್ಕಿಳಿದಿದ್ದಾರೆ. ಇತರ ಜನಾಂಗಗಳೊಡನೆ ಹೋಲಿಸಿದಾಗ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ರಷ್ಯ ಮತ್ತು ಜಪಾನಿನ ವಿಜ್ಞಾನಿಗಳ ಮೇಲೆ ವಿದೇಶೀಯ ಭಾಷೆಯೊಂದನ್ನು ಕಲಿಯುವ ಭಾರ ಹೊರಿಸಲ್ಪಟ್ಟಿಲ್ಲ. ಆದುದರಿಂದಲೇ ಅವರು ವಿಷಯಗಳ ಆಳವಾದ ಜ್ಞಾನವನ್ನು ಪಡೆದು ಈ ಜ್ಞಾನದ ಬಲದಿಂದ ಅಪೂರ್ವವಾದ ಅನ್ವೇಷಣೆಗಳನ್ನೂ, ಸಂಶೋಧನೆಗಳನ್ನೂ ಮಾಡಲು ಸಾಧ್ಯವಾಗಿದೆ. ಒಂದು ಭಾಷೆಯನ್ನು ಕಲಿಯುವುದಕ್ಕೂ, ಒಂದು ವಿಷಯದ ಜ್ಞಾನವನ್ನು ಪಡೆಯುವುದಕ್ಕೂ ಇರುವ ಅಂತರವನ್ನು ನಾವು ಅರಿಯಬೇಕು. ಭಾರತೀಯನಿಗೆ ವಿದೇಶೀಯ ಭಾಷೆಯನ್ನು ಕಲಿಯುವ ಹೊರೆ ತಪ್ಪಿದರೆ, ನಿಸ್ಸಂದೇಹವಾಗಿ ಅವನ ಜ್ಞಾನ ವಿಶಾಲವೂ, ಆಳವೂ ಆಗುತ್ತದೆ.

ಭಾರತೀಯನು ಹುಟ್ಟಿದಂದಿನಿಂದ ಸಾಯುವತನಕವೂ ಹಿಂದಿ, ಬಂಗಾಳಿ,

ಸಂಸ್ಕೃತ, ಅರೇಬಿಕ್, ಪರ್ಶಿಯನ್, ಇಂಗ್ಲಿಷ್ ಇತ್ಯಾದಿ ವಿವಿಧ ಭಾಷೆಗಳನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ಪರಭಾಷೆಯೊಂದರ ಜಟಿಲತೆಯನ್ನು ವಶ ಪಡಿಸಿಕೊಳ್ಳುವ ಈ ನಿರಂತರ ಹೋರಾಟದಲ್ಲಿ ಭೂಗೋಳ, ಚರಿತ್ರೆ, ಅರ್ಥಶಾಸ್ತ್ರ, ರಸಾಯನಶಾಸ್ತ್ರ, ಗಣಿತ—ಮತ್ತು ಇತರ ಶಾಸ್ತ್ರಗಳ ಅಭ್ಯಾಸ ಪೂರ್ಣತೆಯನ್ನು ಪಡೆಯುವುದೇ ಇಲ್ಲ. ಅವನ ಇಡೀ ಜೀವನ ಇಂಗ್ಲಿಷ್ ಭಾಷೆಯನ್ನು ಕಲಿಯುವುದರಲ್ಲಿಯೇ ವ್ಯರ್ಥವಾಗುತ್ತದೆ. ಭಾಷೆಯನ್ನು ಸುಧಾರಿಸಿಕೊಳ್ಳುವ ಕೊನೆಯಿಲ್ಲದ ಪ್ರಯತ್ನಗಳಲ್ಲಿ ಆತ ವಿಷಯದ ಆಳವನ್ನು ಕಾಣುವಂತೆಯೇ ಇಲ್ಲ. ಇದರಿಂದಲೇ ನಾವು ಮಾಡುವ ವಿಜ್ಞಾನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಚರಿತ್ರೆ, ಭೂಗೋಳ—ಮುಂತಾದ ವಿಷಯಗಳ ಅಭ್ಯಾಸ ಕೇವಲ ಅಗ್ಗದ ಅನುಕರಣೆಯಾಗಿದೆ. ಯಾವುದೇ ಸ್ಮರಣೀಯವಾದ ಕೊಡುಗೆಯೂ ಅದರಿಂದ ಸಾಧ್ಯವಾಗಿಲ್ಲ. ಯಾವುದೊಂದು ರಾಷ್ಟ್ರೀಯ ಸಮಸ್ಯೆಯ ಗಹನವಾದ ಪರಿಶೀಲನೆ ಹಾಗೂ ಪರಿಹಾರವನ್ನು ಅದು ಕೊಡಲಾರದು. ಅಲ್ಲದೆ, ಆಯಾ ಕ್ಷೇತ್ರದಲ್ಲಿ ವಿದೇಶೀಯ ಸಮಕಾಲೀನರೊಡನೆ ಸರಿಸಮಾನವಾಗಿ ನಿಲ್ಲಬಲ್ಲ ವಿಜ್ಞಾನಿಯನ್ನಾಗಲಿ, ಸಾಹಿತಿಯನ್ನಾಗಲಿ ಅದು ಸೃಷ್ಟಿಸಿಲ್ಲ. ಭಾರತೀಯ ವಿದ್ಯಾರ್ಥಿಯನ್ನು ಇಂಗ್ಲಿಷಿನ ಶೃಂಖಲೆಗಳು ಬಿಗಿದಿವೆ; ಅವನ ಮನಸ್ಸಿಗೆ ತುಕ್ಕು ಹಿಡಿಯುತ್ತಿವೆ.

ಭಾರತದ ಶಾಲಾ ವಿದ್ಯಾರ್ಥಿಯನ್ನು, ಅವನ ದೇಹ ಮತ್ತು ಮನಸ್ಸನ್ನು, ಇಂಗ್ಲೀಷಿನ ಅಮಾನುಷ ಹೊರೆಯಿಂದ ರಕ್ಷಿಸಿರಿ. ನಮ್ಮ ಶಿಕ್ಷಣಕ್ರಮದಲ್ಲಿ ಇಂಗ್ಲೀಷು ಒಂದು ಕಡ್ಡಾಯವಾದ ವಿಷಯ. ಬಹು ಮಂದಿ ವಿದ್ಯಾರ್ಥಿಗಳು ಅದರಲ್ಲಿ ಉತ್ತೀರ್ಣರಾಗದೆ ಅವರ ಜೀವನವೇ ವಿಪತ್ತಿಗೊಳಗಾಗುತ್ತದೆ. ಎಷ್ಟೊಂದು ಅಪಾರವಾದ ರಾಷ್ಟ್ರೀಯ ಸಂಪತ್ತು ಹಾಗೂ ಕಾಲ ನಷ್ಟವಾಗುತ್ತದೆ! ರಾಷ್ಟ್ರದಾದ್ಯಂತ ಚಳುವಳಿಯನ್ನು ಹೂಡಿ ನೀವು ಧೈರ್ಯವಾಗಿ ಘೋಷಿಸಬೇಕು: "ನಮ್ಮ ಮನಸ್ಸುಗಳಿಂದ ಇಂಗ್ಲೀಷಿನ ಅಡಚಣೆಯನ್ನು ತೆಗೆದುಹಾಕಿ. ನಮಗೆ ವಿಷಯಗಳ ಜ್ಞಾನ ಬೇಕಾಗಿದೆ. ಅದರಿಂದ ನಾವು ಪ್ರಬಲವಾದ ರಾಷ್ಟ್ರವನ್ನು ಕಟ್ಟಬಲ್ಲೆವು."

ಬಂಗಾಳದಲ್ಲಿ ಬಂಗಾಳಿಯನ್ನು ಹೆಚ್ಚುಹೆಚ್ಚಾಗಿ ಕಲಿಸಬೇಕು; ಬಂಗಾಳದ ಮಕ್ಕಳಿಗೆ ಅದು ಶಿಕ್ಷಣ ಮಾಧ್ಯಮವಾಗಬೇಕು. ಆದರೆ ಬಂಗಾಳದವರಲ್ಲದ ಮಕ್ಕಳು ತಮ್ಮ ಮಾತೃ ಭಾಷೆಯಲ್ಲಿಯೇ ಶಿಕ್ಷಣ ಪಡೆಯುವ ಹಕ್ಕನ್ನು ಸಮಾನವಾಗಿ ಕೊಡಬೇಕು. ಬೀಹಾರದಲ್ಲಿ, ಮುಖ್ಯವಾಗಿ ಮನ್‌ಭೂಮ್ ಮತ್ತು ಪೂರ್ನಿಯ ಪ್ರದೇಶಗಳಲ್ಲಿ, ಹಿಂದಿಯನ್ನು ಬಂಗಾಳದ ವಿದ್ಯಾರ್ಥಿಗಳ ಮೇಲೆ ಹೊರಿಸಲಾಗಿದೆ. ಈ ಹಿಂದಿ ಅತಿರೇಕವನ್ನು ನಿಲ್ಲಿಸಿ, ಸ್ನಾತಕೋತ್ತರ (Postgraduate) ಶಿಕ್ಷಣವನ್ನು ಹಿಂದಿ

ಯಲ್ಲಿ ಕೊಡಬಹುದು. ಭಾಷೆಗಳನ್ನು ಕಲಿಯುವ ವಿಚಾರದಲ್ಲಿ ಹೇಳುವುದಾದರೆ, ಮೂರು ಭಾಷೆಗಳನ್ನು—ಒಂದು ಮಾತೃಭಾಷೆ, ರಾಷ್ಟ್ರಭಾಷೆ ಮತ್ತು ವಿದೇಶೀಯವೋ ರಾಷ್ಟ್ರೀಯವೋ ಆದ ಒಂದು ಐಚ್ಛಿಕ ಭಾಷೆ—ಕಲಿಸಬೇಕು. ಬಂಗಾಳಿ, ತಮಿಳು ಮತ್ತು ಇತರ ಭಾಷೆಗಳನ್ನು ಇಂಗ್ಲೀಷಿನ ಮಟ್ಟದಲ್ಲಿ ಪರಿಗಣಿಸಬೇಕು.

ನಮ್ಮ ಸಾಮಾಜಿಕ ಜೀವನ ಕಳೆದ ೨,೦೦೦ ವರ್ಷಗಳಿಂದಲೂ ಕಲುಷಿತವಾಗಿಯೇ ಉಳಿದಿದೆ. ಸಂಸ್ಕೃತವೇ ರಾಜಭಾಷೆಯಾಗಿದ್ದ ಕಾಲದಲ್ಲಿ ದಲಿತರ, ಸ್ತ್ರೀಯರ ಮತ್ತು ಶೂದ್ರರ ಭಾಷೆಗಳಾಗಿದ್ದ ಪರ್ಶಿ, ಪ್ರಾಕೃತ, ಪಾಳಿ ಮತ್ತು ಶೌರಸೇನಿ—ಈ ಜಾನಪದ ಭಾಷೆಗಳೂ ಕೂಡ ಹೆಚ್ಚಾಗಿ ಅಸ್ತಿತ್ವದಲ್ಲಿದ್ದುವು. ಸಂಸ್ಕೃತ, ಅರೇಬಿಕ್, ಪರ್ಶಿಯನ್, ಮತ್ತು ಇಂಗ್ಲಿಷ್—ಹೀಗೆ ಒಂದಾದ ಮೇಲೊಂದು ಭಾಷೆಯನ್ನು ಆಳರಸರು ಬಡಜನತೆಯ ಮೇಲೆ ಹೊರಿಸಿದರು. ಸಂಸ್ಕೃತ, ಅರೇಬಿಕ್, ಪರ್ಶಿಯನ್, ಇಂಗ್ಲೀಷ್ ಭಾಷೆಗಳನ್ನು ಜನತೆಯ ಭಾಷೆಗಳೆಂದು ಹೇಳುವಂತೆಯೇ ಇಲ್ಲ. ಅವು ಸ್ವಲ್ಪ ಜನ ಪ್ರಭುತ್ವದ (Oligarchy) ಅವಶೇಷಗಳು. ರಾಷ್ಟ್ರೀಯ ಉಡುಪು, ರಾಷ್ಟ್ರೀಯ ಆಹಾರ, ರಾಷ್ಟ್ರೀಯ ಶಿಲ್ಪ ಮತ್ತು ರಾಷ್ಟ್ರೀಯ ಭಾಷೆ—ಎಲ್ಲವೂ ಈ ಮುಖ್ಯ ವ್ಯತ್ಯಾಸವನ್ನು ತೋರಿಸುತ್ತವೆ. ಭಾರತದ ಸಾಮಾಜಿಕ ಜೀವನದ ವ್ಯವಸ್ಥೆ ಯಾವಾಗಲೂ ಈ ಅಪಶ್ರುತಿಯನ್ನೇ ಮಿಡಿದಿದೆ. ಒಂದು ವಿಷಸರ್ಪ ನಮ್ಮ ಸಾಮಾಜಿಕ ಜೀವನದಲ್ಲಿ ಸುರುಳಿ ಸುತ್ತಿಕೊಂಡಿದೆ. ಅದು ಕಳೆದ ೨೦೦೦ ವರ್ಷಗಳಿಂದಲೂ ನಮ್ಮ ಸಾಮಾಜಿಕ ಜೀವನಕ್ಕೆ ವಿಷವನ್ನೂಡಿದೆ; ಈಗಲೂ ಊಡುತ್ತಿದೆ. ಅದು ನಮ್ಮ ಸಾಮಾಜಿಕ ಜೀವನವನ್ನು ಎರಡು ವಿರುದ್ಧ ವರ್ಗಗಳಾಗಿ ವಿಂಗಡಿಸಿದೆ. ಒಂದು ಕಡೆ ರಾಷ್ಟ್ರೀಯ ಭಾಷೆ, ರಾಷ್ಟ್ರೀಯ ಉಡುಪು, ರಾಷ್ಟ್ರೀಯ ಆಹಾರ ಮತ್ತು ರಾಷ್ಟ್ರೀಯ ಶಿಲ್ಪವನ್ನು ಕಾಣುತ್ತೇವೆ. ಇದಕ್ಕೆ ವಿರುದ್ಧವಾಗಿ ಜಹಗೀರುದಾರರಂತಿರುವ ಶೋಷಕವರ್ಗದ (Feudal class) ಭಾಷೆ, ಉಡುಪು, ಆಹಾರ, ಶಿಲ್ಪಗಳು ಕಂಡುಬರುತ್ತವೆ. ಈ ವರ್ಗದ ನಾಲ್ಕು ಅಥವಾ ಐದು ಲಕ್ಷ ಜನರು ಹಿಂದೆ ಅರೇಬಿಕ್, ಪರ್ಶಿಯನ್ ಮತ್ತು ಸಂಸ್ಕೃತಕ್ಕೆ ಅಂಟಿಕೊಂಡಿದ್ದ ಹಾಗೆ ಇಂದು ಇಂಗ್ಲಿಷಿಗೆ ಜಿಗಣೆಗಳಂತೆ ಅಂಟಿಕೊಂಡಿದ್ದಾರೆ. ಇಂಗ್ಲಿಷನ್ನು ಪದಚ್ಯುತಗೊಳಿಸಿ, ಭಾರತೀಯ ಭಾಷೆಗಳನ್ನು ಗದ್ದುಗೆಗೇರಿಸಲು ಪ್ರಯತ್ನ ನಡೆದಾಗಲೆಲ್ಲ ಈ ವಿಷಸರ್ಪ ಬುಸುಗುಟ್ಟ ತೊಡಗುತ್ತದೆ. ಏಕೆಂದರೆ ಈ ಜಹಗೀರುದಾರಿ ಉಡುಪು, ಭಾಷೆ, ಆಹಾರ ಮತ್ತು ಶಿಲ್ಪ ವಿಪತ್ತಿಗೆ ತುತ್ತಾಗುತ್ತವೆ. ಇವು ತನ್ನಿಂದ ಕಿತ್ತುಕೊಳ್ಳಲ್ಪಟ್ಟಾವೆಂಬ ಭೀತಿಯಿಂದ ಅದು ರೋಷಗೊಳ್ಳುತ್ತದೆ. ಇಂಗ್ಲಿಷ್ ಭಾಷೆ

ಈ ಶೋಷಕ ಜಹಗೀರುದಾರಿ ಕಟ್ಟಡಕ್ಕೆ ತಳಹದಿಯಾಗಿದೆ. ಅದು ನಾಶವಾದ ಕೂಡಲೆ, ಇಡೀ ಕಟ್ಟಡ ಇಸ್ಪೀಟು ಮನೆಯಂತೆ ನೆಲಕ್ಕೆ ಕುಸಿದುಬೀಳುತ್ತದೆ.

ತುಂಬಾ ಪ್ರಚಾರದಲ್ಲಿರುವ ಇನ್ನೂ ಒಂದು ವಾದವಿದೆ: ನಾವು ಬಳಸುವ ಬಣ್ಣದ ಬಿಸಿಲು ಕನ್ನಡಕಗಳು ಮತ್ತು ಸಾಮಾನ್ಯ ಕನ್ನಡಕಗಳು ಇಂಗ್ಲಿಷರ ಕಾಣಿಕೆ; ನಮ್ಮ ಕೇಶಾಲಂಕಾರದ ರೀತಿಯೂ ಬ್ರಿಟಿಷರಿಂದ ಬಂದುದು—ಹಾಗಾದರೆ ಇಂಗ್ಲಿಷ್ ಭಾಷೆಗೆ ಮಾತ್ರವೇ ಏಕೆ ವಿರೋಧ? ಆದರೆ ಕನ್ನಡಕಗಳು ನಿಜವಾಗಿಯೂ ಇಂಗ್ಲಿಷರವು ಎಂದು ಹೇಳಲಾದೀತೆ? ಬಿಳಿಯ ಜನಾಂಗಗಳಿಗೆಲ್ಲಾ ಬ್ರಿಟನ್ನರು ಎಂಬ ಮುದ್ರೆಯನ್ನೇಕೆ ಹಚ್ಚುತ್ತೀರಿ? ಎಲ್ಲ ಆಧುನಿಕ ಅನ್ವೇಷಣೆಗಳು ಮತ್ತು ಪದ್ಧತಿಗಳು ಬ್ರಿಟಿಷರ ಕಾಣಿಕೆಯೆನ್ನುವುದು ಭಾರತೀಯರ ಭ್ರಾಂತಿ. ಪೆಟ್ರೋಲು ಮತ್ತು ವಿಮಾನಗಳನ್ನು ಅಮೆರಿಕನ್ನರು ಕಂಡುಹಿಡಿದರು. ವಿದ್ಯುಚ್ಛಕ್ತಿ ಬ್ರಿಟಿಷರ ಕೊಡುಗೆ. ರೇಡಿಯೋ ಮತ್ತು ಕನ್ನಡಕಗಳು ಜರ್ಮನಿಯಿಂದ ಬಂದುವು. ಹಾಗಾದರೆ, ಎಲ್ಲರ ಭಾಷೆಗಳನ್ನೂ ಏಕೆ ಸ್ವೀಕರಿಸಬಾರದು? ಇಂಗ್ಲಿಷ್ ಒಂದೇ ಏಕೆ? ಯೂರೋಪಿಯನ್ನರ—ಅದರಲ್ಲಿಯೂ ಅವರ ಮಹಿಳೆಯರ—ಕೇಶಾಲಂಕಾರದ ರೀತಿ ನಮ್ಮ ಅಜಂತಾ ಮತ್ತು ಎಲ್ಲೋರದ ರೀತಿಗಳ ಅನುಕರಣೆ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ.

ಈಗ ಮೂಲಭೂತವಾದ ಪ್ರಶ್ನೆಗೆ ಬರೋಣ. ವಾಣಿಜ್ಯ ಹಾಗೂ ವಿನಿಮಯ ಹೇಗೆ ನಡೆಯುತ್ತವೆ? ಅವುಗಳಲ್ಲಿ ಮೂರು ವಿಭಾಗಮಾಡಬಹುದು; ಉಪಯುಕ್ತ ವಸ್ತುಗಳು, ವಿಚಾರಗಳು ಮತ್ತು ಪಾರಿಭಾಷಿಕ ನಾಮಕರಣ. ಹಾರುಮದ್ದು ಒಂದು ಉಪಯುಕ್ತ ವಸ್ತು—ಬಾಣ ಬಿರುಸು, ಯುದ್ಧ ಸಾಮಗ್ರಿಗಳು ಮತ್ತಿತರ ಅನೇಕ ವಸ್ತುಗಳ ತಯಾರಿಕೆಗಾಗಿ ಉಪಯೋಗಿಸುವಂಥದು. ಅದನ್ನು ಮೊದಲು ಕಂಡುಹಿಡಿದವರು ಚೀಣಾದವರು. ಆದರೆ ನಮ್ಮಲ್ಲನೇಕರು ಅದು ಬ್ರಿಟಿಷ್ ಮೂಲವುಳ್ಳದ್ದೆಂದು ತಪ್ಪಾಗಿ ನಂಬಿ, ಅದನ್ನು 'ಗನ್ ಪೌಡರ್' ಎಂದು ಕರೆಯುತ್ತೇವೆ. ಕ್ರಿಶ್ಚಿಯನ್ನರು ತಮ್ಮ ಚರ್ಚುಗಳನ್ನು ಬಹಿಷ್ಕರಿಸುವಂತೆ ಜನತೆಯನ್ನು ಪ್ರೇರಿಸುವ ನಾಸ್ತಿಕನೆಂದು ನನ್ನನ್ನು ಆಪಾದಿಸುತ್ತಾರೆ. ಇಂಗ್ಲಿಷು ಕ್ರಿಸ್ತನ ಭಾಷೆಯಾಗಿರಲಿಲ್ಲ. ಗೌತಮ ಬುದ್ಧನು ಸ್ವಲ್ಪ ಜನ ಪ್ರಭುತ್ವದ ಭಾಷೆಯಾದ ಸಂಸ್ಕೃತವನ್ನು ವರ್ಜಿಸಿ, ಲಕ್ಷಾಂತರ ಜನರು ಅರ್ಥಮಾಡಿಕೊಳ್ಳುತ್ತಿದ್ದ ಪಾಳಿ ಭಾಷೆಯನ್ನು ಆರಿಸಿಕೊಂಡನು. ಕ್ರಿಸ್ತನು ಅರೇಮಿಕ್ ಭಾಷೆಯಲ್ಲಿ ಉಪದೇಶಿಸಿದನು. ಬ್ರಾಹ್ಮಿ ಭಾಷೆಯನ್ನು ವ್ಯಾಪಿಸಿದ್ದ ಅರೇಮಿಕ್ ಲಿಪಿ ಬಂಗಾಳಿ ಹಾಗೂ ಹಿಂದಿಯ ಮೇಲೆ ಅಪಾರವಾದ ಪ್ರಭಾವ ಬೀರಿತು. ಇಂದು ಬ್ರಾಹ್ಮಿ ಭಾಷೆ ಬಳಕೆಯಲ್ಲಿಲ್ಲ. ಆದರೆ ಅದು ಭಾರತೀಯ ಭಾಷೆಗಳಿಗೆ

ತುಂಬಾ ಹತ್ತಿರವಾಗಿತ್ತು. ಕ್ರಿಶ್ಚಿಯನ್ ಮತಕ್ಕೂ ಇಂಗ್ಲಿಷ್ ಭಾಷೆಗೂ ಯಾವ ಸಂಬಂಧವೂ ಇಲ್ಲ.

ಈಗ ಕಮ್ಯೂನಿಸಂ, ಗಾಂಧಿವಾದ, ಕ್ಯಾಪಿಟಲಿಸಂ—ಮುಂತಾದ ವಿಚಾರಗಳಿಗೆ ಬರೋಣ. ವಿಚಾರ ವಿನಿಮಯ ಧಾರಾಳವಾಗಿ, ನಿರ್ಭಯವಾಗಿ ನಡೆಯಬೇಕು. ಇನ್ನು ಪಾರಿಭಾಷಿಕ ನಾಮಕರಣದ ಸಮಸ್ಯೆ : 'ಮೋಟಾರು' ಒಂದು 'ಉಪಯುಕ್ತ ವಸ್ತು'ವೂ ಹೌದು, ಒಂದು 'ಹೆಸರೂ' ಹೌದು. ಹೆಸರುಗಳನ್ನು ಸಂಗ್ರಹಿಸುವುದು ಭಾಷೆಯ ಒಂದು ಮುಖ್ಯ ಕಾರ್ಯ. 'ಉಪಯುಕ್ತ ವಸ್ತು'ಗಳು ಮತ್ತು 'ವಿಚಾರ'ಗಳು ಯಾವ ದೇಶದಿಂದ ಬಂದರೂ ಸರಿ, ಅವುಗಳನ್ನು ಮಡಿವಂತಿಕೆ ಮತ್ತು ಸಂಕೋಚವಿಲ್ಲದೆ ಸ್ವಾಗತಿಸಬೇಕು. ಆದರೆ ಪಾರಿಭಾಷಿಕ ನಾಮಕರಣದ ವಿಷಯದಲ್ಲಿ ನಮ್ಮ ಪ್ರಾದೇಶಿಕ ಭಾಷೆಗಳ ವಿಪುಲವಾದ ಗಣಿಗಳನ್ನೇ ಆಶ್ರಯಿಸಬೇಕು. ಎಲ್ಲಿ ಮತ್ತು ಯಾವಾಗ ಆವಶ್ಯಕತೆಯುಂಟಾಗುತ್ತದೆಯೋ ಅಲ್ಲಿ ಮಾತ್ರ ವಿದೇಶೀಯ ಶಬ್ದದ ಬಳಕೆಯನ್ನು ಅಂಗೀಕರಿಸೋಣ. ಆದರೆ ಹಾಗೆ ಮಾಡುವುದಕ್ಕೆ ಮೊದಲು, ಆ ಶಬ್ದ ನಮ್ಮ ನೆಲದ ಜಾಯಮಾನಕ್ಕೆ ಹೊಂದುವಂತೆ ಹದಗೊಳಿಸಬೇಕು. ಸಂಪ್ರದಾಯ ಶರಣರಾದ ಪಂಡಿತರು ಕ್ಲಿಷ್ಟವಾದ, ಸಂಸ್ಕೃತಮಯವಾದ ಹಿಂದಿ ಮತ್ತು ಬಂಗಾಳಿಯನ್ನು ಪ್ರಯೋಗಿಸಿ ತಮ್ಮ ಭಾಷೆಗಳ ಪ್ರಗತಿಗೆ ಅಪಾಯವನ್ನುಂಟುಮಾಡುತ್ತಾರೆ. ನಮ್ಮ ವರ್ತಮಾನ ಪತ್ರಿಕೆಗಳ ಹಿಂದಿಯನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಹೆಚ್ಚು ಕಷ್ಟಕರವಾಗುತ್ತಿದೆ. 'ಮೆಂಬರ್' ಎಂಬ ಪದಕ್ಕೆ ಹಿಂದಿಯಲ್ಲಿ ಸಮಾನಪದ 'ಸಂಸದ್ ಸದಸ್ಯ'. ನಗರ ಸಭೆಯ ಮತ್ತು ಜಿಲ್ಲಾ ಸಭೆಯ ಸದಸ್ಯರು ಕ್ರಮವಾಗಿ ಪೌರ್ ಪರಷದ್, ಜಿಲ್ಲಾ ಪರಷದ್ ಎಂದು ಕರೆಯಲ್ಪಡುತ್ತಾರೆ. ಲೋಕಸಭೆಯ 'ಸದಸ್ಯ' ಎಂಬುದಕ್ಕೂ 'ಪರಷದ್' ಎಂಬುದಕ್ಕೂ ಎಷ್ಟೊಂದು ಸಾಮರಸ್ಯರಹಿತ ವ್ಯತ್ಯಾಸ! ಇದು ಹೀಗಿರಕೂಡದು. ಸಾದೃಶ್ಯವುಳ್ಳ ಶಬ್ದಗಳ ನಡುವೆ ಒಂದು ಸಾಮಾನ್ಯ ಸೂತ್ರವಿರಬೇಕು. ಗ್ರಾಮ ಸಭೆಯ ಸದಸ್ಯನನ್ನು ಗಾವನ್‌ಪಂಚ್ ಎಂದು ಕರೆಯೋಣ. ಹೀಗೆಯೇ ಮುಂದುವರಿದು ಶಹರ್‌ಪಂಚ್, ಪ್ರದೇಶ್‌ಪಂಚ್ ರಾಷ್ಟ್ರಪಂಚ್—ಎಂಬ ಶಬ್ದಗಳನ್ನು ಸೃಷ್ಟಿಸಬಹುದು. ಅದ್ಭುತವಾದ ಶಕ್ತಿ, ಸತ್ವಗಳನ್ನುಳ್ಳ ಒಂದು ಭಾಷೆಯನ್ನು ನಾವು ರೂಪಿಸಬೇಕಾಗಿದೆ. ಹಿಂದಿಯಲ್ಲಿ ಲಾಲ್ಟೆನ್ ಎಂದರೇನೆಂಬುದು ಎಲ್ಲರಿಗೂ ಗೊತ್ತು. ಆದರೆ ಅದು 'ಲ್ಯಾಂಟರ್ನ್', ಎಂಬ ಇಂಗ್ಲೀಷ್ ಶಬ್ದದ ಭಾರತೀಯ ರೂಪವೆಂಬುದು ಕೆಲವರಿಗೆ ಮಾತ್ರ ಗೊತ್ತು. ಇದೇ ಮಾದರಿಯಲ್ಲಿ ಕೆಲವು ವ್ಯತ್ಯಾಸಗಳೊಡನೆ, 'ಟೆಲಿಫೋನ್', ಎಂಬ ಇಂಗ್ಲಿಷ್ ಶಬ್ದವನ್ನೂ ನಮ್ಮ ಶಬ್ದಸೃಷ್ಟಿಗೆ ಸೇರಿಸಿಕೊಳ್ಳ

ಬಹುದು. 'ಮ್ಯಾಜಿಸ್ಟ್ರೇಟ್' ಎಂಬ ಇಂಗ್ಲಿಷ್ ಶಬ್ದ ಮಾಜಿಸ್ಟರ್ ಎಂಬುದಾಗಿ ಹಿಂದಿಗೆ ಬಂದಿದೆ.

ವಿದೇಶೀಯ ಭಾಷೆಗಳಿಂದ ಶಬ್ದಗಳನ್ನು ತೆಗೆದುಕೊಳ್ಳುವಾಗ ನಾವು ಎಚ್ಚರಿಕೆಯಿಂದಿರಬೇಕು. ನಮ್ಮಲ್ಲಿಯೇ ಶ್ರೀಮಂತವಾದ ಶಬ್ದ ಭಂಡಾರವಿರುವಾಗ ನಾವು ವಿದೇಶೀಯವಾದ ಎಲ್ಲವನ್ನೂ ನುಂಗಿಬಿಡಬಾರದು. ಇಂಗ್ಲಿಷ್ ಪದಗಳನ್ನು ನಮ್ಮವು ಎಂದೇ ಒಪ್ಪಿಕೊಳ್ಳುವುದಾದರೆ, ನಮ್ಮ ಮಕ್ಕಳಿಗೆ ಶಾಂತಿ, ಸೀತಾ ಎಂಬುದರ ಬದಲು ಜಾನ್, ಎಲಿಜಬೆತ್ ಎಂದೇಕೆ ಹೆಸರಿಡಬಾರದು ?

ಸ್ವಯಂಸೇವಕರು ಪ್ರತಿಯೊಂದು ಮನೆಯ ಬಾಗಿಲಿಗೂ ಹೋಗಿ 'ಇಂಗ್ಲಿಷ್ ವಿರುದ್ಧ ಚಳುವಳಿ'ಯನ್ನು ಕುರಿತು ಚರ್ಚೆಯನ್ನು ಆರಂಭಿಸಬೇಕು. ಹೊಸ ಹೊಸ ವ್ಯಕ್ತಿಗಳೊಡನೆ ಚರ್ಚಿಸುವುದರಿಂದ ವಿಚಾರ ಪ್ರಚೋದನೆಯಾಗುತ್ತದೆ; ಒಂದೇ ಬಗೆಯ ವ್ಯಕ್ತಿಗಳನ್ನು ಮತ್ತೆ ಮತ್ತೆ ಭೇಟಿಮಾಡುವುದರಿಂದ ನಮ್ಮ ಮತಿ ಮೊಂಡಾಗುತ್ತದೆ. ಹೆಜ್ಜೆಹೆಜ್ಜೆಯಾಗಿ ಮುಂದುವರಿಯಲು, ಯತ್ನಿಸಿ; ನಿಧಾನವಾದರೂ ಚಿಂತೆಯಿಲ್ಲ. ಭಾರತದ ರಾಜಕೀಯ ಪಕ್ಷಗಳು ಪಾರ್ಶ್ವವಾಯು ಪೀಡಿತವಾಗಿವೆ; ತಮ್ಮ ಗೂಟಗಳಿಗೆ ತಾವೇ ಬಂಧಿಸಲ್ಪಟ್ಟಿವೆ. 'ಇಂಗ್ಲಿಷ್ ವಿರುದ್ಧ ಚಳುವಳಿ' ಅದ್ಭುತ ಶಕ್ತಿಯಿಂದ ಕೂಡಿ ಸುಪ್ತವಾಗಿದೆ. ಯಾವುದೊಂದು ಪಕ್ಷದ ಘೋಷಣೆಯಾಗಲಿ, ಪಕ್ಷದ ಧ್ವಜವನ್ನೆತ್ತುವುದಾಗಲಿ ಬೇಡ.

ನಮ್ಮ ಇಂದಿನ ಸಮಗ್ರ ಸಾಮಾಜಿಕ ಜೀವನದ ವ್ಯವಸ್ಥೆ ಕೃತಕವಾಗಿದೆ. ಉಳ್ಳವರು ಮತ್ತು ಇಲ್ಲದವರು, ವಿದ್ಯಾವಂತರು ಮತ್ತು ಅವಿದ್ಯಾವಂತರು, ಮೇಲು ಜಾತಿ ಮತ್ತು ಕೀಳು ಜಾತಿ, ಇಂಗ್ಲಿಷ್ ಕಲಿತವರು ಮತ್ತು ಇಂಗ್ಲಿಷ್ ಕಲಿಯದವರು—ಹೀಗೆ ಅದು ಹರಿದು ಹಂಚಿ ಹೋಗಿದೆ. ಶ್ರೀಮಂತ ವರ್ಗದವರ ಸಂಖ್ಯೆ ಎರಡು ಕೋಟಿ. ಈಗ ಈ ಸಂಖ್ಯೆ ನಾಲ್ಕು ಅಥವಾ ಐದು ಲಕ್ಷಕ್ಕಿಳಿದಿದೆ. ಇವರು ನಲವತ್ತು ಕೋಟಿ ಮೂಕಜನತೆಯ ಬೆನ್ನಮೇಲೆ ಭದ್ರವಾಗಿ ಕುಳಿತಿದ್ದಾರೆ. ಇಂಗ್ಲಿಷ್ ವಿರುದ್ಧ ಚಳುವಳಿಯನ್ನು ಸರಿಯಾದ ಮಾರ್ಗದಲ್ಲಿ ಹೂಡಿದರೆ ಅದರಿಂದ ದೊಡ್ಡ ವಿಪ್ಲವವೇ ಆಗುತ್ತದೆ. ಅದು ಈ ಶ್ರೀಮಂತ ವರ್ಗವನ್ನು ಆವರಿಸುತ್ತದೆ.

ನಮ್ಮ ಈ ಭೂಗ್ರಹದ ಮೇಲೆ ಇನ್ನೂರೈವತ್ತು ಕೋಟಿ ಜನರು ವಾಸಿಸುತ್ತಾರೆ. ಇವರಲ್ಲಿ ಮುನ್ನೂರು ಲಕ್ಷ ಜನರಿಗೆ ಇಂಗ್ಲಿಷ್ ಗೊತ್ತಿದೆ. ಇಂಗ್ಲಿಷ್ ಭಾಷೆ ವಿಚಾರ ಮತ್ತು ವಾಣಿಜ್ಯದ ಅಂತರ ರಾಷ್ಟ್ರೀಯ ವಾಹಕವಾಗುತ್ತದೆಂಬ ಭ್ರಾಂತಿ ಕೆಲವು ಜನರಿಗುಂಟು. ಇಂಥ ಭ್ರಮೆ ಎಲ್ಲ ಕಾಲದಲ್ಲೂ ಜನತೆಯನ್ನು ಕಾಡಿದೆ. ಹತ್ತೊಂಭತ್ತನೇ ಶತಮಾನದಲ್ಲಿ ಫ್ರೆಂಚ್ ಭಾಷೆ ಅಂತರರಾಷ್ಟ್ರೀಯ ಭಾಷೆಯೆಂದು

ನಂಬಲಾಗಿತ್ತು. ಆ ಸ್ಥಾನವು ಅಣುಯುಗದಲ್ಲಿ ಇಂಗ್ಲಿಷಿಗೆ ಸಲ್ಲಬೇಕೆನ್ನುವವರು ಕೆಲವರಿದ್ದಾರೆ. ಎಂಟು ಮತ್ತು ಒಂಭತ್ತನೇ ಶತಮಾನಗಳಲ್ಲಿ ಜಗತ್ತಿನ ಅಭಿಪ್ರಾಯ ಇಂಥ ಮನ್ನಣೆಯನ್ನು ಅರೇಬಿಕ್ ಭಾಷೆಗೆ ಕೊಟ್ಟಿರಬಹುದು. ೨,೦೦೦ ವರ್ಷಗಳ ಹಿಂದೆ ಸಂಸ್ಕೃತ ಇಂಥ ಸ್ಥಾನವನ್ನು ಪಡೆಯಬಹುದಾಗಿತ್ತು. ಕಾಲ ಪ್ರವಾಹ ತನ್ನ ದಿಕ್ಕನ್ನು ಬದಲಾಯಿಸಿ, ಇಂಗ್ಲಿಷಿನ ಸೇತುವೆಯನ್ನು ವಿಫಲಗೊಳಿಸಿದೆ. ರಷ್ಯನ್ ಭಾಷೆ ಶೀಘ್ರಗತಿಯಲ್ಲಿ ಮುಂದುವರಿಯುತ್ತಿದೆ; ಜನಾಭಿಪ್ರಾಯ ಅದರ ಕಡೆಗೆ ಹರಿಯುತ್ತಿದೆ. ಸ್ವಲ್ಪ ಕಾಲದನಂತರ, ರಷ್ಯನ್ ಭಾಷೆ ಅಂತರ ರಾಷ್ಟ್ರೀಯ ಭಾಷೆಯಾಗಲು ಹವಣಿಸಬಹುದು. ಇಂಗ್ಲಿಷ್ ಮತ್ತು ರಷ್ಯನ್‌ಭಾಷೆಗಳಿಗೆ ಘರ್ಷಣೆ ನಡೆದು ಎರಡು ಜನಾಂಗಗಳಿಗೆ ಕಾರಣವಾಗಬಹುದು. ಅಂತೂ ಇಂಗ್ಲಿಷ್ ಭಾಷೆ ಅಂತರ ರಾಷ್ಟ್ರೀಯ ಮಾಧ್ಯಮವಾಗುತ್ತದೆಂಬುದು ಕೇವಲ ಕಟ್ಟು ಕತೆ.

ವಿಜ್ಞಾನ ರಂಗದಲ್ಲಿ ಮುಖ್ಯವಾದುದು ಭಾಷೆಯಲ್ಲ; ಅಂಕಿ, ಅಂಶಗಳು. ಉಪಗ್ರಹವು ಸರಳಗಣಿತ, ಶುದ್ಧ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಹಾರ— ಇವುಗಳ ಉಪಯೋಗದಿಂದಾಗಿದೆಯೇ ಹೊರತು ಬೇರೇನೂ ಅಲ್ಲ. ವಿಜ್ಞಾನವು ವರ್ಣಮಾಲೆ ಮತ್ತು ಸಂಖ್ಯಾಚಿಹ್ನೆಗಳಿಂದ ಪೋಷಣೆ ಪಡೆಯುತ್ತದೆ.

ಸಂಗ್ರಹಾನುವಾದ: ಸಿ. ಪಿ. ಕೆ.

ಸಾದರ ಸ್ವೀಕಾರ

ಭಾರತೀಯ ವಾಙ್ಮಯ—ಅನುವಾದಕರು : ಬಿ. ಎಚ್. ಶ್ರೀಧರ ಮತ್ತು ಎನ್. ರಾಜಗೋಪಾಲರಾವ್ ; ಪ್ರಕಾಶಕರು : ಅವರೇ ; ಪುಟಗಳು ೯೮ ; ಬೆಲೆ, ರೂ. ೧-೦-೦.

ಕನ್ನಡ ಅಭಿಜ್ಞಾನ ಶಾಕುಂತಳ—ಲೇಖಕರು : ಎಸ್. ವಿ. ಪರಮೇಶ್ವರ ಭಟ್ಟ, ಎಂ.ಎ. ; ಪ್ರಕಾಶಕರು : ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು ; ಪುಟಗಳು ೧೧೫ ; ಬೆಲೆ, ಸಾಧಾರಣ ರೂ. ೨-೦-೦ ; ಕ್ಯಾಲಿಕೋ ರೂ. ೩-೫೦.

ಹವಿನ್ಮಾರ ಕಾವ್ಯ—ಸಂಪಾದಕರು : ಎಂ. ಎಸ್. ಸುಂಕಾಪೂರ, ಎಂ.ಎ. ; ಪ್ರಕಾಶಕರು : ಸುಕುಮಾರ ಗ್ರಂಥಮಾಲೆ, ಶಿವಯೋಗಮಂದಿರ, ಬಾದಾಮಿ ತಾಲ್ಲೂಕ್ ; ಪುಟಗಳು ೧೬೮ ; ಬೆಲೆ, ರೂ. ೨.೦೦.

ಅಮುಖ ಈಮುಖ—ಲೇಖಕರು : ಕೋ. ಚೆನ್ನಬಸಪ್ಪ ; ಪ್ರಕಾಶಕರು : ಸಜೀವ ಸಾಹಿತ್ಯ ಮಾಲೆ, ಬಳ್ಳಾರಿ ; ಪುಟಗಳು ೯೦ ; ಬೆಲೆ, ರೂ. ೧.೨೫.

ರಾಘವಾಂಕನ ಹರಿಶ್ಚಂದ್ರ ರೂಪಕಂ—ಬಿ. ನಂಜುಂಡಪ್ಪ ; ಪ್ರಕಾಶಕರು : ನವೋದಯ ಸಾಹಿತ್ಯ ಮಂದಿರ, ಮೈಸೂರು ; ಪುಟಗಳು ೯೬ ; ಬೆಲೆ, ಸಾಧಾರಣ ರೂ. ೨-೦-೦ ; ಕ್ಯಾಲಿಕೋ ರೂ. ೩-೦-೦.

ಕನ್ನಡ ಗೀತಗೋವಿಂದ—ಬಿ. ಎಸ್. ಮಂಜುನಾಥಭಟ್ಟ, ಎಂ.ಎ. ; ಪ್ರಕಾಶಕರು : ಬಿ. ಎಸ್. ಮಂಜುನಾಥಭಟ್ಟ, ೩೩೭ ಕಸ್ತೂರಿಬಾ ಎಕ್ಸ್‌ಟೆನಷನ್, ದಾವಣಗೆರೆ ; ಪುಟಗಳು ೧೦೭ ; ಬೆಲೆ, ಸಾಧಾರಣ ರೂ. ೧-೫-೦ ; ಕ್ಯಾಲಿಕೋ ರೂ. ೨-೨-೫.

ಶ್ರೀ ಲಕ್ಷ್ಮೀನೃಸಿಂಹ ಕಥಾಮೃತಂ—ಎಸ್. ಲಕ್ಷ್ಮೀನರಸಿಂಹ ; ಪ್ರಕಾಶಕರು : ಲಕ್ಷ್ಮೀನೃಸಿಂಹ ಕಾರ್ಯಾಲಯ, ೯೮೬ ಚಾಮರಾಜಪುರಂ, ಮೈಸೂರು ; ಪುಟಗಳು ೩೮ ; ಬೆಲೆ, ರೂ. ೦-೬-೫.

ಕನ್ನಡ ಗಾಥಾಸಪ್ತಶತಿ (ಭಾಗ-೧)—ಎಸ್. ವಿ. ಪರಮೇಶ್ವರ ಭಟ್ಟ, ಎಂ.ಎ. ; ಪ್ರಕಾಶಕರು : ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು ; ಪುಟಗಳು ೪೦ ; ಬೆಲೆ, ರೂ. ೦.೫೦.

ನುಡಿಗಟ್ಟು—ಶ್ರೀಮತಿ ಗು. ಶಂಕರಮ್ಮ ; ಪ್ರಕಾಶಕರು : ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯ ; ಹೆಚ್. ಬಿ. ಸಮಾಜ ರಸ್ತೆ, ಬೆಂಗಳೂರು-೪ ; ಪುಟಗಳು ೫೦ ; ಬೆಲೆ, ರೂ. ೦-೫-೦.

ಇವರು ಬಾಪು—ಆರ್. ಕೆ. ಪ್ರಭು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೧೭೦ ; ಬೆಲೆ, ರೂ. ೧-೫-೦.

ತ್ರಿಲಿಂಗೋಪಾಸನ—ಜಿ. ಟಿ. ಅಕ್ಕುಲಯ್ಯ ದೀಕ್ಷಿತ; ಪ್ರಕಾಶಕರು : ಶ್ರೀ ಕಾರ್ಯಾಲಯ, ಮದನಪಲ್ಲಿ ಪೋಸ್ಟ್, ಚಿತ್ತೂರು ಡಿಸ್ಟ್ರಿಕ್ಟ್ ; ಪುಟಗಳು ೩೦ ಬೆಲೆ, ರೂ. ೦-೨-೦.

ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ)—ಸಂಪಾದಕರು : ಕೆ. ನರಸಿಂಹಮೂರ್ತಿ ; ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨ ; ಬೆಲೆ, ಸಾದಾ ರೂ. ೪-೦-೦ ; ಕ್ಯಾಲಿಕೋ ರೂ. ೬-೦-೦.

ಸಾಹಿತ್ಯದ ಹಿನ್ನೆಲೆ—ವಿದ್ವಾನ್ ಕೆ. ವೆಂಕಟರಾಯಾಚಾರ್ಯ ; ಪ್ರಕಾಶಕರು : ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಪುಟಗಳು ೧೧೧ ; ಬೆಲೆ, ರೂ. ೧-೫-೦.

ಕಾಳಿದಾಸ ಮಹಾಕವಿಯ ಮೇಘಸಂದೇಶ—ಅನುವಾದಕರು : ಕೆ. ನರಸಿಂಹಶಾಸ್ತ್ರಿ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಪುಟಗಳು ೪೦ ; ಬೆಲೆ, ರೂ. ೦-೧೨-೦.

ಕನ್ನಡ ಸಂಸ್ಕೃತ ಲಘುಕ್ರಿಯಾಕೋಶ—ವಿದ್ವಾನ್ ರಾ. ಭ. ಹಾಸಣಗಿ ; ಪ್ರಕಾಶಕರು : ರಾ. ಭ. ಹಾಸಣಗಿ, ಸಂಸ್ಕೃತ ಪಂಡಿತರು, ಪುರ ಪ್ರೌಢಶಾಲಾ, ಸಕಲೇಶಪುರ ; ಪುಟಗಳು ೬೦ ; ಬೆಲೆ, ರೂ. ೦.೫೦.

ರಾಜಸೂಯಾಧ್ವರ—ಬಿ. ಪದ್ಮನಾಭ ಸೋಮಯಾಜಿ ; ಪ್ರಕಾಶಕರು : ಬಾಲಸಾಹಿತ್ಯ ಮಂಡಲ, ಲಿಮಿಟೆಡ್ ಮಂಗಳೂರು-೩ ; ಪುಟಗಳು ೧೦೩ ; ಬೆಲೆ, ರೂ. ೧.೨೫.

ಭವತಿ ಭಿಕ್ಷಾಂದೇಹಿ—ಹೆಚ್. ವಿ. ಚಂದ್ರಶೇಖರ್ ; ಪ್ರಕಾಶಕರು : ಸಿರಿಗನ್ನಡ ಪ್ರಕಾಶನ, ಹಿರಿಯೂರು ; ಪುಟಗಳು ೬೭ ; ಬೆಲೆ, ರೂ. ೦.೭೫.

ಕಾದಂಬರಿ—ಸಾಮಾನ್ಯ ಮನುಷ್ಯ—ಎಲ್. ಎಸ್. ಶೇಷಗಿರಿರಾವ್, ಎಂ.ಎ. ; ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪುಟಗಳು ೧೪೨ ; ಬೆಲೆ, ರೂ. ೧-೦-೦.

ಅಕ್ಕನ ಹಂಬಲ—ಟಿ. ಹೆಚ್. ಎಂ. ಸದಾಶಿವಯ್ಯನವರು ; ಪ್ರಕಾಶಕರು : ಮಲ್ಲಾಬಾದಿ ಮಹಾಂತಪ್ಪ ಸಹೋದರರು, ಪಂಪಾಸಾಹಿತ್ಯ ಪ್ರಕಟನಾಲಯ, ದಾವಣಗೆರೆ ; ಪುಟಗಳು ೧೪೪ ; ಬೆಲೆ, ರೂ. ೨-೦-೦.

ಮಲುಹಣದೇವ ಚರಿತ್ರೆ—ಸಂಪಾದಕರು : ಸೌ. ಮಲ್ಲಾಬಾದಿ ಚೆನ್ನಬಸಮ್ಮ, ಶ್ರೀ ಮಲ್ಲಾಬಾದಿ ವೀರಭದ್ರಪ್ಪ ; ಪ್ರಕಾಶಕರು : ಪಂಪಾಸಾಹಿತ್ಯ ಪ್ರಕಟನಾಲಯ, ಪ್ರೇಮದ ಬಳ್ಳಿಯ ಬಳಗ, ದಾವಣಗೆರೆ ; ಪುಟಗಳು ೬೨ ; ಬೆಲೆ, ರೂ. ೧-೦-೦.

ಮಲ್ಲಿಗೆ ನಗುತಾವೆ—ಕ. ರಾ. ಕೃ ; ಪ್ರಕಾಶನ : ಕಾವ್ಯೋದಯ ಪ್ರಕಾಶನ, 'ವಿದ್ಯಾಶ್ರಮ' ಸರಸ್ವತಿಪುರಂ, ಮೈಸೂರು ; ಪುಟಗಳು ೧೭೨ ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೨.೫೦ ; ಕ್ಯಾಲಿಕೋ ರೂ ೩.೦೦.

ಮಂತ್ರಬೀಜಕೋಶ—ಸಂ. : ಷ. ಬ್ರ. ಗುರುಪಾದಾ ಶಿವಾಚಾರ್ಯರು ; ಪ್ರಕಾಶಕರು : ವ್ಹಿ. ಬಿ. ಸೂರಕೋಡ, ದಲಾಲಿ ಮರ್ಚಂಟ, ನರಗುಂದ ; ಪುಟಗಳು ೧೮೨ ; ಬೆಲೆ, ರೂ. ೧-೦-೦.

ಕಾವ್ಯ ಮತ್ತು ಜೀವನ ಚಿತ್ರಣ—ಲೇಖಕರು : ಪ್ರೊ. ಸ. ಸ. ಮಾಳವಾಡ, ಕರ್ಣಾಟಕ ಸಹಕಾರಿ ಸಾಹಿತ್ಯ ಸಂಘ ಲಿ. ಧಾರವಾಡ ; ಪುಟಗಳು ೧೪೯ ; ಬೆಲೆ, ರೂ. ೧.೫೦. (ಮಾರ್ಚ್ ೧೯೫೮.)

ಖೋ !—ಒಂದು ಪ್ರಾಯೋಗಿಕ ಕಾದಂಬರಿ. ಬರೆದವರು : ಹನ್ನೊಂದು ಜನ ಸಾಹಿತ್ಯ ವಿನೋದಿಗಳು—(೧) ದ. ರಾ. ಬೇಂದ್ರೆ, (೨) ವಿ. ಕೃ. ಗೋಕಾಕ, (೩) ಎನ್. ಕೆ. ಕುಲಕರ್ಣಿ, (೪) ಎಂ. ಡಿ. ಇನಾಂದಾರ, (೫) ದ. ಬಾ. ಕುಲಕರ್ಣಿ, (೬) ಎ. ಕೆ. ವರಗಿರಿ, (೭) ಎಸ್. ಆರ್. ಮೊಕಾಸಿ, (೮) ಎ. ಕೆ. ರಾಮಾನುಜನ್, (೯) ಶಾಂತಿನಾಥ ದೇಸಾಯಿ, (೧೦) ಕೀರ್ತಿನಾಥ ಕುರ್ತಕೋಟಿ, (೧೧) ಎಸ್. ಆರ್. ಮೊಕಾಸಿ ; ಪ್ರಕಾಶಕರು : ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ ; ಪುಟಗಳು ೧೫೭ ; ಬೆಲೆ, ರೂ. ೨-೦-೦.

ಸಮಾಲೋಕನ—ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ. ಎ. ; ಪ್ರಕಾಶಕರು : ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು ; ಪುಟಗಳು viii+೨೭೬ ; ಬೆಲೆ, ರೂ. ೪.೫೦.

ಕನ್ನಡ ಯಜ್ಞಫಲ—ಡಾ|| ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿಎಚ್. ಡಿ. ; ಪ್ರಕಾಶಕರು : ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು ; ಪುಟಗಳು xvi+೧೨೪ ; ಬೆಲೆ, ರೂ. ೨.೦೦.

ಮಹಾಪ್ರಸ್ಥಾನ—ಪು. ತಿ. ನರಸಿಂಹಾಚಾರ್ ; ಪ್ರಕಾಶಕರು : ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು ; ಪುಟಗಳು viii+೭೦ ; ಬೆಲೆ, ರೂ. ೧.೫೦.

ಗ್ರಾಮಾಯಣ—ಲೇಖಕರು : 'ರಾವ್‌ಬಹಾದ್ದೂರ' ; ಪ್ರಕಾಶಕರು : ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪುಟಗಳು ೬೦೩ ; ಬೆಲೆ, ರೂ. ೭-೦-೦ (೧೯೫೭).

ಕಡಲ ಕರೆಯ ಚಿತ್ರಗಳು—ಲೇಖಕರು : ಚ. ರಾ. ; ಪ್ರಕಾಶಕರು : ಶಾಂತಿ ಪುಸ್ತಕ ಭಂಡಾರ, ಬೆಂಗಳೂರು-೪ ; ಪುಟಗಳು ೧೦೦ ; ಬೆಲೆ, ರೂ. ೧.೨೫.

ಬಾಳ ಗೆಳತಿ (ಶೃಂಗಾರ ಕವನಗಳು)—ಕವಿ : ಅಮ್ಮೆಂಬಳ ಶಂಕರನಾರಾಯಣ ನಾವಡ ; ಪ್ರಕಾಶಕರು : ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು ; ಪುಟಗಳು vi+೩೬ ; ಬೆಲೆ, ರೂ. ೦-೧೨-೦.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦
ಮಾರಾಟದ ಸುಂಕ	೨% ಪ್ರತ್ಯೇಕ			

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೨-೦-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಆಕಾಶವಾಣಿ ಕಟ್ಟಡ, ವಿ. ವಿ. ಮೊಹಲ್ಲ, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣ ಪತ್ರವನ್ನು ಪಡೆದು ಅದನ್ನು ಚಂದಾಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೭, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೭ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳನ್ನು ಸಂಚಿಕೆ ಒಂದಕ್ಕೆ ೬ ಆಣೆ ಅಥವಾ ೩೫ ನಯೆ ಪೈಸೆಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.
೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೬೨. ಭಾರತದಲ್ಲಿ ಪ್ರಜಾಪ್ರಭುತ್ವ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೬೩. ಆರೋಗ್ಯ ಸಾಧನೆ—ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ ಎಂ.ಎಸ್.

೬೪-೬೫. ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ. ಮತ್ತು ಚಂದ್ರಭಾಗಾದೇವಿ; ಬೆಲೆ, ಸಾದಾ ೫೦ ನಯೆ ಪೈಸೆ; ಉತ್ತಮ ೭೫ ನಯೆ ಪೈಸೆ.

೬೬. ಚುನಾವಣೆಗಳು—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)

೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ, ಬಿ.ಎಸ್‌ಸಿ., ಎಂ.ಬಿ. ಬಿ.ಎಸ್., ಡಿ.ಒ. ಎಂ.ಎಸ್. (ಲಂಡನ್)

೬೯. ಶಿಲ್ಪಿಯ ಪಾತ್ರ—ಶ್ರೀ ಬಿ. ಎಲ್. ಸಿ. ರಾಜನ್, ಬಿ.ಇ.

೭೦. ಪರತಂತ್ರಜೀವಿಗಳು ಮತ್ತು ಪರತಂತ್ರಜೀವನ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ, ಎಂ.ಎ., ಎಲ್‌ಎಲ್.ಬಿ.

೭೨. ವಿನೋದಗಣಿತ—ಶ್ರೀ ವಿ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್.

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೭೪. ಉಷ್ಣಯಂತ್ರಗಳ ಪರಿಚಯ—ಶ್ರೀ ಕೆ. ವಿ. ಸುಬ್ಬರಾಯ, ಬಿ.ಎಸ್‌ಸಿ., ಬಿ.ಇ.

ಬರಲಿವೆ

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

೭೬. ನಾಟ್ಯ ಸುಡಿ—ಶ್ರೀ ಎಸ್. ವಿ. ರಂಗಣ್ಣ, ಎಂ.ಎ.

೭೭. ಹಾಸ್ಯ—ಶ್ರೀ ಎಸ್. ವಿ. ರಂಗಣ್ಣ, ಎಂ.ಎ.

೭೮. ಮಾನವಶಾಸ್ತ್ರ—ಡಾ॥ ಕೆ. ವೆಂಕಟರಾಯಪ್ಪ, ಎಂ.ಎ., ಪಿಎಚ್.ಡಿ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ಮತ್ತು ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆಯಲ್ಲಿ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ಮಾರಾಟದ ತೆರಿಗೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೦ ರಂತೆ	೫೦	ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೧೫ ರಂತೆ	೨೦೦	ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೦ ರಂತೆ	೫೦೦	ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೫ ರಂತೆ	೨೦೦೦	ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

(ಏಪ್ರಿಲ್ ೧ ರಿಂದ ಮಾರ್ಚಿ ೩೧ ರ ವರೆಗೆ)

ಸಾಧಾರಣ ಪ್ರತಿ ೨೫ ನಯೆ ಪೈಸೆ ಉತ್ತಮ ಪ್ರತಿ ೩೭ ನಯೆ ಪೈಸೆ

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನ ಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ರ ವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
- ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್., ೧೯೪೭ ರಿಂದ

೧. **ಹರಿಶ್ಚಂದ್ರ ಕಾವ್ಯಸಂಗ್ರಹ** (ಆರನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ, ಸಾದಾ ರೂ. ೧-೮-೦ ; ಉತ್ತಮ ರೂ. ೨-೦-೦.

೨. **ಕರ್ಣಾಟಕ ಕಾದಂಬರೀ ಸಂಗ್ರಹ** (ಮೂರನೆಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ; ಬೆಲೆ, ಸಾದಾ ರೂ. ೧-೧೨-೦.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೪. **ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. ***ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಬೆಲೆ, ಸಾದಾ ರೂ. ೧-೦-೦.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ. ; ಬೆಲೆ, ಸಾದಾ ರೂ. ೪.೨೫ ; ಉತ್ತಮ ರೂ. ೫.೨೫.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ, ಸಾದಾ ರೂ. ೨-೨-೦ ; ಉತ್ತಮ ರೂ. ೨-೧೦-೦.

೧೧. ***ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. ರಾಜ್ಯಶಾಸ್ತ್ರ—ಲೇಖಕರು : ಎಚ್. ಕೃಷ್ಣರಾವ್, ಎಂ.ಎ. ;
ಬೆಲೆ, ಸಾದಾ ರೂ. ೧-೮-೦ ; ಉತ್ತಮ ರೂ. ೨-೮-೦.

೧೪. ಹದಿಬದೆಯ ಧರ್ಮ—ಸಂಪಾದಕಿಯರು : ಡಿ. ಚಂಪಾಬಾಯಿ, ಎಂ.ಎ. ;
ಬೆಲೆ, ಸಾದಾ ರೂ. ೧.೫೦ ; ಉತ್ತಮ ರೂ. ೨.೫೦

೧೫. *ಪುರಾಣನಾಮಚೂಡಾಮಣಿ—ಲೇಖಕರು : ಬೆನಗಲ್ ರಾಮರಾವ್,
ಎಂ.ಎ., ಎಲ್‌ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರೀ.

೧೬. *ಯಶೋಧರ ಚರಿತೆಯ ಸಂಗ್ರಹ — ಸಂಪಾದಕರು : ಕೆ. ವಿ.
ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು : ಕೆ. ಆರ್. ಶ್ರೀನಿವಾಸ
ಅಯ್ಯಂಗಾರ್, ಎಂ.ಎ.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.;
ಬೆಲೆ, ಸಾದಾ ರೂ. ೦-೧೨-೦ ; ಉತ್ತಮ ಪ್ರತಿ ರೂ. ೧-೪-೦.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.;
ಬೆಲೆ, ಸಾದಾ ರೂ. ೨-೦-೦ ; ಕ್ಯಾಲಿಕೊ ರೂ. ೩-೦-೦.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ. ಮತ್ತು
ಎ. ನಾರಾಯಣರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೧-೮-೦ ;
ಕ್ಯಾಲಿಕೊ ರೂ. ೧-೧೨-೦.

೨೧. ಆಧುನಿಕ ತತ್ವಶಾಸ್ತ್ರಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ. ;
ಬೆಲೆ, ಸಾದಾ ರೂ. ೧-೧೨-೦ ; ಕ್ಯಾಲಿಕೊ ರೂ. ೨-೧೨-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ,
ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦ ; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು : ಪ್ರೊ|| ಮಹಮದ್ ಅಬ್ಬಾಸ್
ಷೂಸ್ತ್ರಿ ; ಅನುವಾದಕರು : ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ,
ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೨೪. ತಮಿಳು ಪಾಠಗಳು—ಲೇಖಕರು : ಎಸ್. ರುದ್ರಪತಿ, ಎಂ.ಎ. ; ಬೆಲೆ,
ರೂ. ೩-೪-೦.

೨೫. ಅಶೋಕ—ಲೇಖಕರು : ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ,
ಸಾದಾ ರೂ. ೧-೨-೦ ; ಉತ್ತಮ ರೂ. ೨-೦-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦.

೨೭. **ಭಾರತೀಯ ಸಂಸ್ಕೃತಿ**—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ. ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. **ಸಾರ್ವಜನಿಕ ಹಣಕಾಸು**—ಲೇಖಕರು: ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ.; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. **ಆದಿಪುರಾಣ ಸಂಗ್ರಹ**—ಸಂಪಾದಕರು: ಎಲ್. ಗುಂಡಪ್ಪ, ಎಂ.ಎ.; ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೩-೦-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ, ಸಾದಾ ರೂ. ೧-೧೨-೦; ಉತ್ತಮ ರೂ. ೨-೪-೦.

೩೧. **ಕಾಳಿದಾಸ**—ಲೇಖಕರು: ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ.; ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೨-೮-೦.

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ತ. ಸು. ಶಾಮರಾವ್, ಎಂ.ಎ.; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೩. **ಶ್ರೀ ಕೃಷ್ಣ ಚರಿತ್ರೆ**—ಸಂಪಾದಕರು: ಶ್ರೀ ಕೆ. ವೆಂಕಟರಾಮಪ್ಪ, ಎಂ.ಎ.; ಬೆಲೆ, ಸಾದಾ ರೂ. ೧-೪-೦; ಉತ್ತಮ ರೂ. ೧-೧೨-೦.

೩೪. **ಕನ್ನಡ ಕೈಪಿಡಿ**—(ಭಾಗ ೧, ೨, ೩, ೪,) ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೫. **ಪ್ರಜಾಸರ್ಕಾರ**—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.; ಬೆಲೆ, ಸಾದಾ ರೂ. ೧-೧೨-೦; ಉತ್ತಮ ರೂ. ೨-೪-೦.

೩೬.***ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ**—ವಿದ್ವಾನ್ ಹೆಚ್. ಎನ್. ರಾಘವೇಂದ್ರಾಚಾರ್ಯ, ಎಂ.ಎ.

೩೭. **ಭೌತ ವಿಜ್ಞಾನ**—ಡಾ|| ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.; ಬೆಲೆ, ಸಾದಾ ರೂ. ೨.೫೦; ಉತ್ತಮ ರೂ. ೩.೫೦.

೩೮. **ಕಮ್ಯುನಿಸಂ**—ಎಲ್. ಶ್ರೀಕಂಠಯ್ಯ, ಎಂ.ಎ., ಎಂ.ಎಸ್‌ಸಿ. (ಲಂಡನ್), ಬಾರ್-ಅಟ್-ಲಾ; ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೩-೦-೦.

೩೮. **ವಿಜ್ಞಾನ ಸಂಶೋಧನೆ**—ಎಸ್. ವರದರಾಜನ್, ಬೆಲೆ, ಸಾದಾ ರೂ. ೩-೨-೦; ಉತ್ತಮ ರೂ. ೪-೨-೦.

೩೯. **ಗಣಿತಶಾಸ್ತ್ರದ ಚರಿತ್ರೆ**—ಸಿ. ಎನ್. ಶ್ರೀನಿವಾಸ ಐಯಂಗಾರ್, ಬೆಲೆ, ಸಾದಾ ರೂ. ೨.೮೦ ; ಉತ್ತಮ ರೂ. ೩.೮೦.

೪೦. **ರಸಾಯನಶಾಸ್ತ್ರ** (ಒಂದನೆಯ ಭಾಗ)—ಶ್ರೀ ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೫.೨೫ ; ಉತ್ತಮ ರೂ. ೬.೨೫.

೪೧. **ತರ್ಕಶಾಸ್ತ್ರ** (ಭಾಗ ೧)—ಜಿ. ಹನುಮಂತರಾವ್, ಬೆಲೆ, ಸಾದಾ ರೂ. ೨.೧೩ ; ಉತ್ತಮ ರೂ. ೩.೧೩.

ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ ಯಂತೆ ೨೫ ರೂಗಳ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ

ಶೇಕಡ ೧೮¾ ರಂತೆ ೧೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಶೇಕಡ ೨೫ ರಂತೆ ೨೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ (ಏಪ್ರಿಲ್ ೧ ರಿಂದ ಮಾರ್ಚಿ ೩೧ ರ ವರೆಗೆ) ಕೊಳ್ಳುವವರಿಗೆ.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಪಠ್ಯ ಪುಸ್ತಕ ಮಾಲೆ

೧. **ಇಂಟರ್‌ಮೀಡಿಯಟ್ ಭೌತಶಾಸ್ತ್ರ**—ಬಿ. ವಿ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೧೨-೦.

೨. **ಬೀಜರೇಖಾಗಣಿತ**—ಕೆ. ಮಂಜುನಾಥಯ್ಯ, ಎಂ.ಎಸ್‌ಸಿ., ಬಿ.ಎಲ್.; ಬೆಲೆ, ರೂ. ೨-೪-೦.

೩. **ಕಲನಶಾಸ್ತ್ರ**—ಎಂ. ಎಸ್. ಸೂರ್ಯನಾರಾಯಣಶಾಸ್ತ್ರೀ, ಎಂ.ಎಸ್‌ಸಿ.; ಬೆಲೆ, ರೂ. ೩.೨೫.

೪. **ಗ್ರೇಟ್ ಬ್ರಿಟನ್ನಿನ ಚರಿತ್ರೆ**—ಡಾ|| ಎಂ. ಶೇಷಾದ್ರಿ, ಬೆಲೆ, ಸಾದಾ ರೂ. ೨.೭೫; ಉತ್ತಮ ರೂ. ೩.೭೫.

೫. **ಆರ್ಥಿಕರಚನೆ**—ಡಾ|| ಜಿ. ಟಿ. ಹುಚ್ಚಪ್ಪ, ಎಂ.ಎ., ಪಿಎಚ್.ಡಿ.; ಬೆಲೆ, ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೬. **ಇಂಟರ್‌ಮೀಡಿಯಟ್ ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ರೂ. ೩-೦-೦.

೭. **ಸರಳ ರಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೨.೨೫; ಉತ್ತಮ ರೂ. ೩.೨೫.

೮. **ಇಂಟರ್‌ಮೀಡಿಯಟ್ ಜಾಮಿಟ್ರಿ**—ಜಂಬುನಾಥನ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೩-೦-೦ ; ಉತ್ತಮ ರೂ. ೪-೦-೦.

೯. **ಭೌತಿಕ ಭೂಗೋಳ**—ಕುಮಾರಸ್ವಾಮಿ, ಎಂ.ಎ.; ಬೆಲೆ, ರೂ. ೩.೨೫.

೧೦. **ಆಧುನಿಕ ತರ್ಕಶಾಸ್ತ್ರ ಸಂಗ್ರಹ**—ಎಂ. ಯಾಮುನಾಚಾರ್ಯ, ಎಂ.ಎ.; ಬೆಲೆ, ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೧೧. **ಪ್ರಪಂಚ ಚರಿತ್ರೆಯ ರೂಪರೇಖೆಗಳು**—ಡಾ|| ಶ್ರೀಕಂಠ ಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೨.೨೫; ಉತ್ತಮ ರೂ. ೩.೨೫.

೧೨. **ಪ್ರೀ-ಯೂನಿವರ್ಸಿಟಿ ಜ್ಯಾಮಿತಿ**—ಎಂ. ವಿ. ಜಂಬುನಾಥನ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೩-೦-೦ ; ಉತ್ತಮ ರೂ. ೪-೦-೦.

೧೩. **ವಾಣಿಜ್ಯ ಶಾಸ್ತ್ರ**—ಡಾ|| ಜಿ. ರಾಮಕೃಷ್ಣ ರೆಡ್ಡಿ, ಎಂ.ಎ., ಪಿಎಚ್.ಡಿ.; ಬೆಲೆ, ಸಾದಾ ರೂ. ೨.೬೫; ಉತ್ತಮ ರೂ. ೩.೬೫.

೧೪. **ರೋಮ್ ದೇಶದ ಚರಿತ್ರೆ**—ಡಾ|| ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೨.೪೦ ; ಉತ್ತಮ ರೂ. ೩.೪೦.

೧೫. **ಪ್ರೀ-ಯೂನಿವರ್ಸಿಟಿ ಭೌತ ವಿಜ್ಞಾನ**—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ. ; ಬೆಲೆ, ಸಾದಾ ರೂ. ೫.೪೦ ; ಉತ್ತಮ. ರೂ. ೬.೪೦.

೧೬. **ತ್ರಿಕೋನ ಮಿತಿ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೩.೭೫ ; ಉತ್ತಮ ರೂ. ೪.೭೫.

೧೭. **ಸಾಮಾನ್ಯವಿಜ್ಞಾನ**—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ. ; ಬೆಲೆ, ರೂ. ೩.೭೫.

೧೮. **ಪ್ರೀ-ಯೂನಿವರ್ಸಿಟಿ ಬೀಜಗಣಿತ**—ಶ್ರೀ ಎ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್. ; ಬೆಲೆ, ಸಾದಾ ರೂ. ೩-೦-೦ ; ಉತ್ತಮ ರೂ. ೪-೦-೦.

೧೯. **ಸಮಾಜ ವಿಜ್ಞಾನ**—ಶ್ರೀ ಎ. ಮುದ್ದಲಿಂಗಣ್ಣ, ಎಂ.ಎ. ; ಬೆಲೆ, ಸಾದಾ ರೂ. ೨.೫೦ ; ಉತ್ತಮ ರೂ. ೩.೫೦.

೨೦. **ಭೂವಿಜ್ಞಾನ**—ಶ್ರೀ ಎಸ್. ವರದರಾಜನ್, ಎಂ.ಎಸ್‌ಸಿ. ಮತ್ತು ಶ್ರೀ ಡಿ. ರಂಗಯ್ಯ, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೪.೫೬ ; ಉತ್ತಮ ರೂ. ೫.೫೬.

೨೧. **ಕನ್ನಡ ಕಾವ್ಯಾಂಜಲಿ**—ಶ್ರೀ ಟಿ. ಎನ್. ಶ್ರೀಕಂಠಯ್ಯ, ಎಂ.ಎ. ; ಬೆಲೆ, ಸಾದಾ ೫೦ ನಯೆ ಪೈಸೆ ; ಉತ್ತಮ ರೂ. ೧.೫೦.

೨೨. **ಬೀಜಗಣಿತ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೨.೫೦ ; ಉತ್ತಮ ರೂ. ೩.೫೦.

೨೩. **ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ.

ಅಚ್ಚಿನಲ್ಲಿವೆ

೨೪. **ಸಸ್ಯಶಾಸ್ತ್ರ**—ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ.

೨೫. **ಜೀವಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ. ಮತ್ತು ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ.

೨೬. **ಭೂಗೋಳಶಾಸ್ತ್ರ**—ಡಾ|| ಫೋರಿ, ಎಂ.ಎ., ಪಿಎಚ್.ಡಿ.

Other Publications

1. **ಹರಿಹರನ ರಗಳೆಯಲ್ಲಿ ಜೀವನ ದರ್ಶನ**—ಸ. ಸ. ಮಾಳವಾಡ, ಎಂ.ಎ. ; ಬೆಲೆ, ಸಾದಾ ರೂ. ೧-೪-೦ ; ಉತ್ತಮ ರೂ. ೨-೪-೦.

2. ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ—ಡಾ|| ರಂ. ಶ್ರೀ. ಮುಗಳಿ, ಎಂ.ಎ., ಡಿ.ಲಿಟ್. ; ಬೆಲೆ, ಸಾದಾ ರೂ. ೧-೦-೦ ; ಉತ್ತಮ ರೂ. ೩-೦-೦.

3. ರಸೋಲ್ಲಾಸ—ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ, ಸಾದಾ ರೂ. ೧.೫೦ ; ಉತ್ತಮ ರೂ. ೨.೫೦.

4. **Minimum Wages in India** : by V. R. PILLAI, M.A., M.SC. ; ಬೆಲೆ, ರೂ. ೧-೧೪-೦.

5. **Aspects of Bhakti** : by K. C. VARADACHARI ; ಬೆಲೆ, ಸಾದಾ ರೂ. ೧-೦-೦ ; ಉತ್ತಮ ರೂ. ೧-೮-೦.

6. **Man in the Making** : by J. B. FREEMAN ; ಬೆಲೆ, ರೂ. ೪-೦-೦.

7. **The Philosophy of Mahathma Gandhi and other Essays** by Prof. A. R. WADIA.

Navinam Ramanujacharya Sanskrit Prize Essay

1. ಅಲಂಕಾರಶಾಸ್ತ್ರೇ ಕಾವ್ಯವೈವಿಧ್ಯವಾದವಿಮರ್ಶಃ—ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ, ರೂ. ೦-೮-೦.

MYSORE UNIVERSITY PUBLICATIONS
ENGLISH

I. The Mysore Tribes and Castes : by the late Mr. H. V. NANJUNDAYYA, M.A., M.L., C.I.E. and RAO BAHADUR L. K. ANANTAKRISHNA IYER ; Four Volumes : Vol. II, 1928 ; Vol. III, 1930 ; Vol. IV, 1931 ; Vol. I, 1935. Appendix : Each Volume is profusely illustrated : Vol. I, Rs. 15-0-0 ; Other Volumes each, Rs. 12-8-0.

(*a*) *Studies in Economics and Politics*

I. Labour and Housing in Bangalore City : C. NARASIMHA MOORTHY, M.A. and R. K. SRINIVASAN, M.A.; Re. 0-8-0.

2. The Munro System of British Statesmanship in India : Dr. K. N. VENKATASUBBA SASTRI, M.A., Ph.D. ; Rs. 3-0-0.

3. Theory of Interest : Sri S. LAXMINARASIMHAN, M.A. ; Rs. 2-8-0.

4. An Inquiry into Economic Theory : Sri A. N. SUBRAHMANYAM, M.A. ; Re. 1-4-0.

(b) Mysore University Historical Series

1. Sources of Karnataka History, Vol. I: S. SRIKANTA SASTRY, M.A.; Calico Rs. 3-8-0; Stiff Rs. 3-0-0.

(c) Mysore University Studies in Philosophy

1. *Dvaita Philosophy, and Its Place in the Vedanta: Mr. H. N. RAGHAVENDRACHAR, M.A.

2. Metaphysics of Value, Vol. I: K. R. SRINIVASA IYENGAR, M.A.; Rs. 5-0-0.

3. Man in the Making: J. B. FREEMAN; Rs. 4-0-0.

(d) Mysore University Studies in Dravidian Philology

1. A Grammar of the Oldest Kannada Inscriptions: Dr. A. N. NARASIMHIAH, M.A., L.T., Ph.D.; Rs. 2-12-3.

2. History of Kannada Literature: RAO BAHADUR R. NARASIMHACHARYA; Re. 1-0-0.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್.ಎಲ್.ಬಿ.
೨. ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.
೩. ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.
೪. ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.
೫. *ಆಕಾಶಯಾನ—ಬಿ. ಕೆ. ಎಣ್. ರಾವ್.
೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.
೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.
೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿಎಚ್.
೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.
೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.
೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.
೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)
೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.; ಸಾಧಾರಣ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.
೧೬. ಗಣಿ ಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.; ಸಾಧಾರಣ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.
೧೭. ಲೋಹವಿದ್ಯೆ—ಡಾ|| ಬಿ. ಪಿ. ರಾಧಾಕೃಷ್ಣ.
೧೮. ಪರಮಾಣುಶಕ್ತಿ—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.

೧೯. ಭಾರತ ಸಂವಿಧಾನ—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ).

೨೦. ಅಂತರ ರಾಷ್ಟ್ರೀಯ ಸಂಬಂಧಗಳು—ಟಿ. ಎಸ್. ನಾರಾಯಣರಾವ್, ಎಂ.ಎ.

೨೧. ವಿಕಿರಣಕ್ರಿಯಾಶಕ್ತಿ—ಕೆ. ಶೇಷಾದ್ರಿ ಐಯ್ಯಂಗಾರ್, ಎಂ.ಎಸ್ಸಿ., ಎಲ್ಎಲ್.ಬಿ.

ಸಾಧಾರಣ ಪ್ರತಿ ೪೦ ನಯೆ ಪೈಸೆ; ಉತ್ತಮ ಪ್ರತಿ ೫೦ ನಯೆ ಪೈಸೆ.

ಕಾರ್ಯದರ್ಶಿ,
ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ,
ವಾಣಿವಿಲಾಸ ಮೊಹಲ್ಲ, ಮೈಸೂರು

---

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಪ್ರಭಾತ', ಮಂಗಳೂರು; 'ಪ್ರಪಂಚ', ಹುಬ್ಬಳ್ಳಿ.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು.

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ ; ಬೆಲೆ, ರೂ. ೧-೦-೦.
೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ**—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಕೆ. ವಿ. ಅಯ್ಯರ್; ರೂ. ೨-೪-೦.
೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ**—ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ; ರೂ. ೧-೧೨-೦.
೩. **ಮೊನ್ನ ವನ್ನ** (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಎಸ್. ಜಿ. ಶಾಸ್ತ್ರಿ ; ರೂ. ೨-೦-೦.
೪. **ನಾಗನ ಪದಗಳು**—ಜಿ. ಪಿ. ರಾಜರತ್ನಂ ; ರೂ. ೧-೪-೦.
೫. **ಶಕ್ತಿ** (ಸಚಿತ್ರ)—ಆರ್. ಎಲ್. ನರಸಿಂಹಯ್ಯ ; ರೂ. ೩-೦-೦.
೬. **ಸುಪ್ರಭಾತಮ್**—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು); ರೂ. ೩-೦-೦.
೭. **ಸೋಕ್ರಟೀಸನ ಮರಣ**—ಎಸ್. ಜಿ. ಶಾಸ್ತ್ರಿ ; ರೂ. ೧-೪-೦.
೮. **ಬಾಹುಬಲಿ ವಿಜಯಂ**—(ಎರಡು ನಾಟಕಗಳು) ; ರೂ. ೧-೮-೦.
೯. **ಕಾರ್ಕಳದ ಗೊಮ್ಮಟಸ್ವಾಮಿ**—(ಲೇಖನ, ಕವನ) ; ರೂ. ೧-೦-೦.
೧೦. **ನಮ್ಮ ನಮ್ಮವರು**—(೬೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೧. **ಬಾಲಸರಸ್ವತಿ**—(೩೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೨. **ಚಿನ್ನದ ದೋಸೆ ಮತ್ತು ಇತರ ಕಥೆಗಳು**—ರೂ. ೦-೧೨-೦.
೧೩. **ಮಕ್ಕಳ ಮಾತು**—(ಎಸ್ಸೆಗಳು) ; ರೂ. ೧-೦-೦.
೧೪. **ಪಚ್ಚೆಯ ತೆನೆ**—(ಎಸ್ಸೆಗಳು) ; ರೂ. ೧-೦-೦.
೧೫. **ಗಂಧದ ಹುಡಿ**—(ಎಸ್ಸೆಗಳು) ; ರೂ. ೧-೦-೦.
೧೬. **ದುರಾಸೆಯ ದಂಡ**—(ಐದು ಏಕಾಂಕ ನಾಟಕಗಳು) ; ರೂ. ೧-೪-೦.
೧೭. **ಜನಪ್ರಿಯ ವಿಜ್ಞಾನ**—(ವಿಜ್ಞಾನ ಪ್ರಬಂಧಗಳು) ; ರೂ. ೧-೦-೦.

Edited by Sri S. V. Parameswara Bhatta, M.A. and Sri Prabhushankara, M.A.
Published by The University of Mysore, Mysore.
Printed by K. A. Korula at the Wesley Press and Publishing House, Mysore City.